ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಕೋವಿಡ್ ಸಂದರ್ಭದಲ್ಲಿ ಸಹಭಾಗಿತ್ವದ ಸೂತ್ರ ಕಂಡುಕೊಂಡಿರುವ ಅಪ್ಪಂದಿರು ಮಕ್ಕಳ ಜೊತೆ ಬಾಂಧವ್ಯವನ್ನು ಹೆಚ್ಚಿಸಿಕೊಂಡಿದ್ದಾರೆ

ಚರ್ಚೆ: ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕೇ? 9

ವಿದ್ಯಾರ್ಥಿಗಳ ಜಾಮೀನು ರದ್ದತಿಗೆ 'ಸುಪ್ರೀಂ' ನಕಾರ 7

ಮೇಕೆದಾಟು: ರಾಜ್ಯದ ಮತ್ತೊಂದು ಆತಂಕ ದೂರ 7

ಸೆನ್ಸೆಕ್ಸ್	ನಿಫ್ಟಿ	₹/$
52,344 ▲	15,683 ▼	73.86 ▲

ಭದ್ರಾ ಮೇಲ್ದಂಡೆ ಯೋಜನೆ: ₹2,000 ಕೋಟಿ ಕಿಕ್‌ಬ್ಯಾಕ್ ಆರೋಪ

ಪ್ರಜಾವಾಣಿ ವಾರ್ತೆ



ಎಚ್.ವಿಶ್ವನಾಥ್

ಬೆಂಗಳೂರು: 'ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ₹20 ಸಾವಿರ ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿಗಳ ಟೆಂಡರ್ ಕರೆದಿದ್ದು, ಅದರಲ್ಲಿ ಮುಖ್ಯಮಂತ್ರಿ ಕುಟುಂಬದವರು ಶೇ 10 ರಷ್ಟು ಕಮಿಷನ್ ಪಡೆದಿದ್ದಾರೆ' ಎಂದು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ಆರೋಪಿಸಿದರು.

ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ಅವರನ್ನು ಗುರುವಾರ ಭೇಟಿ ಮಾಡಿದ ಬಳಿಕ ಮುಖ್ಯಮಂತ್ರಿ ಬದಲಾವಣೆ ಮಾಡಲೇಬೇಕು ಎಂದು ಹೇಳಿಕೆ ನೀಡಿದ್ದ ವಿಶ್ವನಾಥ್, ಶುಕ್ರವಾರವೂ ವಾಗ್ದಾಳಿ ಮುಂದುವರಿಸಿದರು. ಆಡಳಿತ ಪಕ್ಷದವರೇ ಆದ ಅವರು, ಮುಖ್ಯಮಂತ್ರಿ ಕುಟುಂಬ ಭಾರಿ ಭ್ರಷ್ಟಾಚಾರ ಮಾಡಿದೆ ಎಂದು ಗಂಭೀರ ಆರೋಪವನ್ನೂ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಕಮಿಷನ್ ಹೊಡೆಯಲು ತರಾತುರಿಯಲ್ಲಿ ಟೆಂಡರ್ ಕರೆಯಲಾಗಿದೆ' ಎಂದು ಹೇಳಿದರು.

'ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ ಮೊತ್ತ ₹21,470 ಕೋಟಿಗಳು. ಈ ಯೋಜನೆಗೆ ಹಣವೇ ಇಟ್ಟಿಲ್ಲ. ಅದಕ್ಕೂ ಮೊದಲೇ ಟೆಂಡರ್ ಕರೆಯಲಾಗಿದೆ. ಕಿಕ್ ಬ್ಯಾಕ್ ಪಡೆಯುವ ಹುನ್ನಾರ ಇದರ ಹಿಂದಿದೆ. ಕಾಮಗಾರಿಗೆ ಹಣಕಾಸು ಇಲಾಖೆಯ ಅನುಮತಿ ಪಡೆದಿಲ್ಲ. ಮಂಡಳಿ ಸಭೆಯನ್ನೂ ಮಾಡಿಲ್ಲ' ಎಂದು ವಿಶ್ವನಾಥ್ ದೂರಿದರು.

'ಕಾವೇರಿ ನೀರಾವರಿ ನಿಗಮದಲ್ಲೂ ಅಕ್ರಮ ನಡೆದಿದೆ. ಇದು ಗುತ್ತಿಗೆದಾರರ ಆಧಾರಿತ ಸರ್ಕಾರವೇ' ಎಂದೂ ಪ್ರಶ್ನಿಸಿದರು.

'ನಾನು ನಿನ್ನೆಯಾಗಲಿ, ಇವತ್ತಾಗಲಿ ಪಕ್ಷದ ಸಿದ್ಧಾಂತ, ಕಾರ್ಯಕ್ರಮಗಳ ವಿರುದ್ಧ ಮಾತನಾಡಿಲ್ಲ. ಪಕ್ಷದ ನೈತಿಕತೆ, ಪಾರದರ್ಶಕತೆ, ಭ್ರಷ್ಟಾಚಾರ ಮತ್ತು ನಡವಳಿಕೆಯ ಬಗ್ಗೆ ಆತಂಕದಿಂದ ಮಾತನಾಡಿದ್ದೇನೆ. ಅದನ್ನು ಅರ್ಥ ಮಾಡಿಕೊಳ್ಳಬೇಕು. ಸರ್ಕಾರದ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಏನಿದೆ ಎಂಬುದನ್ನು ಅರುಣ್‌ಸಿಂಗ್ ಅವರಿಗೂ ತಿಳಿಸಿದ್ದೇನೆ' ಎಂದರು.

ಆರೋಪದಲ್ಲಿ ಹುರುಳಿಲ್ಲ:ಬಿಎಸ್‌ವೈ

'ವಿಶ್ವನಾಥ್ ಆರೋಪಗಳಲ್ಲಿ ಹುರುಳಿಲ್ಲ. ಈ ಬಗ್ಗೆ ನೀರಾವರಿ ಇಲಾಖೆಯ ಕಾರ್ಯದರ್ಶಿಗಳು ಸ್ಪಷ್ಟನೆ ನೀಡಿದ್ದಾರೆ' ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದರು.

'ನಿಮ್ಮ ಮಗ ವಿಜಯೇಂದ್ರ ವಿರುದ್ಧ ವಿಶ್ವನಾಥ್ ನೇರ ಆರೋಪ ಮಾಡಿದ್ದಾರಲ್ಲ' ಎಂದು ಸುದ್ದಿಗಾರರು ಪ್ರಶ್ನಿಸಿದಾಗ, 'ವಿಶ್ವನಾಥ್ ಬಗ್ಗೆ ಏನೂ ಮಾತನಾಡಲು ಬಯಸುವುದಿಲ್ಲ. ಅವರ ಬಗ್ಗೆ ಹೈಕಮಾಂಡ್ ಸೂಕ್ತ ಕ್ರಮ ತೆಗೆದುಕೊಳ್ಳಲಿದೆ' ಎಂದಷ್ಟೇ ಹೇಳಿದರು.

ನಿಯಮಾನುಸಾರ ಟೆಂಡರ್: ಜಲಸಂಪನ್ಮೂಲ ಇಲಾಖೆ

'ಎಚ್.ವಿಶ್ವನಾಥ್ ಆರೋಪದಲ್ಲಿ ಸತ್ಯಾಂಶವಿಲ್ಲ. ₹4,026.60 ಕೋಟಿ ಮೊತ್ತದ 7 ಕಾಮಗಾರಿಗಳ ಪ್ಯಾಕೇಜ್‌ಗಳಿಗೆ ಟೆಂಡರ್ ಅನ್ನು ಕೆಟಿಪಿಪಿ ನಿಯಮ ಅನುಸಾರವೇ ಕೈಗೊಳ್ಳಲಾಗಿದೆ' ಎಂದು ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಲಕ್ಷ್ಮಣರಾವ್ ಪೇಶ್ವೆ ಸ್ಪಷ್ಟನೆ ನೀಡಿದ್ದಾರೆ.

'ಭದ್ರಾ ಮೇಲ್ದಂಡೆ ಯೋಜನೆಯ ಪರಿಷ್ಕೃತ ಅಂದಾಜು ₹21,473.67 ಕೋಟಿ. ಸಮಗ್ರ ಪರಿಷ್ಕೃತ ಯೋಜನಾ ವರದಿಗೆ 2020ರ ಡಿಸೆಂಬರ್ 16 ರಂದು ಆರ್ಥಿಕ ಇಲಾಖೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಯೋಜನೆಯಲ್ಲಿ ಕೇಂದ್ರ ಸರ್ಕಾರ ₹16,125.40 ಕೋಟಿ ಪಾಲು ನೀಡಲಿದ್ದು, ಕೇಂದ್ರ ಜಲಶಕ್ತಿ ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯೂ ಒಪ್ಪಿಗೆ ನೀಡಿದೆ' ಎಂದಿದ್ದಾರೆ.

'ಈ ಯೋಜನೆಯನ್ನು 2023–24ರೊಳಗೆ ಪೂರ್ಣಗೊಳಿಸಲು ಮುಖ್ಯಮಂತ್ರಿ ತೀರ್ಮಾನಿಸಿದ್ದಾರೆ. ಹೀಗಾಗಿ, ಡ್ರಿಪ್ ಕಾಮಗಾರಿಗಳ ಅಂದಾಜು ಪಟ್ಟಿ ಮತ್ತು ಡಿಟಿಪಿಗೆ ತಜ್ಞರನ್ನು ಒಳಗೊಂಡ ಡ್ರಿಪ್ ಸಮಿತಿಯ 5 ಸಭೆಗಳಲ್ಲಿ ಚರ್ಚಿಸಲಾಗಿದೆ. ನಿಗಮದ ಅಂದಾಜು ಪರಿಶೀಲನಾ ಸಮಿತಿಯಿಂದ ತೀರುವಳಿ ಪಡೆದು ಕೆಟಿಪಿಪಿ ನಿಯಮಾನುಸಾರ 7 ಪ್ಯಾಕೇಜ್‌ಗಳಿಗೆ ಟೆಂಡರ್ ಕರೆಯಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಕೋವಿಡ್‌ನಿಂದಾಗಿ ಕಳೆದ ವರ್ಷ ಟೆಂಡರ್ ಕರೆಯಲಾಗಿರಲಿಲ್ಲ. ಹಣಕಾಸು ಇಲಾಖೆ, ಮಂಡಳಿ ಸಭೆ ಮತ್ತು ಸಚಿವ ಸಂಪುಟದ ಒಪ್ಪಿಗೆ ಪಡೆದು ಟೆಂಡರ್ ಕರೆಯಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಎಚ್‌ಡಿಕೆ ವಿರುದ್ಧ ಆರೋಪ ಮಾಡಿದ್ದ ರೆಡ್ಡಿ

2006 ರಲ್ಲಿ ವಿಧಾನಪರಿಷತ್‌ನ ಬಿಜೆಪಿ ಸದಸ್ಯರಾಗಿದ್ದ ಗಾಲಿ ಜನಾರ್ದನ ರೆಡ್ಡಿ, ಅಂದಿನ ಜೆಡಿಎಸ್– ಬಿಜೆಪಿ ಮೈತ್ರಿ ಸರ್ಕಾರ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಗಣಿ ಮಾಲೀಕರಿಂದ ₹150 ಕೋಟಿ ಲಂಚ ಪಡೆದಿದ್ದಾರೆ ಎಂದು ಆರೋಪಿಸಿದ್ದರು. ಇದು ರಾಜಕೀಯ ವಲಯದಲ್ಲಿ ಸಂಚಲನ ಸೃಷ್ಟಿ ಮಾಡಿತ್ತು.

'ಗಣಿ ಕಪ್ಪ' ಕೇಳಿದ್ದಕ್ಕೆ ತಮ್ಮ ಬಳಿ ಸಿ.ಡಿ ಇದೆ ಎಂದು ರೆಡ್ಡಿ ಹೇಳಿಕೊಂಡಿದ್ದರು.

ಈ ಆರೋಪದ ಬಗ್ಗೆ ಲೋಕಾಯುಕ್ತ ತನಿಖೆಗೆ ಕುಮಾರಸ್ವಾಮಿ ಆದೇಶಿಸಿದ್ದರು. ತನಿಖೆ ವೇಳೆ ಜನಾರ್ದನ ರೆಡ್ಡಿ ಯಾವುದೇ ಸಿ.ಡಿಯನ್ನೂ ಮುಂದಿಡಲಿಲ್ಲ. ಪ್ರಕರಣದ ತನಿಖೆಯು 'ಅಕ್ರಮ ಗಣಿಗಾರಿಕೆ'ಯತ್ತ ತಿರುಗಿದ್ದರಿಂದಾಗಿ ಯಡಿಯೂರಪ್ಪ ಅಧಿಕಾರ ಕಳೆದುಕೊಂಡರು. ಜತೆಗೆ ಜೈಲಿಗೂ ಹೋದರು. ಆರೋಪ ಮಾಡಿದ್ದ ರೆಡ್ಡಿ ಸಹ ಜೈಲುವಾಸ ಅನುಭವಿಸಿದರು. ಈಗ ಯಡಿಯೂರಪ್ಪ ವಿರುದ್ಧ ಸ್ವಪಕ್ಷೀಯರೇ ಆದ ಎಚ್. ವಿಶ್ವನಾಥ್ ಆರೋಪ ಮಾಡಿದ್ದಾರೆ.

ತಮ್ಮದೇ ಶೈಲಿಯಲ್ಲಿ ಅಭಿಪ್ರಾಯ ಸಂಗ್ರಹಿಸಿದ ಅರುಣ್‌ಸಿಂಗ್

ಬಿಜೆಪಿ ವರಿಷ್ಠರತ್ತ ಅತೃಪ್ತರ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ದಿನಗಳಿಂದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನಾಯಕತ್ವದ ಪರ, ವಿರುದ್ಧ ಮತ್ತು ತಟಸ್ಥ ಬಣಗಳ ಅಭಿಪ್ರಾಯ ಸಂಗ್ರಹಿಸಿರುವ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅವರು ಈ ಕುರಿತಂತೆ ವರದಿಯನ್ನು ಪಕ್ಷದ ವರಿಷ್ಠರಿಗೆ ಸಲ್ಲಿಸುವ ಸಾಧ್ಯತೆ ಇದೆ.

ಈ ವರದಿ ಆಧರಿಸಿ ವರಿಷ್ಠರು ಯಾವ ಕ್ರಮ ತೆಗೆದುಕೊಳ್ಳಬಹುದು ಎಂಬ ಕುತೂಹಲ ಮೂರೂ ಬಣಗಳಲ್ಲಿಯೂ ಮೂಡಿದೆ. ಈ ಬಾರಿ, ನಾಯಕತ್ವ ಬದಲಾವಣೆ ಆಗಿಯೇ ಆಗುತ್ತದೆ ಎಂಬ ಭರವಸೆ ಅತೃಪ್ತರ ಬಣದ್ದಾಗಿದೆ.

ಇದೇ 24 ರಂದು ಪಕ್ಷದ ಸಂಸದೀಯ ಮಂಡಳಿಯ ಸಭೆ ನವದೆಹಲಿಯಲ್ಲಿ ನಡೆಯಲಿದ್ದು, ಅಲ್ಲಿ ಕೇಂದ್ರ ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಚರ್ಚೆ ಪ್ರಧಾನವಾಗಿ ನಡೆಯಲಿದೆ. ಹಾಗಿದ್ದರೂ ಉತ್ತರ ಪ್ರದೇಶ ಮತ್ತು ಕರ್ನಾಟಕದ ರಾಜಕೀಯ ವಿದ್ಯಮಾನಗಳು ಪ್ರಮುಖವಾಗಿ ಪ್ರಸ್ತಾಪ ಆಗಲಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

'ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ' ಎಂದು ಹೇಳುತ್ತಲೇ ರಾಜ್ಯಕ್ಕೆ ಕಾಲಿಟ್ಟ ಅರುಣ್‌ಸಿಂಗ್, ಮಾಧ್ಯಮಗಳ ಮುಂದೆ ನಾಯಕತ್ವದ ಬಗ್ಗೆ ಟೀಕಾ ಪ್ರಹಾರ ನಡೆಸುತ್ತಿರುವವರಿಗೂ ಚಾಟಿ ಬೀಸಿದರು. ಪಕ್ಷದಲ್ಲಿನ ವಿದ್ಯಮಾನಗಳು ಮತ್ತು ಅಪಸ್ವರಗಳನ್ನು ತಮ್ಮದೇ ಶೈಲಿಯಲ್ಲಿ ಸಂಗ್ರಹಿಸಿರುವ ಅವರು ಒಟ್ಟಾರೆ ಚಿತ್ರಣವನ್ನು ವರಿಷ್ಠರ ಮುಂದಿಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧ ಸಮರ ಸಾರಿದ್ದ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಅರುಣ್‌ಸಿಂಗ್ ಭೇಟಿಗೆ ಅವಕಾಶ ಸಿಗಲಿಲ್ಲ. ಸಚಿವ ಸಿ.ಪಿ. ಯೋಗೇಶ್ವರ್, ಶಾಸಕ ಎಚ್. ವಿಶ್ವನಾಥ್ ಅವರು ನಾಯಕತ್ವ ಬದಲಾವಣೆ ಪರವಾಗಿರುವವರ ಎಲ್ಲ ಅಭಿಪ್ರಾಯವನ್ನು ಮಂಡಿಸಿದ್ದಾರೆ ಎನ್ನಲಾಗಿದೆ. ಅಷ್ಟಕ್ಕೆ ಸುಮ್ಮನಾಗದ ವಿಶ್ವನಾಥ್, 'ಯಡಿಯೂರಪ್ಪ ಅವರಿಗೆ ವಯಸ್ಸಾಗಿದೆ, ಪ್ರಭಾವವೂ ಇಲ್ಲದಿರುವುದರಿಂದ ಅವರನ್ನು ಬದಲಿಸುವುದು ಸೂಕ್ತ' ಎಂಬ ಹೇಳಿಕೆ ನೀಡಿ, ಬಿಜೆಪಿಯಲ್ಲಿ ತಲ್ಲಣವನ್ನೂ ಸೃಷ್ಟಿಸಿದರು. ನವದೆಹಲಿಯಲ್ಲಿಯೇ ಅರುಣ್ ಸಿಂಗ್ ಭೇಟಿ ಮಾಡಿದ ಕಾರಣಕ್ಕೆ ಅರವಿಂದ ಬೆಲ್ಲದ ಅವರು, ಬೆಂಗಳೂರಿನಲ್ಲಿ ಭೇಟಿ ಮಾಡಲಿಲ್ಲ ಎನ್ನಲಾಗಿದೆ.

ಅರುಣ್‌ಸಿಂಗ್ ಅವರನ್ನು ಭೇಟಿ ಮಾಡಿದ ಕೆಲವು ಶಾಸಕರು ಯಡಿಯೂರಪ್ಪ ಅವರನ್ನು ಬದಲಿಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಯಡಿಯೂರಪ್ಪ ಆಪ್ತರು, ಯಾವುದೇ ಕಾರಣಕ್ಕೂ ನಾಯಕತ್ವ ಬದಲಿಸಬಾರದು ಎಂದು ತಮ್ಮ ವಾದ ಮುಂದಿಟ್ಟರು. ತಟಸ್ಥರಾಗಿರುವವರು ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೂ ಬದ್ಧರಿರುವುದಾಗಿ ಹೇಳಿದರು. ತಟಸ್ಥರ ಸಂಖ್ಯೆಯೇ ಹೆಚ್ಚಾಗಿತ್ತು ಎಂದು ಮೂಲಗಳು ತಿಳಿಸಿವೆ.

10ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 3B, 10

ರಾಜಕೀಯ ಗೊಂದಲವಿಲ್ಲ: ಬಿಎಸ್‌ವೈ

'ರಾಜಕೀಯದಲ್ಲಿ ಯಾವುದೇ ಗೊಂದಲ ಇಲ್ಲ. ಯಾರೋ ಒಂದಿಬ್ಬರ ಹೇಳಿಕೆಗಳನ್ನು ಮಾಧ್ಯಮಗಳು ತಪ್ಪು ಗ್ರಹಿಕೆ ಮಾಡಿಕೊಂಡಿರುವುದೇ ಈಗಿನ ಗೊಂದಲಕ್ಕೆ ಕಾರಣ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಗುರುವಾರ ಸುಮಾರು 60 ಕ್ಕೂ ಹೆಚ್ಚು ಶಾಸಕರು ಅರುಣ್‌ಸಿಂಗ್ ಅವರನ್ನು ಭೇಟಿ ಮಾಡಿದ್ದಾರೆ. ಇವರ ಮಾತುಗಳು ಹೈಲೈಟ್ ಆಗಿಲ್ಲ. ಆದರೆ, ಒಂದಿಬ್ಬರ ಮಾತುಗಳಿಗೆ ಮಾತ್ರ ಅನಗತ್ಯ ಪ್ರಚಾರ ಸಿಗುತ್ತಿದೆ' ಎಂದು ಹೇಳಿದರು.

'ನನ್ನ ವಿರುದ್ಧ ಮಾತನಾಡುವವರನ್ನು ಅರುಣ್‌ಸಿಂಗ್ ಕರೆಸಿ ಮಾತನಾಡಿಸಿಲ್ಲ. ಯಾವುದೇ ಸಮಸ್ಯೆಗಳು ಇದ್ದರೆ ನೇರವಾಗಿ ಬಂದು ನನ್ನ ಜತೆ ಮಾತನಾಡಬಹುದು. ಅದನ್ನು ಬಿಟ್ಟು ಹಾದಿ ಬೀದಿಯಲ್ಲಿ ಮಾತನಾಡುವುದು ಸರಿಯಲ್ಲ' ಎಂದೂ ಯಡಿಯೂರಪ್ಪ ತಿಳಿಸಿದರು. 'ಯಾವುದೇ ಸಣ್ಣ ಪುಟ್ಟ ಗೊಂದಲಗಳು ಇದ್ದರೆ ಅದನ್ನು ವರಿಷ್ಠರು ಸರಿಪಡಿಸುತ್ತಾರೆ' ಎಂದರು.

ಭ್ರಷ್ಟಾಚಾರ ಸಹಿಸಲಾಗದು: ಸಿ.ಟಿ.ರವಿ

ಬೆಂಗಳೂರು: 'ಭ್ರಷ್ಟಾಚಾರದ ವಿಚಾರದಲ್ಲಿ ನಮ್ಮ ಪಕ್ಷವು ಶೂನ್ಯ ಸಹಿಷ್ಣುತೆ ಹೊಂದಿದೆ. ಆರೋಪಗಳು ಸಾಬೀತಾದಾಗ ಅದು ಅಪರಾಧವಾಗುತ್ತದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಪ್ರಧಾನಮಂತ್ರಿಯವರೂ ಮೈ ನಹೀ ಖಾವೂಂಗಾ, ನ ಖಾನೆ ದೂಂಗಾ ಎಂದಿದ್ದಾರೆ. ಅದೇ ವಿಚಾರಧಾರೆ ಪಕ್ಷದ್ದು' ಎಂದರು.

ವಿಶ್ವನಾಥ್ ಅವರ ಆರೋಪದ ಕುರಿತು ಪ್ರಶ್ನಿಸಿದಾಗ, 'ನನಗೆ ಪ್ರಾಥಮಿಕ ಮಾಹಿತಿಯೂ ಇಲ್ಲದೆ ತೀರ್ಪು ನೀಡಲು ಅಸಾಧ್ಯ. ಈ ವಿಷಯದ ಬಗ್ಗೆ ಅಧ್ಯಯನ ಮಾಡದೇ ಮಾತನಾಡಲು ಸಾಧ್ಯವಿಲ್ಲ' ಎಂದರು. 'ನಮ್ಮ ಪಕ್ಷ ಗೆದ್ದು ಬರಲು ಎಲ್ಲ ಮಠಾಧೀಶರ ಆಶೀರ್ವಾದ ಕಾರಣ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮುಂದೆಯೂ ಅವರ ಬೆಂಬಲ ಮತ್ತು ಆಶೀರ್ವಾದವೂ ಬೇಕು. ಆದರೆ, ನಮ್ಮ ಪಕ್ಷಕ್ಕೆ ಜಾತಿ ಇಲ್ಲ. ಜಾತಿ ಕೇಂದ್ರಿತ ಪಕ್ಷವೂ ಅಲ್ಲ. ಪಕ್ಷಕ್ಕೆ ಸಿದ್ಧಾಂತವೇ ಮುಖ್ಯ. ಅದರಿಂದಲೇ ಪಕ್ಷ ಬೆಳೆದಿದೆ' ಎಂದರು.

ಪಕ್ಷ ವಿರೋಧಿ ಹೇಳಿಕೆಗಳನ್ನು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ. ಅಂತಹವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು. ಟೀಕೆ ಮಾಡುವುದಿದ್ದರೆ ಕಾಂಗ್ರೆಸ್ ವಿರುದ್ಧ ಮಾಡಿ

ಅರುಣ್ ಸಿಂಗ್, ಬಿಜೆಪಿ ರಾಜ್ಯ ಉಸ್ತುವಾರಿ

ಬೆಂಗಳೂರಿನಲ್ಲಿ ₹ 100ರ ಗಡಿ ದಾಟಿದ ಪೆಟ್ರೋಲ್ ಬೆಲೆ

ನವದೆಹಲಿ/ಬೆಂಗಳೂರು (ಪಿಟಿಐ): ಪೆಟ್ರೋಲ್ ಬೆಲೆಯು ಬೆಂಗಳೂರಿನಲ್ಲಿ ಲೀಟರ್‌ಗೆ ₹ 100ರ ಗಡಿಯನ್ನು ಶುಕ್ರವಾರ ದಾಟಿದೆ. ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ಬೆಲೆ ₹ 100.17 ಆಗಿದೆ. ದೇಶದಲ್ಲಿ ಪೆಟ್ರೋಲ್ ಬೆಲೆಯು ₹ 100ಕ್ಕಿಂತ ಜಾಸ್ತಿ ಆಗಿರುವ ಮೂರನೆಯ ಮಹಾನಗರ ಬೆಂಗಳೂರು.

ಮುಂಬೈ ಮತ್ತು ಹೈದರಾಬಾದ್ ಮಹಾನಗರಗಳಲ್ಲಿ ಕೂಡ ಪೆಟ್ರೋಲ್ ಬೆಲೆಯು ಲೀಟರಿಗೆ ₹ 100ಕ್ಕಿಂತ ಜಾಸ್ತಿ ಆಗಿದೆ. ಹಿಂದಿನ ವರ್ಷದ ಜೂನ್ 18ರಂದು ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆಯು ₹ 80.33 ಆಗಿತ್ತು. ಒಂದು ವರ್ಷದ ಅವಧಿಯಲ್ಲಿ ಬೆಲೆಯು ₹ 19.84ರಷ್ಟು ಹೆಚ್ಚಾಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶುಕ್ರವಾರ ಪೆಟ್ರೋಲ್ ಬೆಲೆಯಲ್ಲಿ 27 ಪೈಸೆ, ಡೀಸೆಲ್ ಬೆಲೆಯಲ್ಲಿ 28 ಪೈಸೆ ಹೆಚ್ಚಳ ಮಾಡಿವೆ. ಮೇ ತಿಂಗಳ 4ನೆಯ ತಾರೀಕಿನ ನಂತರ ತೈಲ ಬೆಲೆಯಲ್ಲಿ ಆಗಿರುವ 26ನೆಯ ಹೆಚ್ಚಳ ಇದು. 26 ಬಾರಿ ಬೆಲೆ ಹೆಚ್ಚಳದ ಪರಿಣಾಮವಾಗಿ ಪೆಟ್ರೋಲ್ ಬೆಲೆಯು ₹ 6.53ರಷ್ಟು, ಡೀಸೆಲ್ ಬೆಲೆಯು ₹ 6.96ರಷ್ಟು ತುಟ್ಟಿ ಆಗಿದೆ.

ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ, ಜಮ್ಮು ಮತ್ತು ಕಾಶ್ಮೀರ, ಲಡಾಖ್‌ನಲ್ಲಿ ಪೆಟ್ರೋಲ್ ಬೆಲೆಯು ಲೀಟರ್‌ಗೆ ಈಗಾಗಲೇ ₹ 100ರ ಗಡಿಯನ್ನು ದಾಟಿದೆ. ಕರ್ನಾಟಕದಲ್ಲಿ ಮೊದಲ ಬಾರಿಗೆ ಶಿರಸಿ ಮತ್ತು ಬಳ್ಳಾರಿಯಲ್ಲಿ ಪೆಟ್ರೋಲ್ ದರವು ₹ 100ರ ಗಡಿಯನ್ನು ದಾಟಿತ್ತು.

ದೇಶದಲ್ಲಿ ಪೆಟ್ರೋಲ್ ಬೆಲೆ ಮೊದಲ ಬಾರಿಗೆ ₹ 100ರ ಗಡಿ ದಾಟಿದ್ದು ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ. ಇಲ್ಲಿ ಈಗ ಪೆಟ್ರೋಲ್ ಬೆಲೆ ₹ 108.07. ಇಲ್ಲಿ ಈಗ ಡೀಸೆಲ್ ಬೆಲೆ ಕೂಡ ₹ 100ರ ಗಡಿ ದಾಟಿದೆ.

ಕಲ್ಯಾಣ ಕರ್ನಾಟಕದಲ್ಲೂ ₹ 100ರ ಗಡಿ ದಾಟಿದ ಪೆಟ್ರೋಲ್ ದರ (ಕಲಬುರ್ಗಿ) : ಕಲ್ಯಾಣ ಕರ್ನಾಟಕದ ಕಲಬುರ್ಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಶುಕ್ರವಾರ ಲೀಟರ್ ಪೆಟ್ರೋಲ್ ದರ ₹ 100ರ ಗಡಿ ದಾಟಿದೆ. ಡೀಸೆಲ್ ದರವು ₹ 92 ರಿಂದ ₹ 94ಕ್ಕೆ ಏರಿಕೆಯಾಗಿದೆ.

ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ನಿಧನ

ಚಂಡೀಗಡ (ಪಿಟಿಐ): 'ಫ್ಲೈಯಿಂಗ್ ಸಿಖ್' ಖ್ಯಾತಿಯ ಅಥ್ಲೀಟ್ ಮಿಲ್ಖಾ ಸಿಂಗ್ (91) ಶುಕ್ರವಾರ ತಡರಾತ್ರಿ ಕೊನೆಯುಸಿರೆಳೆದರು.

ಕೋವಿಡ್ ಸೋಂಕಿಗೊಳಗಾಗಿದ್ದ ಅವರು ಇಲ್ಲಿಯ ಪಿಜಿಐಎಂಇಆರ್ ನಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು. ಅವರ ಪತ್ನಿ, ಭಾರತ ವಾಲಿಬಾಲ್ ತಂಡದ ಮಾಜಿ ನಾಯಕಿ ನಿರ್ಮಲ್ ಕೌರ್ ಅವರು ಈಚೆಗಷ್ಟೇ ಕೋವಿಡ್‌ನಿಂದಾಗಿ ನಿಧನರಾಗಿದ್ದರು.

ಮಿಲ್ಖಾ ಅವರಿಗೆ ಮಗ, ಗಾಲ್ಫ್ ಆಟಗಾರ ಜೀವ್ ಮಿಲ್ಖಾಸಿಂಗ್ ಮತ್ತು ಮೂವರು ಪುತ್ರಿಯರು ಇದ್ದಾರೆ.

ಇನ್ನೊಂದು ಸುದ್ದಿ 12

ಸುಮಿತಾ ಮಿತ್ರಾಗೆ 'ಯುರೋಪಿಯನ್ ಇನ್ವೆಂಟರ್' ಪ್ರಶಸ್ತಿ

ನವದೆಹಲಿ(ಪಿಟಿಐ): ಭಾರತೀಯ ಅಮೆರಿಕನ್ ರಸಾಯನ ವಿಜ್ಞಾನಿ ಸುಮಿತಾ ಮಿತ್ರಾ ಅವರಿಗೆ ಪ್ರತಿಷ್ಠಿತ 'ಯುರೋಪಿಯನ್ ಇನ್ವೆಂಟರ್–2021' ಪ್ರಶಸ್ತಿಯನ್ನು ಘೋಷಿಸಲಾಗಿದೆ.

ದಂತ ಚಿಕಿತ್ಸೆಗೆ ಅಗತ್ಯವಿರುವ ಪದಾರ್ಥಗಳನ್ನು ಅಭಿವೃದ್ಧಿಪಡಿಸುವಲ್ಲಿ ಮೊದಲ ಬಾರಿಗೆ ನ್ಯಾನೊ ತಂತ್ರಜ್ಞಾನವನ್ನು ಯಶಸ್ವಿಯಾಗಿ ಅನ್ವಯಿಸಿದ ಹೆಗ್ಗಳಿಕೆ ಮಿತ್ರಾ ಅವರದು.

ರಾಜ್ಯ ಕೋವಿಡ್ ಅಂಕಿ–ಅಂಶ

27,96,121 ▲	ಒಟ್ಟು ಸೋಂಕಿತರು (27,90,338 ನಿನ್ನೆಯ ವಿವರ)
1,37,050 ▼	ಸಕ್ರಿಯ ಪ್ರಕರಣಗಳು
26,25,447 ▲	ಗುಣಮುಖರಾದವರು
33,602 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	5,783	▼
ಗುಣಮುಖ	15,290	▲
ಸಾವು	168	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವಂಚನೆ ಪ್ರಕರಣದಲ್ಲಿ ಜೈಲು ಸೇರಿರುವ ಯುವರಾಜ್ ಮೇಲೆ ಶಂಕೆ?

ಜೈಲಿನಿಂದ ಬೆಲ್ಲದಗೆ ಕರೆ: ತನಿಖೆ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈಲಿನಿಂದ ಎರಡು–ಮೂರು ಬಾರಿ ಕರೆಗಳು ಬಂದಿದ್ದವು. ಅಪರಿಚಿತರು ನನ್ನ ಮೊಬೈಲ್ ಕದ್ದಾಲಿಕೆ ಮಾಡುತ್ತಿದ್ದಾರೆ' ಎಂದು ಆರೋಪಿಸಿ ಹುಬ್ಬಳ್ಳಿ– ಧಾರವಾಡ ಪಶ್ಚಿಮ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಅರವಿಂದ ಬೆಲ್ಲದ ನೀಡಿರುವ ದೂರು ಆಧರಿಸಿ ಕಬ್ಬನ್ ಪಾರ್ಕ್ ಉಪವಿಭಾಗದ ಎಸಿಪಿ ನೇತೃತ್ವದಲ್ಲಿ ತನಿಖೆ ಆರಂಭವಾಗಿದೆ.

ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರ ಮೂಲಕ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ಬೆಲ್ಲದ ದೂರು ಕಳುಹಿಸಿದ್ದರು. ಅದನ್ನು ನಗರ ಕಮಿಷನರ್ ಕಮಲ್ ಪಂತ್ ಅವರಿಗೆ ಕಳುಹಿಸಿರುವ ಸೂದ್, ತನಿಖೆ ನಡೆಸಲು ಸೂಚಿಸಿದ್ದಾರೆ.

ಈ ಬಗ್ಗೆ ಮಾತನಾಡಿದ ಕಮಲ್ ಪಂತ್, 'ದೂರಿನ ಬಗ್ಗೆ ವಿಚಾರಣೆ ನಡೆಸಲು ಕೇಂದ್ರ ವಿಭಾಗದ ಡಿಸಿಪಿಗೆ ಸೂಚಿಸಿದ್ದೇನೆ. ಎಸಿಪಿ ನೇತೃತ್ವದ ತಂಡ ಮಾಹಿತಿ ಕಲೆಹಾಕುತ್ತಿದೆ' ಎಂದರು.

ವಂಚನೆ ಆರೋಪಿ ಶಂಕೆ: 'ವಂಚನೆ ಆರೋಪದಡಿ ಇತ್ತೀಚೆಗಷ್ಟೇ ಸಿಸಿಬಿ ಪೊಲೀಸರು, ಯುವರಾಜ್ ಅಲಿಯಾಸ್ ಸೇವಾಲಾಲ್ ಸ್ವಾಮೀಜಿ ಎಂಬಾತನನ್ನು ಬಂಧಿಸಿ ಜೈಲಿಗಟ್ಟಿದ್ದಾರೆ. ಆತನೇ, ಬೆಲ್ಲದ ಅವರಿಗೆ ಎರಡು–ಮೂರು ಬಾರಿ ಪರಪ್ಪನ ಅಗ್ರಹಾರ ಕಾರಾಗೃಹದಿಂದ ಕರೆ ಮಾಡಿರುವ ಶಂಕೆ ಇದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ದೂರಿನಲ್ಲಿರುವ ವಿಷಯಗಳಿಗೆ ಸಂಬಂಧಪಟ್ಟ ಪುರಾವೆಗಳು ಸಿಕ್ಕ ಬಳಿಕ ಎಫ್‌ಐಆರ್ ದಾಖಲಿಸುವ ಬಗ್ಗೆ ಪರಿಶೀಲಿಸಲಾಗುವುದು. ಕಬ್ಬನ್ ಪಾರ್ಕ್ ಉಪವಿಭಾಗ ಎಸಿಪಿ ಯತಿರಾಜ್ ನೇತೃತ್ವದ ತಂಡ, ಬೆಲ್ಲದ ಅವರನ್ನು ಭೇಟಿಯಾಗಿ ಮಾಹಿತಿ ಪಡೆದಿದೆ' ಎಂದರು.

ಬೆಲ್ಲದ ಅವರ ದೂರವಾಣಿ ಕದ್ದಾಲಿಕೆ ಆಗುತ್ತಿದೆ ಎಂಬ ದೂರಿನ ಪ್ರಕರಣದ ಬಗ್ಗೆ ತನಿಖೆ ನಡೆಸಲಾಗುವುದು. ಪೊಲೀಸ್ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ

ಬಸವರಾಜ ಬೊಮ್ಮಾಯಿ
ಗೃಹ ಸಚಿವ

ಕದ್ದಾಲಿಕೆಯಲ್ಲಿ ಭಾಗಿಯಾಗಿದ್ದ 'ಎಸಿಪಿ'

ಅರವಿಂದ್ ಬೆಲ್ಲದ ಕರೆ ಕದ್ದಾಲಿಕೆ ಪ್ರಕರಣದ ವಿಚಾರಣೆ ನಡೆಸುತ್ತಿರುವ ಎಸಿಪಿ ಯತಿರಾಜ್, ಈ ಹಿಂದೆ ಸಿಸಿಬಿಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದರು. ಎಚ್. ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ನಡೆದಿದ್ದ ಕರೆಗಳ ಕದ್ದಾಲಿಕೆ ಪ್ರಕರಣದಲ್ಲಿ ಭಾಗಿಯಾಗಿದ್ದ ಅವರನ್ನು ಸಿಬಿಐ ಅಧಿಕಾರಿಗಳು ವಿಚಾರಣೆ ನಡೆಸಿದ್ದರು. ಈ ಪ್ರಕರಣದಲ್ಲಿ ಪ್ರಾಥಮಿಕ ದೋಷಾರೋಪ ಪಟ್ಟಿ ಸಲ್ಲಿಸಲಾಗಿದ್ದು, ಅಂತಿಮ ಪಟ್ಟಿ ಸಲ್ಲಿಕೆ ಬಾಕಿ ಇದೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕು ಮಾಚಕನೂರ ಗ್ರಾಮದ ಹೊಳೆಬಸವೇಶ್ವರ ದೇವಾಲಯ ಘಟಪ್ರಭಾ ನದಿ ಹರಿವು ಹೆಚ್ಚಿದ್ದರಿಂದಾಗಿ ಜಲಾವೃತಗೊಂಡಿದೆ

ಒಳ ಪುಟ

ಹೆತ್ತವರ ಕಳೆದುಕೊಂಡ ಬಾಲಕಿಗೆ ಚಿಕ್ಕಮ್ಮನ ಆಸರೆ 4

ಇಂದಿನ ಪಾಡ್‌ಕಾಸ್ಟ್ ವಿಶೇಷ

ವಚನವಾಣಿ

ಪ್ರತಿ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕುಂಟುತ್ತಾ ಸಾಗುತ್ತಿರುವ ಕೋವಿಡ್ ಲಸಿಕೆ ಅಭಿಯಾನ

5 ತಿಂಗಳಲ್ಲಿ ಶೇ 5ರಷ್ಟು ಜನರಿಗಷ್ಟೇ ಲಸಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಲಸಿಕೆ ಅಭಿಯಾನ ಆರಂಭವಾಗಿ ಐದು ತಿಂಗಳಾದರೂ ಶೇ 5ರಷ್ಟು ಜನರಿಗೆ ಮಾತ್ರ ಈವರೆಗೆ ಲಸಿಕೆ ಹಾಕಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ.

5.03 ಕೋಟಿ ಜನರಿಗೆ ಲಸಿಕೆಯ ಎರಡೂ ಡೋಸ್ ಹಾಕಲಾಗಿದೆ. 22 ಕೋಟಿ ಜನರಿಗೆ ಮೊದಲ ಡೋಸ್ ಹಾಕಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್ ಹೇಳಿದ್ದಾರೆ.

ಒಟ್ಟು 27 ಕೋಟಿ ಜನರಿಗೆ ಲಸಿಕೆ ಹಾಕಿಸಲಾಗಿದೆ. ದಿನಕ್ಕೆ ಸರಾಸರಿ 31 ಲಕ್ಷ ಜನರು ಲಸಿಕೆ ಹಾಕಿಸಿಕೊಂಡಿದ್ದಾರೆ. ಒಟ್ಟು 95 ಕೋಟಿ ಜನರಿಗೆ ಲಸಿಕೆಯ ಎರಡೂ ಡೋಸ್ ಹಾಕಿಸಬೇಕು ಎಂಬ ಗುರಿ ಇರಿಸಿಕೊಳ್ಳಲಾಗಿದೆ. 2021ರಲ್ಲಿ ಇನ್ನು ಉಳಿದಿರುವ 196 ದಿನಗಳಲ್ಲಿ ಗುರಿ ಇರಿಸಿಕೊಂಡಿರುವ ಎಲ್ಲರಿಗೂ ಲಸಿಕೆ ಹಾಕಿಸಬೇಕಿದ್ದರೆ ದಿನವೊಂದಕ್ಕೆ 83 ಲಕ್ಷ ಜನರಿಗೆ ಲಸಿಕೆ ಹಾಕಿಸಬೇಕು.

ಜೂನ್ ತಿಂಗಳಲ್ಲಿ 12 ಕೋಟಿ ಡೋಸ್ ಲಸಿಕೆ ಲಭ್ಯವಾಗಲಿದೆ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಆದರೆ, ಅರ್ಧ ತಿಂಗಳು ಕಳೆದರೂ ಸುಮಾರು 5 ಲಕ್ಷ ಡೋಸ್ ಮಾತ್ರ ಲಭ್ಯವಾಗಿದೆ.

ದೃಢ ಪ್ರಮಾಣ ಇಳಿಕೆ: ಕೋವಿಡ್ ದೃಢಪಡುವಿಕೆ ಪ್ರಮಾಣವು ಶೇ 5ಕ್ಕಿಂತ ಕಡಿಮೆ ಆಗಿರುವ ಜಿಲ್ಲೆಗಳ ಸಂಖ್ಯೆಯು ಕಳೆದ ಐದು ವಾರಗಳಲ್ಲಿ ಐದು ಪಟ್ಟು ಹೆಚ್ಚಾಗಿದೆ. ಏಪ್ರಿಲ್ 30ರಿಂದ ಮೇ 6ರ ಅವಧಿಯಲ್ಲಿ ಇಂತಹ ಜಿಲ್ಲೆಗಳ ಸಂಖ್ಯೆ 103 ಇತ್ತು. ಈಗ ಅದು 513 ಜಿಲ್ಲೆಗಳಿಗೆ ಏರಿಕೆಯಾಗಿದೆ ಎಂದು ಅಗರ್‌ವಾಲ್ ತಿಳಿಸಿದ್ದಾರೆ.

ಲಸಿಕೆ ಡೋಸ್ ನಡುವೆ ಅಂತರ ಹೆಚ್ಚಳ: ಸಮರ್ಥನೆ



ದೇಶದಲ್ಲಿ ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವಣ ಅಂತರವನ್ನು 12ರಿಂದ 16 ವಾರಗಳಿಗೆ ಹೆಚ್ಚಿಸಿರುವುದನ್ನು ಅಸ್ಟ್ರಾ ಜೆನೆಕಾ ಲಸಿಕೆಯ ವೈದ್ಯಕೀಯ ಪ್ರಯೋಗಗಳ ಮುಖ್ಯ ತನಿಖಾಧಿಕಾರಿ ಪ್ರೊ. ಆ್ಯಂಡ್ರ್ಯು ಪೊಲಾರ್ಡ್ ಶುಕ್ರವಾರ ಸಮರ್ಥಿಸಿಕೊಂಡಿದ್ದಾರೆ.

ಲಸಿಕೆಯ ಮೊದಲ ಡೋಸ್ ನೀಡಿದ ಎರಡನೇ ಮತ್ತು ಮೂರನೇ ತಿಂಗಳಲ್ಲಿ ರೋಗದಿಂದ ಲಭಿಸುವ ರಕ್ಷಣೆಯ ಮಟ್ಟವು ಗಮನಾರ್ಹವಾಗಿ ಸುಧಾರಿಸುತ್ತದೆ. ಅಸ್ಟ್ರಾ ಜೆನೆಕಾ ಲಸಿಕೆಯ ಒಂದೇ ಡೋಸ್, ಆ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವುದಿಲ್ಲ. ಆದರೆ, ಅದು ರಕ್ಷಣೆ ನೀಡಬಲ್ಲದು. ಹೆಚ್ಚಿನ ಸುರಕ್ಷತೆಗೆ ಎರಡನೇ ಡೋಸ್ ಪಡೆಯುವುದು ಅಗತ್ಯ ಎಂದು ಅವರು ಹೇಳಿದ್ದಾರೆ.ಎರಡು ದೇಶಗಳಲ್ಲಿ ಭಿನ್ನವಾದ ಪರಿಸ್ಥಿತಿ ಇರುವುದರಿಂದ ಬ್ರಿಟನ್ ಹಾಗೂ ಭಾರತದ ಲಸಿಕಾ ನೀತಿಯನ್ನು ಹೋಲಿಕೆ ಮಾಡುವುದು ಸರಿಯಲ್ಲ ಎಂದು ಆಕ್ಸ್‌ಫರ್ಡ್ ಲಸಿಕಾ ಸಮೂಹದ ನಿರ್ದೇಶಕರೂ ಆಗಿರುವ ಪೊಲಾರ್ಡ್ ಹೇಳಿದ್ದಾರೆ.

ಭಾರತದಲ್ಲಿ ಬಹುದೊಡ್ಡ ಸಮುದಾಯವು ಲಸಿಕೆ ಪಡೆಯುವುದು ಬಾಕಿ ಇದೆ. ಆದ್ದರಿಂದ ದೇಶದಲ್ಲಿ ಮೊದಲ ಬಾರಿ ಕಂಡುಬಂದಿದ್ದ 'ಡೆಲ್ಟಾ' ರೂಪಾಂತರ ವೈರಸ್ ವ್ಯಾಪಕವಾಗಿ ಹರಡಿ ಅಪಾಯ ಹೆಚ್ಚುವಂತೆ ಮಾಡಿತ್ತು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ನೂರಾರು ಎಕರೆ ಭತ್ತದ ಬೆಳೆ ಜಲಾವೃತ

ಮಳೆ ಅಬ್ಬರ: ಪ್ರವಾಹ ಭೀತಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಉತ್ತರ ಕರ್ನಾಟಕದ ಬೆಳಗಾವಿ, ಉತ್ತರ ಕನ್ನಡ, ಬಾಗಲಕೋಟೆ, ವಿಜಯಪುರ, ಧಾರವಾಡ ಜಿಲ್ಲೆಗಳಲ್ಲಿ ಶುಕ್ರವಾರವೂ ಮಳೆ ಮುಂದುವರಿದೆ. ನೆರೆಯ ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿ ಮತ್ತು ಚಿಕ್ಕೋಡಿ ತಾಲ್ಲೂಕಿನ ನದಿ ಜಲಾನಯನ ಪ್ರದೇಶಗಳಲ್ಲಿ ಮಳೆ ಅಬ್ಬರ ಹೆಚ್ಚಿದ್ದು, ಜಲಾಶಯಗಳಿಗೆ ನೀರಿನ ಹರಿವು ಹೆಚ್ಚಾಗಿದೆ.

ಬೆಳಗಾವಿ ಜಿಲ್ಲೆಯ ಹಲವೆಡೆ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗುತ್ತಿರುವುದರಿಂದ ನದಿಪಾತ್ರದ ಪ್ರದೇಶಗಳಲ್ಲಿ ಪ್ರವಾಹ ಭೀತಿ ಎದುರಾಗಿದೆ. ನೂರಾರು ಎಕರೆ ಭತ್ತದ ಬೆಳೆಗಳು ನೀರಲ್ಲಿ ಮುಳುಗಿವೆ. ಖಾನಾಪುರ ತಾಲ್ಲೂಕಿನ ಹಬ್ಬಾನಟ್ಟಿ ಹೊರವಲಯದ ಮಲಪ್ರಭಾ ನದಿ ದಡದಲ್ಲಿರುವ ಆಂಜನೇಯ ದೇವಸ್ಥಾನ ಮುಳುಗಿದೆ.

'ದೂಧ್‌ಗಂಗಾ ನದಿಯಿಂದ 24,640 ಕ್ಯುಸೆಕ್ ಮತ್ತು ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ 72,625 ಕ್ಯುಸೆಕ್ ಸೇರಿ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಒಟ್ಟು 97,265 ಕ್ಯುಸೆಕ್ ನೀರು ಸೇರಿಕೊಳ್ಳುತ್ತಿದೆ. ಮಹಾರಾಷ್ಟ್ರದ ಯಾವುದೇ ಜಲಾಶಯದಿಂದ ಇನ್ನೂ ನೀರು ಬಿಡುಗಡೆ ಮಾಡಿಲ್ಲ. ಮಳೆ ನೀರು ಮಾತ್ರ ಹರಿದು ಬರುತ್ತಿದೆ' ಎಂದು ಕಂದಾಯ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲ್ಲೂಕಿನಲ್ಲಿ 9 ಸೇತುವೆಗಳು ಮುಳುಗಡೆಯಾಗಿವೆ. ವಾಹನ ಮತ್ತು ಜನ ಸಂಚಾರಕ್ಕೆ ಪರ್ಯಾಯ ಮಾರ್ಗಗಳಿವೆ. ನಿಪ್ಪಾಣಿ ತಾಲ್ಲೂಕಿನ ಕಾರದಗಾದ ಬಂಗಾಲಿ ಬಾಬಾ ದೇವಸ್ಥಾನ ಜಲಾವೃತವಾಗಿದೆ.

ಮಲಪ್ರಭಾ, ಘಟಪ್ರಭಾ, ಹಿರಣ್ಯಕೇಶಿ, ಮಾರ್ಕಂಡೇಯ ನದಿಗಳೂ ಮೈದುಂಬಿ ಹರಿಯುತ್ತಿವೆ. ಅಲ್ಲಲ್ಲಿ ಬೆಳೆಗಳು ಜಲಾವೃತವಾಗಿವೆ. ಘಟಪ್ರಭಾ ಜಲಾಶಯಕ್ಕೆ 33,732 ಕ್ಯುಸೆಕ್ ಒಳಹರಿವಿತ್ತು. ಮಲಪ್ರಭಾ ಜಲಾಶಯಕ್ಕೆ ಒಳಹರಿವು ದ್ವಿಗುಣಗೊಂಡಿದೆ. ಸದ್ಯ, 2,625 ಕ್ಯುಸೆಕ್ ಒಳಹರಿವಿದೆ.

ಘಟಪ್ರಭಾ ನದಿ ನೀರಿನಿಂದಾಗಿ ಬಾಗಲಕೋಟೆ ಜಿಲ್ಲೆಯ ಮಾಚಕನೂರ ಗ್ರಾಮದ ಹೊಳೆ ಬಸವೇಶ್ವರ ದೇವಾಲಯ ಜಲಾವೃತಗೊಂಡಿದೆ. ಮಾಚಕನೂರ ಬ್ಯಾರೇಜ್ ಹೊರತು ಪಡಿಸಿ 10 ಬ್ಯಾರೇಜ್ ಮುಳುಗಡೆಯಾಗಿವೆ.

ಬೆಳಗಾವಿ ಜಿಲ್ಲೆ ಹಾಗೂ ಮಹಾರಾಷ್ಟ್ರದ ಕೃಷ್ಣಾ ಕಣಿವೆಯಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ ಒಳಹರಿವು ಶುಕ್ರವಾರ ಸಂಜೆ 1.22 ಲಕ್ಷ ಕ್ಯುಸೆಕ್ ದಾಟಿದೆ. ಶುಕ್ರವಾರ ಒಂದೇ ದಿನ ಜಲಾಶಯಕ್ಕೆ 3.2 ಟಿಎಂಸಿ ಅಡಿ ನೀರು ಹರಿದು ಬಂದಿದೆ.

ಇನ್ನಷ್ಟು ಸುದ್ದಿಗಳು 6

ಮಗುವಿಗೆ ಮರುಜೀವ ನೀಡಿದ ಆಸ್ಟರ್ ಆಸ್ಪತ್ರೆ ವೈದ್ಯರು

ಬೆಂಗಳೂರು: ಪ್ರೈಮರಿ ಅಲ್ವಿಯೋಲಾರ್ ಪ್ರೋಟಿನೋಸಿಸ್ (ಪಿಎಪಿ) ಎಂಬ ಕಾಯಿಲೆಯಿಂದ ಬಳಲುತ್ತಿದ್ದ 1 ವರ್ಷ 9 ತಿಂಗಳ ಮಗುವಿಗೆ ಆಸ್ಟರ್ ಸಿಎಂಐ ಆಸ್ಪತ್ರೆಯ ವೈದ್ಯರು ಮರುಜೀವ ನೀಡಿದ್ದಾರೆ. ತೆಲಂಗಾಣದ ನಲ್ಗೊಂಡ ಜಿಲ್ಲೆಯ ಹರಿಚಂದ್ರ ಈ ಕಾಯಿಲೆಯಿಂದ ಬಳಲುತ್ತಿದ್ದ ಮಗು. ಆಸ್ಟರ್ ಆಸ್ಪತ್ರೆ ವೈದ್ಯರು ಈ ಮಗುವಿನ ಶ್ವಾಸಕೋಶಗಳಲ್ಲಿ ಟ್ಯೂಬ್‌ಗಳನ್ನು ಅಳವಡಿಸಿ ಅವುಗಳ ಮೂಲಕ ಲವಣಯುಕ್ತ ನೀರನ್ನು ಬಿಟ್ಟು ಅಲ್ಲಿ ಹೆಪ್ಪುಗಟ್ಟಿದ ಪ್ರೋಟೀನ್‌ಗಳನ್ನು ಹೊರತೆಗೆದಿದ್ದಾರೆ.

ನಮ್ಮ ಮೆಟ್ರೊ: ಸಿಬ್ಬಂದಿ ವೇತನ, ನಿರ್ವಹಣಾ ವೆಚ್ಚ ಭರಿಸಲು ಹರಸಾಹಸ

ನೆರವಿನ ನಿರೀಕ್ಷೆಯಲ್ಲಿ ಬಿಎಂಆರ್‌ಸಿಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಬಿಕ್ಕಟ್ಟು ಮತ್ತು ಲಾಕ್‌ಡೌನ್ ಕಾರಣ ಮೆಟ್ರೊ ರೈಲು ಸಂಚಾರ ಸೇವೆ ಸ್ಥಗಿತಗೊಂಡಿದ್ದು, ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ (ಬಿಎಂಆರ್‌ಸಿಎಲ್) ವರಮಾನವೇ ಇಲ್ಲದಂತಾಗಿದೆ. ಸಿಬ್ಬಂದಿ ವೇತನ ಪಾವತಿ ಮತ್ತು ನಿರ್ವಹಣಾ ವೆಚ್ಚ ನಿಭಾಯಿಸಲು ಸರ್ಕಾರದ ನೆರವಿನ ನಿರೀಕ್ಷೆಯಲ್ಲಿ ನಿಗಮವಿದೆ.

'ಸಿಬ್ಬಂದಿ ವೇತನ, ನಿರ್ವಹಣಾ ವೆಚ್ಚ ಮತ್ತಿತರ ಉದ್ದೇಶಕ್ಕೆ ನಿಗಮಕ್ಕೆ ಸದ್ಯ ₹300 ಕೋಟಿ ಅವಶ್ಯಕತೆ ಇದೆ. ಈ ಮೊತ್ತವನ್ನು ಬ್ಯಾಂಕುಗಳಿಂದ ಸಾಲವಾಗಿ ತೆಗೆದುಕೊಳ್ಳಲು ರಾಜ್ಯಸರ್ಕಾರದ ಅನುಮತಿ ಕೋರುವ ಉದ್ದೇಶವಿದೆ' ಎಂದು ನಿಗಮದ ಮೂಲಗಳು ಹೇಳಿವೆ.

'ನಮ್ಮ ಮೆಟ್ರೊ ನಿರ್ವಹಣಾ ವೆಚ್ಚವೇ ತಿಂಗಳಿಗೆ ₹31 ಕೋಟಿಯಷ್ಟಿದೆ. ಈಗ ರೈಲು ಸಂಚಾರ ಸ್ಥಗಿತಗೊಂಡಿರುವುದರಿಂದ ₹8 ಕೋಟಿಯಷ್ಟು ವಿದ್ಯುತ್ ಶುಲ್ಕ ಕಡಿಮೆ ಬರುತ್ತಿದೆ. ಆದರೆ, ಸಿಬ್ಬಂದಿ ವೇತನ ಮತ್ತು ನಿರ್ವಹಣೆಗೆ ತಿಂಗಳಿಗೆ ₹21 ಕೋಟಿ ಬೇಕು. ಇದಲ್ಲದೆ, ಮೊದಲ ಹಂತದಲ್ಲಿ ಮಾಡಿದ ಸಾಲದ ಕಂತು ಪಾವತಿಸಲು ₹12 ಕೋಟಿ ಬೇಕಾಗುತ್ತದೆ' ಎಂದು ನಿಗಮದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ರಾಜ್ಯಸರ್ಕಾರ ಮತ್ತು ಬಿಎಂಆರ್‌ಸಿಎಲ್ ನಡುವಣ ಒಪ್ಪಂದದನ್ವಯ, ವರಮಾನ ಮತ್ತು ಸಾಲಮರುಪಾವತಿ ನಡುವಣ ವ್ಯತ್ಯಾಸವನ್ನು ತಗ್ಗಿಸಲು ಸರ್ಕಾರ ನೆರವು ನೀಡಬೇಕು. ಆದರೆ, ಈಗ ಸರ್ಕಾರವೇ ಆರ್ಥಿಕವಾಗಿ ಸಂಕಷ್ಟದಲ್ಲಿದೆ. ಅಲ್ಲದೆ, ಎರಡನೇ ಹಂತದ ಯೋಜನೆ ಅನುಷ್ಠಾನಕ್ಕೂ ಸರ್ಕಾರದ ನೆರವು ಬೇಕಾಗಿದೆ. ಈ ಸಂದರ್ಭದಲ್ಲಿ ಬ್ಯಾಂಕುಗಳಿಂದ ಸಾಲ ಪಡೆಯುವುದು ಅನಿವಾರ್ಯವಾಗಿದೆ' ಎಂದು ಮೂಲಗಳು ತಿಳಿಸಿವೆ.

ಇತರೆ ವರಮಾನವೂ ಕುಸಿತ: 'ಟಿಕೆಟ್ ಮಾರಾಟದಿಂದ ಬರುವ ಆದಾಯ ಕುಸಿದಿರುವುದು ಮಾತ್ರವಲ್ಲದೆ, ಜಾಹೀರಾತು, ಮಳಿಗೆ ಬಾಡಿಗೆ ಸೇರಿದಂತೆ ಬೇರೆ ಮೂಲಗಳಿಂದ ಬರುತ್ತಿದ್ದ ಆದಾಯವೂ ಶೇ 82ರಷ್ಟು ಕುಸಿದಿದೆ. ಮೊದಲು ₹418 ಕೋಟಿಯವರೆಗೆ ಈ ಮೂಲಗಳಿಂದ ನಿಗಮಕ್ಕೆ ಆದಾಯ ಬರುತ್ತಿತ್ತು. 2020–21ರಲ್ಲಿ ಇದು ₹78 ಕೋಟಿ ಮಾತ್ರ ಆಗಿದೆ.

ಏಪ್ರಿಲ್‌ನಲ್ಲಿ ಭಾಗಶಃ ರೈಲು ಸಂಚಾರ ನಡೆಸಿದರೂ, ಟಿಕೆಟ್ ಮಾರಾಟದಿಂದ ಬಂದ ಆದಾಯ ತಿಂಗಳಿಗೆ ₹9.42 ಕೋಟಿ ಮಾತ್ರ. ಕೋವಿಡ್‌ಗಿಂತ ಪೂರ್ವದಲ್ಲಿ ತಿಂಗಳಿಗೆ ಸರಾಸರಿ ₹35 ಕೋಟಿ ವರಮಾನ ನಿಗಮಕ್ಕೆ ಬರುತ್ತಿತ್ತು.

ಸುದ್ದಿ 2 ನಿಮಿಷ

ಗುಂಡೇಟು: ಭದ್ರತಾ ಸಿಬ್ಬಂದಿ ಸಾವು

ಬೆಂಗಳೂರು: ಬೊಮ್ಮನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಗುಂಡೇಟಿನಿಂದಾಗಿ ಭದ್ರತಾ ಸಿಬ್ಬಂದಿ ಜಗನ್ (29) ಎಂಬುವವರು ಮೃತಪಟ್ಟಿದ್ದು, ಇದು ಕೊಲೆಯೋ ಅಥವಾ ಆತ್ಮಹತ್ಯೆಯೋ ಎಂಬುದು ಗೊತ್ತಾಗಿಲ್ಲ.

'ಮಡಿಕೇರಿಯ ಜಗನ್, ಹೊಂಗಸಂದ್ರದಲ್ಲಿ ವಾಸವಿದ್ದರು. ಸ್ಥಳೀಯ ಎಎಂಆರ್ ಟೆಕ್ ಪಾರ್ಕ್ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿ ಆಗಿ ಕೆಲಸ ಮಾಡುತ್ತಿದ್ದರು. ಇವರ ಸಾವಿನ ಬಗ್ಗೆ ಹಲವು ಅನುಮಾನಗಳಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಆಗ್ನೇಯ ವಿಭಾಗದ ಡಿಸಿಪಿ ಶ್ರೀನಾಥ್ ಜೋಶಿ ಹೇಳಿದರು.

'ಗುರುವಾರ ರಾತ್ರಿ ಜಗನ್ ಸೇರಿ ನಾಲ್ವರು ಸಿಬ್ಬಂದಿಯನ್ನು ಕಂಪನಿಯ ಭದ್ರತೆಗೆ ನಿಯೋಜಿಸಲಾಗಿತ್ತು. ನಸುಕಿನಲ್ಲಿ ಜಗನ್ ನಾಪತ್ತೆಯಾಗಿದ್ದರು. ಸಹೋದ್ಯೋಗಿಗಳು ಅವರಿಗಾಗಿ ಹುಡುಕಾಟ ನಡೆಸಿದ್ದರು. ಕಂಪನಿಯ ಆವರಣದ ಮೈದಾನದಲ್ಲಿ ಜಗನ್ ಮೃತದೇಹ ಕಂಡಿತ್ತು. ಠಾಣೆಗೆ ಸಿಬ್ಬಂದಿ ಮಾಹಿತಿ ನೀಡಿದ್ದರು.

'ಜಗನ್ ಮುಖದ ಹತ್ತಿರ ಗುಂಡು ತಗುಲಿದ ಗಾಯವಿದೆ. ಮೇಲ್ನೋಟಕ್ಕೆ ಆತ್ಮಹತ್ಯೆಯಂತೆ ಕಾಣಿಸುತ್ತಿದೆ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ' ಎಂದೂ ತಿಳಿಸಿದರು.

ಆಟೊ ಕಳವು: ಆರೋಪಿ ಬಂಧನ

ಬೆಂಗಳೂರು: ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ಆಟೊ, ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪದಡಿ ಮೋಹನ್ (21) ಎಂಬಾತನನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಮಾಗಡಿ ನಿವಾಸಿ ಮೋಹನ್ (21), ನಗರಕ್ಕೆ ಬಂದು ಕೃತ್ಯ ಎಸಗಿ ಪರಾರಿಯಾಗುತ್ತಿದ್ದ. ಆತನಿಂದ ₹ 3.50 ಲಕ್ಷ ಮೌಲ್ಯದ 3 ಆಟೊ ಹಾಗೂ 3 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಂಧ್ರಹಳ್ಳಿ ಭೈರವೇಶ್ವರನಗರದಲ್ಲಿ ದೂರುದಾರರ ಮನೆ ಮುಂದೆ ನಿಲ್ಲಿಸಿದ್ದ ಆಟೊವನ್ನು ಆರೋಪಿ ಕದ್ದೊಯ್ದಿದ್ದ. ಈ ಬಗ್ಗೆ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ. ರಾಜಗೋಪಾಲನಗರ ಮತ್ತು ಮಲ್ಲೇಶ್ವರ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದೂ ತಿಳಿಸಿದರು.

'ಕದ್ದ ವಾಹನಗಳನ್ನು ಮಾರಾಟ ಮಾಡುತ್ತಿದ್ದ ಆರೋಪಿ, ಅದರಿಂದ ಬಂದ ಹಣವನ್ನು ದುಶ್ಚಟಗಳಿಗೆ ಖರ್ಚು ಮಾಡುತ್ತಿದ್ದ' ಎಂದೂ ಹೇಳಿದರು.

ಲಾಕ್‌ಡೌನ್ ನಿಯಮ ಉಲ್ಲಂಘನೆ ಆರೋಪ ಸಂಸದ ತೇಜಸ್ವಿ ಸೂರ್ಯ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ನಿಯಮ ಉಲ್ಲಂಘಿಸಿ ಹೋಟೆಲ್‌ನಲ್ಲಿ ಕುಳಿತು ಊಟ ಮಾಡಿದ್ದ ಆರೋಪದಡಿ ಸಂಸದ ತೇಜಸ್ವಿ ಸೂರ್ಯ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ (ಎನ್‌ಡಿಎಂಎ) ಪ್ರಕರಣ ದಾಖಲಾಗಿದೆ.

'ನಿಯಮ ಉಲ್ಲಂಘನೆ ಬಗ್ಗೆ ವಿಜಯ್ ಡೇನಿಸ್ ಎಂಬುವರು ದೂರು ನೀಡಿದ್ದರು. ವಿಚಾರಣೆ ನಡೆಸಿ ಕಾಯ್ದೆಯಡಿ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯದ ಗಮನಕ್ಕೆ ತರಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಇದು ಎಫ್‌ಐಆರ್ ಅಲ್ಲ. ಕಾಯ್ದೆ ನಿಯಮ ಉಲ್ಲಂಘಿಸಿದ್ದಕ್ಕಾಗಿ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ತಿಳಿಸಿದರು.

'ರಾಜ್ಯದ ಎಲ್ಲ ಹೋಟೆಲ್‌ಗಳಲ್ಲಿ ಆಹಾರ ಪಾರ್ಸೆಲ್‌ಗೆ ಮಾತ್ರ ಅವಕಾಶ ನೀಡಲಾಗಿದೆ. ಆದರೆ, ತೇಜಸ್ವಿ ಸೂರ್ಯ ಅವರು ನೃಪತುಂಗ ರಸ್ತೆಯಲ್ಲಿರುವ ಹೋಟೆಲೊಂದರಲ್ಲಿ ಕುಳಿತು ಗಾಯಕ ವಿಜಯ್ ಪ್ರಕಾಶ್ ಜೊತೆ ಊಟ ಮಾಡಿದ್ದರು. ಈ ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅದನ್ನೇ ಆಧರಿಸಿ ವಿಜಯ್ ದೂರು ನೀಡಿದ್ದರು' ಎಂದೂ ಹೇಳಿದರು.

ಕಲಾಸಿಪಾಳ್ಯದಲ್ಲಿ ಪೌರಕಾರ್ಮಿಕರೊಬ್ಬರು ಕಾಲಿಗೆ ಶೂ ಹಾಗೂ ಕೈಗವಸು ಧರಿಸದೇ ಕೊಳಚೆ ನೀರಿನ ಸಮೀಪ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು–4ರವರ ಕಛೇರಿ, ಘನತ್ಯಾಜ್ಯ ನಿರ್ವಹಣೆ ವಿಭಾಗ, 2ನೇ ಮಹಡಿ, ಅನೆಕ್ಸ್ ಕಟ್ಟಡ–3, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು–560002

ನಂ.: ಕಾಪಾಅ–4/ಘತ್ಯಾನಿ/ಟೆಂಡರ್/03/2021–22 ದಿನಾಂಕ: 18.06.2021

ಪೂರ್ವ ಅರ್ಹತಾ ಟೆಂಡರ್ ಪ್ರಕಟಣೆಯ ಅಲ್ಪಾವಧಿ ಟೆಂಡರ್ ಆಹ್ವಾನ

ಕಾರ್ಯನಿರ್ವಾಹಕ ಅಭಿಯಂತರರು–4, ಘತ್ಯಾನಿ, ಬಿಬಿಎಂಪಿ ಇವರು "ಲೈನಿಂಗ್ ವ್ಯವಸ್ಥೆಗಳ ಸ್ಥಾಪನೆ, ಲೀಚೇಟ್ ನಿರ್ವಹಣೆ, ಲ್ಯಾಂಡ್‌ಫಿಲ್‌ನಲ್ಲಿ ಸಕ್ರಿಯ ಮತ್ತು ನಿಷ್ಕ್ರಿಯ ಅನಿಲಗಳ ನಿರ್ವಹಣೆ ಹಾಗೂ ಲ್ಯಾಂಡ್‌ಫಿಲ್ ಸೈಟ್‌ನ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ ಮುನ್ಸಿಪಲ್ ಘನತ್ಯಾಜ್ಯ ನಿರ್ವಹಣೆಯ ಲ್ಯಾಂಡ್‌ಫಿಲ್ ಸೈಟ್ ಕಾಮಗಾರಿಗಳ ವೈಜ್ಞಾನಿಕ ಅಭಿವೃದ್ಧಿ"ಗಾಗಿ ಗುತ್ತಿಗೆದಾರರು ಮತ್ತು / ಅಥವಾ ಸಂಸ್ಥೆಗಳ ಪೂರ್ವ ಅರ್ಹತೆಯನ್ನು ಉದ್ದೇಶಿಸಿದೆ.

ಕಾಮಗಾರಿಯ ಹೆಸರು: ಹುಲ್ಲಹಳ್ಳಿ, ಸರ್ವೇ ನಂ. 44ರಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್ ಸ್ಥಾಪನೆ ಮತ್ತು ಅದರ ಒಂದು ಬಾರಿಯ ಅಭಿವೃದ್ಧಿ ಸೇರಿದಂತೆ ಕಾರ್ಯಾಚರಣೆ ಮತ್ತು ನಿರ್ವಹಣೆ (ಸುತ್ತಮುತ್ತಲ ಹಳ್ಳಿಗಳ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ).

(1) ಆಸಕ್ತ ಅರ್ಹ ಟೆಂಡರ್‌ದಾರರು ಹೆಚ್ಚಿನ ಮಾಹಿತಿ ಮತ್ತು ಪೂರ್ವ ಅರ್ಹತಾ ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ **21.06.2021** ರಿಂದ **09.07.2021**ರ **ಸಂಜೆ 4:30 ಗಂಟೆ**ವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಪೂರ್ವ ಅರ್ಹತಾ ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ ಮಾತ್ರ ಸಲ್ಲಿಸತಕ್ಕದ್ದು. **(2)** ಪೂರ್ವಭಾವಿ ಸಭೆಯು ಮುಖ್ಯ ಅಭಿಯಂತರರ ಕಛೇರಿ, ಘತ್ಯಾನಿ, ಎನ್.ಆರ್. ಚೌಕ, ಬೆಂಗಳೂರು–560 002ರಲ್ಲಿ **28.06.2021**ರ **ಮಧ್ಯಾಹ್ನ 3:00 ಗಂಟೆ**ಗೆ ನಡೆಯಲಿದೆ. **(3)** ಪೂರ್ವ ಅರ್ಹತಾ ದಸ್ತಾವೇಜುಗಳನ್ನು ಟೆಂಡರ್ ದಸ್ತಾವೇಜಿನಂತೆ ಸೂಕ್ತ ಮಾಹಿತಿ / ದಸ್ತಾವೇಜುಗಳೊಂದಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ **09.07.2021**ರ **ಸಂಜೆ 4:30 ಗಂಟೆ**ಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. **(4)** ಟೆಕ್ನೋ–ಕಮರ್ಷಿಯಲ್ ಟೆಂಡರ್ ಹೊಂದಿರುವ ಪ್ರಥಮ ಫೋಲ್ಡರ್ ಅನ್ನು **12.07.2021**ರ **ಸಂಜೆ 4:30 ಗಂಟೆ**ಗೆ ತೆರೆಯಲಾಗುವುದು (ಸಾಧ್ಯವಾದಲ್ಲಿ).

ಯಾವುದೇ ತಿದ್ದುಪಡಿ / ಟಿಪ್ಪಣಿಯನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–4,
ಘನತ್ಯಾಜ್ಯ ನಿರ್ವಹಣೆ, ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಐಎಎಸ್, ಕೆಎಎಸ್ ಹಾಗೂ ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಿದೆ.

ಅಭ್ಯರ್ಥಿಗಳಿಗೆ ವಿಷಯ ಸಾಮಗ್ರಿ ಜೊತೆಗೆ ಹಾಸ್ಟೆಲ್ ವ್ಯವಸ್ಥೆಯೂ ಇರಲಿದೆ. ಪ್ರತಿಭಾವಂತರು ಹಾಗೂ ಆರ್ಥಿಕ ದುರ್ಬಲರಿಗೆ ಸಂಸ್ಥೆಯಿಂದ ದತ್ತಿ ವಿದ್ಯಾರ್ಥಿವೇತನ ನೀಡಲಾಗುವುದು.

ಜುಲೈ 1ರಿಂದ ಭೌತಿಕ ಹಾಗೂ ಆನ್‌ಲೈನ್ ಮೂಲಕ ತರಬೇತಿ ಪ್ರಾರಂಭಗೊಳ್ಳಲಿದೆ.

ಆಸಕ್ತರು ಇದೇ 28ರೊಳಗೆ ಸಂಸ್ಥೆಯ ವೆಬ್‌ಸೈಟ್ www.krishiksarvodayafoundation.org/ ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 7625000990 ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು.

ಐಬಿಪಿಎಸ್, ಆರ್‌ಆರ್‌ಬಿ ಪರೀಕ್ಷೆಯ ಆಕಾಂಕ್ಷಿಗಳು ಜೂ.26ರೊಳಗೆ www.ibps.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ:ಕೃಷಿಕ್ ಸರ್ವೋದಯ ಫೌಂಡೇಷನ್, ಹಳೆಯ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು–560008

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ಬಂಡವಾಳಶಾಹಿ ವ್ಯವಸ್ಥೆ ನಾಶಕ್ಕೆ ಉಪಕ್ರಮ ಅಗತ್ಯ: ನಾಗೇಶ ಹೆಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಸರ ವ್ಯವಸ್ಥೆಯ ಮೇಲೆ ದಾಳಿ ನಡೆಸುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ನೆಲಸಮ ಮಾಡುವ ಉಪಕ್ರಮಗಳು ಜಾರಿಯಾಗಬೇಕು. ಇದಕ್ಕಾಗಿ ಜನಸಮೂಹದಲ್ಲಿ ಒಗ್ಗಟ್ಟು ಸಾಧ್ಯವಾಗಬೇಕು' ಎಂದು ಹಿರಿಯ ಪತ್ರಕರ್ತ ನಾಗೇಶ ಹೆಗಡೆ ತಿಳಿಸಿದರು.

'ಸಾರ್ವಜನಿಕ ವಲಯದ ರಕ್ಷಣೆಗಾಗಿ ಬೆಂಗಳೂರು' ವಾರದ ಆನ್‌ಲೈನ್ ಉಪನ್ಯಾಸದಲ್ಲಿ 'ಪರಿಸರ ರಕ್ಷಣೆ: ಊರೊಟ್ಟಿನ ಆಸ್ತಿ ಯಾರಪ್ಪಂದು?' ಕುರಿತು ಅವರು ಶುಕ್ರವಾರ ಮಾತನಾಡಿದರು.



ನಾಗೇಶ ಹೆಗಡೆ

'ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡಲು ಚಿತ್ರ, ನಾಟಕ, ಕವಿತೆ ಸೇರಿದಂತೆ ಇನ್ನಿತರ ಅಭಿವ್ಯಕ್ತಿ ಮಾಧ್ಯಮಗಳನ್ನು ಬಳಸಿಕೊಳ್ಳಬಹುದು. ಈ ವಿಚಾರದಲ್ಲಿ ಮುಖ್ಯವಾಗಿ ಜನರಲ್ಲಿ ಸಾಮರಸ್ಯ ಹೆಚ್ಚಾಗಬೇಕು. ಆಗ ಬಂಡವಾಳಶಾಹಿಗಳ ದಾಳಿ ಕ್ರಮೇಣ ಕಡಿಮೆಯಾಗಲಿದೆ' ಎಂದರು.

'ನೈಲಾನ್‌ನಿಂದ ತಯಾರಾದ ಉತ್ಪನ್ನಗಳನ್ನು ಈಗ ಕಾಲಿನಿಂದ ಮೇಲಿನವರೆಗೆ ವಿವಿಧ ವಸ್ತುಗಳಾಗಿ ಧರಿಸುತ್ತಿದ್ದೇವೆ. ಇವುಗಳ ತಯಾರಿಗಾಗಿ ನೀಲಗಿರಿ ಮರಗಳ 'ಹಸಿರು ಮರುಭೂಮಿ' ಸೃಷ್ಟಿಯಾಗುತ್ತಿದೆ. ಒಮ್ಮೆ ನೆಡುವ ನೀಲಗಿರಿಗೆ ಕೂಲಿ, ಗೊಬ್ಬರ, ಬೇಲಿ, ನೀರಿನ ಅಗತ್ಯ ಇರುವುದಿಲ್ಲ. ಇದರಿಂದ ಗ್ರಾಮೀಣ ಭಾಗ ದಾರಿದ್ರ್ಯದ ಕಡೆಗೆ ಸಾಗುತ್ತಿದೆ. ಪಠ್ಯಪುಸ್ತಕಗಳಲ್ಲೂ ನೈಲಾನ್ ಕುರಿತಾದ ಉಲ್ಲೇಖವಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಈಗ ಅಭಿವೃದ್ಧಿಯ ಯುಗ ಬರಲಿದೆ' ಎಂದು ಎಲ್ಲರೂ ಕೂಗುತ್ತಿದ್ದಾರೆ. ನಿಜವಾಗಿ ಬರುತ್ತಿರುವುದು 'ಅಭಿವೃದ್ಧಿಯ ಅಂಧಯುಗ'. ನೀವು ಪ್ರಪಾತದ ಅಂಚಿಗೆ ಬಂದಿದ್ದರೆ, ಒಂದು ಹೆಜ್ಜೆ ಹಿಂದೆ ಇಡುವುದೇ ನಿಜವಾದ ಪ್ರಗತಿ ಎನ್ನುವಂತೆ ಅಭಿವೃದ್ಧಿಯ ವ್ಯಾಖ್ಯಾನ ಬದಲಾಗಬೇಕು' ಎಂದು ಕಿವಿಮಾತು ಹೇಳಿದರು.

ಅಧಿಕಾರಿಗಳಿಂದ ಕನ್ನಡ ನಿರ್ಲಕ್ಷ್ಯ: ಅಭಿವೃದ್ಧಿ ಪ್ರಾಧಿಕಾರ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹಿರಿಯ ಅಧಿಕಾರಿಗಳು ಆಡಳಿತ ನಡೆಸುವ ವೇಳೆ ಕನ್ನಡವನ್ನು ಕಡೆಗಣಿಸಿ, ಇಂಗ್ಲಿಷ್‌ನಲ್ಲಿಯೇ ವ್ಯವಹರಿಸುತ್ತಿರುವ ಬಗ್ಗೆ ಹಲವು ದೂರುಗಳು ಬಂದಿವೆ. ಎಲ್ಲ ಅಧಿಕಾರಿಗಳು ಶೇ 100ರಷ್ಟು ಕನ್ನಡವನ್ನೇ ಬಳಸಲು ಸೂಚನೆ ನೀಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಟಿ.ಎಸ್. ನಾಗಾಭರಣ

'ಕನ್ನಡವನ್ನು ಆಡಳಿತದ ಎಲ್ಲ ಹಂತದಲ್ಲಿ ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ರಾಜ್ಯಸರ್ಕಾರ ಆದೇಶಿಸಿದೆ. ಆದರೆ, ಇದು ಪಾಲನೆಯಾಗುತ್ತಿಲ್ಲ. ಕಡ್ಡಾಯವಾಗಿ ಕನ್ನಡವನ್ನು ಬಳಸಲು ಸರ್ಕಾರ ಮತ್ತೊಮ್ಮೆ ಸುತ್ತೋಲೆ ಹೊರಡಿಸಬೇಕು' ಎಂದು ಒತ್ತಾಯಿಸಿ, ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಕಾಮಗಾರಿಗೆ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಭೂಮಿ ಪೂಜೆ ನೆರವೇರಿಸಿದರು. ಸ್ಥಳೀಯ ಮುಖಂಡರು ಇದ್ದಾರೆ.

ಜಿಎಲ್‌ಆರ್ ಕಾಮಗಾರಿಗೆ ಭೂಮಿ ಪೂಜೆ

ಬೆಂಗಳೂರು: ದೊಡ್ಡಬಿದರಕಲ್ಲು ವ್ಯಾಪ್ತಿಯ ಪ್ರದೇಶಗಳಿಗೆ ಕಾವೇರಿ ನೀರು ಸರಬರಾಜಿಗೆ ಅನುಕೂಲವಾಗಲು ಲಿಂಗಧೀರನಹಳ್ಳಿಯಲ್ಲಿ ನೆಲಮಟ್ಟದ ಜಲಾಶಯ (ಜಿಎಲ್‌ಆರ್) ಕಾಮಗಾರಿಗೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು,'ಜಲಮಂಡಳಿ ವತಿಯಿಂದ ಈ ಕಾಮಗಾರಿ ನಡೆಯಲಿದೆ. ಸುತ್ತಮುತ್ತಲಿನ ಹಳ್ಳಿಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಿದೆ. ₹15.27 ಕೋಟಿ ವೆಚ್ಚದ ಈ ಕಾಮಗಾರಿಯನ್ನು 2023ರ ಜೂನ್ ವೇಳೆಗೆ ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು' ಎಂದರು.

'ಯಶವಂತಪುರ ಕ್ಷೇತ್ರದಲ್ಲಿ ನೀರಿನ ಸಮಸ್ಯೆಗಳನ್ನು ಪೂರ್ಣವಾಗಿ ಬಗೆಹರಿಸುವ ಗುರಿ ಇದೆ. ಪ್ರಸ್ತುತ ಈಗ ಚಾಲನೆ ನೀಡಿರುವ ಯೋಜನೆಯಿಂದ ಈ ಭಾಗದ ನೀರಿನ ಸಮಸ್ಯೆ ನೀಗಲಿದೆ' ಎಂದು ಹೇಳಿದರು.

ಹೇರೋಹಳ್ಳಿಯ ಕೆಎಸ್‌ಆರ್‌ಟಿಸಿ ಬಡಾವಣೆ, ಜೆಎಸ್‌ಎಸ್ ಕಾಲೇಜು ಹಾಗೂ ಹೆಮ್ಮಿಗೆಪುರದ ಪೌರಕಾರ್ಮಿಕರಿಗೆ ಪಡಿತರ ಕಿಟ್‌ಗಳನ್ನು ಸಚಿವ ಸೋಮಶೇಖರ್ ವಿತರಿಸಿದರು.

'ಪ್ರಧಾನಿಯಾಗಲು ಅಂಬೇಡ್ಕರ್ ಅರ್ಹರಾಗಿದ್ದರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ದೇಶದ ಪ್ರಧಾನಮಂತ್ರಿಯಾಗುವ ಎಲ್ಲಾ ಅರ್ಹತೆಗಳು ಇದ್ದವು. ಎಲ್ಲ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳುವ ಜಾಣ್ಮೆ ಅವರಿಗಿತ್ತು. ಈ ಹುದ್ದೆ ಅಲಂಕರಿಸಲು ಜಾತಿ ವ್ಯವಸ್ಥೆ ಅಡ್ಡಿಯಾಯಿತು' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ನಟರಾಜ್ ಹುಳಿಯಾರ್ ಅಭಿಪ್ರಾಯಪಟ್ಟರು.

ದಿ ಆಕ್ಸ್‌ಫರ್ಡ್ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಶುಕ್ರವಾರ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ 'ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಸಮಕಾಲೀನ ಭಾರತ' ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ತ್ರಿವರ್ಣ ಧ್ವಜದಲ್ಲಿ ಅಶೋಕ ಚಕ್ರ ಮೂಡಲು ಅಂಬೇಡ್ಕರ್ ಕಾರಣ.

ನಟರಾಜ್ ಹುಳಿಯಾರ್

ಅವರು ದಲಿತರಿಗಷ್ಟೇ ಸೀಮಿತವಾಗದೆ ರಾಷ್ಟ್ರೀಯ ನಾಯಕರಾಗಿ ಬೆಳೆದರು. ಭಾರತದಲ್ಲಿ ಹೊಸ ಮನ್ವಂತರಕ್ಕೆ ನಾಂದಿ ಹಾಡಿದರು. ಗಾಂಧಿ ನಂತರದ ಅತ್ಯಂತ ಪ್ರಭಾವಿ ಭಾರತೀಯ ಎಂಬುದನ್ನು ಜನರೇ ಒಪ್ಪಿಕೊಂಡಿದ್ದರು. ಅಂಬೇಡ್ಕರ್ ಬಗೆಗೆ ಜನರಿಗೆ ಪೂಜ್ಯ ಭಾವನೆ ಇತ್ತು. ಬೀದಿ ಬೀದಿಗಳಲ್ಲಿ ಅವರ ಪ್ರತಿಮೆಗಳನ್ನು ನಿರ್ಮಿಸಿರುವುದು ಇದಕ್ಕೆ ಸಾಕ್ಷಿ' ಎಂದರು.

'ದಲಿತ ಸಾಹಿತ್ಯಕ್ಕೆ ಅಂಬೇಡ್ಕರ್ ಪ್ರೇರಣೆ. ನೀಲಿ ಬಣ್ಣ ಸಮಾನತೆಯ ಸಂಕೇತ ಎಂಬುದನ್ನು ಮನಗಂಡಿದ್ದ ಅವರು ಈ ಬಣ್ಣವನ್ನು ಹೆಚ್ಚು ಇಷ್ಟಪಡುತ್ತಿದ್ದರು. ಪ್ರಾಚೀನ ಇತಿಹಾಸ ಅರಿತುಕೊಳ್ಳುವ ಸಲುವಾಗಿ ಸಂಸ್ಕೃತ ಕಲಿತಿದ್ದರು. ಜಾತಿ ವ್ಯವಸ್ಥೆ ವಿರುದ್ಧ ಸಮರ ಸಾರಿದ್ದರು. ಮೇಲ್ವರ್ಗ ಹಾಗೂ ಕೆಳವರ್ಗದವರಲ್ಲಿ ಜಾಗೃತಿ ಮೂಡಿಸಲೂ ಮುಂದಾಗಿದ್ದರು' ಎಂದು ತಿಳಿಸಿದರು.

'ಬುದ್ಧ, ಬಸವೇಶ್ವರರಿಂದ ಸಾಧ್ಯವಾಗದ ಕೆಲಸವನ್ನು ಅಂಬೇಡ್ಕರ್ ಮಾಡಿ ತೋರಿಸಿದ್ದರು. 65 ವರ್ಷಗಳ ಜೀವಿತಾವಧಿಯಲ್ಲಿ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕವಾಗಿ ಸಮಾಜದಲ್ಲಿ ಬದಲಾವಣೆ ತರಲು ಪ್ರಯತ್ನಿಸಿದರು. ಅವರ ಆಲೋಚನಾ ಕ್ರಮ ಹಾಗೂ ಪರಿಶ್ರಮದಿಂದಾಗಿ ಭಾರತದ ಇತಿಹಾಸದ ಚಕ್ರ ಮತ್ತೊಂದು ಮಗ್ಗುಲಿಗೆ ಹೊರಳಿತು' ಎಂದು ಹೇಳಿದರು.

ಆಕ್ಸ್‌ಫರ್ಡ್ ಕಾಲೇಜಿನ ಪ್ರಾಂಶುಪಾಲರಾದ ನಿಖಿತಾ ಆಲೂರ್, ಪ್ರೊ.ಡಿ.ಎಸ್.ಜಯಸಿಂಹ, ಬಿ.ಇ.ಶಿವರಾಜ, ವೈ.ಶರತ್‌ಕುಮಾರ್ ಇದ್ದರು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

CIN: L85110KA1993PLC013869
ನೋಂದಾಯಿತ ಕಛೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ,
ಯಲಹಂಕ ನ್ಯೂ ಟೌನ್, ಬೆಂಗಳೂರು – 560 106
Tel: 080 - 4143 6000 Fax: 080 - 4143 6005
Email: investors@centumelectronics.com Website: www.centumelectronics.com

ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ಇಕ್ವಿಟಿ ಷೇರುಗಳ ವರ್ಗಾವಣೆ ಕುರಿತು ಇಕ್ವಿಟಿ ಷೇರುದಾರರಿಗೆ ಸೂಚನೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 124ರ ನಿಯಮಗಳನ್ನು ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ (ಅಕೌಂಟಿಂಗ್, ಆಡಿಟ್, ಟ್ರಾನ್ಸ್‌ಫರ್ & ರಿಫಂಡ್) ನಿಯಮಗಳು, 2016 ರೊಂದಿಗೆ ಮತ್ತು ಅದಕ್ಕೆ ಮಾಡಲಾದ ತಿದ್ದುಪಡಿಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳನುಸಾರ, ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ (ಐಇಪಿಎಫ್) ಇವರಲ್ಲಿ ಕ್ಲೇಮ್ ಆಗದಿರುವ ಡಿವಿಡೆಂಡ್‌ಗೆ ಸಂಬಂಧಿತ ಕಂಪನಿಯ ಇಕ್ವಿಟಿ ಷೇರುಗಳ ವರ್ಗಾವಣೆ ಕುರಿತು ಇಕ್ವಿಟಿ ಷೇರುದಾರರಿಗೆ ಈ ಮಾಹಿತಿ.

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 125ರ ನಿಯಮಗಳು ಮತ್ತು ಮೇಲೆ ತಿಳಿಸಲಾಗಿರುವ ನಿಯಮಾವಳಿಗಳ ಪ್ರಕಾರ, ನಿರಂತರವಾಗಿ ಏಳು ವರ್ಷಗಳಿಂದ ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳಿಂದ ಡಿವಿಡೆಂಡ್ ಕ್ಲೇಮ್ ಆಗದಿರುವ ಎಲ್ಲಾ ಷೇರುಗಳನ್ನು ಐಇಪಿಎಫ್ ಪ್ರಾಧಿಕಾರದ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆ ಮಾಡಬೇಕಾಗುತ್ತದೆ. ಕಂಪನಿಯು ತನ್ನ ಹಣಕಾಸು ವರ್ಷ 2013–14ನೇ ಸಾಲಿಗೆ ಘೋಷಿಸಿರುವ ಅಂತಿಮ ಡಿವಿಡೆಂಡ್‌ಗೆ ಸಂಬಂಧಿಸಿದಂತೆ, ಕಾಯ್ದೆ ಮತ್ತು ಐಇಪಿಎಫ್ ನಿಯಮಾವಳಿಗಳ ಪ್ರಕಾರ ಷೇರುಗಳ ವರ್ಗಾವಣೆಗೆ ಅಂತಿಮ ದಿನಾಂಕ 18ನೇ ಸೆಪ್ಟೆಂಬರ್, 2021 ಆಗಿರುತ್ತದೆ. ಐಇಪಿಎಫ್ ನಿಯಮಾವಳಿಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಪ್ರಕಾರ, ಹೀಗೆ ಕ್ಲೇಮ್ ಆಗದಿರುವ ಡಿವಿಡಂಡ್‌ಗೆ ಸಂಬಂಧಿತ ಅನುಕ್ರಮ ಷೇರುಗಳನ್ನು ಕೂಡ ವರ್ಗಾವಣೆ ಮಾಡಲಾಗುತ್ತದೆ.

ಡಿವಿಡಂಡ್‌ನ ಕ್ಲೇಮ್‌ಗಾಗಿ ಸೂಕ್ತ ಕ್ರಮ ಕೈಗೊಳ್ಳಲೆಂದು, ಯಾರ ಷೇರುಗಳ ವರ್ಗಾವಣೆಗೊಳ್ಳುವ ಸಾಧ್ಯತೆ ಇದೆಯೊ ಅಂತಹ ಷೇರುದಾರರಿಗೆ ಕಂಪನಿಯು ವೈಯಕ್ತಿಕವಾಗಿ ಮಾಹಿತಿ ರವಾನಿಸಿದೆ. ಕಂಪನಿಯು ಇಂತಹ ಷೇರುದಾರರ ಸಂಪೂರ್ಣ ವಿವರವನ್ನು ತನ್ನ ವೆಬ್‌ಸೈಟ್ https://www.centumelectronics.com/unclaimed-dividends/ ನಲ್ಲಿ ಕೂಡ ಪ್ರಕಟಿಸಿರುತ್ತದೆ.

ನಿರಂತರವಾಗಿ 7 ವರ್ಷಗಳ ಅವಧಿಗೆ ಕ್ಲೇಮ್ ಆಗದಿರುವ ಡಿವಿಡಂಡ್‌ಗೆ ಸಂಬಂಧಿತ ಷೇರುಗಳು:

- ಡಿಮ್ಯಾಟ್ ರೂಪದ ಷೇರುಗಳಾಗಿದ್ದಲ್ಲಿ, ಅಂತಹವುಗಳನ್ನು ನೇರವಾಗಿ ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಇವರೊಂದಿಗೆ ನಿರ್ವಹಿಸಲಾಗುತ್ತಿರುವ ಐಇಪಿಎಫ್ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆ ಮಾಡಲಾಗುತ್ತದೆ.
- ಭೌತಿಕ ರೂಪದ ಷೇರುಗಳು ಯಾವುದಾದರೂ ಇದ್ದಲ್ಲಿ, ಅಂತಹ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸಲು ಮೂಲ ಷೇರು ಪ್ರಮಾಣಪತ್ರಗಳು ರದ್ದುಗೊಳಿಸುವ ಜೊತೆಗೆ ಹೊಸ ಫೋಲಿಯೊ ಮತ್ತು ಪ್ರಮಾಣಪತ್ರ ಸಂಖ್ಯೆಗಳನ್ನು ನೀಡಲಾಗುತ್ತದೆ. ಸದರಿ ಷೇರುಗಳನ್ನು ಡಿಮ್ಯಾಟ್ ರೂಪದಲ್ಲಿ ಮಾರ್ಪಡಿಸಲು ಮತ್ತು ಐಇಪಿಎಫ್ ಪರವಾಗಿ ವರ್ಗಾಯಿಸಲು ವ್ಯವಹಾರಿಕ ಕ್ರಮ ಕೈಗೊಳ್ಳುವ ಮೂಲಕ ಕಂಪನಿಯು ಎನ್‌ಎಸ್‌ಡಿಎಲ್ ಇವರಿಗೆ ಮಾಹಿತಿ ನೀಡಬಹುದಾಗಿರುತ್ತದೆ.

ಒಂದು ವೇಳೆ ಸಂಬಂಧಿತ ಷೇರುದಾರರಿಂದ ಕಂಪನಿಗೆ 19ನೇ ಆಗಸ್ಟ್, 2021 ರೊಳಗೆ ಯಾವುದೇ ರೀತಿಯ ಪ್ರತಿಕ್ರಿಯೆ ಲಭಿಸದಿದ್ದಲ್ಲಿ, ಐಇಪಿಎಫ್ ನಿಯಮಗಳ ಪ್ರಕಾರ ಕಂಪನಿಯಿಂದ ಅಂತಹ ಕ್ಲೇಮ್ ಆಗದಿರುವ ಡಿವಿಡಂಡ್‌ನ್ನು 18ನೇ ಸೆಪ್ಟೆಂಬರ್, 2021 ರೊಳಗೆ ವರ್ಗಾವಣೆ ಮಾಡಲಾಗುತ್ತದೆ. ಅನುಕ್ರಮವಾದ ಷೇರುಗಳನ್ನು ಕೂಡ ಷೇರುದಾರರಿಗೆ ಯಾವುದೇ ಮುನ್ಸೂಚನೆ ನೀಡದೆಯೇ ವರ್ಗಾವಣೆ ಮಾಡಲಾಗುತ್ತದೆ.

ಮೇಲೆ ತಿಳಿಸಿರುವಂತೆ, ಕಂಪನಿಯಿಂದ ಒಂದು ಬಾರಿ ಡಿವಿಡಂಡ್ ಮತ್ತು ಇಕ್ವಿಟಿ ಷೇರುಗಳನ್ನು ವರ್ಗಾವಣೆ ಮಾಡಿದ ನಂತರ, ಷೇರುದಾರರು ತಮ್ಮ ಕ್ಲೇಮ್ ಆಗದಿರುವ ಡಿವಿಡೆಂಡ್ ಅನ್ನು ಮತ್ತು ಇಕ್ವಿಟಿ ಷೇರುಗಳನ್ನು ಐಇಪಿಎಫ್ ನಿಯಮಾವಳಿಗಳ ಪ್ರಕಾರ ಐಇಪಿಎಫ್ ಪ್ರಾಧಿಕಾರಿಯಿಂದ ಮಾತ್ರ ಕ್ಲೇಮ್ ಮಾಡಿಕೊಳ್ಳಬಹುದಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಂಪನಿಗೆ ಪ್ರತಿಯಾಗಿ ಯಾವುದೇ ಕ್ಲೇಮ್ ಮಾಡಲು ಅವಕಾಶವಿರುವುದಿಲ್ಲ ಎಂಬುದು ದಯವಿಟ್ಟು ಗಮನದಲ್ಲಿರಲಿ.

ಮೇಲಿನದಕ್ಕೆ ಸಂಬಂಧಿಸಿದಂತೆ ಷೇರುದಾರರಿಗೆ ಯಾವುದೇ ವಿಚಾರಣೆಗಳಿದ್ದಲ್ಲಿ, ನಮ್ಮ ರಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ಸ್ ಕೇಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಇವರನ್ನು ಕೆಳಗಿನ ವಿಳಾಸಗಳಲ್ಲಿ ಸಂಪರ್ಕಿಸಬೇಕೆಂದು ಕೋರಲಾಗಿದೆ:

ಘಟಕ: ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
ಸೆಲೆನಿಯಮ್ ಟವರ್ ಬಿ, ಪ್ಲಾಟ್ ಸಂಖ್ಯೆ 31 ಮತ್ತು 32,
ಹಣಕಾಸು ಜಿಲ್ಲೆ, ನಾನಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ್,
ಹೈದರಾಬಾದ್ – 500 032, ಫೋನ್ ಸಂಖ್ಯೆ: +91 40 6716 2222,
ಫ್ಯಾಕ್ಸ್ ಸಂಖ್ಯೆ: 040–2300 1153, ಇಮೇಲ್: einward.ris@kfintech.com

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಬೆಂಗಳೂರು
17ನೇ ಜೂನ್, 2021
ನಾಗರಾಜ್ ಕೆ ವಿ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಾಯೆನ್ಸ್ ಆಫೀಸರ್

ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಯಾಗಿ ಆ್ಯಂಟೋನಿಯೊ ಗುಟೆರೆಸ್ ಪುನರಾಯ್ಕೆ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಎರಡನೇ ಅವಧಿಗೆ ಆ್ಯಂಟೋನಿಯೊ ಗುಟೆರೆಸ್ ಅವರನ್ನು ಶುಕ್ರವಾರ ಪುನರಾಯ್ಕೆ ಮಾಡಲಾಯಿತು.

193 ಸದಸ್ಯ ರಾಷ್ಟ್ರಗಳ ವಿಶ್ವಸಂಸ್ಥೆಯ 75ನೇ ಸಾಮಾನ್ಯ ಸಭೆಯ ಅಧ್ಯಕ್ಷ ವೋಲ್ಕನ್ ಬೊಜ್ಕಿರ್ ಅವರು ಗುಟೆರೆಸ್ ಅವರ ಪುನರಾಯ್ಕೆಯನ್ನು ಘೋಷಿಸಿದರು.

'ಮುಂದಿನ ವರ್ಷ ಜನವರಿ 1ರಿಂದ 2026ರ ಡಿಸೆಂಬರ್ 31ರ ವರೆಗೆ ಅವರ ಅಧಿಕಾರಾವಧಿ ಇರಲಿದೆ' ಎಂದರು. 72 ವರ್ಷದ ಗುಟೆರೆಸ್ ಅವರಿಗೆ ಬೊಜ್ಕಿರ್ ಅವರು ಪ್ರತಿಜ್ಞಾವಿಧಿ ಬೋಧಿಸಿದರು.

ಗುಟೆರೆಸ್

ವಿಶ್ವಸಂಸ್ಥೆಯ 9ನೇ ಪ್ರಧಾನ ಕಾರ್ಯದರ್ಶಿಯಾಗಿ ಗುಟೆರೆಸ್ ಅವರು 2017ರ ಜನವರಿ 1ರಂದು ಪ್ರಮಾಣವಚನ ಸ್ವೀಕರಿಸಿದ್ದರು.

1995ರಿಂದ 2002ರ ವರೆಗೆ ಅವರು ಪೋರ್ಚುಗಲ್‌ನ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದರು. 2005ರಿಂದ 2015ರ ವರೆಗೆ ವಿಶ್ವಸಂಸ್ಥೆಯಲ್ಲಿ ನಿರಾಶ್ರಿತರ ಹೈಕಮಿಷನರ್ ಆಗಿ ಕಾರ್ಯ ನಿರ್ವಹಿಸಿದ್ದರು.

₹236 ಕೋಟಿ ವೆಚ್ಚದಲ್ಲಿ ಒಳಚರಂಡಿ ಕಾಮಗಾರಿ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪಟ್ಟಣದಲ್ಲಿ ₹236 ಕೋಟಿ ವೆಚ್ಚದಲ್ಲಿ ಒಳಚರಂಡಿ ವ್ಯವಸ್ಥೆಯ ಕಾಮಗಾರಿ ಪ್ರಾರಂಭವಾಗಲಿದ್ದು, ಎರಡು ವರ್ಷದಲ್ಲಿ ಪೂರ್ಣಗೊಳಿಸಲಾಗುವುದು. ಬಿನ್ನಮಂಗಲ ಕೆರೆಯ ಪಕ್ಕದಲ್ಲಿ ಎರಡು ಎಕರೆ ಶುದ್ಧಿಕರಣ ಘಟಕ ಸ್ಥಾಪಿಸಲು ಸ್ಥಳ ಗುರುತಿಸಲಾಗಿದೆ ಎಂದು ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶೇ 70 ಕೇಂದ್ರ ಸರ್ಕಾರ, ಶೇ 20 ಸಾಲ, ಶೇ 10 ನಗರಸಭೆ ಅನುದಾನದಲ್ಲಿ ₹47 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ಕಾಮಗಾರಿಯೂ ಪ್ರಾರಂಭವಾಗಲಿದ್ದು, ನಗರಸಭೆ ಮತ್ತು ಕೆಎಸ್‌ಆರ್‌ಟಿಸಿ ಸಂಸ್ಥೆ ನಡುವೆ ಇದ್ದ ಜಾಗದ ವ್ಯಾಜ್ಯದಿಂದ ಇಷ್ಟುದಿನ ತಡವಾಗಿತ್ತು.

ಶ್ರೀನಿವಾಸಮೂರ್ತಿ

1.8 ಎಕರೆ ನಗರಸಭೆ ಮತ್ತು 1.15 ಎಕರೆ ಕೆಎಸ್‌ಆರ್‌ಟಿಸಿಗೆ ಸೇರಿದ ಜಾಗದಲ್ಲಿ ಬಸ್‌ನಿಲ್ದಾಣ ನಿರ್ಮಾಣವಾಗಲಿದ್ದು ಎರಡೂ ಸಂಸ್ಥೆಗಳು ಪರಸ್ಪರ 40 ವರ್ಷ ಒಪ್ಪಂದ ಮಾಡಿಕೊಳ್ಳಲು ಒಪ್ಪಿದ್ದಾರೆ. ವಾಣಿಜ್ಯ ಸಂಕೀರ್ಣವೂ ನಿರ್ಮಾಣವಾಗಲಿದ್ದು ಬಂದ ಆದಾಯದಲ್ಲಿ ಶೇ35 ನಗರಸಭೆಗೆ ನೀಡುವಂತಾಗಿದೆ' ಎಂದರು.

'ಮೈಲನಹಳ್ಳಿಯಲ್ಲಿ 5 ಎಕರೆ ಜಾಗವನ್ನು ಸುಸಜ್ಜಿತ 100 ಹಾಸಿಗೆ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಮಾಡಲು ಗುರುತಿಸಲಾಗಿದೆ. ₹5ಕೋಟಿ ವೆಚ್ಚದಲ್ಲಿ ನಗರಸಭೆ ಕಟ್ಟಡ ಮತ್ತು ಸರ್ಕಾರಿ ಕಚೇರಿಗಳ ಸಂಕೀರ್ಣ ಮತ್ತು ₹4.5 ಕೋಟಿ ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಲಾಗುವುದು. ನೆಲಮಂಗಲ ಯೋಜನಾ ಪ್ರಾಧಿಕಾರ, ಕಾರ್ಖಾನೆಗಳ ಸಾಮಾಜಿಕ ಜವಾಬ್ದಾರಿ ನಿಧಿಯಿಂದ ನೆಲಮಂಗಲ ಕೆರೆ ಅಭಿವೃದ್ಧಿ ಮಾಡಲು ಯೋಜಿಸಲಾಗಿದೆ' ಎಂದರು.

ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ₹1ಕೋಟಿ ದೇಣಿಗೆ

ಆನೇಕಲ್ : ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಮೂರು ತಿಂಗಳಲ್ಲಿ ₹1ಕೋಟಿಗೂ ಹೆಚ್ಚು ದೇಣಿಗೆ ಪ್ರಾಣಿಗಳ ದತ್ತು ಮೂಲಕ ಬಂದಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಆರ್.ಗೋಕುಲ್ ತಿಳಿಸಿದ್ದಾರೆ.

ಏಪ್ರಿಲ್ 2021ರಿಂದ ಜೂನ್ 15ರವರೆಗೆ ₹1,16,90,796 ಪ್ರಾಣಿಗಳ ದತ್ತು ಸ್ವೀಕಾರಕ್ಕಾಗಿ ನೀಡಿದ್ದಾರೆ. 2,535 ಮಂದಿ ದತ್ತು ಸ್ವೀಕಾರದಲ್ಲಿ ಭಾಗಿಗಳಾಗಿದ್ದಾರೆ. ಪ್ರಾಣಿಗಳ ಆಹಾರ ಮತ್ತು ವೈದ್ಯಕೀಯ ಸೌಲಭ್ಯ ಸೇರಿದಂತೆ ಉದ್ಯಾನದ ವೆಚ್ಚಕ್ಕಾಗಿ ಬಳಸಿಕೊಳ್ಳಲಾಗುವುದು ಎಂದರು.

ನಟ ದರ್ಶನ್ ತೂಗುದೀಪ ಅವರು ಮಾಧ್ಯಮಗಳಲ್ಲಿ ಪ್ರಾಣಿ ದತ್ತು ಬಗ್ಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು ನೂರಾರು ಮಂದಿ ದತ್ತು ಕಾರ್ಯಕದಲ್ಲಿ ಭಾಗಿಗಳಾಗಿದ್ದಾರೆ ಎಂದು ತಿಳಿಸಿದ್ದಾರೆ.

ಬಾಬು ಸೇರಿ ಮೂವರು ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ ಸಿಸಿಬಿ ಪೊಲೀಸರು

ಹಾಸಿಗೆ ಬ್ಲಾಕಿಂಗ್: ಶಾಸಕನ ಆಪ್ತನ ಖಾತೆಗೆ ಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸಿಗೆ ಬ್ಲಾಕಿಂಗ್ ಪ್ರಕರಣದಲ್ಲಿ ಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಎಂ.ಸತೀಶ್ ರೆಡ್ಡಿ ಆಪ್ತ ಎನ್ನಲಾದ ಬಾಬು ಸೇರಿದಂತೆ ಮೂವರು ಆರೋಪಿಗಳ ವಿರುದ್ಧ ಸಿಸಿಬಿ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಜಯನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಇನ್‌ಸ್ಪೆಕ್ಟರ್ ಶ್ರೀಧರ್ ಪೂಜಾರ ನೇತೃತ್ವದ ತಂಡ, ನಗರದ 1ನೇ ಎಸಿಎಂಎಂ ನ್ಯಾಯಾಲಯಕ್ಕೆ 250 ಪುಟಗಳ ಆರೋಪ ಪಟ್ಟಿ ನೀಡಿದೆ.

'ಖಾಸಗಿ ಆಸ್ಪತ್ರೆಗಳಲ್ಲಿ ಮೀಸಲಿಟ್ಟಿದ್ದ ಹಾಸಿಗೆಗಳನ್ನು ಬ್ಲಾಕ್ ಮಾಡಿದ್ದ ಆರೋಪಿಗಳು, ಅವುಗಳನ್ನೇ ಹಣಕ್ಕಾಗಿ ಮಾರಾಟ ಮಾಡಿದ್ದರು. ಈ ಪ್ರಕರಣದಲ್ಲಿ ಆರೋಪಿಗಳಾದ ಬಾಬು, ಬೇಗೂರಿನ ನಿವಾಸಿ ನೇತ್ರಾವತಿ ಹಾಗೂ ಆಕೆಯ ಸ್ನೇಹಿತ ರೋಹಿತ್‌ಕುಮಾರ್‌ನನ್ನು ಬಂಧಿಸಲಾಗಿತ್ತು' ಎಂದು ಸಿಸಿಬಿ ಮೂಲಗಳು ಹೇಳಿದರು.

'40 ಮಂದಿ ಸಾಕ್ಷಿ ಹಾಗೂ ಹಣ ವರ್ಗಾವಣೆ ದಾಖಲಾತಿ ಸಮೇತ ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ನ್ಯಾಯಾಲಯದಲ್ಲಿ ವಿಚಾರಣೆ ಸದ್ಯದಲ್ಲೇ ಆರಂಭವಾಗಲಿದೆ' ಎಂದೂ ತಿಳಿಸಿದರು.

ಮೂವರಿಗೆ ಹಾಸಿಗೆ ಮಾರಾಟ: 'ಕೋವಿಡ್ ರೋಗಿಗಳಿಗೆ ಹಾಸಿಗೆಗಳು ಲಭ್ಯವಿವೆ' ಎಂಬ ಜಾಹೀರಾತನ್ನು ಆರೋಪಿ ನೇತ್ರಾವತಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಳು. ಇದಕ್ಕೆ ರೋಹಿತ್‌ಕುಮಾರ್ ಸಹಕರಿಸಿದ್ದ. ಜಾಹೀರಾತು ನೋಡಿದ್ದ ರೋಗಿಗಳು, ಹಾಸಿಗೆಗಾಗಿ ನೇತ್ರಾವತಿಯನ್ನು ಸಂಪರ್ಕಿಸಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಬಾಬು ಜೊತೆ ನಂಟು ಹೊಂದಿದ್ದ ನೇತ್ರಾವತಿ, ಆತನ ಮೂಲಕ ಮೂವರು ರೋಗಿಗಳಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ಕೊಡಿಸಿದ್ದಳು. ಅದಕ್ಕಾಗಿ ಒಬ್ಬರಿಂದ ₹ 80 ಸಾವಿರ, ಮತ್ತೊಬ್ಬರಿಂದ ₹ 25 ಸಾವಿರ ಹಾಗೂ ಇನ್ನೊಬ್ಬರಿಂದ ₹ 50 ಸಾವಿರ ಪಡೆದು-ಕೊಂಡಿದ್ದಳು. ಎಲ್ಲ ಹಣವನ್ನು ಗೂಗಲ್ ಪೇ ಹಾಗೂ ಫೋನ್ ಪೇ ಮೂಲಕ ಬಾಬುಗೆ ವರ್ಗಾಯಿಸಿದ್ದಳು. ಅದಕ್ಕೆ ಪ್ರತಿಯಾಗಿ ಬಾಬು, ನೇತ್ರಾವತಿ ಹಾಗೂ ರೋಹಿತ್‌ಕುಮಾರ್‌ಗೆ ಕಮಿಷನ್ ನೀಡಿದ್ದ. ಈ ಸಂಗತಿ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ' ಎಂದೂ ತಿಳಿಸಿವೆ.

'ಇನ್ನೊಬ್ಬ ರೋಗಿಗೂ ಹಾಸಿಗೆ ನೀಡುವ ಆಮಿಷವೊಡ್ಡಿ ಆರೋಪಿಗಳು ಹಣಕ್ಕೆ ಬೇಡಿಕೆ ಇಟ್ಟಿದ್ದರು. ಅಷ್ಟರಲ್ಲೇ ಪ್ರಕರಣ ಬೆಳಕಿಗೆ ಬಂದಿತ್ತು. ಆ ರೋಗಿಯಿಂದಲೇ ಹೇಳಿಕೆ ಸಂಗ್ರಹಿಸಿ ಆರೋಪ ಪಟ್ಟಿ ಜೊತೆ ಲಗತ್ತಿಸಲಾಗಿದೆ' ಎಂದೂ ಮೂಲಗಳು ಹೇಳಿವೆ.

'2 ಪ್ರಕರಣಗಳ ತನಿಖೆ ಪ್ರಗತಿಯಲ್ಲಿ'

'ಜಯನಗರ ಠಾಣೆಗಳಲ್ಲಿ ದಾಖಲಾಗಿದ್ದ ಎರಡು ಪ್ರಕರಣಗಳ ಪೈಕಿ ಒಂದರಲ್ಲಿ ಇದೀಗ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ. ಇನ್ನೊಂದು ಪ್ರಕರಣದ ತನಿಖೆಯನ್ನು ಸಿಸಿಬಿ ನಡೆಸುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ವಾರ್‌ರೂಮ್‌ಗೆ ನುಗ್ಗಿ ಗಲಾಟೆ ಮಾಡಿದ್ದ ಬಾಬು ಹಾಗೂ ಆತನ ಬೆಂಬಲಿಗರ ವಿರುದ್ಧ ಐಎಎಸ್ ಪ್ರೊಬೇಷನರಿ ಅಧಿಕಾರಿ ವಿ. ಯಶವಂತ್ ನೀಡಿದ್ದ ದೂರಿನಡಿ ಎಚ್‌ಎಸ್‌ಆರ್ ಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಅದರ ತನಿಖೆಯೂ ಪ್ರಗತಿಯಲ್ಲಿದೆ' ಎಂದೂ ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,03,063 ▲ ಒಟ್ಟು ಸೋಂಕಿತರು

73,844 ▲	11,13,808 ▲	15,410 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ಶುಕ್ರವಾರದ ಏರಿಕೆ

ಹೊಸ ಪ್ರಕರಣ	1,100 ▼
ಗುಣಮುಖ	6,160 ▲
ಸಾವು	39 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ.ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.83 ಕೋಟಿ ▲	2.98 ಕೋಟಿ ▲
ಸಕ್ರಿಯ ಪ್ರಕರಣ	1.16 ಕೋಟಿ	7.55 ಲಕ್ಷ ▼
ಗುಣಮುಖ	16.29 ಕೋಟಿ ▲	2.86 ಕೋಟಿ ▲
ಸಾವು	38.61 ಲಕ್ಷ ▲	3.85 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.85 ಲಕ್ಷ ▼	60,388 ▲
ಗುಣಮುಖ	3.91 ಲಕ್ಷ ▼	97,091 ▲
ಸಾವು	8,656 ▼	1,642 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

11,230 ಅಮೆರಿಕ; 74,347 ▼ ಬ್ರೆಜಿಲ್; 14,057 ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

51.19 ▼ ಅಮೆರಿಕ; 11.30 ▲ ಬ್ರೆಜಿಲ್; 2.96 ರಷ್ಯಾ

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

1.166 ಲಕ್ಷ ▲ ಮಹಾರಾಷ್ಟ್ರ; 24,900 ▲ ದೆಹಲಿ; 30,835 ▲ ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

59.54 ಮಹಾರಾಷ್ಟ್ರ ▲; 27.84 ಕೇರಳ ▲; 24.06 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಚಿತ್ರಾವಳಿ

ಸಂತೋಷ್ ಕುಮಾರ್ ರಾವ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಅಕ್ಷಯ ನಗರದಲ್ಲಿ ಅಂಗವಿಕಲರು ಹಾಗೂ ಬಡವರಿಗೆ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು. ಟ್ರಸ್ಟ್‌ನ ಪ್ರಭಾಕರ್ ರಾವ್ ಹಾಗೂ ಸದಸ್ಯರು ಇದ್ದರು.

ನಗರದ ಕ್ವೀನ್ಸ್ ರಸ್ತೆಯಲ್ಲಿ ನಡೆಯುತ್ತಿರುವ ಕಾಮಗಾರಿಯಿಂದಾಗಿ ದೂಳಿನಲ್ಲೇ ವಾಹನಗಳು ಸಂಚರಿಸುತ್ತಿದ್ದ ದೃಶ್ಯ ಶುಕ್ರವಾರ ಕಂಡಿದ್ದು ಹೀಗೆ –ಪ್ರಜಾವಾಣಿ ಚಿತ್ರ

ಸಾರ್ವಜನಿಕ ಸಾರಿಗೆ ಆರಂಭಕ್ಕೆ ಮನವಿ

ಶಾಪಿಂಗ್ ಮಾಲ್, ಕೈಗಾರಿಕೆ ತೆರೆಯಲು ಅನುಮತಿ ಕೋರಿದ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್‌ಲಾಕ್'ಗೆ ಎರಡೇ ದಿನ ಬಾಕಿ ಇದ್ದು, ಎಲ್ಲ ಮಾಲ್, ಕೈಗಾರಿಕೆಗಳು ಮತ್ತು ಸಾರ್ವಜನಿಕ ಸಾರಿಗೆ ಆರಂಭಕ್ಕೆ ಅನುಮತಿ ಕೋರಿ ಬಿಬಿಎಂಪಿಯು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದು, ಈ ಸಂಬಂಧ ಸರ್ಕಾರದ ಮಹತ್ವದ ಸಭೆ ಶನಿವಾರ ನಡೆಯಲಿದೆ.

ಕೈಗಾರಿಕೆಗಳು, ಮಾಲ್‌ಗಳು ಮತ್ತು ಸಾರ್ವಜನಿಕ ಸಾರಿಗೆಯನ್ನು ಸೋಮವಾರದಿಂದಪುನರಾರಂಭಿಸಲು ಬಿಬಿಎಂಪಿ ಚಿಂತನೆ ನಡೆಸಿದ್ದು, ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ತೀರ್ಮಾನವೇ ಅಂತಿಮ ಎಂದೂ ಹೇಳಿದೆ.

'ಲಾಕ್‌ಡೌನ್ ನಿರ್ಬಂಧಗಳನ್ನು ಹಂತ–ಹಂತವಾಗಿ ಸಡಿಲಿಸಬೇಕಾಗಿದೆ. ಹಲವು ವಲಯಗಳಲ್ಲಿ ನಿರ್ಬಂಧ ಸಡಿಲಿಸಬಹುದು ಎಂದು ಸರ್ಕಾರಕ್ಕೆ ತಿಳಿಸಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ, ಮೂರನೇ ಅಲೆಯ ಸಾಧ್ಯತೆಯೂ ಇದೆ. ನಾವು ಎಚ್ಚರದಿಂದಿರಬೇಕಾದುದು ಅವಶ್ಯಕ. ಆದರೂ, ಆರ್ಥಿಕ ಚಟುವಟಿಕೆಗಳು ಮತ್ತೆ ಚುರುಕಾಗಲು ಕೆಲವು ವಲಯಗಳಲ್ಲಿ ನಿರ್ಬಂಧ ಸಡಿಲಿಕೆ ಅನಿವಾರ್ಯವಾಗಿದೆ' ಎಂದೂ ಹೇಳಿದರು.

ಈಗಾಗಲೇ ನಗರದಲ್ಲಿ ವಾರಾಂತ್ಯ ಕರ್ಫ್ಯೂ ಜಾರಿಯಲ್ಲಿದೆ. ಸೋಮವಾರದಿಂದ ನಿರ್ಬಂಧ ಸಡಿಲಿಕೆಗೆ ಮನವಿ ಮಾಡಲಾಗಿದೆ. ತಜ್ಞರ ಸಲಹಾ ಸಮಿತಿಯು, ಕೆಲವು ಆದ್ಯತಾ ವಲಯಗಳಲ್ಲಿ ಹಂತ–ಹಂತವಾಗಿ ಕೋವಿಡ್ ನಿರ್ಬಂಧ ಸಡಿಲಿಸಬೇಕು ಎಂದೂ ಸಲಹೆ ಮಾಡಿದೆ.

ಪಂತರಪಾಳ್ಯ: ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ

ಡಬೆಂಗಳೂರು: ನಗರದ ಪಂತರಪಾಳ್ಯದ ಎರಡೂವರೆ ಎಕರೆ ಪ್ರದೇಶದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ತಲೆ ಎತ್ತಲಿದ್ದು, ಶೀಘ್ರದಲ್ಲಿಯೇ ಈ ಕಾಮಗಾರಿ ಆರಂಭವಾಗಲಿದೆ.

₹18 ಕೋಟಿ ವೆಚ್ಚದಲ್ಲಿ ಈ ಆಸ್ಪತ್ರೆಯನ್ನು ಬಿಬಿಎಂಪಿ ನಿರ್ಮಿಸಲಿದೆ. ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಶೀಘ್ರ ಶಂಕುಸ್ಥಾಪನೆ ನೆರವೇರಿಸಿ, ಕಟ್ಟಡ ಕಾಮಗಾರಿ ಪ್ರಾರಂಭಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಡಯಾಲಿಸಿಸ್ ಕೇಂದ್ರ ಪರಿಶೀಲನೆ: ಗೋವಿಂದರಾಜನಗರ ಕ್ಷೇತ್ರದ ಮಾರುತಿಮಂದಿರ ವಾರ್ಡ್ ವ್ಯಾಪ್ತಿಯಲ್ಲಿ ಉದ್ಘಾಟನೆಗೆ ಸಿದ್ಧವಾಗಿರುವ ಡಯಾಲಿಸಿಸ್ ಕೇಂದ್ರದ ಪರಿಶೀಲನೆಯನ್ನೂ ಗೌರವ್ ಗುಪ್ತ ನಡೆಸಿದರು.

ಬಿಬಿಎಂಪಿ ಅನುದಾನದಡಿ ₹10 ಕೋಟಿ ವೆಚ್ಚದಲ್ಲಿ ಈ ಕೇಂದ್ರ ನಿರ್ಮಾಣವಾಗುತ್ತಿದೆ. ಸದ್ಯ ಈ ಕೇಂದ್ರವನ್ನು ಕೋವಿಡ್ ರೋಗಿಗಳ ಆರೈಕೆಗಾಗಿ ಮೀಸಲಿಡುವ ಉದ್ದೇಶವಿದ್ದು, 15 ಐಸಿಯು ಹಾಸಿಗೆ ಹಾಗೂ 50 ಎಚ್‌ಡಿಯು ಹಾಸಿಗೆ ಸೇರಿದಂತೆ 65 ಹಾಸಿಗೆಗಳ ವ್ಯವಸ್ಥೆ ಮಾಡಲಾಗುತ್ತಿದೆ.

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ: ನಗರದ ಅಗ್ರಹಾರ ದಾಸರಹಳ್ಳಿ ವಾರ್ಡ್‌ನ ಎಂ.ಸಿ. ಬಡಾವಣೆಯಲ್ಲಿ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆ ಅಡಿಯಲ್ಲಿ ₹35 ಕೋಟಿ ವೆಚ್ಚದಲ್ಲಿ ಮೂರು ಅಂತಸ್ತಿನ ಸುಸಜ್ಜಿತ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಕಾಮಗಾರಿ ನಡೆಯುತ್ತಿದೆ.

ಈ ಕಾಮಗಾರಿಯು ಮುಂದಿನ ನವೆಂಬರ್ ವೇಳೆಗೆ ಮುಗಿಯಲಿದೆ ಎಂದು ಅಧಿಕಾರಿಗಳು ಮುಖ್ಯ ಆಯುಕ್ತರಿಗೆ ಮಾಹಿತಿ ನೀಡಿದರು. ಶೀಘ್ರವಾಗಿ ಕಾಮಗಾರಿ ಮುಕ್ತಾಯಗೊಳಿಸಿ ಎಂದು ಗೌರವ್ ಗುಪ್ತ ಸೂಚನೆ ನೀಡಿದರು.

ಪಶ್ಚಿಮ ವಲಯ ಜಂಟಿ ಆಯುಕ್ತ ಶಿವಸ್ವಾಮಿ, ವಲಯ ಮುಖ್ಯ ಎಂಜಿನಿಯರ್ ದೊಡ್ಡಯ್ಯ ಹಾಗೂ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರವಾಹ : ಜಿಲ್ಲಾಧಿಕಾರಿಗಳ ಜತೆ ಸಿ.ಎಂ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮಳೆ ಮತ್ತು ಪ್ರವಾಹ ಪೀಡಿತ ಜಿಲ್ಲೆಗಳ ಪರಿಸ್ಥಿತಿ ಅವಲೋಕಿಸಲು ಮತ್ತು ಕೋವಿಡ್ ಲಾಕ್‌ಡೌನ್ ಇನ್ನಷ್ಟು ಸಡಿಲಿಕೆಯ ಸಂಬಂಧ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಶನಿವಾರ(ಜೂ.19) ಎರಡು ಪ್ರತ್ಯೇಕ ಸಭೆಗಳನ್ನು ನಡೆಸಲಿದ್ದಾರೆ.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಮಳೆ ಮತ್ತು ಪ್ರವಾಹ ಸಂಬಂಧ 20 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ವಿಡಿಯೊ ಸಂವಾದ ನಡೆಸುವುದಾಗಿ ಹೇಳಿದರು.

'ಮುಂಗಾರು ಮಳೆಯಿಂದ ಪ್ರವಾಹ ಉಂಟಾಗಿರುವ ಜಿಲ್ಲೆಗಳ ಅಧಿಕಾರಿಗಳ ಜತೆ ಈಗಾಗಲೇ ಚರ್ಚೆ ಮಾಡಿದ್ದೇನೆ. ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಸ್ಥಿತಿಗತಿಯ ಬಗ್ಗೆ ನಾಳೆಯ ಸಭೆಯಲ್ಲಿ ಚರ್ಚಿಸುತ್ತೇನೆ' ಎಂದರು.

'ಮಹಾರಾಷ್ಟ್ರದ ನೀರಾವರಿ ಸಚಿವರು ರಾಜ್ಯಕ್ಕೆ ಶನಿವಾರ ಬರಲಿದ್ದು, ಪ್ರವಾಹ ಸ್ಥಿತಿಗತಿ ತಡೆಗಟ್ಟುವ ಬಗ್ಗೆ ಅವರ ಜತೆ ಚರ್ಚೆ ನಡೆಸುತ್ತೇನೆ' ಎಂದು ಯಡಿಯೂರಪ್ಪ ಹೇಳಿದರು.

ICICI Bank | ಐಸಿಐಸಿಐ ಬ್ಯಾಂಕ್

ವಲಯ ಕಚೇರಿ. 100/1, ಬಸವನಗುಡಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು – 560018

ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಹೊಂದಿರುವವರಿಗೆ ಮಾಹಿತಿ

ನಮ್ಮ ಎಲ್ಲಾ ಕೆಸಿಸಿ ಖಾತೆದಾರರಿಗೆ ತಿಳಿಸುವುದೇನೆಂದರೆ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಅಡಿಯಲ್ಲಿ ಖಾರೀಫ್ ಮತ್ತು ರಬಿ ಬೆಳೆಗಳಿಗೆ ಬ್ಯಾಂಕ್ ಮೂಲಕ ವಿಮೆ ಮಾಡಲಾಗುತ್ತದೆ, ಇದಕ್ಕಾಗಿ ನಿಮ್ಮ ಕೆಸಿಸಿ ಖಾತೆಯಿಂದ ವಿಮಾ ಪ್ರೀಮಿಯಂ ಮೊತ್ತವನ್ನು ಡೆಬಿಟ್ ಮಾಡಲಾಗುತ್ತದೆ ಮತ್ತು ಖಾರಿಫ್ ಬೆಳೆ ವಿಮೆಯ ಕೊನೆಯ ದಿನಾಂಕ 30 ಜೂನ್ 2021* ಆಗಿರುತ್ತದೆ.

ಈ ಯೋಜನೆಯ ಲಾಭ ಪಡೆಯಲು, ನಿಮ್ಮ ಕೆಸಿಸಿ ಖಾತೆಯನ್ನು ಆಧಾರ್‌ನೊಂದಿಗೆ ಲಿಂಕ್ ಮಾಡುವುದು ಕಡ್ಡಾಯವಾಗಿದೆ. ನಿಮ್ಮ ಆಧಾರ್ ಕಾರ್ಡನ್ನು ನೀವು ಲಿಂಕ್ ಮಾಡದಿದ್ದಲ್ಲಿ ನಿಮ್ಮ ಐಸಿಐಸಿಐ ಬ್ಯಾಂಕ್ ಶಾಖೆಯಲ್ಲಿ ದಿನಾಂಕ 23 ಜೂನ್ 2021ರ ಒಳಗೆ ಆಧಾರ್‌ನ್ನು ಲಿಂಕ್ ಮಾಡಿಸಿರಿ ಹಾಗೂ ಬೆಳೆಗಳನ್ನು ಬೆಳೆ ವಿಮೆಯ ವ್ಯಾಪ್ತಿಗೆ ಒಳಪಡಿಸಿರುವುದನ್ನು ಖಚಿತಪಡಿಸಿಕೊಳ್ಳಿ. ಕೆಸಿಸಿ ಖಾತೆದಾರರಿಗೆ ಬೆಳೆ ವಿಮೆಗಾಗಿ ಆಸಕ್ತಿ ಇಲ್ಲದಿದ್ದರೆ, ಐಸಿಐಸಿಐ ಬ್ಯಾಂಕ್ ಶಾಖೆಯಲ್ಲಿ ನಿರ್ದಿಷ್ಟ ಸ್ವರೂಪದಲ್ಲಿ ಹೊರಗುಳಿಯುವ ವಿನಂತಿಯನ್ನು ಸಲ್ಲಿಸಬಹುದು.

ಗಮನಿಸಿ: ನಿಮ್ಮ ಕಿಸಾನ್ ಕ್ರೆಡಿಟ್ ಕಾರ್ಡ ಖಾತೆಯಲ್ಲಿ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡದ ಕಾರಣ ನಿಮ್ಮ ಬೆಳೆ ವಿಮೆ ಮಾಡದಿದ್ದರೆ, ಬೆಳೆ ನಷ್ಟದ ಸಂದರ್ಭದಲ್ಲಿ ಬೆಳೆ ವಿಮೆಯು ದೊರೆಯದಿರುವದಕ್ಕೆ ಐಸಿಐಸಿಐ ಬ್ಯಾಂಕ್ ಜವಾಬ್ದಾರರಾಗುವುದಿಲ್ಲ.

*ಬೆಳೆ, ಜಿಲ್ಲೆ ಮತ್ತು ಆಯಾ ಕೊನೆಯ ದಿನಾಂಕಗಳ ಕುರಿತಾದ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಪಿಎಮ್‌ಎಫ್‌ಬಿವೈ (PMFBY) ಮಾರ್ಗಸೂಚಿಗಳನ್ನು ನೋಡಿ.

ದಿನಾಂಕ : 19-06-2021 ಅಧಿಕೃತ ಸಹಿದಾರರು

ನಗರದಲ್ಲಿ ವಾರಾಂತ್ಯ ಕರ್ಫ್ಯೂ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ರಾತ್ರಿಯಿಂದ ಸೋಮವಾರ (ಜೂನ್ 21) ಬೆಳಿಗ್ಗೆ 5 ಗಂಟೆಯವರೆಗೆ ವಾರಾಂತ್ಯದ ಕರ್ಫ್ಯೂ ಜಾರಿ ಮಾಡಲಾಗಿದೆ. ಶನಿವಾರ ಹಾಗೂ ಭಾನುವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಅಗತ್ಯ-ವಸ್ತುಗಳ ಖರೀದಿಗೆ ಮಾತ್ರ ಅವಕಾಶ ನೀಡಲಾಗಿದೆ.

ಕರ್ಫ್ಯೂ ಅವಧಿಯಲ್ಲಿ ಅನಗತ್ಯ ವಾಹನ ಸಂಚಾರಕ್ಕೆ ಅವಕಾಶವಿಲ್ಲ. ಕಾರಣವಿಲ್ಲದೇ ಸಂಚರಿಸಿದರೆ ಅಂಥವರ ವಾಹನಗಳನ್ನು ಪೊಲೀಸರು ಜಪ್ತಿ ಮಾಡಲಿದ್ದಾರೆ.

'ವಾರಾಂತ್ಯದಲ್ಲಿ ಹೆಚ್ಚು ಜನ ಓಡಾಡುವ ಸಂಭವವಿದೆ. ಹೀಗಾಗಿ, ಕರ್ಫ್ಯೂ ಜಾರಿ ಮಾಡಲಾಗಿದೆ. ಹಾಲು, ತರಕಾರಿ, ಹಣ್ಣು, ಮಾಂಸ ಖರೀದಿಗೆ ಯಾವುದೇ ಅಡ್ಡಿ ಇರುವುದಿಲ್ಲ. ವಾಯು ವಿಹಾರ, ಆಟೊ, ಟ್ಯಾಕ್ಸಿ ಸಂಚಾರಕ್ಕೆ ಅವಕಾಶವಿಲ್ಲ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಲಾಕ್‌ಡೌನ್ ಸಡಿಲಿಕೆಯಿಂದಾಗಿ ನಗರದ ಹಲವೆಡೆ ಜನಸಂದಣಿ ಇತ್ತು. ವಾರಾಂತ್ಯದಲ್ಲಿ ಅದಕ್ಕೆ ಅವಕಾಶವಿಲ್ಲ. ನಗರದ ಪ್ರತಿಯೊಂದು ಮೇಲ್ಸೇತು-ವೆಗಳನ್ನು ಬಂದ್ ಮಾಡಲಾಗಿದೆ. ಪ್ರತಿಯೊಂದು ರಸ್ತೆಗಳಲ್ಲಿ ಚೆಕ್‌ಪೋ-ಸ್ಟ್‌ಗಳನ್ನು ನಿರ್ಮಿಸಲಾಗಿದ್ದು, ಸಿಬ್ಬಂದಿ ವಾಹನಗಳನ್ನು ತಪಾಸಣೆ ಮಾಡಲಿದ್ದಾರೆ' ಎಂದು ಅವರು ತಿಳಿಸಿದರು.

'ಯಾರಾದರೂ ನಿಯಮ ಉಲ್ಲಂಘಿಸಿದರೆ ಅಂಥವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುವುದು. ವಾಹನಗಳನ್ನು ಜಪ್ತಿ ಮಾಡಿ ದಂಡ ವಿಧಿಸಲಾಗುವುದು' ಎಂದೂ ಹೇಳಿದರು.

ವಾರಾಂತ್ಯ ಕರ್ಫ್ಯೂ ಕಾರಣ ಸಂಚಾರ ವಿಭಾಗದ ಪೊಲೀಸರು ಬಿಜಿಎಸ್ ಮೇಲ್ಸೇತುವೆಗೆ ಅಡ್ಡಲಾಗಿ ಶುಕ್ರವಾರ ರಾತ್ರಿ ಬ್ಯಾರಿಕೇಡ್ ಹಾಕಿದರು –ಪ್ರಜಾವಾಣಿ ಚಿತ್ರ

'ಕೋವಿಶೀಲ್ಡ್: ಎರಡು ಡೋಸ್ ನಡುವಣ ಅಂತರ ಮೊದಲಿನಂತಿರಲಿ'

ನವದೆಹಲಿ (ಪಿಟಿಐ): ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವಣ ಅಂತರವನ್ನು ಈ ಮೊದಲಿನಂತೆ 6 ರಿಂದ 8 ವಾರ ನಿಗದಿಪಡಿಸುವಂತೆ 'ಪ್ರೊಗ್ರೆಸಿವ್ ಮೆಡಿಕೋಸ್ ಆ್ಯಂಡ್ ಸೈಂಟಿಸ್ಟ್ ಫೋರಂ' ಎಂಬ ಸಂಘಟನೆ ಶುಕ್ರವಾರ ಒತ್ತಾಯಿಸಿದೆ.

'2 ಡೋಸ್‌ಗಳ ನಡುವಿನ ಅಂತರವನ್ನು ಮೊದಲಿನಂತೆ ನಿಗದಿಗೊಳಿಸುವ ಜೊತೆಗೆ, ಬೃಹತ್ ಪ್ರಮಾಣದಲ್ಲಿ ಲಸಿಕೆ ಖರೀದಿಸಿ, ಲಸಿಕೆ ಕಾರ್ಯಕ್ರಮಕ್ಕೆ ವೇಗ ನೀಡಬೇಕು' ಎಂದೂ ಒತ್ತಾಯಿಸಿದೆ.

ಫೋರ್ಟಿಸ್‌ನಲ್ಲಿ ಸ್ಪುಟ್ನಿಕ್ ವಿ ಲಸಿಕೆ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫೋರ್ಟಿಸ್ ಆಸ್ಪತ್ರೆಯಲ್ಲಿ ಸ್ಪುಟ್ನಿಕ್ ವಿ ಲಸಿಕೆ ಲಭ್ಯವಿದ್ದು, ಇದನ್ನು ಶನಿವಾರದಿಂದ (ಜೂನ್ 19) ಪ್ರಾಯೋಗಿಕವಾಗಿ ನೀಡಲಾಗುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

'ಈ ಲಸಿಕೆ ಬಳಕೆಗೆ ಕೇಂದ್ರ ಸರ್ಕಾರದಿಂದ ಹಸಿರು ನಿಶಾನೆ ಲಭಿಸಿದೆ. ಇದು ಫೋರ್ಟಿಸ್ ಆಸ್ಪತ್ರೆಯ ಎಲ್ಲ ಶಾಖೆಗಳಲ್ಲೂ ಹಂತ ಹಂತವಾಗಿ ಲಭ್ಯವಾಗಲಿದೆ. ಈ ಲಸಿಕೆಯನ್ನು ಸರ್ಕಾರದ ಮಾರ್ಗಸೂಚಿಯ ಅನ್ವಯ ಡಾ.ರೆಡ್ಡೀಸ್ ಪ್ರಯೋಗಾಲಯದಿಂದ ನೇರವಾಗಿ ಪಡೆದುಕೊಳ್ಳಲಿದ್ದೇವೆ. ಇದು ಶೇ 90ಕ್ಕಿಂತಲೂ ಹೆಚ್ಚು ಪರಿಣಾಮಕಾರಿ ಲಸಿಕೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ' ಎಂದು ಫೋರ್ಟಿಸ್ ಹೆಲ್ತ್‌ಕೇರ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ಅಶುತೋಷ್ ರಘುವಂಶಿ ಹೇಳಿದ್ದಾರೆ.

ಲಸಿಕಾ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟದ ರೈನ್ ಬೋ ಮಕ್ಕಳ ಆಸ್ಪತ್ರೆಯು ಒಂದೇ ದಿನ ಒಟ್ಟು 10 ಸಾವಿರ ಮಂದಿಗೆ ಲಸಿಕೆ ನೀಡುವ ಅಭಿಯಾನ ಹಮ್ಮಿಕೊಂಡಿದೆ.

ಇದೇ 20ರಂದು ಬನ್ನೇರುಘಟ್ಟ ರಸ್ತೆಯ ಕಲ್ಯಾಣಿ ಕಲಾ ಮಂದಿರದಲ್ಲಿ ಬೆಳಿಗ್ಗೆ 7ರಿಂದ ಸಂಜೆ 7ರ ವರೆಗೆ ಲಸಿಕಾ ಅಭಿಯಾನ ನಿಗದಿಯಾಗಿದೆ. ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಗಳು ಲಭ್ಯವಿರುತ್ತವೆ. ಹೆಚ್ಚಿನ ಮಾಹಿತಿಗೆ 8884436034.

ವಿಶ್ವನಾಥ್–ಬಿಎಸ್‌ವೈ ಆಪ್ತರ ವಾಕ್ಸಮರ

ಪ್ರಜಾವಾಣಿ ವಾರ್ತೆ


ಎಚ್. ವಿಶ್ವನಾಥ್

ರೇಣುಕಾಚಾರ್ಯ

ಎಚ್.ಹಾಲಪ್ಪ

ಬೆಂಗಳೂರು: ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಮತ್ತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಪ್ತ ಬಣದ ಶಾಸಕರ ಮಧ್ಯೆ ಶುಕ್ರವಾರವೂ ಮಾತಿನ ಚಕಮಕಿ ಮುಂದುವರೆಯಿತು.

ಎಚ್.ವಿಶ್ವನಾಥ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಎಂ.ಪಿ. ರೇಣುಕಾಚಾರ್ಯ ಮತ್ತು ನರ್ಸ್ ಜಯಲಕ್ಷ್ಮಿ ಪ್ರಕರಣ ಏನಾಯಿತು. ಎಸ್.ಆರ್. ವಿಶ್ವನಾಥ್ ಒಬ್ಬ ಬಚ್ಚಾ. ನನ್ನಂತ ಅರೆ ಹುಚ್ಚನ ತ್ಯಾಗದಿಂದಲೇ ಆತ ಬಿಡಿಎ ಅಧ್ಯಕ್ಷನಾಗಿ ಕೋಟಿ ಕೋಟಿ ಲೂಟಿ ಮಾಡಿದ್ದಾನೆ. ಹಾಲಪ್ಪ ತನ್ನ ಸ್ನೇಹಿತನ ಮನೆಗೆ ಹೋಗಿ ಅತ್ಯಾಚಾರ ಮಾಡಿದ' ಎಂದು ಹರಿಹಾಯ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ರೇಣುಕಾಚಾರ್ಯ, 'ವಿಶ್ವನಾಥ್ ಅವರ ಆಡಿಯೊ, ವಿಡಿಯೋ ನನ್ನ ಬಳಿ ಇದೆ. ತುಂಬಾ ಸಂಭಾವಿತನ ಹಾಗೆ ವರ್ತಿಸುವ ಇವರು ಆಡಿಯೊದಲ್ಲಿರುವ ಮಾತುಗಳು ಕೇಳಿದರೆ, ಇವರ ಸಂಸ್ಕೃತಿ ಎಂಥದ್ದು ಎಂಬುದು ಗೊತ್ತಾಗುತ್ತದೆ' ಎಂದು ಹೇಳಿದರು.

'ವಯಸ್ಸಾಗಿರುವ ಅವರು ಆಡಿರುವ ಮಾತುಗಳು ಅಸಂಬದ್ಧ, ಕೇಳುವುದಕ್ಕೂ ಹೊಲಸು' ಎಂದು ಹರಿಹಾಯ್ದರು.

ಶಾಸಕ ಹರತಾಳು ಹಾಲಪ್ಪ, 'ನನ್ನ ವಿರುದ್ಧ ಮಾತನಾಡಿರುವ ವಿಶ್ವನಾಥ್‌ಗೆ ನ್ಯಾಯಾಲಯದ ಮೂಲಕವೇ ನೋಟಿಸ್ ಕೊಡುತ್ತೇನೆ. ನನ್ನ ಪ್ರಕರಣಕ್ಕೆ ನ್ಯಾಯಾಲಯದಲ್ಲಿ ಕ್ಲೀನ್ ಚಿಟ್ ಸಿಕ್ಕಿದೆ' ಎಂದು ಹೇಳಿದರು.

'ಇವರು ಯಾವ ಪಕ್ಷದಲ್ಲಿದ್ದರೂ ಆ ಪಕ್ಷಕ್ಕೆ ದ್ರೋಹ ಮಾಡಿದವರು. ಉಂಡ ಮನೆಗೆ ಎರಡು ಬಗೆಯುವುದು ಇವರ ಹುಟ್ಟು ಗುಣ. ಇವರ ಬಾಯಿಗೆ ಬೀಗ ಹಾಕದೇ ಇದ್ದರೆ ಪಕ್ಷಕ್ಕೆ ಮುಜುಗರ ತಪ್ಪಿದ್ದಲ್ಲ' ಎಂದು ಹರತಾಳು ಹಾಲಪ್ಪ ತಿಳಿಸಿದರು.

ಸರ್ಕಾರ ವಜಾಕ್ಕೆ ಕಾಂಗ್ರೆಸ್ ಆಗ್ರಹ

ಬೆಂಗಳೂರು: ಬಿಜೆಪಿಯಲ್ಲಿನ ಆಂತರಿಕ ಕಲಹದಿಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಅಲ್ಪಮತಕ್ಕೆ ಕುಸಿದಿದೆ. ತಕ್ಷಣವೇ ರಾಜ್ಯಪಾಲರು ಮಧ್ಯಪ್ರವೇಶಿಸಿ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ, 'ರಾಜ್ಯದಲ್ಲಿ ಶಾಸಕರ ಕುದುರೆ ವ್ಯಾಪಾರ ನಡೆಯುತ್ತಿದೆ. ರಾಜ್ಯ ಸರ್ಕಾರದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಯಡಿಯೂರಪ್ಪ ಅವರಿಗೆ ಸ್ವಾಭಿಮಾನ ಇದ್ದಿದ್ದರೆ ಈಗಾಗಲೇ ರಾಜೀನಾಮೆ ನೀಡಬೇಕಿತ್ತು. ಅವರು ಅಧಿಕಾರಕ್ಕೆ ಅಂಟಿ ಕುಳಿತಿರುವುದನ್ನು ನೋಡಿದರೆ ಲೂಟಿಯಲ್ಲಿ ನಿರತರಾಗಿರುವುದು ಸ್ಪಷ್ಟವಾಗುತ್ತದೆ' ಎಂದರು.

'ಜಲ ಸಂಪನ್ಮೂಲ ಇಲಾಖೆಯ ₹ 20,000 ಕೋಟಿ ಮೊತ್ತದ ಕಾಮಗಾರಿಗಳ ಟೆಂಡರ್ ಕುರಿತು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಶೇಕಡ 25ರಿಂದ 30ರಷ್ಟು ಲಂಚ ಪಡೆಯಲಾಗುತ್ತಿದೆ ಎಂದು ದೂರಿದ್ದಾರೆ. ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಕೂಡ ಹಣ ಲೂಟಿಗೆ ಬಂದಿದ್ದಾರಾ ಎಂಬ ಅನುಮಾನ ಮೂಡುತ್ತದೆ' ಎಂದು ಉಗ್ರಪ್ಪ ಹೇಳಿದರು.

ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ ಮಾತನಾಡಿ, 'ಅಯೋಧ್ಯೆ ರಾಮ ಮಂದಿರ ನಿರ್ಮಾಣಕ್ಕೆ ಜಮೀನು ಖರೀದಿಯಲ್ಲೂ ಹಗರಣ ನಡೆದಿದೆ. ಟ್ರಸ್ಟ್‌ನಲ್ಲಿರುವ ಬಿಜೆಪಿ ಮುಖಂಡ ಅನಿಲ್ ಮಿಶ್ರಾ ಮತ್ತು ಋಷಿಕೇಶ್ ಉಪಾಧ್ಯಾಯ ಕೂಡ ಇದಕ್ಕೆ ಸಾಕ್ಷಿಯಾಗಿದ್ದಾರೆ. ಧರ್ಮ, ಸಂಸ್ಕೃತಿ ಹೆಸರಿನಲ್ಲೂ ಲೂಟಿ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಸಂಯೋಜಕರಾದ ಎಂ. ರಾಮಚಂದ್ರಪ್ಪ ಮತ್ತು ಎಂ.ಎ. ಸಲೀಂ ಪತ್ರಿಕಾಗೋಷ್ಠಿಯಲ್ಲಿದ್ದರು.

ನಗರದಲ್ಲಿ ಇಂದು

ರಾಜಗೋಪಾಲನಗರ, ಹೆಗ್ಗನಹಳ್ಳಿ, ಸುಂಕದಕಟ್ಟೆ ಭಾಗದ ಜನರಿಗೆ ಆಹಾರ ಸಾಮಗ್ರಿಗಳ ಕಿಟ್ ವಿತರಣೆ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಶಾಸಕ ಆರ್. ಮಂಜುನಾಥ್, ಸ್ಥಳ–ಜಿ.ಕೆ.ಡಬ್ಲ್ಯು ಬಡಾವಣೆ ಮುಖ್ಯರಸ್ತೆಯ ಮೈದಾನ, ಬೆಳಿಗ್ಗೆ 10.30

ಎಚ್.ಎಸ್.ದೊರೆಸ್ವಾಮಿ, ಸಿದ್ದಲಿಂಗಯ್ಯ, ಜರಗನಹಳ್ಳಿ ಶಿವಶಂಕರ್, ಕೋ.ವೆಂ. ರಾಮಕೃಷ್ಣೇಗೌಡ, ಫಾದರ್ ಇಸಾಕ್ ಅವರಿಗೆ ನುಡಿನಮನ: ಭಾಗವಹಿಸುವವರು–'ಮುಖ್ಯಮಂತ್ರಿ' ಚಂದ್ರು, ರಾ.ನಂ.ಚಂದ್ರಶೇಖರ, ಫಾ.ಆರೋಗ್ಯಸ್ವಾಮಿ, ಜಾನ್ ಪೀಟರ್, ಆಯೋಜನೆ–ಕರ್ನಾಟಕ ವಿಕಾಸ ರಂಗ, ಅಖಿಲ ಭಾರತ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ, ಸ್ಥಳ–ಹನುಮಾನ್ ಚೇಂಬರ್ಸ್, ಮಸೀದಿ ಮುಂಭಾಗ, ಚಾಮರಾಜಪೇಟೆ, ಬೆಳಿಗ್ಗೆ 11

'ಮುಖ್ಯಮಂತ್ರಿ' ಚಂದ್ರು

ಅರ್ಚಕರು, ಆಟೊ ಚಾಲಕರು, ಆಶಾ ಕಾರ್ಯಕರ್ತರು ಹಾಗೂ ಬಡವರಿಗೆ ಪಡಿತರ ಕಿಟ್ ವಿತರಣೆ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಅತಿಥಿಗಳು–ಶಾಸಕ ಕೃಷ್ಣಬೈರೇಗೌಡ, ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್, ಆಯೋಜನೆ–ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್, ಸ್ಥಳ–ಆಟದ ಮೈದಾನ, ಮಲ್ಲೇಶ್ವರ 18ನೇ ಕ್ರಾಸ್, ಸರ್ಕಲ್ ಮಾರಮ್ಮ ದೇವಸ್ಥಾನದ ಎದುರು, ಮಧ್ಯಾಹ್ನ 1

'ಶರಣ ಸಂಸ್ಕೃತಿ ಚಿಂತನೆ'–ಗೊ.ರು.ಚನ್ನಬಸಪ್ಪ ಅವರೊಂದಿಗೆ ಸಂವಾದ: ಭಾಗವಹಿಸುವವರು–ಕೆ.ವಿ. ನಾಗರಾಜ ಮೂರ್ತಿ, ಮುಕ್ತಾ ಬಿ.ಕಾಗಲಿ, ಪ್ರಮೀಳಾ ಗರಡಿ, ಪ್ರೇಮಾ ಸೋಮಸುಂದರ್, ವಚನ ಗಾಯನ–ಬೀನಾ ಬಾದಾಮಿ, ಅರುಣಾ ಚಂದ್ರಶೇಖರ್, ಶಶಿಕಲಾ ರುದ್ರಪ್ರಸಾದ್, ಆಯೋಜನೆ–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸಹಕಾರ–ಕದಳಿ ಮಹಿಳಾ ವೇದಿಕೆ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ಗೊ.ರು. ಚನ್ನಬಸಪ್ಪ

ಎಚ್.ಎಸ್.ದೊರೆಸ್ವಾಮಿ ಅವರಿಗೆ ಶ್ರದ್ಧಾಂಜಲಿ ಸಭೆ: ಮಾತನಾಡುವವರು–ಸಾಹಿತಿ ಅಲ್ಲಮಪ್ರಭು ಬೆಟ್ಟದೂರು, ಎಸ್‌ಯುಸಿಐನ ಕೆ.ರಾಧಾಕೃಷ್ಣ ಹಾಗೂ ಕೆ.ಉಮಾ, ಆಯೋಜನೆ–ಎಐಡಿಎಸ್‌ಒ, ಎಐಎಂಎಸ್‌ಎಸ್, ಎಸ್‌ಯುಸಿಐ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ನೆಲಮಂಗಲ ಸಮೀಪದ ದಾಸನಪುರ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ಉತ್ಪಾದಕರಿಗೆ ದಿನಸಿ ಕಿಟ್, ತುಪ್ಪ ಮತ್ತು ಮಾಸ್ಕ್‌ಗಳನ್ನು ವಿತರಿಸಲಾಯಿತು. ಸಂಘದ ಅಧ್ಯಕ್ಷ ಡಿ.ಆರ್.ವಾಸುದೇವಮೂರ್ತಿ, ಮುಖಂಡರಾದ ಡಿ.ಎಂ.ಎಂ.ಗೌಡ, ಕೇಶವಮೂರ್ತಿ, ನಾಗೇಶಮೂರ್ತಿ ಇದ್ದಾರೆ.

ನಿಧನ ವಾರ್ತೆ

ಸೂ.ರಂ.ರಾಮಯ್ಯ

ಸೂಲಿಬೆಲೆ: ಮಾಜಿ ಶಾಸಕ, ಶತಾಯುಷಿ, ಸ್ವಾತಂತ್ರ್ಯ ಹೋರಾಟಗಾರ ಸೂ.ರಂ.ರಾಮಯ್ಯ (102) ಶುಕ್ರವಾರ ನಿಧನರಾದರು.

ಗಾಂಧಿ ಅವರ ವಿಚಾರಗಳಿಂದ ಆಕರ್ಷಿತರಾಗಿ ವಿದ್ಯಾರ್ಥಿ ದೆಸೆಯಲ್ಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು. 1957-62ರಲ್ಲಿ ನಡೆದ ಹೊಸಕೋಟೆ –ದೇವನಹಳ್ಳಿ ಜಂಟಿ ಕ್ಷೇತ್ರದಿಂದ ಶಾಸಕರಾಗಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಸ್ಥಳೀಯ ಸಂಸ್ಥೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗೂ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ತಾಲ್ಲೂಕಿನ ಪ್ರಜಾಸತ್ತಾತ್ಮಕ ಜನಚಳವಳಿ, ರೈತ, ಕಾರ್ಮಿಕ ಹೋರಾಟಗಳಲ್ಲಿ ಹಾಗೂ ಸಿಪಿಎಂ ಪಕ್ಷದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು ಎಂದು ಹೊಸಕೋಟೆ ಸಿಐಟಿಯು ಅಧ್ಯಕ್ಷ ಹರಿಂದ್ರ ಸ್ಮರಿಸಿದರು.

ಪಟ್ಟಣದಲ್ಲಿ ವಿವೇಕಾನಂದ ಶಿಕ್ಷಣ ಸಂಸ್ಥೆ ಕಟ್ಟಿ, ಗ್ರಾಮಾಂತರ ಪ್ರದೇಶದ ಶೈಕ್ಷಣಿಕ ಪ್ರಗತಿಗೆ ಕಂಕಣಬದ್ಧರಾಗಿದ್ದ ಸೂ.ರಂ.ರಾಮಯ್ಯ ಅವರಿಗೆ, ಹಳೆಯ ವಿದ್ಯಾರ್ಥಿಗಳು ಅಂತಿಮ ನಮನ ಸಲ್ಲಿಸಿದರು. ಜೂನ್ 19ರಂದು (ಶನಿವಾರ) ಬೆಳಿಗ್ಗೆ 11ಕ್ಕೆ ಸೂಲಿಬೆಲೆಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಯಲಹಂಕ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ತೈಲದರ ಏರಿಕೆ ಖಂಡಿಸಿ ಪ್ರತಿಭಟನೆ

ಯಲಹಂಕ: ತೈಲ ಬೆಲೆಏರಿಕೆ ಖಂಡಿಸಿ ಯಲಹಂಕ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಮುಖಂಡ ಕೇಶವ ರಾಜಣ್ಣ ನೇತೃತ್ವದಲ್ಲಿ ಎನ್‌ಇಎಸ್ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಕಾಂಗ್ರೆಸ್ ಮಾಧ್ಯಮ ವಕ್ತಾರ ಮಂಜುನಾಥ್ ಅದ್ದೆ, 'ಕೇಂದ್ರದ ಬಿಜೆಪಿ ಸರ್ಕಾರ ಇಡೀ ದೇಶದ ಜನರನ್ನು ತನ್ನ ಸುಳ್ಳುಗಳ ಮೂಲಕ ವಂಚಿಸುತ್ತಿದೆ. 2014 ರಲ್ಲಿ ಪೆಟ್ರೋಲ್ ಬೆಲೆ ₹84 ಇದ್ದಾಗ ನರೇಂದ್ರ ಮೋದಿ ಮತ್ತು ಅಮಿತ್ ಶಾ, ಕೆಂಪು ಕೋಟೆಯ ಎದುರು ಸೈಕಲ್ ತುಳಿದು ಪ್ರತಿಭಟನೆ ನಡೆಸಿದ್ದರು. ಆದರೆ, ಇಂದು ಇವರದೇ ನೇತೃತ್ವದ ಸರ್ಕಾರದಲ್ಲಿ ತೈಲದರ ₹100ಕ್ಕೆ ಏರಿದೆ. ಇದರಿಂದ ದೇಶದ ಜನರು ಗಂಭೀರ ಸಮಸ್ಯೆಗಳನ್ನು ಅನುಭವಿಸುತ್ತಿದ್ದರೂ ಇದರಬಗ್ಗೆ ಒಂದು ಮಾತನ್ನೂ ಆಡದೆ ಮೌನವಹಿಸಿದ್ದಾರೆ' ಎಂದು ದೂರಿದರು.

ಕೇಶವರಾಜಣ್ಣ ಮಾತನಾಡಿ, 'ಕೊರೊನಾ ಹೊಡೆತದಿಂದ ಈಗಾಗಲೇ ಸಂಕಷ್ಟದಲ್ಲಿರುವ ಜನಸಾಮಾನ್ಯರು ಪೆಟ್ರೋಲ್, ಡೀಸೆಲ್ ಮತ್ತು ಅಗತ್ಯ-ವಸ್ತುಗಳ ಬೆಲೆ ಏರಿಕೆಯಿಂದ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೂಡಲೇ ತೈಲದರ ಇಳಿಸಿ ದೇಶದ ಆರ್ಥಿಕತೆಯನ್ನು ರಕ್ಷಿಸದಿದ್ದರೆ ಮುಂದಿನ ದಿನಗಳಲ್ಲಿ ಜನರೇ ತಕ್ಕಪಾಠ ಕಲಿಸಲಿದ್ದಾರೆ' ಎಂದು ಎಚ್ಚರಿಸಿದರು.

ಕಾಂಗ್ರೆಸ್ ಮುಖಂಡರಾದ ವರುಣ್ ಕುಮಾರ್, ದಿಲೀಪ್ ಕುಮಾರ್, ಮಾರುತಿ, ಅಜರ್ ಷರೀಫ್, ರವಿ ಕುಮಾರ್ ಇತರರು ಪಾಲ್ಗೊಂಡಿದ್ದರು.

ಫ್ಲಿಪ್‌ಕಾರ್ಟ್, ಅಮೆಜಾನ್‌ನಿಂದ ಮೇಲ್ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಆದೇಶಿಸಿರುವ ತನಿಖೆಯಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ ಎಂಬ ಹೈಕೋರ್ಟ್ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ಸಂಸ್ಥೆಗಳು ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿವೆ.

ಇ-ಕಾಮರ್ಸ್ ಎಂದರೆ ಮಾರುಕಟ್ಟೆಯ ಸ್ಥಳಗಳೇ ಹೊರತು ಉತ್ಪಾದನಾ ಕ್ಷೇತ್ರವಲ್ಲ ಎಂಬ ಅಂಶವನ್ನು ಏಕಸದಸ್ಯ ಪೀಠ ಪರಿಗಣಿಸಿಲ್ಲ ಎಂದು ಫ್ಲಿಪ್‌ಕಾರ್ಟ್ ಪರ ವಕೀಲ ಹರೀಶ್ ಸಾಳ್ವೆ ವಿವರಿಸಿದರು.

ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ವಿಚಾರಣೆಯನ್ನು ಜುಲೈ 14ಕ್ಕೆ ಮುಂದೂಡಿತು.

ಸ್ಪರ್ಧಾತ್ಮಕ ವಿರೋಧಿ ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ಸ್ಪರ್ಧಾತ್ಮಕ ಕಾಯ್ದೆ –2020 ಅನ್ನು ಈ ಸಂಸ್ಥೆಗಳು ಉಲ್ಲಂಘಿಸುತ್ತಿವೆ ಎಂಬ ಆರೋಪದಲ್ಲಿ ಸಿಸಿಐ ತನಿಖೆಗೆ ಆದೇಶಿಸಿತ್ತು.

ದೆಹಲಿಯ ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ ಸಂಘಟನೆಯಾದ ದೆಹಲಿ ವ್ಯಾಪಾರ ಮಹಾಸಂಘದ ಮಾಹಿತಿ ಆಧರಿಸಿ ಈ ತನಿಖೆಗೆ ಸಿಸಿಐ ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ಸಂಸ್ಥೆಗಳು 2020 ಜನವರಿ 13ರಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದವು.

ಏಕಸದಸ್ಯ ಪೀಠ ಈ ಅರ್ಜಿ ವಜಾಗೊಳಿಸಿತ್ತು.

7ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ

ಅಂಚೆ ಪತ್ರಗಳಿಗೆ ವಿಶೇಷ ಚಿತ್ರದ ಮುದ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಅಂಚೆ ಇಲಾಖೆಯು 7ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಅವಿಸ್ಮರಣೀಯ-ಗೊಳಿಸಲು ಮುಂದಾಗಿದ್ದು, ಇದಕ್ಕಾಗಿ ದೇಶದಾದ್ಯಂತ ಒಟ್ಟು 810 ಪ್ರಧಾನ ಅಂಚೆ ಕಚೇರಿಗಳಲ್ಲಿ ಇದೇ 21ರಂದು ಅಂಚೆ ಚೀಟಿಗಳ ಮುದ್ರೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಬೆಂಗಳೂರಿನ ಎಚ್‌ಎಎಲ್ 2ನೇ ಹಂತ ಹಾಗೂ ಆರ್.ಟಿ. ನಗರದಲ್ಲಿ-ರುವ ಪ್ರಧಾನ ಅಂಚೆ ಕಚೇರಿಗಳಲ್ಲಿ ಈ ಸೌಲಭ್ಯ ಲಭ್ಯವಿದೆ.

'ಯೋಗ ದಿನದ ಅಂಗವಾಗಿ ಅಂಚೆ ಕಚೇರಿಯಿಂದ ಬಟವಾಡೆಯಾಗುವ ಎಲ್ಲಾ ಲಕೋಟೆಗಳ ಮೇಲೆ ಯೋಗ ಮುದ್ರೆಯ ವಿಶೇಷ ಸ್ಟಾಂಪ್ ಹಾಕಲಾಗುತ್ತದೆ. ಮುದ್ರೆಯು ಎಚ್‌ಎಎಲ್ 2ನೇ ಹಂತ ಹಾಗೂ ಆರ್.ಟಿ.ನಗರದಲ್ಲಿರುವ ಪ್ರಧಾನ ಅಂಚೆ ಕಚೇರಿಗಳ ಹೆಸರು ಮತ್ತು ಪಿನ್‌ಕೋಡ್‌ಗಳನ್ನು ಒಳಗೊಂಡಿರಲಿದೆ. ಇದು ಇಂಗ್ಲಿಷ್, ಹಿಂದಿ ಭಾಷೆಯಲ್ಲಿರಲಿದೆ. ಸಾರ್ವಜನಿಕರು, ಅಂಚೆಚೀಟಿ ಸಂಗ್ರಹಕಾರರು ಇದರ ಸದುಪಯೋಗ ಪಡೆದು-ಕೊಳ್ಳಬೇಕು' ಎಂದು ಪ್ರಕಟಣೆ ತಿಳಿಸಿದೆ.

ಜಮ್ಮು–ಕಾಶ್ಮೀರ: 24ಕ್ಕೆ ಪ್ರಧಾನಿ ಅಧ್ಯಕ್ಷತೆಯಲ್ಲಿ ಸರ್ವ ಪಕ್ಷಗಳ ಸಭೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು-ಕಾಶ್ಮೀರದ ಎಲ್ಲ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ 24ರಂದು ಸಭೆ ನಡೆಸಲಿದ್ದಾರೆ.

ನವದೆಹಲಿಯಲ್ಲಿ ಅಂದು ನಡೆಯುವ ದುಂಡು ಮೇಜಿನ ಸಭೆಗೆ ಜಮ್ಮು-ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಎಲ್ಲ ರಾಜಕೀಯ ಮುಖಂಡರನ್ನು ಆಹ್ವಾನಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಜಮ್ಮು-ಕಾಶ್ಮೀರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಪ್ರಗತಿ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ಪರಿಶೀಲನೆ ನಡೆಸಿದರು. 'ಕೇಂದ್ರ ಸರ್ಕಾರವು ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದ ವೇಳೆ ಪಾರದರ್ಶಕತೆಗೆ ಒತ್ತು ನೀಡುತ್ತದೆ' ಎಂದು ಅವರು ಈ ಸಭೆಯಲ್ಲಿ ಹೇಳಿದರು. ಆ ಮೂಲಕ ಅವರು ಕಣಿವೆಯ ಎಲ್ಲ ಪಕ್ಷಗಳ ಮುಖಂಡರ ಸಭೆಗೆ ಕೇಂದ್ರವು ವೇದಿಕೆ ಸಿದ್ಧಗೊಳಿಸಿದೆ ಎಂಬ ಸಂದೇಶ ರವಾನಿಸಿದ್ದರು ಎಂದು ವಿಶ್ಲೇಷಿಸಲಾಗುತ್ತಿದೆ.

ನರೇಂದ್ರ ಮೋದಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

EDUCATIONAL

Admission

ONE SITTING: B.TECH/ M.TECH/MBA/MCA/M.Sc/ BBA/BCA/B.Com/BA/B.Ed/ LLB/B.Pharm/ D.Pharm. All courses Recognised by UGC/Govt of India. Last Date: 30-6-2021. Asha Institute: Bangalore- 560085. Ph: 9448460103/ 7093438248.

ಕ್ಲಾಸಿಫೈಡ್ಸ್
ADMISSION CORNER

INDIRA GANDHI NATIONAL OPEN UNIVERSITY
(A Central University, under MOE, Govt. of India)
ignou THE PEOPLE'S UNIVERSITY
IGNOU Regional Centre, #70-46-30/11,Ward No. 117
BMTC Old Divisional Office, Shanthinagar, Bangalore–560 027
080-29607272 / www.ignou.ac.in / www.ignourcblr.in

IGNOU ADMISSION

Online Admission for July 2021 commenced. Join Mega & World's largest Open University for Higher Education programmes @ Masters, Bachelors, Diplomas & Certificate levels. Corporate, Working Professionals & Students can enrol to enhance their skills & knowledge. Great opportunity to Housewives, College dropouts & Regular Students for a blended learning during the present COVID-19 Pandemic. Visit www.ignou.ac.in for immediate online registration/admission or download the form & submit the filled-in application along with relevant documents and fee in person or by post. For free Prospectus & for Last Date of online submission refer IGNOU website www.ignou.ac.in. Contact through e-mail: rcbangalore@ignou.ac.in/ Whatsapp to 9449337272 OR Regional Director, (G.H. Imrapur-9482351935) for further counselling, guidance & free online (internet) service.
Regional Director

JOB OPPORTUNITIES

Receptionist/ Secretary

VACANCY- 1) Stenographer with experience in taking steno dictation and computer typing. 2) Computer Typing, printing and operating and handling mail, downloading and printing with soft handling. The requirements for Advocate Office, knowledge of english is compulsory. Interested my contact: 080-26678443, 080-22426644, 9886117443, 9900270775, 9741325508

PERSONAL

Change of Name

I, SACHIN R GOWDA S/o Revaiah residing at No.804, 7th Cross, 1st Main road, Near Soudhamini Choutry, Soudhamini Layout, Doddakallasandra, Konanakunte, Bangalore-560062 here by declare that SACHIN.R and SACHIN R GOWDA both the name belongs to me only, vide affidavit dated 18.06.2021 sworn before notary Ambreshappa, Bengaluru-28.

ST. BENEDICT'S ACCDAMY RESEDENTIAL
CBSE School, PU, Degree and Nursing Colleges for Boys & Girls.
ADMISSION OPEN FOR 2021 - 22
Fee, Food, Hostel facilities for
One (1) Year-95000/- in Installments
Free Academy for NCC, Karate,
Kung Fu-Wu, Counseling, Yoga.
St. Benedict's Group of Institutions,
Anchpalaya, Kengeri, Mysore Road, Bangalore.
Contact: 7337706086/ 9731901080
Mail: jeromeosb@gmail.com / www.sbab.in

I, JULIANA MONIS W/o. JC-193223W Rank: Subedar Name: Elias Monis residing at No.256, Mahima, 1st C Main Road, Kengeri Satellite Town, Bangalore-560060 have changed my name to JULIANA PEREIRA and changed date of Birth from 03/05/1957 to 01/06/1957 vide affidavit dated 17/06/2021 sworn before notary Ravi, Bangalore

I, VANISREE PATIL W/o Satish Patil, residing at No. 202, 9th Main, 4th Cross, Maruthi Nagar, Malleshpalya, New Thippasandra post, Bangalore-560075, have changed my name to VANISREE, vide affidavit dated 15.06.2021, sworn before notary Prakash C, Bengaluru.

I, ZAINAB residing at Flat-No.A-4, Vijaya Arch Apartment, 2nd A Cross, 2nd Block, HRBR Layout, Kalyannagar Bangalore-43 have changed my name to ZAINAB ISMAIL vide affidavit dated 18-06-2021 before Notary Uday Kumar.K, Bangalore

I, RAVI NARAYAN NAIK S/o. Ishwar Naik, R/a #250, Mogerkeri, Bhatkal, Belke, Uttara Kannada, Karnataka-581320 Have Changed My Name to RAVI ISHWAR NAIK Vide Affidavit Dated: 18.06.2021 Before Notary A.Manjula, Bengaluru-22.

Lost

IT IS notified for public information that I, Mr. Ajay Kumar A, S/O Abraham, residing at #226, Byrathi, Dr. Shivaram Karanth Nagar Post, Bangalore - 560077, have lost my Provisional Degree Certificate (PDC) bearing Reg. No. 15HU4H148 issued by Kristu Jayanti College Autonomous, Bangalore, in the year 2018. An FIR has been filed regarding the same. If found, kindly contact Mob: 9663390849

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY



condition apply*
WWW.DHCLASSIFIEDS.COM
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in
DH DECCAN HERALD ಪ್ರಜಾವಾಣಿ ಕ್ಲಾಸಿಫೈಡ್ಸ್

REQUIRED STOCKIST
GMP CERTIFIED COMPANY · ISO CERTIFIED COMPANY · MAKE IN INDIA · रसराज
A Reputed Ayurvedic Company is looking for experienced Stockist in
BENGALURU / KARNATAKA
for its Entire Range of Products

Parties Should be financially Sound and Having Strong Distribution Network
ALSO REQUIRED
SALES TEAM LEADER HAVING MIN. 5 YEAR EXPERIENCE IN AYURVEDIC FIELD
RASRAJ AYURVEDIC PHARMACY
Contact:
8955257081
9829941166
rasrajayurvedicpharmacy@gmail.com
www.rasrajayurved.com

ಹೆತ್ತವರ ಕಳೆದುಕೊಂಡ ಬಾಲಕಿಗೆ ಚಿಕ್ಕಮ್ಮನ ಆಸರೆ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಕೋವಿಡ್‌ನಿಂದಾಗಿ ನಾಲ್ಕು ದಿನಗಳ ಅಂತರದಲ್ಲಿ ತಂದೆ, ತಾಯಿಯನ್ನು ಕಳೆದುಕೊಂಡ ಐದು ವರ್ಷದ ವರ್ಷಾ ಎಂಬ ಬಾಲಕಿಯ ಕಥೆ ಇದು.

ಚಿಕ್ಕಮ್ಮ (ಅಮ್ಮನ ತಂಗಿ) ಹಾಗೂ ಚಿಕ್ಕಪ್ಪನೇ ಈಗ ಆಕೆಗೆ ತಾಯಿ-ತಂದೆ. 'ಅಪ್ಪ-ಅಮ್ಮ ಇಬ್ಬರೂ ದೇವರ ಬಳಿ ಹೋಗಿದ್ದಾರೆ' ಎಂದು ಚಿಕ್ಕಮ್ಮ-ಚಿಕ್ಕಪ್ಪ ಹೇಳಿದ್ದನ್ನು ಮಗು ನಂಬಿದೆ. ಇಬ್ಬರ ಫೋಟೊ ದೇವರ ಕೋಣೆ ಸೇರಿದೆ. ತಂದೆ ತಾಯಿಯ ನೆನಪಾದಾಗ ದೇವರ ಕೋಣೆಗೆ ಹೋಗಿ ಪೂಜೆ ಮಾಡುತ್ತಾಳೆ ವರ್ಷಾ.

ಚಾಮರಾಜನಗರ ತಾಲ್ಲೂಕಿನ ಕೊತ್ತಲವಾಡಿ ಗ್ರಾಮದ ಗುರುಪ್ರಸಾದ್ (35) ಹಾಗೂ ರಶ್ಮಿ (27) ದಂಪತಿಯನ್ನು, ನಾಲ್ಕು ದಿನಗಳ ಅಂತರದಲ್ಲಿ ಕೋವಿಡ್ ಬಲಿ ತೆಗೆದುಕೊಂಡಿದೆ. ಈ ದಂಪತಿ ಮಗಳು ಈಗ ಅನಾಥೆ. ರಶ್ಮಿ ಅವರ ತಂಗಿ, ಅದೇ ಊರಿನಲ್ಲಿರುವ ರಮ್ಯಾ ಹಾಗೂ ಅವರ ಪತಿ ಮಹದೇವಸ್ವಾಮಿ ಅವರು ವರ್ಷಾಳನ್ನು ದತ್ತು ತೆಗೆದುಕೊಂಡು ಆರೈಕೆ ಮಾಡುತ್ತಿದ್ದಾರೆ.

'ಮಗು ನಮ್ಮ ಜೊತೆಗೆ ಹೊಂದಿಕೊಂಡಿದೆ. ಕೆಲವು ಬಾರಿ, ರಾತ್ರಿ ಹೊತ್ತು ಅಪ್ಪ-ಅಮ್ಮನನ್ನು ವಿಚಾರಿಸುತ್ತಾಳೆ. ದೇವರ ಬಳಿಗೆ ಹೋಗಿದ್ದಾರೆ ಎಂದಾಗ ಸುಮ್ಮನಾಗುತ್ತಾಳೆ' ಎಂದು ಮಹದೇವಸ್ವಾಮಿ ಹಾಗೂ ರಮ್ಯಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಚಿಕ್ಕಪ್ಪ ಮಹದೇವಸ್ವಾಮಿಗೆ ವರ್ಷಾಳ ಸಿಹಿ ಮುತ್ತು. ಚಿಕ್ಕಮ್ಮ ರಮ್ಯಾ ಜೊತೆಗಿದ್ದಾರೆ

ಬಡ ಕುಟುಂಬ: ಗುರುಪ್ರಸಾದ್ ಅವರದ್ದು ಬಡ ಕುಟುಂಬವಾಗಿತ್ತು. ಸರಕು ಸಾಗಣೆ ಆಟೊ ಹೊಂದಿದ್ದ ಅವರು, ಅದನ್ನು ಬಾಡಿಗೆಗೆ ಓಡಿಸಿ ಜೀವನ ನಡೆಸುತ್ತಿದ್ದರು.

'ಖಾಸಗಿ ಫೈನಾನ್ಸ್‌ನಿಂದ ಸಾಲ ಪಡೆದು ಆಟೊ ತೆಗೆದುಕೊಂಡಿದ್ದರು. ಆದರೆ, ಸಾಲದ ಕಂತು ಕಟ್ಟಿಲ್ಲ ಎಂದು ಫೈನಾನ್ಸ್‌ನವರು ಆಟೊ ಜಪ್ತಿ ಮಾಡಿಕೊಂಡು ಹೋಗಿದ್ದಾರೆ' ಎಂದು ಮಹದೇವಸ್ವಾಮಿ ಅವರು ಹೇಳಿದರು.

'ಗುರುಪ್ರಸಾದ್ ಸಂಬಂಧಿಯಾಗುವ ಮೊದಲೇ ನನಗೆ ಸ್ನೇಹಿತ. ನಮ್ಮ ಮದುವೆ ಮಾಡಿಸಿದ್ದೂ ಅವನೇ. ಇಬ್ಬರೂ ಸರಕು ಸಾಗಣೆ ಆಟೊ ಓಡಿಸಿಕೊಂಡು ಜೀವನ ಮಾಡುತ್ತಿದ್ದೆವು. ಕೋವಿಡ್ ಅವನ ಪ್ರಾಣ ತೆಗೆಯಿತು. ನಾಲ್ಕು ದಿನ ದ ಬಳಿಕ ಅವನ ಹೆಂಡತಿಯೂ ಮೃತಪಟ್ಟರು' ಎಂದು ಮಹದೇವಸ್ವಾಮಿ ಬೇಸರ ವ್ಯಕ್ತಪಡಿಸಿದರು.

'ಭಾವ ಆಸ್ಪತ್ರೆಯಲ್ಲಿ ಮೃತಪಟ್ಟರು. ಅಕ್ಕನಿಗೆ ಕೋವಿಡ್ ಇದ್ದರೂ ಮನೆಯಲ್ಲೇ ಆರಾಮವಾಗಿದ್ದಳು. ಆದರೆ, ಭಾವ ಮೃತಪಟ್ಟದ್ದರಿಂದ ಆಘಾತಕ್ಕೆ ಒಳಗಾಗಿದ್ದಳು. ತಾಯಿಗೂ ಕೋವಿಡ್ ಆಗಿತ್ತು. ನಾನು ಗರ್ಭಿಣಿ ಆಗಿದ್ದು, ಆಕೆಯನ್ನು ಸಂತೈಸುವುದಕ್ಕೆ ಹೋಗಲಾಗಲಿಲ್ಲ. ದುಃಖದಲ್ಲೇ ಆಕೆ ಕಣ್ಣು ಮುಚ್ಚಿದಳು' ಎಂದು ರಮ್ಯಾ ದುಃಖಿಸಿದರು.

'ವರ್ಷಾ ನಮ್ಮೊಂದಿಗೆ ಚೆನ್ನಾಗಿ ಹೊಂದಿಕೊಂಡಿದ್ದಾಳೆ. ಎಷ್ಟೇ ಕಷ್ಟವಾದರೂ ಅವಳ ಇಷ್ಟಗಳನ್ನು ಪೂರೈಸುತ್ತೇವೆ. ಇವಳು ನಮ್ಮ ದೊಡ್ಡ ಮಗಳು. ಇನ್ನು ಹುಟ್ಟುವುದು ಎರಡನೇ ಮಗು' ಎಂದು ಹೇಳುತ್ತಾರೆ ರಮ್ಯಾ ಹಾಗೂ ಮಹದೇವಸ್ವಾಮಿ.

ಪಾಲಕರ ಸಂಪರ್ಕಕ್ಕೆ: 9591259722

ನೆರವಿನ ನಿರೀಕ್ಷೆಯಲ್ಲಿ ಕುಟುಂಬ

ಮಹದೇವಸ್ವಾಮಿ ಅವರ ಕುಟುಂಬ ಆರ್ಥಿಕವಾಗಿ ಸದೃಢವಾಗಿಲ್ಲ. 'ಬಡತನ ಇದ್ದರೂ ಪರವಾಗಿಲ್ಲ, ಮಗುವನ್ನು ನಾವೇ ಸಾಕುತ್ತೇವೆ' ಎಂದು ದತ್ತು ಪಡೆದಿದ್ದಾರೆ. ರಾಜಕೀಯ ಮುಖಂಡರು ಸೇರಿದಂತೆ, ಕೆಲವು ಸಹೃದಯರು ಕುಟುಂಬಕ್ಕೆ ವೈಯಕ್ತಿಕವಾಗಿ ಆರ್ಥಿಕ ಸಹಾಯ ಮಾಡಿದ್ದಾರೆ. ಸರ್ಕಾರದಿಂದಲೂ ನೆರವು ಸಿಗುವ ನಿರೀಕ್ಷೆಯಲ್ಲಿ ಕುಟುಂಬ ಇದೆ.

19ಕ್ಕೆ ಸಚಿವರ ಭೇಟಿ: ಈ ಮಧ್ಯೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ ಅವರು ಶನಿವಾರ (ಜೂನ್ 19) ಕೊತ್ತಲವಾಡಿಗೆ ಭೇಟಿ ನೀಡಿ, ಮಗು ಹಾಗೂ ಪಾಲಕರೊಂದಿಗೆ ಮಾತುಕತೆ ನಡೆಸಲಿದ್ದಾರೆ.

ಶಿಕ್ಷಣ ನೀತಿ ಹೆಸರಿನಲ್ಲಿ ಕನ್ನಡಕ್ಕೆ ದ್ರೋಹ: ಸಿದ್ದರಾಮಯ್ಯ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಭಾಷಾ ವಿಷಯಗಳ ಕಲಿಕೆಯ ಅವಧಿಯನ್ನು ನಾಲ್ಕು ಸೆಮಿಸ್ಟರ್‌ಗಳಿಂದ ಎರಡು ಸೆಮಿಸ್ಟರ್‌ಗಳಿಗೆ ಇಳಿಸಲು ಮುಂದಾಗಿರುವ ರಾಜ್ಯ ಸರ್ಕಾರ, ರಾಷ್ಟ್ರೀಯ ಶಿಕ್ಷಣ ನೀತಿ ಹೆಸರಿನಲ್ಲಿ ಕನ್ನಡಕ್ಕೆ ದ್ರೋಹ ಬಗೆಯುತ್ತಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

'ಹೊಸ ಶಿಕ್ಷಣ ನೀತಿಯ ಭಾಗವಾಗಿ ಪದವಿ ಕೋರ್ಸ್‌ಗಳ ಅವಧಿಯನ್ನು ನಾಲ್ಕು ವರ್ಷಗಳಿಗೆ ಹೆಚ್ಚಿಸಲಾಗುತ್ತಿದೆ. ಅದಕ್ಕೆ ಪೂರಕವಾಗಿ ನೇಮಿಸಿರುವ ಕಾರ್ಯಪಡೆಯ ಪಠ್ಯಕ್ರಮ ರಚನಾ ಉಪ ಸಮಿತಿ, ಭಾಷಾ ವಿಷಯಗಳ ಕಲಿಕೆಯನ್ನು ಒಂದೇ ವರ್ಷಕ್ಕೆ ಸೀಮಿತಗೊಳಿಸುವಂತೆ ಶಿಫಾರಸು ಮಾಡಿದೆ. ಇದು ರಾಷ್ಟ್ರೀಯ ಶಿಕ್ಷಣ ನೀತಿಗೆ ವಿರುದ್ಧವಾದ ನಡೆ' ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಟೀಕಿಸಿದ್ದಾರೆ.

'ಕೇವಲ ಎರಡು ಸೆಮಿಸ್ಟರ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಕನ್ನಡದ ಅತ್ಯುತ್ತಮವಾದ ಕೃತಿಗಳ ಕುರಿತು ಅಧ್ಯಯನ ಮಾಡಲು ಸಾಧ್ಯವೆ? ಮೌಲಿಕವಾದ ವಿಷಯಗಳ ಬದಲಿಗೆ ಅಂಬಾನಿ, ಅದಾನಿ ಅವರಂತಹ ಉಳ್ಳವರ ಕತೆಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಲು ಈ ಸರ್ಕಾರ ಹೊರಟಿದೆಯೆ' ಎಂದು ಪ್ರಶ್ನಿಸಿದ್ದಾರೆ.

ಕನ್ನಡ ನಾಡು, ನುಡಿಗೆ ದ್ರೋಹ ಎಸಗಿದವರನ್ನು ಈ ನಾಡು ಎಂದಿಗೂ ಕ್ಷಮಿಸಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ಶಾಲಾ ವಿದ್ಯಾರ್ಥಿಗಳಿಗೆ ಎರಡು ತಿಂಗಳು 'ಕ್ಷೀರ ಭಾಗ್ಯ' ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ಜೂನ್ ಮತ್ತು ಜುಲೈ ತಿಂಗಳಲ್ಲಿ (ಎರಡು ತಿಂಗಳು) ಪ್ರತಿ ಶಾಲಾ ವಿದ್ಯಾರ್ಥಿಗೆ ಆಹಾರಧಾನ್ಯದ ಜೊತೆಗೆ ತಲಾ ಅರ್ಧ ಕಿಲೋ ಕೆನೆಭರಿತ ಹಾಲಿನ ಪುಡಿ ವಿತರಿಸುವ 'ಕ್ಷೀರ ಭಾಗ್ಯ ಯೋಜನೆ' ಅನುಷ್ಠಾನಗೊಳಿಸಿ ರಾಜ್ಯ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ.

ಈ ಯೋಜನೆಯಡಿ 30 ಜಿಲ್ಲೆಗಳ ಒಟ್ಟು 56,64,873 ಮಕ್ಕಳಿಗೆ ಹಾಲಿನ ಪುಡಿ ವಿತರಣೆ ಆಗಲಿದೆ. ಒಟ್ಟು ₹ 163.71 ಕೋಟಿ ವೆಚ್ಚ ಅಂದಾಜಿಸಲಾಗಿದೆ. ಶಿಕ್ಷಣ ಇಲಾಖೆಗೆ ನೀಡಿದ ವಾರ್ಷಿಕ ಅನುದಾನದಲ್ಲಿ ಜಿಲ್ಲಾ ವಲಯಕ್ಕೆ ವೇತನೇತರ ವೆಚ್ಚಕ್ಕೆ ಹಂಚಿಕೆಯಾದ ಅನುದಾನದಲ್ಲಿ ₹ 117.97 ಕೋಟಿ, ಪರಿಶಿಷ್ಟ ಜಾತಿ ಉಪ ಯೋಜನೆಯಿಂದ (ಎಸ್‌ಸಿಪಿ) ₹ 21.82 ಕೋಟಿ, ಪರಿಶಿಷ್ಟ ಪಂಗಡಗಳ ಉಪ ಯೋಜನೆಯಿಂದ (ಟಿಎಸ್‌ಪಿ) 23.91 ಕೋಟಿ ಬಳಕೆಯಾಗಲಿದೆ.

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳದಿಂದ (ಕೆಎಂಎಫ್) ಹಾಲಿನ ಪುಡಿ ಖರೀದಿಸಿ ವಿತರಿಸಲು ನಿರ್ಧರಿಸಲಾಗಿದೆ. ಕೆಎಂಎಫ್ ಹಾಲಿನ ಪುಡಿ ದರವನ್ನು ಪ್ರತಿ ಕಿಲೋಗೆ ₹ 275 (ಜಿಎಸ್‌ಟಿ) ಪ್ರತ್ಯೇಕ ನಿಗದಿಪಡಿಸಿದೆ.

ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು, ಅಡುಗೆ ಸಿಬ್ಬಂದಿ ಮಕ್ಕಳ ಹೆಸರು, ತರಗತಿಯನ್ನು ನಮೂದಿಸಿ, ಪೋಷಕರಿಂದ ಸ್ವೀಕೃತಿ ಸಹಿ ಪಡೆದು ಹಾಲಿನ ಪುಡಿ ವಿತರಿಸಬೇಕು. ಈ ಸಂದರ್ಭದಲ್ಲಿ ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರೊಬ್ಬರು ಹಾಜರಿರಬೇಕು ಮತ್ತು ಅವರ ಸಹಿಯನ್ನೂ ಪಡೆಯಬೇಕು ಎಂದು ಸ್ಪಷ್ಟಪಡಿಸಲಾಗಿದೆ.

ಅನ್ಯಜಾತಿ ಯುವಕನ ಪ್ರೀತಿ: ಮಗಳ ಕುತ್ತಿಗೆ ಸೀಳಿದ ತಂದೆ

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ (ಮೈಸೂರು): ಬೇರೆ ಜಾತಿಯ ಯುವಕನನ್ನು ಪ್ರೀತಿಸುತ್ತಿದ್ದ ಮಗಳನ್ನು ತಂದೆಯೇ ಶುಕ್ರವಾರ ಕೊಲೆ ಮಾಡಿದ್ದು, ನಂತರ ಪೊಲೀಸರಿಗೆ ಶರಣಾಗಿದ್ದಾನೆ.

ಪಟ್ಟಣದ ಜಯರಾಮ್ ಆರೋಪಿ. ಗಾಯತ್ರಿ (19), ಮೃತಪಟ್ಟ ಯುವತಿ.

ಸುಮಾರು ಒಂದು ತಿಂಗಳಿನಿಂದಲೂ, ಮಗಳ ಪ್ರೀತಿಯ ವಿಚಾರದಲ್ಲಿ ಮನೆಯಲ್ಲಿ ಗಲಾಟೆ ನಡೆಯುತ್ತಿತ್ತು. ಶುಕ್ರವಾರ ಮಧ್ಯಾಹ್ನ, ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ತಂದೆಗೆ ಗಾಯತ್ರಿ ಊಟವನ್ನು ತಂದಿದ್ದಾಳೆ. ಈ ವೇಳೆ, ಬೇರೆ ಜಾತಿಯ ಯುವಕನನ್ನು ಪ್ರೀತಿಸುವುದು ಬೇಡ ಎಂದು ಜಯರಾಮ್ ಹೇಳಿದ್ದಾನೆ.

ಈ ಮಾತಿಗೆ ಒಪ್ಪದ ಗಾಯತ್ರಿ, ತಂದೆಯೊಂದಿಗೆ ಮಾತಿನ ಚಕಮಕಿ ನಡೆಸಿದ್ದಾರೆ. ಜೊತೆಗೆ, 'ಪ್ರೀತಿಸುವುದನ್ನು ಮುಂದುವರಿಸಿದರೆ ಏನು ಮಾಡುತ್ತೀಯ?' ಎಂದು ಕೇಳಿದ್ದಾರೆ.

ಗಾಯತ್ರಿ

ಇದರಿಂದ ಕೋಪಗೊಂಡ ಜಯರಾಮ್, ಪಕ್ಕದಲ್ಲೇ ಇದ್ದ ಮಚ್ಚನ್ನು ತೆಗೆದು ಮಗಳತ್ತ ಬೀಸಿದ್ದಾನೆ. ಏಟಿನಿಂದ ತಪ್ಪಿಸಿಕೊಳ್ಳಲು, ಆಕೆ ಅಡ್ಡವಾಗಿ ಕೈಯನ್ನು ಹಿಡಿದುಕೊಂಡರೂ, ಮಚ್ಚು ಕುತ್ತಿಗೆಯನ್ನು ಸೀಳಿದೆ.

ಸ್ಥಳದಲ್ಲೇ ಮೃತಪಟ್ಟ ಮಗಳನ್ನು ಕಂಡು ದಿಗ್ಭ್ರಾಂತನಾದ ಜಯರಾಮ್, ನೇರ ಪೊಲೀಸ್ ಠಾಣೆಗೆ ಬಂದು ಸಿಟ್ಟಿನ ಭರದಲ್ಲಿ ಆದ ಅನಾಹುತವನ್ನು ವಿವರಿಸಿ, ಶರಣಾಗಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಕೃತ್ಯ ನಡೆದ ಸ್ಥಳಕ್ಕೆ ಡಿವೈಎಸ್‌ಪಿ ರವಿಪ್ರಸಾದ್, ಇನ್‌ಸ್ಪೆಕ್ಟರ್‌ಗಳಾದ ಜಗದೀಶ್, ಬಿ.ಆರ್.ಪ್ರದೀಪ್, ಪಿಎಸ್‌ಐ ಸದಾಶಿವತಿಪರೆಡ್ಡಿ, ಪುಟ್ಟರಾಜು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ದೈಹಿಕ ಶಿಕ್ಷಣ ಶಿಕ್ಷಕರಿಗೆ ಬಡ್ತಿ

ಬೆಂಗಳೂರು: 'ಸರ್ಕಾರಿ ಪ್ರೌಢಶಾಲೆಗಳ 148 ದೈಹಿಕ ಶಿಕ್ಷಣ ಶಿಕ್ಷಕರಿಗೆ ಬಡ್ತಿ ನೀಡಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಹೇಳಿದ್ದಾರೆ.

'ಸರ್ಕಾರಿ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1 ಹುದ್ದೆಯಿಂದ ಗ್ರೂಪ್-ಬಿ ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರ 148 ಹುದ್ದೆಗಳಿಗೆ ಮುಂಬಡ್ತಿಯನ್ನು ನೀಡಿ ಆದೇಶ ಹೊರಡಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಇದೇ 21ರಂದು ಕೌನ್ಸೆಲಿಂಗ್ ನಡೆಯಲಿದ್ದು, ದೈಹಿಕ ಶಿಕ್ಷಣ ಪರಿವೀಕ್ಷಕರು ತಮ್ಮ ಇಚ್ಛಾನುಸಾರ ಸ್ಥಳ ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗೆ ಬಡ್ತಿ ನೀಡಬೇಕೆಂಬುದು ಕರ್ನಾಟಕ ರಾಜ್ಯ ಸರ್ಕಾರಿ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಪ್ರಧಾನ ಬೇಡಿಕೆಯಾಗಿತ್ತು.

ಬೆಲೆ ಏರಿಕೆ 'ಕೈ'ಪಿಡಿ ಬಿಡುಗಡೆ

ಹೊಸಕೋಟೆ: 'ಪೆಟ್ರೋಲ್, ಡೀಸೆಲ್ ನೂರು; ಜನರ ಬದುಕು ನುಚ್ಚುನೂರು' ಎಂಬ ಶೀರ್ಷಿಕೆಯಡಿ ಕೈಪಿಡಿ ಹೊರತರುವ ಮೂಲಕ ಕೆಪಿಸಿಸಿಯು, ಕೇಂದ್ರದ ಅವೈಜ್ಞಾನಿಕ ಬೆಲೆ ಏರಿಕೆ ನೀತಿಯನ್ನು ರಾಜ್ಯದ ಜನರ ಮುಂದಿಟ್ಟಿದೆ.

ಪಟ್ಟಣದಲ್ಲಿ ಶುಕ್ರವಾರ ಶಾಸಕ ಶರತ್ ಬಚ್ಚೇಗೌಡ ಅವರು ದ್ವಿತೀಯ ಪಿಯುಸಿ ಮತ್ತು ಸಿಇಟಿ ಬರೆಯುವ ವಿದ್ಯಾರ್ಥಿಗಳಿಗೆ ಉಚಿತ ಕೋವಿಡ್ ಲಸಿಕೆ ವಿತರಣೆಯಲ್ಲಿ ವಿಧಾನಸಭಾ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೈಪಿಡಿ ಬಿಡುಗಡೆ ಮಾಡಿದರು.

24 ಪುಟಗಳ ಕೈಪಿಡಿಯಲ್ಲಿ ಇಂಧನ ಬೆಲೆ ಖಂಡಿಸಿ ಅಂತರ್ಜಾಲದಲ್ಲಿ ಪ್ರಕಟಗೊಂಡಿರುವ ವ್ಯಂಗ್ಯಚಿತ್ರಗಳೂ ಇವೆ. ಕೇಂದ್ರವು ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿ ಆರು ವರ್ಷಗಳಲ್ಲಿ ₹ 20.60 ಲಕ್ಷ ಕೋಟಿ ತೆರಿಗೆ ಸಂಗ್ರಹಿಸಿದೆ. ಇದರಲ್ಲಿ ಕರ್ನಾಟಕದ ಪಾಲು ₹ 1.15 ಲಕ್ಷ ಕೋಟಿ ಎಂದು ಮಾಹಿತಿ ನೀಡಿದೆ.

ಯುಪಿಎ ಸರ್ಕಾರದ ಅವಧಿಯಲ್ಲಿ ಬಿ.ಎಸ್. ಯಡಿಯೂರಪ್ಪ, ಶೋಭಾ ಕರಂದ್ಲಾಜೆ ಸೇರಿ ಸಚಿವರೆಲ್ಲರೂ ಪ್ರತಿಭಟಿಸಿದ್ದರು. ಇಂಧನ, ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾದರೂ ಈಗೇಕೆ ಮೌನವಾಗಿದ್ದಾರೆ ಎಂದು ಪ್ರಶ್ನಿಸಿದೆ.

ನಗರಸಭಾ ಕಾರ್ಯಾಲಯ ಚನ್ನಪಟ್ಟಣ.
ರಾಮನಗರ ಜಿಲ್ಲೆ – 562 160.
ದೂ.: 080–27251235. ಇಮೇಲ್: itstaff_ulb_channapatna@yahoo.co.in
ವೆಬ್‌ಸೈಟ್: www.channapatnacity.mrc.gov.in
ನಂ.: ನಸಚ/ಕಾವಿ/ಟೆಂಡರ್/ಸಿ.ಆರ್/03/2021–22 ದಿನಾಂಕ : 18–06–2021

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಚನ್ನಪಟ್ಟಣ ನಗರಸಭಾ ವ್ಯಾಪ್ತಿಯಲ್ಲಿ 2021–22 ನೇ ಸಾಲಿನ ನಗರಸಭಾ ನಿಧಿ ಅನುದಾನದ ಯೋಜನೆಯಡಿ ಈ ಕೆಳಕಂಡ ಇಂಡೆಂಟ್ ಸಂಖ್ಯೆಯ ಟೆಂಡರ್‌ಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ನಿಯಮಗಳು ಮತ್ತು 2000 ದಂತೆ, ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in ಮೂಲಕ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು KC-2 ರ ನಿಯಮಗಳಂತೆ ದಿನಾಂಕ : 05–07–2021 ರ ಸಂಜೆ 5.30 ಗಂಟೆಯೊಳಗೆ ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ಪ್ಯಾಕೇಜ್ ಮೊತ್ತವು ಕ್ರಮವಾಗಿ ರೂ. 15.15 ಲಕ್ಷಗಳು ಇರುತ್ತದೆ. ಟೆಂಡರ್‌ನ್ನು ತೆರೆಯುವ ದಿನಾಂಕ : 07–07–2021 ರಂದು ಬೆಳಿಗ್ಗೆ 11.00 ಗಂಟೆ. WORK_INDENT NO. CMC/CPT/TENDER/VEHICLE/CR-01/2021-22, ಹೆಚ್ಚಿನ ವಿವರಗಳಿಗೆ ಚನ್ನಪಟ್ಟಣ ನಗರಸಭೆಯ ತಾಂತ್ರಿಕ ಶಾಖೆಯಲ್ಲಿ ಹಾಗೂ ನಗರಸಭೆ ವೆಬ್‌ಸೈಟ್ www.channapatnacity.mrc.gov.in ರ ಟೆಂಡರ್ ವಿಭಾಗದಲ್ಲಿ ವಿವರವಾದ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

ಸಹಿ/– ಪೌರಾಯುಕ್ತರು, ನಗರಸಭೆ, ಚನ್ನಪಟ್ಟಣ.
ಡಿಐಪಿಆರ್/ರಾಮನಗರ/107/ಮಣಿಪಾಲ್/20–21

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816–2211105 Email:eemitmk@gmail.com
ಐ.ಎಫ್.ಟಿ ಸಂಖ್ಯೆ:02/2021–22. ಕೆ.ಡಬ್ಲ್ಯೂ–3 (ದ್ವಿಲಕೋಟೆ) ದಿ: 05.06.2021
ಐ.ಎಫ್.ಟಿ ಸಂಖ್ಯೆ:02/2021–22. ಕೆ.ಡಬ್ಲ್ಯೂ–3 (ದ್ವಿಲಕೋಟೆ) ಕಾರೆಜಾಂಡರ್–1, ಅಡೆಂಡಮ್–1 ದಿ: 18.06.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 05.06.2021

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2021–22ನೇ ಸಾಲಿನ ಪಟ್ಟಿಯಲ್ಲಿ ಲೆಕ್ಕ ಶೀರ್ಷಿಕೆ: 4702–ಕೆರೆಗಳ ಆಧುನೀಕರಣ ಮತ್ತು ಡಿ.ಸಿ.ಗ್ರ್ಯಾಂಟ್ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 02/2021–22, ದಿ: 05–06–2021 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ http//eproc.karnataka.gov.in ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:
(1) ಟೆಂಡರ್ ಪ್ರಕಟಣೆಯನ್ನು ದಿನಾಂಕ: 18.06.2021 ರಂದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪ್ರಕಟಿಸಲಾಗುವುದು. (2) ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: 27.06.2021 ಸಾಯಂಕಾಲ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. (3) ಗುತ್ತಿಗೆದಾರರಿಂದ ಟೆಂಡರ್‌ನ್ನು "ಇ" ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: 28.06.2021 ಬೆಳ್ಳಗ್ಗೆ 11.00 ಗಂಟೆಯವರೆಗೆ ಸ್ವೀಕರಿಸಲಾಗುವುದು. (4) ತಾಂತ್ರಿಕ ಬಿಡ್ಡನ್ನು ದಿನಾಂಕ: 29.06.2021 ಬೆಳ್ಳಗ್ಗೆ 11.05 ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ಡನ್ನು ದಿನಾಂಕ: 02.07.2021 ಬೆಳ್ಳಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

DIPR/TUM/108/MCA/2021-22
ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.
ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, 1ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ. ದೂರವಾಣಿ : 080-25581383, 25589112, 25588151, 25588270, 25588142, 25586520 ಫ್ಯಾಕ್ಸ್: 080-25586321 ಇ-ಮೇಲ್ : ho@kspcb.gov.in
ವೆಬ್‌ಸೈಟ್ : http://kspcb.gov.in

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿಯು ಅಪಾಯಕಾರಿ ಮತ್ತು ಇತರೆ ತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು 2016ರ ಅನ್ವಯ ಪರಿಸರಕ್ಕೆ ಧಕ್ಕೆ ಆಗದಂತೆ ಪುನರಾವರ್ತನೆಯಲ್ಲಿ ತೈಲ ಬಳಕೆ ಮತ್ತು ಒಮ್ಮೆ ಉಪಯೋಗಿಸಿದ ತೈಲವನ್ನು ನಿರ್ವಹಣೆ ಮಾಡುವ ವಿಚಾರವಾಗಿ ಬಳಕೆ ಮಾಡಿದ ತೈಲ/ಬಳಕೆ ಮಾಡಿದ ತೈಲದ ಉತ್ಪಾದಕರು/ಬಳಕೆ ಮಾಡಿದ ತೈಲದ ಪುನರಾವರ್ತನೆಕಾರರುಗಳ ಗಮನಕ್ಕೆ ತರುವುದೇನೆಂದರೆ.

"ಬಳಸಿದ ತೈಲ" ಅಂದರೆ ಸ್ಪೆಂಟ್ ಆಯಿಲ್, ಉಪಯೋಗಿಸಿದ ಇಂಜಿನ್ ಆಯಿಲ್, ಗೇರ್ ಆಯಿಲ್, ಹೈಡ್ರಾಲಿಕ್ ಆಯಿಲ್, ಟರ್ಬೈನ್ ಆಯಿಲ್, ಕಂಪ್ರೆಸರ್ ಆಯಿಲ್, ಕೈಗಾರಿಕಾ ಆಯಿಲ್ ಸೇರಿದಂತೆ ಸಿಂಥಟಿಕ್ ಆಯಿಲ್ ಒಳಗೊಂಡ ಮಿಶ್ರಣ ಅಥವಾ ಕಚ್ಚಾ ತೈಲದಿಂದ ಪಡೆದ ಯಾವುದೇ ತೈಲ ಎಂದು ಅರ್ಥ.

ನಿಯಮ (6)ರ ಅನ್ವಯ ಅಪಾಯಕಾರಿ ಅಥವಾ ಇತರೆ ತ್ಯಾಜ್ಯ ತೈಲಗಳ ಉತ್ಪಾದನೆ, ನಿರ್ವಹಣೆ, ಸಂಗ್ರಹಣೆ, ಶೇಖರಣೆ, ಪ್ಯಾಕೇಜಿಂಗ್, ಸಾಗಾಣಿಕೆ, ಬಳಕೆ, ಸಂಸ್ಕರಣೆ, ಪರಿಷ್ಕರಣೆ, ಪುನರಾವರ್ತನೆ, ಮರುಪಡೆಯುವಿಕೆ, ಪರಿಷ್ಕರಣೆ ಪೂರ್ವ, ಸಹಪರಿಷ್ಕರಣೆ, ಉಪಯೋಗ, ಮಾರಾಟಕ್ಕೆ, ವರ್ಗಾವಣೆ ಅಥವಾ ವಿಲೇವಾರಿಗೆ ನೀಡುವಂಥಹ ಕಾರ್ಯದಲ್ಲಿ ತೊಡಗಿರುವ ಸೌಲಭ್ಯವನ್ನು ನಡೆಸುತ್ತಿರುವ ಪ್ರತಿಯೊಬ್ಬರೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಧಿಕಾರ ಪತ್ರವನ್ನು ಪಡೆಯಬೇಕಾಗಿರುತ್ತದೆ. ಒಮ್ಮೆ ಬಳಸಿದ ತೈಲ ಮರುಬಳಕೆ ಮತ್ತು ಪುನರಾವರ್ತನೆ ಕಾರ್ಯದ ಸೌಲಭ್ಯಹೊಂದಿರುವವರು ಈ ಪ್ರಕ್ರಿಯೆಯನ್ನು ನಡೆಸುವಾಗ ಪರಿಸರಕ್ಕೆ ಯಾವುದೇ ವ್ಯತಿರಿಕ್ತ ದುಷ್ಪರಿಣಾಮಗಳು ಉಂಟಾಗದಂತೆ ಮತ್ತು ಕಲುಷಿತ ಅಂಶಗಳು ಪರಿಸರದಲ್ಲಿ ಸೇರದಂತೆ ಮತ್ತು ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಹಾಗೂ ಮಾನವರು ಮತ್ತು ಪರಿಸರದ ಮೇಲೆ ಇವುಗಳಿಂದ ಉಂಟಾಗುವಂಥಹ ದುಷ್ಪರಿಣಾಮಗಳಿಗೆ ಮಿತಿಯನ್ನು ಉಂಟುಮಾಡಲು ಪರಿಸರಕ್ಕೆ ಸೂಕ್ತವಾದ ತಂತ್ರಜ್ಞಾನವನ್ನು (ಇಎಸ್‌ಟಿ) ಉಪಯೋಗಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು ಅವರ ಆದ್ಯ ಜವಾಬ್ದಾರಿಯಾಗಿರುವುದು.

ಬಳಸಿದ ತೈಲ/ತ್ಯಾಜ್ಯ ತೈಲವನ್ನು ಪರಿಸರ ಸ್ನೇಹಿ ಸ್ವರೂಪದಲ್ಲಿ ಪುನರಾವರ್ತನೆಗೊಳಿಸಲು/ಮರು ಶುದ್ಧಿಗೊಳಿಸಲು ಉಪಯೋಗಿಸಬೇಕಾದ ತಂತ್ರಜ್ಞಾನ ಮತ್ತು ಪಾಲಿಸಬೇಕಾದ ಗುಣಮಟ್ಟಗಳ ವಿವರಗಳನ್ನು ನಿಯಮ 9ರಲ್ಲಿ ತಿಳಿಸಲಾಗಿದೆ. ಹೆಚ್‌ಡಬ್ಲ್ಯೂ ನಿಯಮಗಳ ಅಡಿ ಬರುವ ಇಎಸ್‌ಟಿಗಳು ಜಿಗಿಟು ಮಣ್ಣಿನ ಸಂಸ್ಕರಣೆ ಒಡಗೂಡಿದ ವ್ಯಾಕ್ಯೂಮ್ ಡಿಸ್ಟಿಲೇಷನ್, ಥಿನ್–ಫಿಲ್ಮ್ ಎವಾಪೊರೇಷನ್ ಪ್ರಕ್ರಿಯೆ ಮತ್ತು ವ್ಯಾಕ್ಯೂಮ್ ಡಿಸ್ಟಿಲೇಷನ್ ಹೈಡ್ರೋ ಟ್ರೀಟಿಂಗ್ ಆಗಿರುತ್ತದೆ.

ದ್ರವರೂಪದ ಇಂಧನದಲ್ಲಿ ಬಳಸಿದ ತೈಲವನ್ನು ಕಲಬೆರಕೆ ಮಾಡುವುದು ಅಥವಾ ಬಳಸಿದ ತೈಲವನ್ನು ನೇರವಾಗಿ ವ್ಯಾಪಾರ ಮಾಡುವುದು ಪರಿಸರ (ರಕ್ಷಣೆ) ಕಾಯ್ದೆ 1986ರ ಅನ್ವಯ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

ಬಳಸಿದ ತೈಲವನ್ನು ಅಧಿಕಾರ ಹೊಂದಿದ ಸಂಸ್ಕರಣಾಕಾರರಿಗೆ ಮಾತ್ರ "ಇ–ಪ್ರಣಾಳಿಕೆ" ಪದ್ಧತಿ ಅನುಸರಿಸಿ ಹಸ್ತಾಂತರಿಸಬೇಕಾಗಿ ಬಳಸಿದ ತೈಲದ ಉತ್ಪಾದಕರುಗಳಿಗೆ ಕೆಎಸ್‌ಪಿಸಿಬಿ ಈ ಮೂಲಕ ಎಚ್ಚರಿಕೆ ನೀಡಿದೆ. ಮುಂದುವರೆದು ಅಧಿಕಾರಹೊಂದಿದ ಮರು ಸಂಸ್ಕರಣೆಕಾರರು "ಅಪಾಯಕಾರಿ ಮತ್ತು ಇತರೆ ತ್ಯಾಜ್ಯ (ನಿರ್ವಹಣೆ ಮತ್ತು ಹೊರಗಿನ ಸ್ಥಳಕ್ಕೆ ಸಾಗಣೆ) ನಿಯಮಗಳು 2016" ರ ಉಪಬಂಧಗಳನ್ನು ಮತ್ತು ಇಎಸ್‌ಟಿ ಅನುಸಾರ ಬಳಸಿದ ತೈಲವನ್ನು ಮರು ಸಂಸ್ಕರಣೆ ಮಾಡುವ ಮತ್ತು ಇದರ ಅನ್ವಯ ನೀಡಿರುವ "ಅಧಿಕಾರದ ನಿಬಂಧನೆಗಳನ್ನು" ತಪ್ಪದೇ ಪರಿಪಾಲಿಸತಕ್ಕದ್ದು.

ಮೇಲೆ ತಿಳಿಸಿರುವ ನಿಯಮ ನಿಬಂಧನೆಗಳನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸಿದ್ದೇ ಆದರೆ, ಪರಿಸರ (ರಕ್ಷಣೆ) ಕಾಯ್ದೆ 1986ರ ಸೆಕ್ಷನ್ 15 ಮತ್ತು 19ರ ಉಪಬಂಧಗಳ ಅನ್ವಯ ಕ್ರಮ ಜರುಗಿಸಲಾಗುವುದು. ಇದರಂತೆ ರೂ.1.00 ಲಕ್ಷದ ವರೆಗೆ ದಂಡ ಒಳಗೊಂಡಂತೆ ದಂಡದ ಶಿಕ್ಷೆ ಅಥವಾ 05 ವರ್ಷಗಳ ವರೆಗೆ ಜೈಲು ಶಿಕ್ಷೆ ಅಥವಾ ಈ ಎರಡನ್ನೂ ವಿಧಿಸಬಹುದಾಗಿರುತ್ತದೆ.

ಸಹಿ/- ಸದಸ್ಯ ಕಾರ್ಯದರ್ಶಿಗಳು
"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

THE BAGALKOT DISTRICT CENTRAL CO-OP BANK LTD. BAGALKOT
HO: Sector 24, Navanagar, BAGALKOT – 587103
Tel: 08354-236443, 235573,email: ictdrfp@bgkdccbank.com

RFP/Tender Notice

The Bank invites techno-functional-commercial proposals from eligible solution providers for implementing (a) 100 + computers and ATM OS project (b) Branch security solution consisting of 5 distinct solution components including AMC services for existing equipment's. Details are available in our web site 'bgkdccbank.com' and also at the HO. **The Last date to receive proposals is 19 July 2021 by 11.00 Hours.**

Bagalkot Sd/-
Date: 18-June-2021 C.E.O.

GOVERNMENT OF KARNATAKA
Rural Drinking Water & Sanitation Department
Office of the Executive Engineer, Rural Drinking Water & Sanitation Division, Karwar. Po:Habbuwada, Karwar, Uttara Kannada Dist.-581 306.
Phone: 08382-229735 E-mail : eerdwsd.uk@gmail.com
NO.: EE/RDWSD/KWR/jjm/2021-22/ 351 DATE:17.06.2021

SHORT TERM TENDER NOTIFICATION (Through e-Procurement)

Executive Engineer, Rural Drinking Water & Sanitation Division, Karwar invites on behalf of Governor of Karnataka request for proposal tenders from the eligible bidders for the work detailed in the table below. Two cover tender procedure as per rule 28 of the KTTP Act and Standard Tender Document KW-IV shall be followed. The tenders are required to submit through E-procurement portal https://eproc.karnataka.gov.in
1) Downloading of document through e-proc portal: **18.06.2021 to 25.06.2021 up to 15.00 Hrs.** 2) Time & date of Pre-Bid Conference **: 21.06.2021** Time : 11.30 Hrs. Venue: O/o.Executive Engineer, Rural Drinking Water & Sanitation Division Po:Habbuwada, Karwar-Uttara Kannada Dist. 3) Last Date & Time for Receipt of Bids: **25.06.2021 Time: 16.30 Hrs.** 4) Date & Time of Technical Bid Opening: **26.06.2021 Time : 17:00 Hrs.** 5) Date & Time of Financial Bid Opening: Will be informed technically qualified bidders after approval of Technical Bid.
Name of the work: 1) RWSSD/2021-22/WS/WORK_INDENT33981 /CALL-2, Amount put to Tender **Rs. 85.38 Lakhs,** Earnest Money Deposit: **Rs. 2.14 Lakhs,** Period of Completion (including rainy season): **3 months**, Class of Contractors: **PRED Class-III and above.**
More details can be had from the office of the undersigned (Phone: 08382-229735 E mail: eerdwsd.uk@gmail.com) and also through website **www.eproc.karnataka.gov.in** by clicking list of Tenders which will link to all dept works list.
Sd/- Executive Engineer, RDW&S Division, Karwar, Uttara Kannada District
DIPR/ADK/MCA/200/21-22 dt.17.6.2021

KARNATAKA REAL ESTATE REGULATORY AUTHORITY
No. 1/14, Second Floor, Silver Jubli Block, Unity Building, C.S.I. Compound, 3rd Cross, Mission Road, Bengaluru-560027
No. K-RERA/Admin/CR/12/2019-20 Date: 18.06.2021

CORRIGENDUM

Sub: Issuing of Corrigendum to the notification inviting applications for the post of Adjudicating Officer.
Ref: Notification bearing No. K-RERA/Admin/CR/12/2019-20 Dated: 08.06.2021.
In the Notification referred to above, applications have been called for the post of Adjudicating Officer in the Karnataka Real Estate Regulatory Authority, Bengaluru.
In the paragraph **"Term of Office"** of the said notification, instead of the words "shall not be eligible for re-appointment", the words "shall not accept any employment in, or connected with, the management or administration of, any person or organisation which has been associated with any work under Real Estate (Regulatory and Development) Act 2016, from the date on which he ceases to hold office. The Authority holds the right to continue the services for one year/two years as the case may be subject to satisfactory turn out of the duties and responsibilities" have been replaced. Rest will remain the same as per the notification dated: 08.06.2021.
Sd/- Secretary
Karnataka Real Estate Regulatory Authority
COVID-19 - DON'T SPREAD RUMOURS. ACT RESPONSIBLY, AVOID INFECTION-NOT THE INFECTED.
Wear Mask | 6 Feet Follow Physical Distancing | Maintain Hand Hygiene

ವೈದ್ಯಕೀಯ ಅಧೀಕ್ಷಕರವರ ಕಾರ್ಯಾಲಯ
ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು – 560 008. ದೂ. : 080–25266993, 25266994
ಸಂಖ್ಯೆ : ಕಾರಾವಿ ಆ/ಇಂ/ಸಾ–ವಿ/08/2021–22 ದಿನಾಂಕ : 15–06–2021

ಮಾನ್ಯೂಯಲ್ ಟೆಂಡರ್ ಪ್ರಕಟಣೆ

ಮಾನ್ಯೂಯಲ್ ಟೆಂಡರ್ ನಮೂನೆಗಳನ್ನು ಒಳಗೊಂಡಂತೆ ವರ್ಗಾಯಿಸತಕ್ಕದ್ದಲ್ಲ. ಮಾನ್ಯೂಯಲ್ ಟೆಂಡರ್‌ನ್ನು ದರಪಟ್ಟಿ ದ್ವಿಪ್ರತಿಯಲ್ಲಿ ಸಲ್ಲಿಸುವುದು.
ಮಾನ್ಯೂಯಲ್ ಟೆಂಡರ್ ನಮೂನೆ
ವಿಚಾರಣೆ ಸಂಖ್ಯೆ : ಕಾರಾವಿ ಆ/ಇಂ/ಸಾ–ವಿ/08/21–22, ದಿನಾಂಕ : 15–06–2021 ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು ಇಲ್ಲಿ 2021–22 ನೇ ಸಾಲಿನಲ್ಲಿ ಉತ್ಪತ್ತಿಯಾಗುವ ಸಾಮಾನ್ಯ ಕಸ ವಿಲೇವಾರಿ ಮಾಡಲು ಸಲ್ಲಿಸುವ ಮಾನ್ಯೂಯಲ್ ಟೆಂಡರ್.
1) ಮಾನ್ಯೂಯಲ್ ಟೆಂಡರ್ ನಮೂನೆ ಬೆಲೆ (ಡಿ.ಡಿ. ಮುಖಾಂತರ) (1) ಅರ್ಜಿ ನಮೂನೆ – ರೂ. 1,000.00. (2) ಮಾರಾಟ ತೆರಿಗೆ – ರೂ. 80.00. (ರೂ. ಒಂದು ಸಾವಿರದ ಎಂಭತ್ತು ಮಾತ್ರ) ಒಟ್ಟು ರೂ. 1,080.00. ಸಾಮಾನ್ಯ ರಸೀದಿ : ಸಂಖ್ಯೆ : ಕಾರಾವಿ ಆ/ಇಂ/ಸಾ–ವಿ/08/21–22, ದಿನಾಂಕ : 15–06–2021. 2) ಮಾನ್ಯೂಯಲ್ ಟೆಂಡರ್ ಸಲ್ಲಿಸಬೇಕಾಗಿರುವ ಅಂಚೆ ವಿಳಾಸ : ವೈದ್ಯಕೀಯ ಅಧೀಕ್ಷಕರು, ಕಾರಾವಿ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು – 08. 3) ಮಾನ್ಯೂಯಲ್ ಟೆಂಡರ್ ಸಲ್ಲಸಲು ಕೊನೆಯ ದಿನಾಂಕ ಮತ್ತು ಸಮಯ : 14–07–2021 ರಂದು ಸಂಜೆ 4.00 ರ ಒಳಗೆ. 4) ಮಾನ್ಯೂಯಲ್ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : 15–07–2021 ರ ಬೆಳಿಗ್ಗೆ 11.00 ಗಂಟೆಗೆ. 5) ಇ.ಎಂ.ಡಿ. ಮೊತ್ತ ರೂ. 5,000/– (ಐದು ಸಾವಿರ ರೂಪಾಯಿಗಳು ಮಾತ್ರ) ಡಿ.ಡಿ. ಯನ್ನು ವೈದ್ಯಕೀಯ ಅಧೀಕ್ಷಕರು ಅಥವಾ ಕಾರ್ಯದರ್ಶಿಗಳು, ಕಾರಾವಿ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು – 08. ಇವರ ಹೆಸರಿಗೆ ಪಡೆದು ಅರ್ಜಿಯೊಂದಿಗೆ ಲಗತ್ತಿಸುವುದು. ಯಶಸ್ವಿಯಾಗಿಲ್ಲದ ಮಾನ್ಯೂಯಲ್ ಟೆಂಡರ್‌ದಾರರ ಇ.ಎಂ.ಡಿ. ಮೊತ್ತವನ್ನು ಹಿಂದುರುಗಿಸಲಾಗುವುದು. 6) ಮಾನ್ಯೂಯಲ್ ಟೆಂಡರ್ ಅವಧಿಯು ಸರಬರಾಜು ಆದೇಶ ನೀಡುವ ದಿನಾಂಕದಿಂದ 12 ತಿಂಗಳು ಅಥವಾ ಮುಂದಿನ ಮಾನ್ಯೂಯಲ್ ಟೆಂಡರ್ ಅಂತಿಮವಾಗುವವರೆಗೆ ಅನ್ವಯವಾಗುತ್ತದೆ. 7) ಯಶಸ್ವಿಯಾದ ಟೆಂಡರ್‌ದಾರರು ರೂ. 10,000/– (ಹತ್ತು ಸಾವಿರ ರೂಪಾಯಿಗಳು ಮಾತ್ರ) ಭದ್ರತಾ ಠೇವಣಿಯಾಗಿ ಡಿ.ಡಿ. ಯನ್ನು ಸಲ್ಲಿಸತಕ್ಕದ್ದು. ಟೆಂಡರ್ ಅವಧಿ ಮುಗಿದ ನಂತರ ಭದ್ರತಾ ಠೇವಣಿಯನ್ನು ಹಿಂತಿರುಗಿಸಲಾಗುವುದು.
ಸಹಿ/– ವೈದ್ಯಕೀಯ ಅಧೀಕ್ಷಕರು, ಕಾರಾವಿ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು – 08.
ವಾಸಾಇ/ಬೆಂ.ನ./584/ಮಣಿಪಾಲ್/2020–21
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಂಟಿ ಕೃಷಿ ನಿರ್ದೇಶಕರ ಕಛೇರಿ, ಕೃಷಿ ಇಲಾಖೆ,
ಚಿಕ್ಕಮಗಳೂರು ಜಿಲ್ಲೆ – 577 102
ಇಮೇಲ್:-jdagrickm@gmail.com ದೂರವಾಣಿ :08262–295735
ಸಂ: ಜಕೃನಿ/ಚಿ/ಸಿಬ್ಬಂದಿ–1/ಹೊ.ಗು.ಟೆಂಡರ್/2021–22 ದಿನಾಂಕ : .11–06–2021

ಇ–ಟೆಂಡರ್ ಪ್ರಕಟಣೆ

2021–22 ನೇ ಸಾಲಿಗೆ ಈ ಕಛೇರಿ ಹಾಗೂ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಬೆರಳಚ್ಚುಗಾರರು–07, ವಾಹನ ಚಾಲಕರು–05 ಮತ್ತು ಡಿ–ಗ್ರೂಪ್ ನೌಕರರು–09 ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಸಂಸ್ಥೆಯ ಮೂಲಕ ಪಡೆಯಲು ಇ–ಟೆಂಡರನ್ನು e-Procurement Portal ಮುಖಾಂತರ ಆಹ್ವಾನಿಸಲಾಗಿರುತ್ತದೆ. ಆಸಕ್ತ ಸಂಸ್ಥೆಯವರು e-Procurement Portal ಮುಖಾಂತರ ದಿನಾಂಕ : 11–06–2021 ರಿಂದ 26–06–2021 ರ ಸಂಜೆ 4.00 ಗಂಟೆಯೊಳಗೆ ಆನ್‌ಲೈನ್ ನಲ್ಲಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು www.eproc.karnataka.gov.in ನಲ್ಲಿ ಅಥವಾ ಜಂಟಿ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಿ ತಿಳಿದುಕೊಳ್ಳಬಹುದು.
1) ನಿಗದಿಪಡಿಸಿದ ಅಂದಾಜು ಮೊತ್ತ ರೂ 35.08 ಲಕ್ಷಗಳು
ಸಹಿ/– ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1/ಕೆ.ಕೆ.ಆರ್.ಡಿ.ಬಿ/ಟೆಂಡರು/2021–22/ ದಿನಾಂಕ: 16.06.2021

ಟೆಂಡರು ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯುತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ **ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಅನುಮೋದನೆಗೊಂಡ** ಕಟ್ಟಡ ನಿರ್ಮಾಣದ ಒಟ್ಟು 10 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ.
ಟೆಂಡರ್ ನಮೂನೆಗಳನ್ನು www.eproc.karnataka.gov.in/e-portal/index.seam ಅಂತರ್ಜಾಲದಲ್ಲಿ **ದಿನಾಂಕ 17.06.2021** ರಿಂದ **ದಿನಾಂಕ 01.07.2021** ರಂದು ಸಂಜೆ 4.00 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ 01.07.2021ರ 16.00** ಗಂಟೆವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್‌ಲೈನ್‌ನಲ್ಲಿ **ದಿನಾಂಕ: 02.07.2021ರಂದು 17.00 ಗಂಟೆಗೆ** ತೆರೆಯಲಾಗುವುದು. ಹಾಗೂ ಕಾಮಗಾರಿಯ **ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ** ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (www.eproc.karnataka.gov.in/e-portal/index.seam) ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–242173.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/115/ಎಂಸಿಎ/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ–6/ಟೆಂಡರ್.ಅಧಿಸೂಚನೆ/2021–22/868 ದಿನಾಂಕ: 17–06–2021

ಅಲ್ಪಾವಧಿ ಟೆಂಡರ್ ಅಧಿಸೂಚನೆ.

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ 8443 ಯೋಜನೆಯ ಕಾಮಗಾರಿಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. ಕಾಮಗಾರಿಯ ವರ್ಕ ಇಂಡೆಂಟ ನಂ: **136832, 137619, 130182,** 2) ಕಾಮಗಾರಿ ಅಂದಾಜು ಮೊತ್ತ : ಕಡಿಮೇ ರೂ. 10.72 ಲಕ್ಷಗಳು. ಹೆಚ್ಚು ರೂ. 53.28 ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ: "ಇಂಡೇಂಟ್ ಸಂ.136832 ಇದಕ್ಕೆ ದರ್ಜೆ 1 ಪಿ.ಡ್ಬ್ಯೂಡಿ. ಗುತ್ತಿಗೆದಾರರು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ."ಇಂಡೇಂಟ್ ಸಂ.137619, 130182 ಇದಕ್ಕೆ ದರ್ಜೆ 2 ಮತ್ತು ಮೇಲ್ಪಟ್ಟು ಪಿ.ಡ್ಬ್ಯೂಡಿ. ಗುತ್ತಿಗೆದಾರರು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ." 4) ಟೆಂಡರ ಅರ್ಜಿಯ ಬೆಲೆ : ಅರ್ಜಿ ಬೆಲೆ e-procurement ನಂತೆ, 5) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **16.07.2021 (17.30 ಗಂಟೆ),** 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **17.07.2021 (16.00 ಗಂಟೆ),** 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **19.07.2021 (16.30 ಗಂಟೆ),** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : **20.07.2021 (16.30 ಗಂಟೆ),** 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ, 10) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/316/ಎಂ.ಸಿ.&ಎ/2021–22

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22265383
website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–08/2842/2021–22 ದಿನಾಂಕ: 18.06.2021

ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆಪಿಡಬ್ಲ್ಯೂಡಿ ದರ್ಜೆ–3 (ಸಿವಿಲ್) ಮತ್ತು ಮೇಲ್ಪಟ್ಟು ಗುತ್ತಿಗೆದಾರರಿಂದ ಹಾಗೂ ಕೆಸಿಇಐ ದರ್ಜೆ–2 (ಎಲೆಕ್ಟ್ರಿಕಲ್) ಮತ್ತು ಮೇಲ್ಪಟ್ಟು ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: (1) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ 3ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಆರ್.ಸಿ.ಸಿ. ಚರಂಡಿ ನಿರ್ಮಾಣ, ಹೆಚ್.ಡಿ.ಪಿ.ಇ ನೀರು ಸರಬರಾಜು ಪೈಪ್‌ಲೈನ್ ಅಳವಡಿಸುವುದೊಂದಿಗೆ 18ಮೀ ಅಗಲದ (ರಸ್ತೆ ಸಂಖ್ಯೆ:20) ಡಾಂಬರೀಕರಣ ರಸ್ತೆ ರಚಿಸುವ ಕಾಮಗಾರಿ. (2) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೆ.ಐ.ಎ.ಎಲ್ ಹತ್ತಿರವಿರುವ ಏರೋಸ್ಪೇಸ್ ಪಾರ್ಕ್ ಕೈಗಾರಿಕಾ ಪ್ರದೇಶದಲ್ಲಿ ಮಳೆ ನೀರು ರೀಚಾರ್ಜ್ ರಚನೆ ಅನುಷ್ಠಾನಗೊಳಿಸುವ ಕಾಮಗಾರಿ. (3) ಧಾರವಾಡ ಜಿಲ್ಲೆ, ಬೇಲೂರು 1ನೇ, 2ನೇ ಮತ್ತು 3ನೇ ಹಂತ ಕೈಗಾರಿಕಾ ಪ್ರದೇಶಗಳಲ್ಲಿ ರಸ್ತೆ ದೀಪಗಳನ್ನು ದುರಸ್ಥಿ ಹಾಗೂ ಮರುಸ್ಥಿತಿ ಮಾಡುವ ಕಾಮಗಾರಿ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 13.07.2021, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/DDU/R.O: 573/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಾಳೆ ಅಪ್ಪಂದಿರ ದಿನ

ಹೊಸ ಕಾಲದ ಅಪ್ಪಂದಿರು...

ಮಂಜುಶ್ರೀ ಎಂ. ಕಡಕೋಳ

ಕೋವಿಡ್‌–19... ಪುಟ್ಟ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೆ ಪರಿಣಾಮ ಬೀರಿದ್ದು ಹಲವು ರೀತಿ. ಕಷ್ಟ–ಸಂಕಷ್ಟಗಳ ನಡುವೆಯೇ ಬದುಕಿನ ಚಿತ್ರಣ ಬದಲಾಗಿರುವ ಈ ದಿನಮಾನಗಳಲ್ಲಿ ಸದ್ದಿಲ್ಲದೇ ಅಪ್ಪನ ಪಾತ್ರವೂ ಬದಲಾಗುತ್ತಿದೆ.

ಲಾಕ್‌ಡೌನ್, ವರ್ಕ್ ಫ್ರಂ ಹೋಂ ನಡುವೆ ಸಹಭಾಗಿತ್ವದ ಸೂತ್ರ ಕಂಡುಕೊಂಡಿರುವ ಹೊಸ ಕಾಲದ ಅಪ್ಪಂದಿರು ಹಲವು ನಿಟ್ಟಿನಲ್ಲಿ ತಮ್ಮನ್ನು ಬದಲಾವಣೆಗೆ ತೆರೆದುಕೊಂಡಿದ್ದಾರೆ. ಕೋವಿಡ್ ಕಲಿಸಿದ ಪಾಠಗಳು ಹೆಂಡತಿ ಮತ್ತು ಮಕ್ಕಳ ಜೊತೆಗಿನ ಬಾಂಧವ್ಯವನ್ನು ಮತ್ತಷ್ಟು ಸದೃಢಗೊಳಿಸಿವೆ.

ಹೆಣ್ಣಷ್ಟೇ ಮಾಡಬಹುದಾದ ಕೆಲಸಗಳಿವು ಎಂದು ಭಾವಿಸಲಾದ ಕೆಲಸಗಳನ್ನು ನಿಧಾನಕ್ಕೆ ಆತನೂ ಹಂಚಿಕೊಂಡು ಮಾಡುತ್ತಿದ್ದಾನೆ. ಪುಟ್ಟ ಮಗಳ ಡೈಪರ್ ಬದಲಾಯಿಸುವುದರಿಂದ ಹಿಡಿದು ಈಚೆಗಷ್ಟೇ ಮೊದಲ ಋತುಸ್ರಾವ ಶುರುವಾದ ಮಗಳಿಗೆ ಸ್ಯಾನಿಟರಿ ನ್ಯಾಪ್‌ಕಿನ್‌ನ ಮಹತ್ವ ತಿಳಿಸುವಷ್ಟರ ಮಟ್ಟಿಗೆ ಅಪ್ಪ ಬದಲಾಗಿದ್ದಾನೆ.

ಹೊರಗೆ ದುಡಿದು ದಣಿದು ಬರುತ್ತಿದ್ದ ಅಪ್ಪನೀಗ ಮನೆಯಲ್ಲೇ ಕಚೇರಿಯ ಕೆಲಸ ಮಾಡುತ್ತಲೇ ಮಗಳನ್ನು ಆನ್‌ಲೈನ್ ಕ್ಲಾಸ್‌ಗೆ ಅಣಿಗೊಳಿಸುತ್ತಾನೆ. ಇಷ್ಟು ವರ್ಷಗಳ ಕಾಲ ನಿತ್ಯವೂ ಬೇಗ ಎದ್ದು ಅಡುಗೆ, ಮನೆಕೆಲಸ ಮಾಡುತ್ತಿದ್ದ ಹೆಂಡತಿಯ ದೈನಂದಿನ ಕೆಲಸಕ್ಕೆ ಸಹಾಯಕ್ಕೆ ನಿಲ್ಲುತ್ತಿದ್ದಾನೆ. ದುಡಿಮೆ ಇರಲಿ ಬಿಡಲಿ ಅಪ್ಪನಾಗಿ ತನ್ನ ಜವಾಬ್ದಾರಿಯನ್ನು ಸದ್ದಿಲ್ಲದೇ ನಿಭಾಯಿಸುತ್ತಿದ್ದಾನೆ.

> ಲಾಕ್‌ಡೌನ್, ವರ್ಕ್ ಫ್ರಂ ಹೋಂ ನಡುವೆ ಸಹಭಾಗಿತ್ವದ ಸೂತ್ರ ಕಂಡುಕೊಂಡಿರುವ ಹೊಸ ಕಾಲದ ಅಪ್ಪಂದಿರು ಬದಲಾವಣೆಗೆ ತೆರೆದುಕೊಂಡಿದ್ದಾರೆ. ಕೋವಿಡ್ ಕಲಿಸಿದ ಪಾಠಗಳು ಮಕ್ಕಳ ಜೊತೆಗೆ ಬಾಂಧವ್ಯದ ಬೆಸುಗೆಯನ್ನು ಗಟ್ಟಿಗೊಳಿಸಿವೆ.

ಮಕ್ಕಳೊಂದಿಗೆ ಆದರ್ಶ ಹುಂಚದಕಟ್ಟೆ

ಅಪ್ಪನ ಜವಾಬ್ದಾರಿಯೂ ಕರ್ತವ್ಯದ ಕರೆಯೂ

ಮೈಮೇಲೆ ಬಿಸಿನೀರು ಬಿದ್ದು ತಮ್ಮ ಎರಡು ವರ್ಷದ ಮಗುವನ್ನು ಚಾಲಕ ಮುಬಾರಕ್ ಅವರು ಆಸ್ಪತ್ರೆಗೆ ದಾಖಲಿಸಿದ್ದರು. ಇತ್ತ ಮಗುವಿನ ಸ್ಥಿತಿ ಗಂಭೀರವಾಗಿದ್ದ ನಡುವೆಯೇ ಅತ್ತ ಕೋವಿಡ್ ರೋಗಿಯೊಬ್ಬರಿಂದ ಕರೆ. ಕರ್ತವ್ಯದ ಕರೆಗೆ ಓಗೊಟ್ಟಿದ್ದ ಮುಬಾರಕ್ ಆ್ಯಂಬುಲೆನ್ಸ್‌ನಲ್ಲಿ ಆ ರೋಗಿಯನ್ನು ಕರೆದೊಯ್ದು ಆಸ್ಪತ್ರೆಗೆ ದಾಖಲಿಸಿ ಬಂದ ಮರುದಿನವೇ ಅವರ ಮಗುವಿನ ಪ್ರಾಣ ಹೋಗಿತ್ತು... ಅತ್ತ ಅಪ್ಪನಾಗಿಯೂ ಜವಾಬ್ದಾರಿ ನಿರ್ವಹಿಸಿ ಇತ್ತ ಆ್ಯಂಬುಲೆನ್ಸ್ ಚಾಲಕನಾಗಿಯೂ ಕರ್ತವ್ಯ ಪ್ರಜ್ಞೆ ಮೆರೆದ ಮುಬಾರಕ್ ಕೋವಿಡ್ ಕಾಲದಲ್ಲಿ ಎರಡು ತಿಂಗಳಿನಿಂದ ಉಚಿತವಾಗಿ ಆ್ಯಂಬುಲೆನ್ಸ್ ಸೇವೆ ಒದಗಿಸುವ ಮೂಲಕ ನಿಜ ಜೀವನದ ಹೀರೋ ಆಗಿದ್ದಾರೆ.

ಬಾಣಂತನದ ಕಷ್ಟ–ಸುಖ

‘ಕೋವಿಡ್ ಕಾಲದಲ್ಲೇ ನನ್ನ ಹೆಂಡತಿಗೆ ಎರಡನೇ ಹೆರಿಗೆಯಾಯಿತು. ಈ ಸಂದರ್ಭದಲ್ಲಿ ಆಕೆ ತವರುಮನೆಗೆ ಹೋಗಲಾಗಲಿಲ್ಲ. ಆಸ್ಪತ್ರೆಗೆ ದಾಖಲಿಸುವುದರಿಂದ ಹಿಡಿದು ಹೆಂಡತಿ–ಮಗುವನ್ನು ಅಲ್ಲಿಂದ ಡಿಸ್‌ಚಾರ್ಜ್ ಮಾಡುವ ತನಕ ನಾನೇ ನೋಡಿಕೊಂಡೆ. ಪುಟ್ಟ ಮಗಳ ಜೊತೆಗೆ ದೊಡ್ಡ ಮಗಳನ್ನೂ ಸಂಭಾಳಿಸಬೇಕಾಗುತ್ತಿತ್ತು. ಆದರೆ, ನಾನು ಮತ್ತು ನನ್ನ ಹೆಂಡತಿ ಮೊದಲೇ ಇದಕ್ಕೆ ಮಾನಸಿಕ ಸಿದ್ಧತೆ ಮಾಡಿಕೊಂಡಿದ್ದೆವು. ಬಾಣಂತನಕ್ಕಾಗಿ ಮತ್ತೊಬ್ಬರು ಸಹಾಯಕ್ಕೆ ಬರುವ ಸ್ಥಿತಿಯೂ ಇರಲಿಲ್ಲ. ಹಾಗಾಗಿ, ಅಮ್ಮನ ಜೊತೆಗೂಡಿ ಬಾಣಂತನದ ಕೆಲಸಗಳನ್ನು ಹಂಚಿಕೊಂಡು ಮಾಡಿದೆ’ ಎನ್ನುತ್ತಾರೆ ಶಿವಮೊಗ್ಗದ ಆದರ್ಶ ಹುಂಚದಕಟ್ಟೆ.

‘ಮಗಳಿಗೆ 8 ತಿಂಗಳಾಗುತ್ತಲೇ ಹೆಂಡತಿ ಆನ್‌ಲೈನ್‌ನಲ್ಲಿ ಉದ್ಯೋಗ ಶುರುಮಾಡಿದಳು. ಅರ್ಧ ದಿನದ ಮಟ್ಟಿಗೆ ಮಗಳನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಿಕೊಂಡೆ. ದೊಡ್ಡಮಗಳಿಗೆ ತನ್ನ ಜವಾಬ್ದಾರಿಯ ಅರಿವು ಮೂಡಿಸುತ್ತಲೇ ಪುಟ್ಟ ಮಗಳಿಗೆ ಸ್ನಾನ ಮಾಡಿಸುವುದು, ಎಳೆಯ ಬಿಸಿಲಿಗೆ ಅವಳ ಮೈಯೊಡ್ಡುವುದು, ಮಲಗಿಸುವುದು ಅಪ್ಪನಾಗಿ ಸಂತಸ ನೀಡಿದ ಕ್ಷಣಗಳು’ ಎನ್ನುತ್ತಾರೆ ಅವರು.

ಕೈತೋಟದ ಪಾಠ, ಸೈಕಲ್ ಸವಾರಿ

ಡಾ. ರಮೇಶ್ ಬಿ.ಕೆ.

‘ಲಾಕ್‌ಡೌನ್‌ನಲ್ಲಿ ಮನೆಯಲ್ಲಿ ಮಕ್ಕಳೊಂದಿಗೆ ಸೇರಿಕೊಂಡು ಕುಂಡಗಳಲ್ಲಿ ಮೆಂತ್ಯೆ, ಕೊತ್ತಂಬರಿ ಮತ್ತು ಪುದಿನ ಸೊಪ್ಪು ಬೆಳೆದೆವು. ಮಕ್ಕಳಿಗೆ ದಿನನಿತ್ಯ ಗಿಡಗಳಿಗೆ ನೀರುಣಿಸುವ ಕಾಯಕ. ನಾವೇ ಬೆಳೆದ ಮೆಂತ್ಯೆಯಿಂದ ಪಲಾವ್, ಪುದಿನದಿಂದ ಚಿಕನ್–ಮೊಟ್ಟೆ ಬಿರಿಯಾನಿ ಸವಿಯುವ ಭಾಗ್ಯ ದೊರೆಯಿತು. ರಾತ್ರಿಯ ಸಮಯದಲ್ಲಿ ಬಡಾವಣೆಯಲ್ಲೇ ಸಣ್ಣ ಮಗಳಿಗೆ ಸೈಕಲ್ ಕಲಿಸಿದೆ. ದೊಡ್ಡ ಮಗಳೊಂದಿಗೆ ಸೇರಿ, ವಾರದಲ್ಲೊಂದು ದಿನ ನಮಗೆ ತೋಚಿದ ಉಪಾಹಾರ ತಯಾರಿಸಿ ಸವಿದೆವು. ಆ ದಿನದ ಮಟ್ಟಿಗೆ ಮಡದಿಗೆ ಅಡುಗೆಮನೆ ಕೆಲಸದಿಂದ ಬಿಡುವು ದೊರೆಯಿತು’ ಎಂದು ತಮ್ಮ ಅನುಭವ ಹಂಚಿಕೊಂಡರು ಡಾ. ರಮೇಶ್ ಬಿ.ಕೆ.

ಮಕ್ಕಳ ಖುಷಿ ಇಮ್ಮಡಿಗೊಳಿಸಿದ ಕ್ಷಣ

ಪತ್ರಕರ್ತರಾಗಿ ಕಾರ್ಯ ನಿರ್ವಹಿಸುತ್ತಿರುವ ಎರಡು ಮಕ್ಕಳ ತಂದೆಯಾಗಿರುವ ಮನು ಮತ್ತು ಗುಣಶೀಲ್ ಅವರು ವೃತ್ತಿಯ ನಡುವೆಯೇ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಸವಾಲಿನದ್ದು ಎನ್ನುತ್ತಾರೆ.

‘ಹೊರಗಿನ ಡ್ಯೂಟಿ ಇದ್ದರೆ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಂಡತಿಯ ಮೇಲೇ ಇರುತ್ತಿತ್ತು. ಆದರೆ, ಆಕೆಯೂ ಉದ್ಯೋಗಸ್ಥೆಯಾಗಿದ್ದರಿಂದ ಹೆಚ್ಚು ಹೊರೆ ಬೀಳುತ್ತಿತ್ತು. ಇದೀಗ ನಾನು ಹೆಚ್ಚಾಗಿ ಮನೆಯಲ್ಲೇ ಇರುವುದರಿಂದ ನಾನೇ ಮಕ್ಕಳನ್ನು ನೋಡಿಕೊಳ್ಳುತ್ತೇನೆ. ಮಕ್ಕಳ ಸ್ನಾನ, ಬಟ್ಟೆ ಬದಲಿಸುವುದು, ಊಟ ಮಾಡಿಸುವುದು ಹೀಗೆ ಹಲವು ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಅಪ್ಪನೆಂಬ ನೆಮ್ಮದಿಯ ಭಾವ ಮೂಡಿದೆ. ನನ್ನ ಖುಷಿಯೂ ಇಮ್ಮಡಿಯಾಗಿದೆ’ ಎನ್ನುತ್ತಾರೆ ಪತ್ರಕರ್ತ ಮನು.

‘ಹೆಂಡತಿಗೆ ಕೋವಿಡ್ ಆಗಿದ್ದರಿಂದ ಕೆಲ ದಿನಗಳ ಮಟ್ಟಿಗೆ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಗಲೇರಿತು. ಇಬ್ಬರು ಹೆಣ್ಣುಮಕ್ಕಳು, ಮನೆಕೆಲಸ, ಅಡುಗೆ ಮತ್ತು ತನ್ನ ಉದ್ಯೋಗವನ್ನು ಹೆಂಡತಿ ಹೇಗೆ ಸಂಭಾಳಿಸುತ್ತಿದ್ದಳು ಎಂಬುದು ಈಗ ಮನದಟ್ಟಾಯಿತು. ಅತ್ತ ಕಚೇರಿ ಕೆಲಸ ಮಾಡುತ್ತಲೇ ಇತ್ತ ಮಧ್ಯಾಹ್ನದ ಅಡುಗೆ, ರಾತ್ರಿಯ ಅಡುಗೆ ಏನು ಮಾಡಬೇಕೆಂದು ಯೋಚಿಸುತ್ತಿದ್ದೆ. ಹೆಂಡತಿಗೆ ಬಿಸಿನೀರು, ಗಂಜಿ, ಕಷಾಯ ಒದಗಿಸುತ್ತಲೇ ಶಾಲೆ ಇಲ್ಲದ ಮಕ್ಕಳನ್ನು ಎಂಗೇಜ್ ಮಾಡಲು ಹಲವು ಚಟುವಟಿಕೆಗಳನ್ನು ಆಯೋಜಿಸುತ್ತಿದ್ದೆ. ಇಷ್ಟು ದಿನಗಳ ಕಾಲ ಅಪ್ಪನೆಂದರೆ ಬೆಳಿಗ್ಗೆ ಡ್ಯೂಟಿಗೆ ಹೋಗಿ ರಾತ್ರಿ ಬರುವವನಾಗಿದ್ದೆ. ಆದರೀಗ ಮಕ್ಕಳ ಜತೆಯಲ್ಲೇ ಇದ್ದು ಅವರಿಗೆ ಸಾಧ್ಯವಾದಷ್ಟೂ ಸಮಯ ಮೀಸಲಿಟ್ಟಿದ್ದು ಮನಸಿಗೆ ಸಮಾಧಾನವೆನಿಸಿತು’ ಎನ್ನುತ್ತಾರೆ ಪತ್ರಕರ್ತ ಗುಣಶೀಲ್.

ಮನೆ, ಮಕ್ಕಳನ್ನು ನೋಡಿಕೊಳ್ಳುವ ಕೆಲಸದಲ್ಲಿ ಪರಿಣಿತರಾಗಿರುವ ಅಪ್ಪಂದಿರು ಇದನ್ನು ಕೋವಿಡ್ ಕಾಲಕ್ಕೆ ಮಾತ್ರ ಸೀಮಿತಗೊಳಿಸದೆ ಮುಂದುವರಿಸಿದರೆ ಹೆಂಡತಿಗೂ ನಿಜವಾದ ಸಂಗಾತಿ ಎನಿಸಿಕೊಳ್ಳುವುದರಲ್ಲಿ ಎರಡು ಮಾತಿಲ್ಲ.

ಮುಟ್ಟಿನ ಪ್ಯಾಡ್ ವಿಲೇವಾರಿ ಹೇಗೆ?

ಡಾ. ಪ್ರಿಯಾಂಕ ಎಂ.ಜಿ.

ಸಾಮಾನ್ಯವಾಗಿ ಈ ಋತುಸ್ರಾವ ಎನ್ನುವುದು ಪ್ರತಿಯೊಬ್ಬ ಮಹಿಳೆಯರಿಗೂ ವಿಭಿನ್ನವಾಗಿರುತ್ತದೆ. ಋತುಚಕ್ರದ ಸಂದರ್ಭದಲ್ಲಿ ಆಗಾಗ ಸ್ಯಾನಿಟರಿ ನ್ಯಾಪ್‌ಕಿನ್ ಅನ್ನು ಬದಲಾಯಿಸುತ್ತಾ ಇರಬೇಕು. ಈಗ ಈ ನ್ಯಾಪ್‌ಕಿನ್‌ಗಳು ಕೈಗೆಟಕುವ ದರದಲ್ಲಿ ಕೂಡ ಲಭ್ಯ. ಹೀಗಾಗಿ ಈ ದಿನಗಳಲ್ಲಿ ಇದನ್ನು ಬಳಸುವವರ ಸಂಖ್ಯೆ ಕೂಡ ಹೆಚ್ಚಾಗಿದೆ. ಆದರೆ ಅದನ್ನು ಬಳಸಿದ ನಂತರ ವಿಲೇವಾರಿ ಮಾಡುತ್ತಿರುವ ರೀತಿ ಮಾತ್ರ ಪರಿಸರಕ್ಕೆ ಅಪಾಯಕಾರಿ ಎನಿಸಿದೆ. ಇದರ ಸಾಲಿಗೆ ಮಕ್ಕಳ ಡೈಪರ್, ಮಾಸ್ಕ್, ಕಾಂಡೋಮ್, ಟ್ಯಾಂಪನ್‌ಗಳ ವಿಲೇವಾರಿ ಇಡೀ ಜಗತ್ತಿಗೆ ಒಂದು ಸವಾಲಾಗಿ ಪರಿಣಮಿಸಿದೆ. ಅದರಲ್ಲಿ ಉಪಯೋಗಿಸುವ ಪ್ಲಾಸ್ಟಿಕ್ ಅದರಿಂದ ವಿಘಟನೆಗೊಳ್ಳದೆ ಪ್ರಕೃತಿಗೆ ನೇರವಾಗಿ ಬಿಸಾಡುತ್ತಿರುವುದರಿಂದ ದೊಡ್ಡ ಪ್ರಮಾಣದ ಪರಿಸರ ಮಾಲಿನ್ಯಕ್ಕೆ ಕಾರಣವಾಗಿದೆ.

ಭಾರತದಲ್ಲಿ ಘನತ್ಯಾಜ್ಯ ಉತ್ಪಾದನೆಯು ವರ್ಷಕ್ಕೆ 63 ದಶಲಕ್ಷ ಟನ್ ಎಂದು ಅಂದಾಜಿಸಲಾಗಿದೆ. ಈ ಪೈಕಿ ಸುಮಾರು 44 ದಶಲಕ್ಷ ಕೆಜಿ ನ್ಯಾಪ್‌ಕಿನ್, ಮುಟ್ಟಿನ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಒಂದು ಸ್ಯಾನಿಟರಿ ಪ್ಯಾಡ್ ಮಣ್ಣಿನಲ್ಲಿ ಕರಗಲು ಸುಮಾರು 500ರಿಂದ 800 ವರ್ಷಗಳು ಬೇಕು. ಏಕೆಂದರೆ ಈ ಪ್ಯಾಡ್‌ಗಳಲ್ಲಿ ಪ್ಲಾಸ್ಟಿಕ್ ಅಂಶ ಇರುವುದರಿಂದ ಮಣ್ಣಿನಲ್ಲಿ ಸುಲಭವಾಗಿ ಕರಗುವುದಿಲ್ಲ. ಇದು ಆರೋಗ್ಯ ಸಮಸ್ಯೆಗೆ ಕಾರಣವಾಗಬಹುದು. ಇದಲ್ಲದೇ ಹೆಚ್ಚಿನ ಮಹಿಳೆಯರು ತಾವು ಬಳಸಿದ ಸ್ಯಾನಿಟರಿ ಪ್ಯಾಡ್‌ಗಳನ್ನು ಘನತ್ಯಾಜ್ಯ ಅಥವಾ ಕಸದ ತೊಟ್ಟಿಯಲ್ಲಿ ವಿಲೇವಾರಿ ಮಾಡುತ್ತಾರೆ. ಅದು ಅಂತಿಮವಾಗಿ ಘನತ್ಯಾಜ್ಯಗಳ ಭಾಗವಾಗುತ್ತದೆ.

ಸುಡುವ ಯಂತ್ರ

ಮೇಲಿನ ಎಲ್ಲಾ ಸಮಸ್ಯೆಗಳಿಗೆ ಪೂರ್ಣವಿರಾಮ ಹಾಕಲು ಭಾರತದಲ್ಲಿಯೇ ಸ್ಯಾನಿಟರಿ ಪ್ಯಾಡ್ ವಿಲೇವಾರಿಗೊಂದು ತಂತ್ರಜ್ಞಾನ ಅಭಿವೃದ್ಧಿಯಾಗಿದೆ. ಇದೇ ಸ್ಯಾನಿಟರಿ ಪ್ಯಾಡ್ ಸುಡುವ ಯಂತ್ರ (ಇನ್‌ಸೈನ್‌ರೇಟರ್ಸ್). ಆಲ್ಫಾ ಥರ್ಮ್, ಸನ್‌ಶೈನ್ ಟೆಕ್ನೋ ಸಿಸ್ಟಮ್ಸ್, ಸುವಿಧಾ 360, ಬೆಲ್ಲಾ ಎ50.. ಹೀಗೆ ನಾನಾ ಬ್ರ್ಯಾಂಡ್‌ಗಳ ಯಂತ್ರಗಳು ಮಾರುಕಟ್ಟೆಯಲ್ಲಿ ಲಭ್ಯ. ನಮ್ಮ ಅವಶ್ಯಕತೆಗಳ ಅನುಸಾರವಾಗಿ ಅಂದರೆ ಐದು ಪ್ಯಾಡ್‌ನಿಂದ 50, 100, 200.. ಹೀಗೆ ಎಷ್ಟು ಪ್ಯಾಡ್‌ಗಳನ್ನು ಬೇಕಾದರೂ ಸುಡುವ ವಿದ್ಯುತ್ ಮತ್ತು ಬ್ಯಾಟರಿ ಚಾಲಿತ ಯಂತ್ರಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಈ ಯಂತ್ರಗಳು ಬೆಂಗಳೂರಲ್ಲದೇ, ಇತರ ನಗರಗಳಲ್ಲೂ ದೊರೆಯುತ್ತವೆ. ಇದಕ್ಕೆ ₹ 6 ಸಾವಿರದಿಂದ ಹಿಡಿದು ಒಂದು ಲಕ್ಷದವರೆಗೂ ಯಂತ್ರದ ಸಾಮರ್ಥ್ಯದ ಮೇಲೆ ಬೆಲೆ ನಿಗದಿಯಾಗಿದೆ. ಈ ಯಂತ್ರವನ್ನು ನಮ್ಮ ವೈಯಕ್ತಿಕ ಅಥವಾ ದೊಡ್ಡ ಪ್ರಮಾಣದಲ್ಲಿಯೂ ಈ ಯಂತ್ರದ ಬಳಕೆ ಮಾಡಬಹುದಾಗಿದೆ.

ವಿಸರ್ಜನೆ ಹೇಗೆ?

ನಾವು ವಿದ್ಯುತ್ ಯಂತ್ರವನ್ನು ಬಳಸುವುದಾದರೆ, ಪ್ಯಾಡ್ ಹಾಕುವ ಮುನ್ನ 5–10 ನಿಮಿಷಗಳ ಮುಂಚೆ ಯಂತ್ರದ ಸ್ವಿಚ್ ಆನ್ ಮಾಡಬೇಕು. ನಂತರ ಪ್ಯಾಡ್‌ಗಳನ್ನು ಅದರಲ್ಲಿ ಹಾಕಿ ಬಾಗಿಲು ಮುಚ್ಚಿ ಯಂತ್ರದಲ್ಲಿನ ಕೆಂಪು ಬಟನ್ ಒತ್ತಿದರೆ ಸುಮಾರು 15 ನಿಮಿಷಗಳಲ್ಲಿ ಅದು ಸುಟ್ಟುಹೋಗುತ್ತದೆ. ಅದರ ಹೊಗೆ ಹೋಗಲು ಪ್ರತ್ಯೇಕ ಕೊಳವೆ ಇರುತ್ತದೆ. ಆ ಕೊಳವೆ ಮುಖಾಂತರ ಕೆಟ್ಟ ಹೊಗೆ ಹೊರಹೋಗುತ್ತದೆ. ನಂತರ ಟ್ರೇಯಲ್ಲಿ ಬೂದಿ ಉಳಿಯುತ್ತದೆ. ಆ ಬೂದಿಯನ್ನು ಕಸದಲ್ಲಿ ಹಾಕಬೇಕು.

ಎಲ್ಲೆಲ್ಲಿ ಈ ಯಂತ್ರದ ಬಳಕೆ ಅಗತ್ಯವಿದೆ?

ಮನೆ, ಸರ್ಕಾರಿ ಕಚೇರಿಗಳಲ್ಲಿ, ಶಾಲೆಗಳಲ್ಲಿ, ಮಹಿಳಾ ಹಾಸ್ಟೆಲ್‌ಗಳಲ್ಲಿ, ಮಾಲ್‌ಗಳಲ್ಲಿ, ಮುಖ್ಯವಾಗಿ ಮಹಿಳೆಯರು ಕೆಲಸ ಮಾಡುವ ಪ್ರತಿ ಸಂಸ್ಥೆಗಳಲ್ಲಿ ಈ ಯಂತ್ರವನ್ನು ಕಡ್ಡಾಯಗೊಳಿಸಿದರೆ ಮಾತ್ರ ನಾವು ಒಂದಿಷ್ಟು ಮಾಲಿನ್ಯದ ನಿಯಂತ್ರಣ ಮಾಡಬಹುದು. ಮಹಿಳೆಯರು ಶೌಚಾಲಯಕ್ಕೆ ಹೋದಾಗ, ತಮ್ಮ ಮುಟ್ಟಿನ ಪ್ಯಾಡ್‌ಗಳನ್ನು ಒಂದು ಕಾಗದದಲ್ಲಿ ಸುತ್ತಿ ಯಂತ್ರದ ಬಾಯಲ್ಲಿ ಹಾಕಿದರೆ ಸಾಕು ಅದು ತುಂಬಿದಾಗ ಶೌಚಾಲಯದ ನಿರ್ವಾಹಕರು ದಿನದ ಕೊನೆಯಲ್ಲಿ ಯಂತ್ರವನ್ನು ಆನ್ ಮಾಡಿ ಸುಡಬಹುದು. ದಿನದ ಕೊನೆಯಲ್ಲಿ ಈ ಕೆಲಸ ಜರಗುವುದರಿಂದ ವಿದ್ಯುತ್ ಕೂಡ ಉಳಿಯುತ್ತದೆ.

ಪಾಪ್‌ಕಾರ್ನ್ ಚಿಕನ್, ಚಿಕನ್ ಮಂಚೂರಿಯನ್ ಡ್ರೈ

ನಳಪಾಕ

ಮನಸ್ವಿ

ಪಾಪ್‌ಕಾರ್ನ್ ಚಿಕನ್

ಬೇಕಾಗುವ ಸಾಮಗ್ರಿಗಳು: ಅಕ್ಕಿಹಿಟ್ಟು – 3 ಕಪ್, ಮೊಟ್ಟೆ – 2, ನಿಂಬೆರಸ – 2 ಚಮಚ, ಎಣ್ಣೆ – ಕರಿಯಲು, ಚರ್ಮ ಹಾಗೂ ಮೂಳೆ ರಹಿತ ಚಿಕನ್ ತುಂಡುಗಳು – 2 ಕಪ್, ಉಪ್ಪು – ರುಚಿಗೆ, ಕಾಳುಮೆಣಸಿನ ಪುಡಿ – ಸ್ವಲ್ಪ.

ತಯಾರಿಸುವ ವಿಧಾನ: ಬೌಲ್‌ನಲ್ಲಿ ಅಕ್ಕಿಹಿಟ್ಟು, ಉಪ್ಪು ಹಾಗೂ ಕಾಳುಮೆಣಸಿನ ಪುಡಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಮೊಟ್ಟೆ ತಿರುಳು ಹಾಗೂ ನಿಂಬೆರಸವನ್ನು ಒಂದು ಪ್ರತ್ಯೇಕ ಬೌಲ್‌ನಲ್ಲಿ ಮಿಶ್ರಣ ಮಾಡಿ. ಪಾತ್ರೆಯಲ್ಲಿ ಎಣ್ಣೆ ಹಾಕಿ ಮಧ್ಯಮ ಉರಿಯಲ್ಲಿ ಕಾಯಲು ಇಡಿ. ಚಿಕನ್ ತುಂಡುಗಳನ್ನು ಮೇಲೆ ಹೇಳಿದ ಹಿಟ್ಟಿನ ಮಿಶ್ರಣದಲ್ಲಿ ಅದ್ದಿ, ನಂತರ ಅದನ್ನು ಮೊಟ್ಟೆ ಮಿಶ್ರಣದಲ್ಲಿ ಅದ್ದಿ, ಪುನಃ ಹಿಟ್ಟಿನಲ್ಲಿ ಅದ್ದಿ. ಕಾದ ಎಣ್ಣೆಯಲ್ಲಿ ಚಿಕನ್ ತುಂಡುಗಳನ್ನು ಹಾಕಿ ಬಣ್ಣ ಬದಲಾಗುವವರೆಗೂ ಕರಿಯಿರಿ. ಇದು ಮಳೆಗಾಲದಲ್ಲಿ ತಿನ್ನಲು ಚೆನ್ನಾಗಿರುತ್ತದೆ.

ಚಿಕನ್ ಮಂಚೂರಿಯನ್ ಡ್ರೈ

ಬೇಕಾಗುವ ಸಾಮಗ್ರಿಗಳು: ಕಾರ್ನ್‌ಫ್ಲೋರ್ – 1 ಚಮಚ, ಈರುಳ್ಳಿ ದಂಟು – 1 ಕಪ್, ಬೆಳ್ಳುಳ್ಳಿ – 1 ಹೆಚ್ಚಿದ್ದು, ಶುಂಠಿ – ಅರ್ಧ ಇಂಚು ಹೆಚ್ಚಿದ್ದು, ಎಣ್ಣೆ – 3 ಚಮಚ, ನೀರು – 2 ಚಮಚ.

ನೆನೆಸಿಡಲು: ಮೂಳೆ ಹಾಗೂ ಚರ್ಮ ರಹಿತ ಚಿಕನ್ ತುಂಡುಗಳು – 1 ಕಪ್, ಮೊಟ್ಟೆ – 1, ಸೋಯಾ ಸಾಸ್ – 1 ಚಮಚ, ಕಾರ್ನ್‌ಫ್ಲೋರ್ – 4 ಚಮಚ, ಮೈದಾಹಿಟ್ಟು – 2 ಚಮಚ, ಉಪ್ಪು – ರುಚಿಗೆ, ಕಾಳುಮೆಣಸಿನ ಪುಡಿ – ಚಿಟಿಕೆ

ಸಾಸ್ ತಯಾರಿಸಲು: ಟೊಮೆಟೊ ಕೆಚಪ್ – 1/4 ಕಪ್, ಸೋಯಾ ಸಾಸ್ – 1 ಟೇಬಲ್ ಚಮಚ, ಹಸಿಮೆಣಸಿನ ಸಾಸ್ – 3 ಚಮಚ, ಕೆಂಪುಮೆಣಸಿನ ಸಾಸ್ – 3 ಚಮಚ, ವಿನೆಗರ್ – 1 ಚಮಚ, ಸಕ್ಕರೆ – 1 ಚಮಚ.

ತಯಾರಿಸುವ ವಿಧಾನ: ನೆನೆಸಿಡಲು ತಿಳಿಸಿದ ಎಲ್ಲಾ ಸಾಮಗ್ರಿಗಳನ್ನು ಚೆನ್ನಾಗಿ ಮಿಶ್ರಣ ಮಾಡಿ ನೆನೆಯಲು ಬಿಡಿ. ನಾನ್‌ಸ್ಟಿಕ್ ಪಾತ್ರೆಯಲ್ಲಿ ಎಣ್ಣೆ ಕಾಯಲು ಇಡಿ. ಕಾದ ಎಣ್ಣೆಯಲ್ಲಿ ಚಿಕನ್ ತುಂಡುಗಳನ್ನು ಬಣ್ಣ ಬದಲಾಗುವವರೆಗೂ ಕರಿದು ಇಟ್ಟುಕೊಳ್ಳಿ. ಸಾಸ್ ತಯಾರಿಸಲು ಹೇಳಿದ ಎಲ್ಲಾ ಸಾಮಗ್ರಿಗಳನ್ನು ಮಿಶ್ರಣ ಮಾಡಿ, ಇನ್ನೊಂದು ಕಪ್‌ನಲ್ಲಿ ಕಾರ್ನ್‌ಫ್ಲೋರ್‌ಗೆ ನೀರು ಸೇರಿಸಿ ಮಿಶ್ರಣ ಮಾಡಿ ಇಡಿ. ಕರಿದು ಉಳಿದ ಎಣ್ಣೆಗೆ ಶುಂಠಿ, ಬೆಳ್ಳುಳ್ಳಿ ಹಾಗೂ ಈರುಳ್ಳಿ ದಂಟು ಸೇರಿಸಿ ಒಂದು ನಿಮಿಷ ಹುರಿದುಕೊಳ್ಳಿ. ಅದಕ್ಕೆ ಸಾಸ್ ಮಿಶ್ರಣ, ಕರಿದ ಚಿಕನ್ ತುಂಡು ಹಾಗೂ ಕಾರ್ನ್‌ಫ್ಲೋರ್ ಮಿಶ್ರಣ ಸೇರಿಸಿ ಕಲೆಸಿ, ಅದಕ್ಕೆ ಹೆಚ್ಚಿದ ಈರುಳ್ಳಿ ದಂಟು ಸೇರಿಸಿ. ಈ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿದರೆ ರುಚಿಯಾದ ಚಿಕನ್ ಮಂಚೂರಿಯನ್ ಡ್ರೈ ಸವಿಯಲು ಸಿದ್ಧ.

ಚಿಕನ್ ಕಟ್ಲೆಟ್

ಬೇಕಾಗುವ ಸಾಮಗ್ರಿಗಳು: ಚಿಕನ್ ತುಂಡುಗಳು – 600 ಗ್ರಾಂ, ಬ್ರೆಡ್‌ಪುಡಿ – 1 ಕಪ್, ನಿಂಬೆರಸ – 2 ಚಮಚ, ಉಪ್ಪು – ರುಚಿಗೆ, ಕಾಳುಮೆಣಸಿನ ಪುಡಿ – ಸ್ವಲ್ಪ, ಎಣ್ಣೆ – ಕಾಯಿಸಲು, ಅಕ್ಕಿಹಿಟ್ಟು – 1/2 ಕಪ್, ಮೊಟ್ಟೆ – 2, ಆಲೂಗೆಡ್ಡೆ – 4 (ಮಧ್ಯಮ ಗಾತ್ರದ್ದು), ದೊಣ್ಣೆಮೆಣಸು – 1/2 ಕಪ್ (ಹೆಚ್ಚಿದ್ದು), ಕ್ಯಾರೆಟ್ – 1/2 ಕಪ್ (ಹೆಚ್ಚಿದ್ದು), ಈರುಳ್ಳಿ – 1/2 ಕಪ್ (ಹೆಚ್ಚಿದ್ದು), ಹಸಿಮೆಣಸು – ಸ್ವಲ್ಪ (ಹೆಚ್ಚಿದ್ದು), ಬೆಳ್ಳುಳ್ಳಿ – ಹೆಚ್ಚಿದ್ದು 5 ರಿಂದ 6 ಎಸಳು, ಶುಂಠಿ – 1/2 ಇಂಚು (ಸಣ್ಣಗೆ ತುರಿದದ್ದು), ಗರಂ ಮಸಾಲೆ ಪುಡಿ – 1/2 ಚಮಚ, ಜೀರಿಗೆ ಪುಡಿ – 1 ಚಮಚ, ಕೊತ್ತಂಬರಿ ಸೊಪ್ಪು – ಸ್ವಲ್ಪ

ತಯಾರಿಸುವ ವಿಧಾನ: ಚಿಕನ್ ತುಂಡುಗಳನ್ನು ಚೆನ್ನಾಗಿ ತೊಳೆದು ಅರ್ಧ ಬೇಯಿಸಿ ಇಡಿ. ಪ್ಯಾನ್‌ವೊಂದರಲ್ಲಿ ಎಣ್ಣೆ ಹಾಕಿ ಸಣ್ಣ ಉರಿಯಲ್ಲಿ ಬಿಸಿ ಮಾಡಿಕೊಳ್ಳಿ. ಬಿಸಿಯಾದ ಮೇಲೆ ಜೀರಿಗೆ ಹಾಕಿ, ಜೀರಿಗೆ ಸಿಡಿಯಲು ಆರಂಭಿಸಿದ ಮೇಲೆ ಹೆಚ್ಚಿದ ಶುಂಠಿ ಹಾಗೂ ಬೆಳ್ಳುಳ್ಳಿ ಹಾಕಿ ಬಾಡಿಸಿ. ಅದಕ್ಕೆ ಈರುಳ್ಳಿ ಹಾಕಿ ಹುರಿಯಿರಿ. ಈರುಳ್ಳಿ ಬಾಡಿದ ಮೇಲೆ ಕ್ಯಾರೆಟ್, ಕ್ಯಾಪ್ಸಿಕಂ ಸೇರಿಸಿ ಮಧ್ಯಮ ಉರಿಯಲ್ಲಿ ಬೇಯಿಸಿ, ಗ್ಯಾಸ್ ಆರಿಸಿ ತಣ್ಣಗಾಗಲು ಬಿಡಿ. ಒಂದು ದೊಡ್ಡ ಬೌಲ್‌ನಲ್ಲಿ ಬೇಯಿಸಿದ ಆಲೂಗೆಡ್ಡೆ, ಅರೆಬೆಂದ ಚಿಕನ್ ತುಂಡುಗಳು, ಬೇಯಿಸಿದ ತರಕಾರಿ, ಹಸಿಮೆಣಸು, ಗರಂಮಸಾಲೆ, ಜೀರಿಗೆ ಪುಡಿ, ಬ್ರೆಡ್ ಪುಡಿ ಹಾಗೂ ಕೊತ್ತಂಬರಿ ಸೊಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣದಲ್ಲಿ ಕಟ್ಲೆಟ್ ಆಕಾರ ಮಾಡಿಕೊಳ್ಳಿ. ಅದನ್ನು ಅಕ್ಕಿಹಿಟ್ಟಿನಲ್ಲಿ ಅದ್ದಿ, ಮೊಟ್ಟೆ ತಿರುಳಿನಲ್ಲಿ ಹೊರಳಾಡಿಸಿ. ನಂತರ ಬ್ರೆಡ್‌ಪುಡಿಯಲ್ಲಿ ಅದ್ದಿ. 2 ಬಾರಿ ಹೀಗೆ ಮಾಡಿ. ಪಾತ್ರೆಯಲ್ಲಿ ಎಣ್ಣೆ ಹಾಕಿ ಎಣ್ಣೆ ಬಿಸಿಯಾದ ಮೇಲೆ ಕಟ್ಲೆಟ್ ಅನ್ನು ಎಣ್ಣೆಯಲ್ಲಿ ಕಾಯಿಸಿ.

ಗರ್ಭಿಣಿಯರಲ್ಲಿ ಹೊಟ್ಟೆನೋವು ಸಹಜವೇ?

ಸ್ಪಂದನ

ಡಾ. ವೀಣಾ ಎಸ್. ಭಟ್

- **ನನ್ನ ಅಕ್ಕನಿಗೆ 26 ವರ್ಷ. ಅವಳು ಮೊದಲ ಬಾರಿಗೆ ಗರ್ಭಿಣಿಯಾಗಿದ್ದಾಳೆ. ಈಗ 6 ತಿಂಗಳ ಗರ್ಭಿಣಿ. ಅವಳು ಪದೇ ಪದೇ ಹೊಟ್ಟೆನೋವು ಎನ್ನುತ್ತಾಳೆ. ರಾತ್ರಿ ಆಗಾಗ ಮೂತ್ರ ಮಾಡಲು ಎದ್ದು ಹೋಗುತ್ತಾಳೆ. ತಿಂಗಳು ತಿಂಗಳು ವೈದ್ಯರ ಹತ್ತಿರ ಪರೀಕ್ಷೆಗೆ ಹೋಗುತ್ತಿದ್ದಾರೆ. ತೊಂದರೆ ಏನಿರಬಹುದು?**

ಸುಶ್ಮಿತ, ಚಿಕ್ಕಮಗಳೂರು

ಸುಶ್ಮಿತಾ ಅವರೇ, ಗರ್ಭಿಣಿಯರಿಗೆ ಸಣ್ಣ ಪುಟ್ಟ ಹೊಟ್ಟೆನೋವು ಆಗಾಗ ಕಾಡುವುದು ಸಹಜ. ಮೊದಲನೆಯದಾಗಿ ಗರ್ಭಿಣಿಯರಲ್ಲಿ ಬೆಳೆಯುತ್ತಿರುವ ಮಗುವಿನಿಂದ ಗರ್ಭಕೋಶ ಹಿಗ್ಗುತ್ತಿರುತ್ತದೆ ಮತ್ತು ಗರ್ಭಕೋಶದ ಸ್ನಾಯುಗಳು ಆಗಾಗ ಸಂಕುಚನ ಹಾಗೂ ವಿಕಸನಗೊಳ್ಳುತ್ತಿರುತ್ತವೆ. ಇದು ಸಹಜವಾಗಿದ್ದು ಇಂತಹ ಸಣ್ಣಪುಟ್ಟ ನೋವೇ ದಿನ ತುಂಬಿದಾಗ ತೀವ್ರತರವಾಗಿ ಹೆರಿಗೆ ನೋವು ಅನಿಸಿಕೊಳ್ಳುತ್ತದೆ. ಹಾಗಾಗಿ ಗಾಬರಿಯಾಗುವುದು ಬೇಡ. ನಿಜವಾದ ಹೆರಿಗೆ ನೋವು ಅಥವಾ ಗರ್ಭಪಾತವಾಗುವಾಗ ಆಗುವ ನೋವು 2-3 ನಿಮಿಷಕ್ಕೊಮ್ಮೆ ಬಂದು ಸುಮಾರು 45ಸೆಕೆಂಡ್‌ಗಳ ಕಾಲ ಹಾಗೆಯೇ ಇರುತ್ತದೆ. ಈ ವಿಷಯ ಪ್ರತಿ ಗರ್ಭಿಣಿಯರಿಗೂ ತಿಳಿದಿರಬೇಕು. ಗರ್ಭಕೋಶವು ಮೂತ್ರಕೋಶ ಹಾಗೂ ಮಲಕೋಶದ ಮಧ್ಯೆ ಇರುವುದರಿಂದ ಮಲಬದ್ಧತೆಯಾದರೂ ಆಗಾಗ ಗರ್ಭಿಣಿಯರಿಗೆ ಹೊಟ್ಟೆನೋವು ಬರುತ್ತದೆ. ಮಲಬದ್ಧತೆ ಆಗದ ಹಾಗೆ ಸಾಕಷ್ಟು ನಾರಿನಾಂಶದ ಆಹಾರವನ್ನು (ಹಸಿರು ಸೊಪ್ಪು, ತರಕಾರಿ) ಸೇವಿಸಬೇಕು. ಮೊದಲ ಮೂರು ತಿಂಗಳು ಬೆಳೆಯುತ್ತಿರುವ ಗರ್ಭಕೋಶದಿಂದ ಮೂತ್ರಕೋಶದ ಮೇಲೆ ಒತ್ತಡ ಬೀಳುವುದರಿಂದ ಪದೇ ಪದೇ ಮೂತ್ರವಿಸರ್ಜನೆಯನ್ನು ಮಾಡಬೇಕೆನ್ನಿಸುವುದು ಸಹಜ. ಗರ್ಭಧಾರಣೆಯ ಕೊನೆಯ ಅವಧಿಯಲ್ಲಿ ಶಿಶುವಿನ ತಲೆ ಕೆಳಗೆ ಬಂದು ಮೂತ್ರಕೋಶದ ಮೇಲೆ ಒತ್ತಿದ ಹಾಗಾಗುವುದರಿಂದ ಪದೇಪದೇ ಮೂತ್ರ ಮಾಡಬೇಕು ಎನಿಸಬಹುದು. ಆದರೆ ನಿಮ್ಮ ಅಕ್ಕ ಆರನೇ ತಿಂಗಳಲ್ಲೂ ಪದೇಪದೇ ಮೂತ್ರಕ್ಕೆ ಹೋಗುತ್ತಾಳೆ ಮತ್ತು ಹೊಟ್ಟೆನೋವೆಂದರೆ ಅದು ಮೂತ್ರಕೋಶದ ಸೋಂಕಿನಿಂದಲೂ ಆಗಿರಬಹುದು. ಯಾಕೆಂದರೆ ಗರ್ಭಿಣಿಯರಲ್ಲಿ ಬೇರೆ ಮಹಿಳೆಯರಿಗಿಂತ ಮೂತ್ರಕೋಶಕ್ಕೆ ಸೋಂಕು ಬೇಗನೇ ತಗಲುತ್ತದೆ ಮತ್ತು ಇದನ್ನು ನಿರ್ಲಕ್ಷಿಸಿದರೆ ಇದರಿಂದ ಅವಧಿಗೆ ಮುನ್ನವೇ ಶಿಶುಜನನವಾಗಿ (ಅಕಾಲಿಕ ಹೆರಿಗೆ) ಮಗು ಹಾಗೂ ತಾಯಿ ಇಬ್ಬರಿಗೂ ತೊಂದರೆಯಾಗುತ್ತದೆ. ಆದ್ದರಿಂದ ಅವರಿಗೆ ಮೂತ್ರಕೋಶದ ಸೋಂಕು ಇದೆಯೇ ಇಲ್ಲವೇ ಎಂಬುದನ್ನ ಖಾತ್ರಿ ಮಾಡಿಕೊಳ್ಳಲು ಮೂತ್ರ ಪರೀಕ್ಷೆ ಹಾಗೂ ಅಗತ್ಯವಿದ್ದರೆ ತಳಿಪರೀಕ್ಷೆ (ಕಲ್ಚರ್) ಮಾಡಿಸಿಕೊಂಡು ಸೂಕ್ತ ಆ್ಯಂಟಿಬಯೋಟಿಕ್ ವೈದ್ಯರ ಸಲಹೆಯ ಮೇರೆಗೆ, ವರದಿಯ ಆಧಾರದ ಮೇಲೆ ಸೇವಿಸಬೇಕಾಗುವುದು. ಈ ವಿಷಯವಾಗಿ ನೀವು ತೋರಿಸುತ್ತಿರುವ ತಜ್ಞರ ಹತ್ತಿರ ಚರ್ಚಿಸಿ ಪರೀಕ್ಷಿಸಿಕೊಳ್ಳಿ. ನಿರ್ಲಕ್ಷಿಸಬೇಡಿ. ಬೆಳಗ್ಗೆ ಆರು ಗಂಟೆಯಿಂದ ಸಂಜೆ ಆರು ಗಂಟೆಯ ಒಳಗೆ 3–4 ಲೀಟರ್ ನೀರು ಸೇವಿಸಿದರೆ ರಾತ್ರಿ ಮೂತ್ರ ವಿಸರ್ಜನೆಗಾಗಿ ಪದೇಪದೇ ಏಳುವ ಪ್ರಮೇಯ ಬರುವುದಿಲ್ಲ.

- **ನನಗೆ ಹೆರಿಗೆಯಾಗಿ 4 ತಿಂಗಳು. ನಾರ್ಮಲ್ ಹೆರಿಗೆಯಾಗಿ ಸೂಚರ್ ಆಗಿದೆ. ನನಗಿನ್ನೂ ಹೆರಿಗೆಯ ನಂತರ ಪತಿಯೊಂದಿಗೆ ಲೈಂಗಿಕ ಸಂಪರ್ಕ ಆಗಿಲ್ಲ. ನನಗೆ ಹೊಲಿಗೆ ಬಿಚ್ಚಿಕೊಳ್ಳುತ್ತದೆ ಎನ್ನುವ ಹೆದರಿಕೆ. ಏನು ಮಾಡಲಿ? ಎಲ್ಲರಿಗೂ ನಾರ್ಮಲ್ ಹೆರಿಗೆಯಾದರೂ ಸೂಚರ್ ಆಗುತ್ತದೆಯೇ?**

ಅಂಜನಾ, ಹಿರಿಯೂರು

ಅಂಜನಾರವರೇ, ಹೆರಿಗೆ ಒಂದು ಸಹಜ ಪ್ರಕ್ರಿಯೆ. ಎಲ್ಲಾ ಸಹಜ ಹೆರಿಗೆಗೂ ಸೂಚರ್ ಅಥವಾ ಎಪಿಸಿಯಾಟಮಿ ಆಗಬೇಕೆಂದೇನೂ ಇಲ್ಲ. ಅದನ್ನು ವೈದ್ಯರು ನಿರ್ಧರಿಸುತ್ತಾರೆ. ಎಷ್ಟೋ ಬಾರಿ ಮನೆಯಲ್ಲೇ ಸಹಜ ಹೆರಿಗೆಯಾಗುತ್ತದೆ. ಈಗ ಸಹಜ ಹೆರಿಗೆಗಳೇ ಕಡಿಮೆಯಾದರೂ, ಹೆಚ್ಚಿನ ಹೆರಿಗೆಯ ಸಂದರ್ಭದಲ್ಲಿ ಯೋನಿಮಾರ್ಗದಿಂದ ಮಗು ಹೊರಬರುವಾಗ ಪೆರಿನಿಯಂ ಅಥವಾ ಗುದಮುಂದಣದಲ್ಲಿ ಸಣ್ಣದಾಗಿ ಕತ್ತರಿಸಿ ಹೊಲಿಗೆ ಹಾಕುವುದರಿಂದ ಈ ಭಾಗದಲ್ಲಾಗುವ ಅತಿಯಾದ ಹಿಗ್ಗುವಿಕೆ ಅಥವಾ ಹರಿದುಕೊಳ್ಳುವುದು, ಇದರಿಂದ ಮುಂದಾಗುವ ಸಂಭವನೀಯ ತೊಂದರೆಗಳನ್ನು (ಗರ್ಭಕೋಶ, ಮಲಕೋಶ, ಮೂತ್ರಕೋಶ ಜಾರುವಿಕೆ, ಮಲದ್ವಾರವರೆಗೂ ಹರಿದುಹೋಗಿ ಮಲವಿಸರ್ಜನೆಗೆ ತೊಂದರೆಯಾಗುವುದು, ಯೋನಿಮಾರ್ಗ ಸಡಿಲವಾಗಿ ತೃಪ್ತಿಕರ ಲೈಂಗಿಕ ಸಂಪರ್ಕವಾಗದೇ ಇರುವುದು ಇತ್ಯಾದಿ) ತಪ್ಪಿಸಲು ವೈದ್ಯರು ಅಥವಾ ದಾದಿಯರು ಸೂಚರ್ ಹಾಕುವ ಅಗತ್ಯ ಬರುತ್ತದೆ. ಆ ಸಂದರ್ಭದಲ್ಲಿ ಕತ್ತರಿಸಿ ಹೊಲಿಗೆ ಹಾಕಬೇಕೇ ಬೇಡವೇ ಎಂಬುದನ್ನು ಅವರೇ ನಿರ್ಧರಿಸುತ್ತಾರೆ. ಇದೊಂದು ಸರಳವಾದ ಶಸ್ತ್ರಚಿಕಿತ್ಸೆಯಾಗಿದ್ದು ಸ್ಥಳೀಯ ಅರಿವಳಿಕೆ (ಲೋಕಲ್ ಅನಸ್ತೇಶಿಯಾ) ಕೊಟ್ಟು ತಾನಾಗಿಯೇ ಕರಗಿಹೋಗುವ ಉತ್ತಮ ದರ್ಜೆಯ ದಾರಗಳಿಂದ ಹೊಲಿಗೆ ಹಾಕುತ್ತಾರೆ ಮತ್ತು ಒಂದೆರಡು ವಾರಗಳಲ್ಲೇ ಗಾಯ ಒಣಗಿ ಹೊಲಿಗೆ ಉದುರಿ ಹೋಗುತ್ತದೆ. ನೋವೆಲ್ಲ ಸಂಪೂರ್ಣ ಕಡಿಮೆಯಾಗಲು ಕೇವಲ ಆರು ವಾರಗಳು ಸಾಕು. ಹಾಗಾಗಿ ನೀವು ಭಯಪಡದೆ ಧೈರ್ಯದಿಂದಿರಿ. ಗರ್ಭಿಣಿಯರಲ್ಲಾಗುವ ಹೆಚ್ಚಿನ ಬದಲಾವಣೆಗಳು ಆರು ವಾರದೊಳಗೆ ಸಹಜ ಸ್ಥಿತಿಗೆ ಬರುವುದರಿಂದ ಬಾಣಂತನ ಕೇವಲ ಆರು ವಾರವಷ್ಟೆ. ಹಂತಹಂತವಾಗಿ ನೀವು ಎಲ್ಲಾ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬಹುದು. ಅಷ್ಟೇ ಅಲ್ಲ, ನಿಮ್ಮ ಪತಿಯೊಡನೆ ಲೈಂಗಿಕ ಸಂಪರ್ಕಕ್ಕೂ ಯಾವುದೇ ತೊಂದರೆ ಇಲ್ಲ. ನೀವು ಸಹಜವಾಗಿ ಮೊದಲಿನ ಹಾಗೆ ಇರಬಹುದು. ಆದರೆ ನಿಯಮಿತವಾಗಿ ನೀವು ಕೆಗಲ್ಸ್ ವ್ಯಾಯಾಮ ಮಾಡುವುದನ್ನು ಮರೆಯಬೇಡಿ.

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಭಾಗಮಂಡಲದ ತ್ರಿವೇಣಿ ಸಂಗಮ ಜಲಾವೃತ • 30ರವರೆಗೆ ಕೊಲ್ಲೂರು ಘಾಟಿ ಸಂಚಾರ ಬಂದ್

ನದಿ ಹರಿವು ಹೆಚ್ಚಳ, ವಿವಿಧೆಡೆ ಬೆಳೆ ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಇನ್ನಷ್ಟು ಚುರುಕಾಗಿದ್ದು, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮಳೆ ಪ್ರಮಾಣ ತೀವ್ರಗೊಂಡಿದೆ. ಕರಾವಳಿ ಭಾಗದ ಜಿಲ್ಲೆಗಳಲ್ಲಿ ಅಲ್ಲಲ್ಲಿ ಮಳೆಯಾಗಿದ್ದು, ಆರ್ಭಟ ತುಸು ತಗ್ಗಿದೆ.

ಕೊಡಗು ಜಿಲ್ಲೆಯಲ್ ಭಾಗಮಂಡಲದ ತ್ರಿವೇಣಿ ಸಂಗಮ ಸಂಪೂರ್ಣ ಜಲಾವೃತವಾಗಿದೆ. ತಲಕಾವೇರಿ, ನಾಪೋಕ್ಲು, ಕಕ್ಕಬ್ಬೆ ಭಾಗದಲ್ಲಿ ಬಿರುಸಿನ ಮಳೆಯಾಗುತ್ತಿದೆ. ಭಾಗಮಂಡಲ –ಅಯ್ಯಂಗೇರಿ ರಸ್ತೆಯ ಮೇಲೆ ಕಾವೇರಿ ನದಿಯ ನೀರು ಹರಿಯುತ್ತಿದೆ. ಬೇತು ಗ್ರಾಮದ ಬಳಿ ನಾಪೋಕ್ಲು– ಬಲಮುರಿ ಸಂಪರ್ಕ ರಸ್ತೆ ಜಲಾವೃತಗೊಂಡಿದೆ.

ಬಾಳೆಲೆ, ನಿಟ್ಟೂರು ಭಾಗದಲ್ಲಿ ಭತ್ತದ ಗದ್ದೆಗಳು ಲಕ್ಷ್ಮಣತೀರ್ಥ ನದಿಯ ಪ್ರವಾಹದಲ್ಲಿ ಮುಳುಗಡೆಯಾಗಿವೆ. ಪ್ರಮುಖ ನದಿಗಳು, ಹಳ್ಳಕೊಳ್ಳಗಳು ತುಂಬಿ ಹರಿಯತ್ತಿವೆ. ಹಾರಂಗಿ ಜಲಾಶಯ ಒಳಹರಿವು ಏರಿಕೆಯಾಗಿದೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಮರಗಳು ನೆಲಕ್ಕುರುಳಿವೆ. ಹೆತ್ತೂರು ಭಾಗದಲ್ಲಿ ಅಲ್ಪಪ್ರಮಾಣದ ಭೂಕುಸಿತ ಉಂಟಾಗಿದ್ದು, ಭತ್ತದ ಗದ್ದೆಗಳು ಜಲಾವೃತಗೊಂಡಿವೆ. ಕಾಫಿ ತೋಟದ ಕಾರ್ಮಿಕರಿಗೆ ರಜೆ ನೀಡಲಾಗಿದೆ.

ಕರಾವಳಿ, ಚಿಕ್ಕಮಗಳೂರು: ತಗ್ಗಿದ ಮಳೆ ಕರಾವಳಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಶುಕ್ರವಾರ ಮಳೆಯ ಆರ್ಭಟ ಸ್ವಲ್ಪ ಕಡಿಮೆಯಾಗಿದೆ. ಹಲವೆಡೆ ಭೂಕುಸಿತದಿಂದ ಮಣ್ಣು ರಸ್ತೆಗೆ ಬಿದ್ದು ಸಂಚಾರಕ್ಕೆ ಅಡಚಣೆಯಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಾಳಿ, ಮಳೆಯಿಂದಾಗಿ ಒಟ್ಟು 17 ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಉಡುಪಿ ಜಿಲ್ಲೆಯಲ್ಲಿ ಶುಕ್ರವಾರ ಸಾಧಾರಣ ಮಳೆಯಾಗಿದೆ. ಜಿಲ್ಲೆಯಲ್ಲಿ ಸರಾಸರಿ 5.4 ಸೆಂ.ಮೀ ಮಳೆಯಾಗಿದೆ. ₹ 8.67 ಲಕ್ಷ ಹಾನಿ ಸಂಭವಿಸಿದೆ.

ಚಿಕ್ಕಮಗಳೂರು ಜಿಲ್ಲೆಯ ನೆಲ್ಲಿಬೀಡು ಗ್ರಾಮದ ಬಸ್ ತಂಗುದಾಣ, ಬಣಕಲ್‌ನಲ್ಲಿ ಶಾಲಾ ಕಟ್ಟಡದ ಮೇಲೆ ಮರ ಉರುಳಿ ಚಾವಣಿಗೆ ಹಾನಿಯಾಗಿದೆ. ಕಳಸ – ಕುದುರೆಮುಖ ಮಾರ್ಗದಲ್ಲಿ ಬಿಳಗೋಡು ಬಳಿ ಮಣ್ಣು ರಸ್ತೆಗೆ ಕುಸಿದು, ಸಂಚಾರಕ್ಕೆ ಅಡಚಣೆಯಾಗಿತ್ತು.

ಘಾಟಿ ಸಂಚಾರ ಬಂದ್: ಶಿವಮೊಗ್ಗ ಜಿಲ್ಲೆಯ ಹೊಸನಗರದ ನಗರ, ತೀರ್ಥಹಳ್ಳಿಯ ಆಗುಂಬೆ ಪ್ರದೇಶಗಳಲ್ಲಿ ಮಳೆ ಆರ್ಭಟ ಮುಂದುವರಿದಿದೆ.

ಹೊಸನಗರ ತಾಲ್ಲೂಕು ನಾಗೋಡಿ ಬಳಿ ರಸ್ತೆ ಕುಸಿದಿದ್ದು, ತ್ವರಿತ ಕಾಮಗಾರಿ ಕೈಗೊಳ್ಳಲು ಅನುವಾಗುವಂತೆ ಆ.30ರವರೆಗೆ ಕೊಲ್ಲೂರು ಘಾಟಿ ಸಂಚಾರ ನಿರ್ಬಂಧಿಸಿ ಜಿಲ್ಲಾಧಿಕಾರಿ ಕೆ.ಬಿ.ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ಶೃಂಗೇರಿ ಭಾಗದಲ್ಲಿ ಮಳೆಯಾಗುತ್ತಿದ್ದು, ತುಂಗಾ ಜಲಾಶಯಕ್ಕೆ 31,277 ಕ್ಯುಸೆಕ್ ನೀರು ಹರಿದುಬರುತ್ತಿದೆ. ಅಷ್ಟೇ ಪ್ರಮಾಣದಲ್ಲಿ ನದಿಗೆ ನೀರು ಹರಿಸಲಾಗುತ್ತಿದೆ. ತೀರ್ಥಹಳ್ಳಿ ರಾಮಮಂಟಪ ಮುಳುಗುವ ಹಂತದಲ್ಲಿದೆ. ಕಳೆದ 24 ಗಂಟೆಗಳಲ್ಲಿ ಭದ್ರಾ ಜಲಾಶಯದ ಮಟ್ಟ 2.6 ಅಡಿ ಹಾಗೂ ಲಿಂಗನಮಕ್ಕಿ ಜಲಾಶಯದ ಮಟ್ಟ 2.20 ಅಡಿ ಏರಿದೆ.

ದಾವಣಗೆರೆ ಜಿಲ್ಲೆಯ ಉಕ್ಕಡಗಾತ್ರಿ ಗ್ರಾಮದಲ್ಲಿ ತುಂಗಭದ್ರಾ ನದಿ ನೀರಿನ ಹರಿವಿನ ಪ್ರಮಾಣ ಏರಿದೆ. ಸುಕ್ಷೇತ್ರ ಕರಿಬಸವೇಶ್ವರ ಗದ್ದುಗೆಯ ಸ್ನಾನಘಟ್ಟ ಮುಳುಗಡೆಯಾಗಿದೆ.

ತುಂಬಿದ ಬೆಣ್ಣಿಹಳ್ಳ: ಧಾರವಾಡ ಜಿಲ್ಲೆಯಲ್ಲಿ ಮಳೆ ಮುಂದುವರೆದಿದೆ. ಹುಬ್ಬಳ್ಳಿಯಲ್ಲೂ ಬೆಳಿಗ್ಗೆ ಧಾರಾಕಾರ ಮಳೆಯಾಗಿದೆ. ನವಲಗುಂದದ ಬೆಣ್ಣಿಹಳ್ಳ ಮೈದುಂಬಿ ಹರಿಯುತ್ತಿದೆ. ಧಾರವಾಡ, ಕಲಘಟಗಿ ಹಾಗೂ ಅಳ್ನಾವರ ಭಾಗದಲ್ಲಿ ಆಗಾಗ ಮಳೆಯಾಗಿದೆ. ಜಲಾವೃತಗೊಂಡಿದ್ದ ಕಿರು ಸೇತುವೆಗಳಲ್ಲಿ ನೀರಿನ ಮಟ್ಟ ಇಳಿಮುಖವಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೂರು ದಿನಗಳಿಂದ ಅಬ್ಬರಿಸುತ್ತಿದ್ದ ಮಳೆ ಸ್ವಲ್ಪ ಕಡಿಮೆಯಾಗಿತ್ತು. ಆದರೆ, ಮಲೆನಾಡಿನ ವಿವಿಧೆಡೆ ಮಳೆಯಿಂದ ಹಾನಿ ಮುಂದುವರಿದಿದೆ. ಯಲ್ಲಾಪುರ ಪಟ್ಟಣದಲ್ಲಿ ಮನೆಯ ಚಾವಣಿ ಕುಸಿದು ಮನೆ ಮಾಲೀಕರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಶಿರಸಿ ತಾಲ್ಲೂಕಿನ ಇಳಿಸರದಲ್ಲಿ ವಿದ್ಯುತ್ ತಂತಿ ತುಳಿದು ಎರಡು ಎತ್ತುಗಳು, ಒಂದು ಆಕಳು ಮೃತಪಟ್ಟಿವೆ. ಮುಂಡಗೋಡದಲ್ಲಿ ಮಳೆ ಜೋರಾಗಿತ್ತು.

ಕಲಬುರ್ಗಿ ಮತ್ತು ಬೀದರ್ ಜಿಲ್ಲೆಯ ವಿವಿಧೆಡೆ ಶುಕ್ರವಾರ ಉತ್ತಮ ಮಳೆಯಾಯಿತು. ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಕನಕಪುರ ಗ್ರಾಮದಲ್ಲಿ ಮನೆಯೊಂದರ ಗೋಡೆ ಕುಸಿದಿದೆ.

ಮಳೆ ಮತ್ತು ಬಳ್ಳಾರಿ ನಾಲಾ ಪ್ರವಾಹದಿಂದಾಗಿ ಬೆಳಗಾವಿ ತಾಲ್ಲೂಕಿನ ಯಳ್ಳೂರ ಬಳಿ ನೂರಾರು ಎಕರೆ ಭತ್ತದ ಬೆಳೆ ಮುಳುಗಿದೆ – ಪ್ರಜಾವಾಣಿ ಚಿತ್ರ/ಏಕನಾಥ ಅಗಸಿಮನಿ (ಎಡಚಿತ್ರ) ಸತತ ಮಳೆಯಿಂದ, ಮಡಿಕೇರಿ ತಾಲ್ಲೂಕಿನ ಭಾಗಮಂಡಲದ ತ್ರಿವೇಣಿ ಸಂಗಮದ ಸ್ನಾನಘಟ್ಟವು ಜಲಾವೃತಗೊಂಡಿದೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	87.96	14,775	340
ಹಾರಂಗಿ	2,859	2,833.41	1,186	80
ಕಬಿನಿ	2284	2,271.8	16,400	700
ಹೇಮಾವತಿ	2,922	2,886.92	16,266	200
ಲಿಂಗನಮಕ್ಕಿ	1,819	1,781.45	45,413	-
ಸೂಪಾ (ಮೀ)	560	536.82	12,921	1,023
ಮಾಣಿ	594.36	571.92	9,495	-
ತುಂಗಭದ್ರಾ	1,633	1,591.05	7,113	238
ಮಲಪ್ರಭಾ	2079.50	2,050.40	2,625	194
ಘಟಪ್ರಭಾ	2175	2,101.20	33,732	88
ಭದ್ರಾ	186	146.6	12,598	70
ಆಲಮಟ್ಟಿ (ಮೀ)	519.60	509.650	37,233	451
ನಾರಾಯಣಪುರ	492.25	488.71	237	116

* ನೆಲಮಟ್ಟದಿಂದ

ಗರಿಷ್ಠ ಮಳೆ (ಸೆಂ.ಮೀಗಳಲ್ಲಿ)

ಎಲ್ಲಿ, ಎಷ್ಟು? ಬೆಳಗಾವಿ ಜಿಲ್ಲೆ	
ಕಣಕುಂಬಿ	21.30
ಜಾಂಬೋಟ	17.25
ಲೋಂಡಾ	14.20
ಲೋಂಡಾ ರೈಲು ನಿಲ್ದಾಣ	13.70
ಸದಲಗಾ	13.02
ಗುಂಜಿ	12.05
ಖಾನಾಪುರ	11.02
ಅಸೋಗಾ	10
ಉತ್ತರ ಕನ್ನಡ ಜಿಲ್ಲೆ ಗರಿಷ್ಠಮಳೆ	
ಗೇರುಸೊಪ್ಪ	16.6
ಸಿದ್ದಾಪುರ	14.2
ಹೊನ್ನಾವರ	12.4
ಕುಮಟಾ	10.7
ಜೊಯಿಡಾ	10.2
ಕೊಡಗು ಜಿಲ್ಲೆ	
ಭಾಗಮಂಡಲ	21
ಪೊನ್ನಂಪೇಟೆ	11
ಮಡಿಕೇರಿ	9.3
ಶ್ರೀಮಮಂಗಲ	8.3
ಹಾಸನ ಜಿಲ್ಲೆ	
ಹೆತ್ತೂರು	10
ಹಾನುಬಾಳು	10
ಮಾರನಹಳ್ಳಿ	9.5
ಶುಕ್ರವಾರಸಂತೆ	8
ಚಿಕ್ಕಮಗಳೂರು ಜಿಲ್ಲೆ	
ಕೊಟ್ಟಿಗೆಹಾರ	17.6
ಕಮ್ಮರಡಿ	16.4
ಜಾವಳಿ	14
ಹೊಸಕೆರೆ	12.4
ಉಡುಪಿ ಜಿಲ್ಲೆ	
ಕೋಣಿ	14.4
ದಕ್ಷಿಣ ಕನ್ನಡ ಜಿಲ್ಲೆ	
ಮಲವಂತಿಗೆ	11.4
ಶಿವಮೊಗ್ಗ ಜಿಲ್ಲೆ	
ಯಡೂರು	20.3
ಹುಲಿಕಲ್	17.6
ಆಗುಂಬೆ	15.1

ಸುದ್ದಿ 2 ನಿಮಿಷ

ಮುಂಗಾರು ತೀವ್ರ: 10 ಜಿಲ್ಲೆಗಳಲ್ಲಿ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ತೀವ್ರಗೊಂಡಿರುವುದರಿಂದ ಕರಾವಳಿ ಹಾಗೂ ಒಳನಾಡಿನ ಜಿಲ್ಲೆಗಳಲ್ಲಿ ಜೂ. 21ರವರೆಗೆ ಭಾರಿ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಜೂ.19ರಂದು ಧಾರಾಕಾರ ಮಳೆಯಾಗುವ ಸಾಧ್ಯತೆ ಇರುವುದರಿಂದ ‘ರೆಡ್ ಅಲರ್ಟ್’ ಘೋಷಿಸಲಾಗಿದೆ. ಕರಾವಳಿಯಲ್ಲಿ ಗಂಟೆಗೆ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, ಗರಿಷ್ಠ 4.8 ಮೀಟರ್‌ಗಳಷ್ಟು ಎತ್ತರದ ಅಲೆಗಳು ಏಳುತ್ತಿರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು’ ಎಂದೂ ಇಲಾಖೆ ಎಚ್ಚರಿಸಿದೆ.

‘ಒಳನಾಡಿನ ಜಿಲ್ಲೆಗಳಲ್ಲೂ ಮುಂದಿನ ಎರಡು ದಿನ ವ್ಯಾಪಕ ಮಳೆಯಾಗಲಿದ್ದು, ಈ ಭಾಗದ ಶಿವಮೊಗ್ಗ, ಕೊಡಗು, ಹಾಸನ, ಚಿಕ್ಕಮಗಳೂರಿನಲ್ಲಿ ‘ಆರೆಂಜ್ ಅಲರ್ಟ್’ ಹಾಗೂ ಹಾವೇರಿ, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗಬಹುದು’ ಎಂದು ಮಾಹಿತಿ ನೀಡಿದೆ.

ನದಿಯಲ್ಲಿ ಕೊಚ್ಚಿ ಹೋದ ರೈತ

ಬೆಳಗಾವಿ: ತಾಲ್ಲೂಕಿನ ಮಾರ್ಕಂಡೇಯ ನದಿಯ ಪ್ರವಾಹದಲ್ಲಿ ರೈತರೊಬ್ಬರು ಕೊಚ್ಚಿಕೊಂಡು ಹೋದ ಘಟನೆ ಶುಕ್ರವಾರ ನಡೆದಿದೆ. ಅವರನ್ನು ಕಾಕತಿ ಗ್ರಾಮದ ಸಿದ್ರಾಯಿ ಸುತಗಟ್ಟ (65) ಎಂದು ಗುರುತಿಸಲಾಗಿದೆ.

ಜಮೀನಿನಲ್ಲಿ ಕೆಲಸ ಮುಗಿಸಿ ವಾಪಸಾಗುವಾಗ ನದಿಯ ಸೇತುವೆ ಬಳಿ ಕೈ ಕಾಲು ತೊಳೆಯಲು ಹೋಗಿದ್ದಾರೆ. ಈ ವೇಳೆ ಕಾಲು ಜಾರಿ ಬಿದ್ದು ನೀರಿನ ಸೆಳೆತಕ್ಕೆ ಕೊಚ್ಚಿಕೊಂಡು ಹೋಗಿದ್ದಾರೆ ಎಂದು ತಿಳಿದುಬಂದಿದೆ.

ಸ್ಥಳಕ್ಕೆ ಬೆಳಗಾವಿ ಉಪವಿಭಾಗಾಧಿಕಾರಿ ರವೀಂದ್ರ ಕರಲಿಂಗನವರ ಹಾಗೂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕತ್ತಲಾದ್ದರಿಂದ ಶೋಧ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ ಎಂದು ತಿಳಿದುಬಂದಿದೆ.

12 ದಿನಗಳಲ್ಲಿ ಕೋವಿಡ್ ಆರೈಕೆ ಕೇಂದ್ರದ ನಿರ್ಮಾಣ

ಮೈಸೂರು: ಸರಗೂರು ಪಟ್ಟಣದಲ್ಲಿರುವ ಸ್ವಾಮಿವಿವೇಕಾನಂದ ಯೂತ್ ಮೂವ್‌ಮೆಂಟ್‌ನ ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಆವರಣದಲ್ಲಿ, ಕೋವಿಡ್ ರೋಗಿಗಳ ಆರೈಕೆಗಾಗಿ ಪ್ರತ್ಯೇಕ ಕೇಂದ್ರ ತಲೆ ಎತ್ತಿದ್ದು, ಇದನ್ನು 12 ದಿನಗಳಲ್ಲಿ ನಿರ್ಮಿಸಲಾಗಿದೆ.

ಇದೇ 20ರಂದು ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ ಎಂದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಕುಮಾರ್, ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎನ್‌ಇಪಿ ಕರಡು ಸಮಿತಿ ಅಧ್ಯಕ್ಷ ಡಾ. ಕಸ್ತೂರಿ ರಂಗನ್ ಸಲಹೆ

ಎಂಜಿನಿಯರಿಂಗ್: ಪಿಬಿಎಲ್ ಅಳವಡಿಕೆಗೆ ಸಕಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿ ಜತೆ ಜತೆಗೇ ಪ್ರಮುಖವಾಗಿ ಎಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಸಮಸ್ಯಾ ಪರಿಹಾರ ಕಲಿಕಾ ಪದ್ಧತಿ (ಪಿಬಿಎಲ್) ಅಳವಡಿಸಲು ಇದು ಸಕಾಲ’ ಎಂದು ರಾಷ್ಟ್ರೀಯ ಶಿಕ್ಷಣ ನೀತಿ ಕರಡು ಸಮಿತಿಯ ಅಧ್ಯಕ್ಷ ಡಾ.ಕೆ. ಕಸ್ತೂರಿ ರಂಗನ್ ಸಲಹೆ ನೀಡಿದರು.

ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕಲಿಕಾ ಪದ್ಧತಿ ಕುರಿತು ಶುಕ್ರವಾರ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ವಿದ್ಯಾರ್ಥಿಗಳು ಪಠ್ಯ ಜ್ಞಾನದ ಜೊತೆಗೆ ವಾಸ್ತವ ಬದುಕಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದನ್ನೂ ಕಲಿಯಬೇಕಾಗಿದೆ. ಈ ನಿಟ್ಟಿನಲ್ಲಿ ಅವರನ್ನು ಉತ್ತೇಜಿಸುವ, ಭಾವನಾತ್ಮಕ, ಸೃಜನಾತ್ಮಕ ಮತ್ತು ನೈತಿಕ ಮೌಲ್ಯಗಳನ್ನೂ ಬೆಳೆಸುವ ಶಿಕ್ಷಣ ದೊರೆಯಬೇಕೆಂದರೆ ಪಿಬಿಎಲ್ ಅಳವಡಿಸಿಕೊಳ್ಳಬೇಕು’ ಎಂದರು.

‘ಎನ್‌ಇಪಿಯು ಕರ್ನಾಟಕದಲ್ಲಿ ಅತ್ಯಂತ ವೇಗವಾಗಿ ಜಾರಿಯಾಗುತ್ತಿದೆ. ಕೇಂದ್ರ ಸರ್ಕಾರ ಈ ನೀತಿಯನ್ನು ಪ್ರಕಟಿಸಿದ ಮೊದಲ ದಿನದಿಂದಲೇ ರಾಜ್ಯಸರ್ಕಾರ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ’ ಎಂದು ಅವರು ಶ್ಲಾಘಿಸಿದರು.

‘21ನೇ ಶತಮಾನದಲ್ಲಿ ಕರ್ನಾಟಕ ಸೇರಿ ಇಡೀ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತವೆ. ಆ ನಿಟ್ಟಿನಲ್ಲಿ ರಾಜ್ಯವು ಮುಂಚೂಣಿಯಲ್ಲಿದೆ’ ಎಂದರು.

ಯುನೆಸ್ಕೊ ಉತ್ಸುಕ: ‘ಯಾವುದೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ತಾಂತ್ರಿಕ ಮತ್ತು ಆವಿಷ್ಕಾರ ಆಧಾರಿತ ಶಿಕ್ಷಣ ಪದ್ಧತಿ ಜಾರಿಗೆ ಭಾರತದೊಂದಿಗೆ ಕೈ ಜೋಡಿಸಲು ಯುನೆಸ್ಕೊ ಉತ್ಸುಕವಾಗಿದೆ’ ಎಂದು ಯುನೆಸ್ಕೊದ ‘ಸಮಸ್ಯೆಗೆ ಪರಿಹಾರ ಕಲ್ಪಿಸುವ ಕಲಿಕಾ ಶಿಕ್ಷಣ ವಿಭಾಗ’ದ ಮುಖ್ಯಸ್ಥೆ ಪ್ರೊ.ಅನೆಟ್ ಕೊಲ್ಮಾಸ್ ಹೇಳಿದರು.

‘ನಾವು ಪಡೆಯುವ ಅಥವಾ ಬೋಧಿಸುವ ಶಿಕ್ಷಣ ಸಮಸ್ಯೆಗಳನ್ನು ಪರಿಹರಿಸುವ ಉದ್ದೇಶ ಹೊಂದಿರಬೇಕಾದುದು ಇಂದಿನ ತುರ್ತು ಅಗತ್ಯ. ಈ ನಿಟ್ಟಿನಲ್ಲಿ ತಾಂತ್ರಿಕ ಮತ್ತು ಆವಿಷ್ಕಾರ ಶಿಕ್ಷಣಕ್ಕೆ ಯುನೆಸ್ಕೊ ಹೆಚ್ಚು ಒತ್ತು ನೀಡುತ್ತಿದೆ’ ಎಂದರು.

ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ತಿಮ್ಮೇಗೌಡ, ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲ ಜೋಷಿ ಸೇರಿದಂತೆ ದೇಶ- ವಿದೇಶಗಳ ತಜ್ಞರು ಭಾಗವಹಿಸಿದ್ದರು.

ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮತ್ತು ಡೆನ್ಮಾರ್ಕ್‌ನ ಅಲ್ಬೋರ್ಗ್ ವಿಶ್ವವಿದ್ಯಾಲಯದ ಯುನೆಸ್ಕೊ ಸೆಂಟರ್ ಫಾರ್ ಪ್ರಾಬ್ಲಮ್ ಬೇಸ್ಡ್ ಲರ್ನಿಂಗ್ ಇನ್ ಎಂಜಿನಿಯರಿಂಗ್ ಸೈನ್ಸ್ ಮತ್ತು ಸಸ್ಟೈನೆಬಿಲಿಟಿ ಸಹಯೋಗದಲ್ಲಿ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು.

ಪುಸ್ತಕ ಜ್ಞಾನ ಮತ್ತು ವಾಸ್ತವ ಬದುಕಿನ ಮಧ್ಯದ ಅಂತರ ಕಡಿಮೆ ಮಾಡುವ ಸಲುವಾಗಿ ಹೊಸ ಕಲಿಕಾ ಪದ್ಧತಿಗಳನ್ನು ಅಳವಡಿಸಲು ರಾಜ್ಯ ಸರ್ಕಾರ ಬದ್ಧ

ಡಾ. ಸಿ.ಎನ್. ಅಶ್ವತ್ಥನಾರಾಯಣ
ಉನ್ನತ ಶಿಕ್ಷಣ ಸಚಿವ

ವಿವಾದಕ್ಕೆ ಕಾರಣವಾದ ಟಿಪ್ಪು ಸುಲ್ತಾನ್ ಪ್ರತಿಮೆ ಸ್ಥಾಪನೆ ಯೋಜನೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ಕಡಪ ಜಿಲ್ಲೆಯ ಪ್ರೊದ್ದಟೂರು ಪಟ್ಟಣದಲ್ಲಿ ಟಿಪ್ಪು ಸುಲ್ತಾನ್ ಪ್ರತಿಮೆ ಪ್ರತಿಷ್ಠಾಪನೆ ವಿಷಯ ಈಗ ವಿವಾದಕ್ಕೆ ಕಾರಣವಾಗಿದೆ.

ಪಟ್ಟಣದ ಮುಸ್ಲಿಂ ಸಮುದಾಯದ ಬೇಡಿಕೆಗೆ ಸ್ಪಂದಿಸಿ, ಟಿಪ್ಪು ಸುಲ್ತಾನ್ ಪ್ರತಿಮೆಯನ್ನು ಪ್ರತಿಷ್ಠಾಪಿಸಲು ವೈಎಸ್‌ಆರ್ ಕಾಂಗ್ರೆಸ್ ಶಾಸಕ ರಾಚಮಲ್ಲು ಶಿವಪ್ರಸಾದ್ ರೆಡ್ಡಿ ಮುಂದಾಗಿದ್ದಾರೆ. ಈ ಸಂಬಂಧ ಶಂಕುಸ್ಥಾಪನೆಯನ್ನು ಸಹ ನೆರವೇರಿಸಲಾಗಿದೆ. ಆದರೆ, ಇದಕ್ಕೆ ಸ್ಥಳೀಯರು ಹಾಗೂ ಬಿಜೆಪಿ ಮುಖಂಡರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಸಿ.ಡಿ ಪ್ರಕರಣ: ಸಂತ್ರಸ್ತೆಯಿಂದ ಮಧ್ಯಂತರ ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ಸಂತ್ರಸ್ತೆ ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ(ಐಎ) ಸಲ್ಲಿಸಿದ್ದು, ವಿಭಾಗೀಯ ಪೀಠ ನಡೆಸುತ್ತಿರುವ ವಿಚಾರಣೆಯಲ್ಲಿ ತಮ್ಮನ್ನು ಒಳಗೊಳ್ಳುವಂತೆ ಕೋರಿದ್ದಾರೆ.

ಅರ್ಜಿ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಜೂ.23ಕ್ಕೆ ವಿಚಾರಣೆ ಮುಂದೂಡಿತು.

‘ಏಕ ಸದಸ್ಯ ಪೀಠದ ಮುಂದೆ ಸಲ್ಲಿಸಿರುವ ಎಲ್ಲಾ ಅರ್ಜಿಗಳನ್ನು ಒಟ್ಟಿಗೆ ವಿಚಾರಣೆ ನಡೆಸಬೇಕು’ ಎಂದು ಅರ್ಜಿದಾರರ ಪರ ವಕೀಲರಾದ ಇಂದಿರಾ ಜೈಸಿಂಗ್ ಕೋರಿದರು.

‘ವಿಶೇಷ ತನಿಖಾ ತಂಡ(ಎಸ್‌ಐಟಿ) ಸ್ವತಂತ್ರವಾಗಿ ತನಿಖೆ ನಡೆಸುತ್ತಿಲ್ಲ. ಹೀಗಾಗಿ, ಹೈಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು’ ಎಂದು ಸಂತ್ರಸ್ತೆ ಈ ಹಿಂದೆ ಅರ್ಜಿ ಸಲ್ಲಿಸಿದ್ದರು.

ಕ್ರಿಶ್ಚಿಯನ್ ಮೈಕೆಲ್ ಜಾಮೀನು ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ): ಅಗಸ್ಟಾವೆಸ್ಟ್‌ಲ್ಯಾಂಡ್ ಹಗರಣದಲ್ಲಿ ಮಧ್ಯವರ್ತಿಯಾಗಿದ್ದ ಆರೋಪ ಎದುರಿಸುತ್ತಿರುವ ಕ್ರಿಶ್ಚಿಯನ್ ಮೈಕೆಲ್ ಅವರ ಜಾಮೀನು ಅರ್ಜಿಯನ್ನು ದೆಹಲಿ ಕೋರ್ಟ್ ಶುಕ್ರವಾರ ತಿರಸ್ಕರಿಸಿತು.

ಎಸ್ಸೆಸ್ಸೆಲ್ಸಿ ಪರೀಕ್ಷೆ: ಇಲಾಖೆಯಿಂದಲೇ ಮಾಸ್ಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬದಲಾದ ಮಾದರಿಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ಮುಂದಾಗಿರುವ ಸಾರ್ವಜನಿಕ ಶಿಕ್ಷಣ ಇಲಾಖೆ, ಈ ಕುರಿತು ಶುಕ್ರವಾರ ಅಧಿಕೃತ ಆದೇಶ ಹೊರಡಿಸಿದೆ.

ಆರು ಪತ್ರಿಕೆಗಳ ಬದಲಿಗೆ, ಎರಡು ಪತ್ರಿಕೆಗಳ ಮೂಲಕ ಪರೀಕ್ಷೆ ನಡೆಯಲಿದೆ. ಮುಖ್ಯ ವಿಷಯಗಳ ಒಂದು ಪತ್ರಿಕೆ, ಭಾಷಾ ವಿಷಯಗಳ ಮತ್ತೊಂದು ಪತ್ರಿಕೆ ಇರಲಿದ್ದು, ಪ್ರತಿ ವಿಷಯಕ್ಕೆ ತಲಾ 40 ಅಂಕಗಳನ್ನು ನಿಗದಿ ಪಡಿಸಲಾಗಿದೆ.

‘ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮದ ಶಾಲೆಗಳಲ್ಲಿ ಪೂರ್ವಸಿದ್ಧತಾ ಪರೀಕ್ಷೆ ನಡೆಸಲಾಗಿತ್ತು. ಆದರೆ, ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳು ಪೂರ್ವಸಿದ್ಧತಾ ಪರೀಕ್ಷೆಗಳನ್ನೂ ಬರೆದಿಲ್ಲ. ಹೀಗಾಗಿ, ಮುಖ್ಯ ಪರೀಕ್ಷೆಯನ್ನು ನಡೆಸಬೇಕಾಗಿದೆ’ ಎಂದೂ ಇಲಾಖೆ ಹೇಳಿದೆ.

‘ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳು ಮತ್ತು ಪರೀಕ್ಷಾ ಕಾರ್ಯದಲ್ಲಿ ತೊಡಗುವ ಶಿಕ್ಷಕರು, ಮೌಲ್ಯಮಾಪಕರು ಹಾಗೂ ಅಧಿಕಾರಿಗಳಿಗೆ ಇಲಾಖೆಯಿಂದಲೇ ಮಾಸ್ಕ್ ವಿತರಿಸಲಾಗುತ್ತದೆ. ಈ ಸಂಬಂಧ ಸುಮಾರು 1 ಲಕ್ಷ ಸಿಬ್ಬಂದಿ, 8.77 ಲಕ್ಷ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 9.77 ಲಕ್ಷ ಎನ್–95 ಮಾಸ್ಕ್‌ಗಳಿಗೆ ತಗುಲುವ ವೆಚ್ಚವನ್ನು ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ನಿಧಿಯಿಂದ ಭರಿಸಲು ಸರ್ಕಾರದ ಅನುಮತಿ ನೀಡಬೇಕು’ ಎಂದೂ ಇಲಾಖೆ ಹೇಳಿದೆ.

ವಿಜಯೇಂದ್ರ ಪೂಜೆ: ರಾಜಕಾರಣಿಗಳ ಕಣ್ತೆರೆಸುವ ಅಗತ್ಯವಿದೆ– ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮಗ ಬಿ.ವೈ. ವಿಜಯೇಂದ್ರ ಅವರು ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ನಂಜನಗೂಡಿನ ದೇವಸ್ಥಾನಕ್ಕೆ ಭೇಟಿ ನೀಡಿದ್ದ ಪ್ರಕರಣದಲ್ಲಿ ಅಧಿಕಾರಿಗಳು ಮತ್ತು ರಾಜಕಾರಣಿಗಳ ಕಣ್ತೆರೆಸುವ ಅಗತ್ಯವಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಮೈಸೂರು ಜಿಲ್ಲಾಧಿಕಾರಿ ಸಲ್ಲಿಸಿದ್ದ ವರದಿ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ‘ದೇವಸ್ಥಾನಕ್ಕೆ ಪ್ರವೇಶ ನಿಷೇಧ ನಿಯಮಗಳನ್ನು ಉಲ್ಲಂಘಿಸದಂತೆ ಮುಜರಾಯಿ ಇಲಾಖೆಗೆ ಸೂಚನೆ ನೀಡಬೇಕು’ ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು.

ನಿಷೇಧ ಇದ್ದರೂ ದೇವಾಲಯಕ್ಕೆ ವಿಜಯೇಂದ್ರ ಪ್ರವೇಶಿಸಿದ್ದಾರೆ ಎಂಬುದನ್ನು ಜಿಲ್ಲಾಧಿಕಾರಿ ವರದಿಯಲ್ಲಿ ಒಪ್ಪಿಕೊಳ್ಳಲಾಗಿದೆ. ವಿಜಯೇಂದ್ರ ಅವರಿಗೆ ವಿಶೇಷ ದರ್ಶನದ ವ್ಯವಸ್ಥೆ ಮಾಡಿರಲಿಲ್ಲ ಎಂದು ದೇಗುಲದ ಕಾರ್ಯನಿರ್ವಹಣಾ ಅಧಿಕಾರಿ ಹೇಳಿಕೆ ನೀಡಿರುವ ಅಂಶವನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ನಿಯಮ ಉಲ್ಲಂಘಿಸಿದ ವ್ಯಕ್ತಿ ನ್ಯಾಯಾಲಯದಲ್ಲಿ ಇಲ್ಲ. ಆದರೂ ಅವರು ಜಿಲ್ಲಾಧಿಕಾರಿ ವರದಿಯಲ್ಲಿ ನೀಡಿರುವ ಹೇಳಿಕೆ ಗಮನಿಸಬೇಕಾಗಿದೆ’ ಎಂದು ಪೀಠ ಹೇಳಿತು.

‘ವಿಪತ್ತು ನಿರ್ವಹಣಾ ಕಾಯ್ದೆಯಡಿ ರಾಜ್ಯ ಮಟ್ಟದ ಕಾರ್ಯಕಾರಿ ಸಮಿತಿ ಹೊರಡಿಸುವ ಆದೇಶಗಳನ್ನು ಎಲ್ಲರೂ ಪಾಲಿಸಬೇಕು. ದೇಗುಲಗಳನ್ನು ಮುಚ್ಚಬೇಕು ಎಂಬ ಆದೇಶ ಪಾಲನೆಯಲ್ಲಿ ಯಾರಿಗೂ ವಿನಾಯಿತಿ ಇರಬಾರದು. ಆದೇಶ ಉಲ್ಲಂಘನೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆಯೇ ಎಂಬುದನ್ನು ಖಚಿತಪಡಿಸಬೇಕು ಎಂಬ ನಿರ್ದೇಶನವನ್ನು ಮುಜರಾಯಿ ಇಲಾಖೆಗೆ ನೀಡಬೇಕು’ ಎಂದು ಪೀಠ ಸರ್ಕಾರಕ್ಕೆ ಆದೇಶಿಸಿತು.

ಅಮಿತ್ ಶಾ ಭೇಟಿ: ವರದಿ ಸಲ್ಲಿಕೆಗೆ ಸೂಚನೆ

ಬೆಳಗಾವಿಯಲ್ಲಿ ಜನವರಿ 17ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭಾಗವಹಿಸಿದ್ದ ಸಮಾವೇಶಕ್ಕೆ ಸಂಬಂಧಿಸಿದ ತನಿಖಾ ವರದಿಯನ್ನು ಜುಲೈ 19ರೊಳಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಬೆಳಗಾವಿ ಪೊಲೀಸ್ ಕಮಿಷನರ್‌ಗೆ ಪೀಠ ನಿರ್ದೇಶನ ನೀಡಿತು.

ವಿಐಟಿ: 9,381 ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಲ್ಲೋರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ಸಂಸ್ಥೆಯಲ್ಲಿ 2021ನೇ ಸಾಲಿನಲ್ಲಿ ಪದವೀಧರರಾದ ಅಭ್ಯರ್ಥಿಗಳಿಗೆ ನಡೆದ ಕ್ಯಾಂಪಸ್ ನೇಮಕಾತಿ ಕಾರ್ಯಕ್ರಮದಲ್ಲಿ 740 ಕಂಪನಿಗಳು ಭಾಗವಹಿಸಿದ್ದು, ಒಟ್ಟು 9,381 ಅಭ್ಯರ್ಥಿಗಳಿಗೆ ಉದ್ಯೋಗ ನೀಡಿದ್ದು, ನೇಮಕಾತಿ ಆದೇಶವನ್ನು ನೀಡಿವೆ.

ಸತತ ಮೂರನೇ ವರ್ಷದಲ್ಲಿ 700ಕ್ಕೂ ಅಧಿಕ ಕಂಪನಿಗಳು ವಿಐಟಿ ಕ್ಯಾಂಪಸ್‌ಗೆ ಭೇಟಿ ನೀಡಿವೆ. ವಿಐಟಿ ಸ್ಥಾಪನೆ ಆದಂದಿನಿಂದ ಗರಿಷ್ಠ ಸಂಖ್ಯೆಯಲ್ಲಿ ಉದ್ಯೋಗ ನೇಮಕಾತಿ ಆಗಿರುವುದು ಇದೇ ಮೊದಲು. ಕೋವಿಡ್ ಸಂದರ್ಭದಲ್ಲಿಯೂ ಇಷ್ಟು ಸಂಖ್ಯೆಯಲ್ಲಿ ನೇಮಕಾತಿ ಆಗಿರುವುದು ಒಂದು ದಾಖಲೆಯಾಗಿದೆ ಎಂದುವಿಐಟಿ ಸ್ಥಾಪಕ ಮತ್ತು ಕುಲಪತಿ ಡಾ.ಜಿ. ವಿಶ್ವನಾಥನ್ ತಿಳಿಸಿದ್ದಾರೆ.

ವಿಐಟಿಯ ಎಲ್ಲ ನಾಲ್ಕು ಅಂದರೆ ವೆಲ್ಲೋರ್, ಚೆನ್ನೈ, ಅಮರಾವತಿ (ಆಂಧ್ರಪ್ರದೇಶ) ಮತ್ತು ಭೋಪಾಲ್ (ಮಧ್ಯಪ್ರದೇಶ) ಕ್ಯಾಂಪಸ್‌ಗಳ ವಿದ್ಯಾರ್ಥಿಗಳು ಈ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಭೋಪಾಲ್ ಮತ್ತು ಅಮರಾವತಿ ಕ್ಯಾಂಪಸ್‌ನಲ್ಲಿ ಇದೇ ಮೊದಲ ಬಾರಿಗೆ ನೇಮಕಾತಿ ಅಭಿಯಾನ ನಡೆದಿದ್ದು, ಶೇ 90ರಷ್ಟು ಅಭ್ಯರ್ಥಿಗಳು ಉನ್ನತ ಬಹುರಾಷ್ಟ್ರೀಯ ಕಂಪನಿಗಳಿಗೆ ಆಯ್ಕೆಯಾದರು ಎಂದು ಅವರು ಹೇಳಿದ್ದಾರೆ.

₹ 10 ಲಕ್ಷಕ್ಕೂ ಅಧಿಕ ವೇತನ:

ಒಟ್ಟು 1,132 ವಿದ್ಯಾರ್ಥಿಗಳಿಗೆ ಸೂಪರ್ ಡ್ರೀಮ್ ಅವಕಾಶ ಲಭಿಸಿದ್ದು, ವಾರ್ಷಿಕ ₹ 10 ಲಕ್ಷಕ್ಕೂ ಅಧಿಕ ವೇತನ ನಿಗದಿಯಾಗಿದೆ. ಮೈಕ್ರೊಸಾಫ್ಟ್, ಅಮೆಜಾನ್, ಪೇಪಾಲ್, ಡಿ.ಇ. ಶಾ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಮಾರ್ಗನ್ ಸ್ಟ್ಯಾನ್ಲಿ, ಆ್ಯಪ್ ಡೈನಮಿಕ್ಸ್, ಉಡಾನ್, ವರ್ಕ್ ಇಂಡಿಯಾ, ಸಿಸ್ಕೊ, ಬಜಾಜ್ ಆಟೊ, ಶೆಲ್, ಅಪ್ಟಂ, ವಾಲ್‌ಮಾರ್ಟ್ ಲ್ಯಾಬ್ಸ್, ಕೌಡೇರಿಯಾ, ಅಮೆಡೆಸ್ ಲ್ಯಾಬ್ಸ್, ಆ್ಯಪಲ್ ವೆಲ್ಸ್ ಫಾರ್ಗೊ ಕಂಪನಿಗಳು ಈ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡಿವೆ. ಈ ಪೈಕಿ ಏಳು ವಿದ್ಯಾರ್ಥಿಗಳು ಮೈಕ್ರೊಸಾಫ್ಟ್‌ನಿಂದ ಗರಿಷ್ಠ ಅಂದರೆ ವಾರ್ಷಿಕ ₹ 44 ಲಕ್ಷ ವೇತನ ಪ್ಯಾಕೆಜ್ ಪಡೆದುಕೊಂಡರು.

ಡ್ರೀಮ್ ಇಂಟರ್ನ್‌ಷಿಪ್ ಮತ್ತು ಪ್ಲೇಸ್‌ಮೆಂಟ್ ಅವಕಾಶವು ವಾರ್ಷಿಕ ₹ 5.5 ಲಕ್ಷ ವೇತನದೊಂದಿಗೆ 2,353 ವಿದ್ಯಾರ್ಥಿಗಳಿಗೆ ಲಭಿಸಿದ್ದು, ಡೆಲೊಟಿ, ಕೆಪಿಎಂಜಿ, ಸ್ಟಾಂಡರ್ಡ್ ಚಾರ್ಟರ್ಡ್, ಆ್ಯಕ್ಸಿಸ್ ಬ್ಯಾಂಕ್, ಪಿಡಬ್ಲ್ಯುಸಿ, ಸೆರ್ನರ್ ಇನ್ನಿತರ ಕಂಪನಿಗಳು ಅವಕಾಶ ನೀಡಿವೆ. ಅಲ್ಲದೆ, ಎಲ್‌&ಟಿ ಕನ್ಸಸ್ಟ್ರಕ್ಷನ್, ಅಲ್‌ಸ್ಟೊಂ, ಹಿಂದೂಸ್ತಾನ್ ಲಿವರ್, ಫೋರ್ಡ್ ಮೋಟರರ್, ವಾಲೆಯೊ ಸೇರಿದಂತೆ ಹಲವು ಕಂಪನಿಗಳು ಈ ಕೊಡುಗೆ ನೀಡಿವೆ.

2022ನೇ ಸಾಲಿನಲ್ಲಿ ಪದವೀಧರರಾಗುವ ವಿಐಟಿ ಪದವಿ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗಾಗಿ ಕ್ಯಾಂಪಸ್ ನೇಮಕಾತಿ ಪ್ರಕ್ರಿಯೆ ಜುಲೈ 2021ರಲ್ಲಿ ಆರಂಭವಾಗಲಿದೆ ಎಂದು ಕುಲಪತಿ ಡಾ.ಜಿ.ವಿಶ್ವನಾಥನ್ ತಿಳಿಸಿದ್ದಾರೆ.

118 ಎಇಇಗಳು ಜಲ ಸಂಪನ್ಮೂಲದಲ್ಲೇ ಮುಂದುವರಿಯಲಿ: ಸಿ.ಎಂಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲ ಸಂಪನ್ಮೂಲ ಇಲಾಖೆಯಿಂದ ಲೋಕೋಪಯೋಗಿ ಇಲಾಖೆಗೆ ಹಿಂದಿರುಗಿಸಿರುವ 118 ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳನ್ನು (ಎಇಇ) ಅದೇ ಇಲಾಖೆಯಲ್ಲಿ ಮುಂದುವರಿಸುವಂತೆ ಕೋರಿ ಲೋಕೋಪಯೋಗಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಗೋವಿಂದ ಎಂ. ಕಾರಜೋಳ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

ಲೋಕೋಪಯೋಗಿ, ಜಲ ಸಂಪನ್ಮೂಲ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ನಡುವೆ ಎಂಜಿನಿಯರ್‌ಗಳ ಹಂಚಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ನಡುವೆಯೇ ಯಾವುದೇ ಪೂರ್ವಭಾವಿ ಮಾಹಿತಿ ನೀಡದೆ 118 ಎಇಇಗಳ ಸೇವೆಯನ್ನು ಲೋಕೋಪಯೋಗಿ ಇಲಾಖೆಗೆ ಹಿಂದಿರುಗಿಸಿ ಮೇ 27ರಂದು ಆದೇಶ ಹೊರಡಿಸಿರುವ ಜಲ ಸಂಪನ್ಮೂಲ ಇಲಾಖೆಯ ನಿಲುವನ್ನು ಗೋವಿಂದ ಕಾರಜೋಳ ಆಕ್ಷೇಪಿಸಿದ್ದಾರೆ.

’ಈಗಾಗಲೇ ಲೋಕೋಪಯೋಗಿ ಇಲಾಖೆಯಲ್ಲಿ ವೃಂದ ಬಲಕ್ಕಿಂತ ಹೆಚ್ಚಿನ ಎಂಜಿನಿಯರ್‌ಗಳು ಇದ್ದಾರೆ. ಯಾವುದೇ ಇಲಾಖೆಯನ್ನು ಆಯ್ಕೆಮಾಡಿಕೊಳ್ಳದ ಎಲ್ಲರೂ ಲೋಕೋಪಯೋಗಿ ಇಲಾಖೆಯಲ್ಲೇ ಮುಂದುವರಿದಿದ್ದಾರೆ. ಈ ಹಂತದಲ್ಲಿ 118 ಎಇಇಗಳಿಗೆ ಸ್ಥಳ ನಿಯುಕ್ತಿಗೊಳಿಸಲು ಹುದ್ದೆಗಳು ಲಭ್ಯವಿಲ್ಲ. ಆದ್ದರಿಂದ ಅವರನ್ನು ಜಲ ಸಂಪನ್ಮೂಲ ಇಲಾಖೆಯ ಸೇವೆಯಲ್ಲೇ ಮುಂದುವರಿಸಬೇಕು’ ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಮೂರೂ ಇಲಾಖೆಗಳ ವೃಂದ ಬಲಕ್ಕೆ ಅನುಗುಣವಾಗಿ ಅಧಿಕಾರಿಗಳನ್ನು ಹಂಚಿಕೆ ಮಾಡಬೇಕಿದೆ. ಬ್ಯಾಕ್‌ಲಾಗ್ ಎಂಜಿನಿಯರ್‌ಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳು ಇವೆ. ಮೂರೂ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳು ಮತ್ತು ಭರ್ತಿಯಾಗಿರುವ ಹುದ್ದೆಗಳ ಸಮಗ್ರ ಮಾಹಿತಿ ಕಲೆಹಾಕಿದ ಬಳಿಕ ಅಧಿಕಾರಿಗಳ ಹಂಚಿಕೆ ಪೂರ್ಣಗೊಳಿಸಲು ನಿರ್ಧರಿಸಲಾಗಿತ್ತು. ತಜ್ಞರ ಸಮಿತಿಯ ತೀರ್ಮಾನಕ್ಕೆ ವಿರುದ್ಧವಾಗಿ 118 ಎಇಇಗಳ ಸೇವೆಯನ್ನು ಹಿಂದಿರುಗಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

180 ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ನೀಡುವ ಸಂಕಲ್ಪ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಸಾಣೇಹಳ್ಳಿ ಮಠದ ಶಾಲೆಗೆ ಉಚಿತ ಪ್ರವೇಶ

ಪ್ರಜಾವಾಣಿ ವಾರ್ತೆ

ಸಾಣೇಹಳ್ಳಿ (ಹೊಸದುರ್ಗ): ತಾಲ್ಲೂಕಿನ ಸಾಣೇಹಳ್ಳಿ ತರಳಬಾಳು ಶಾಖಾ ಮಠದ ಆಶ್ರಯದಲ್ಲಿ ನಡೆಯುತ್ತಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಈ ಬಾರಿ ಉಚಿತ ಪ್ರವೇಶ ನೀಡಲಾಗುವುದು.

‘2 ವರ್ಷಗಳಿಂದ ಸತತವಾಗಿ ಕಾಡುತ್ತಿರುವ ಕೋವಿಡ್ ಎಲ್ಲ ಕ್ಷೇತ್ರಗಳನ್ನು ಹೈರಾಣಾಗಿಸಿದೆ. ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದ ಅನೇಕ ಕುಟುಂಬಗಳು ಸೂಕ್ತ ವರಮಾನವಿಲ್ಲದೇ ಒಂದು ಹೊತ್ತಿನ ಊಟಕ್ಕೂ ಪರದಾಡುವಂತಾಗಿದೆ. ಹೀಗಾಗಿ ಶ್ರೀಮಠವನ್ನು ಆಶ್ರಯಿಸಿ ಬರುವವರ ಸಂಖ್ಯೆಯೂ ಹೆಚ್ಚಾಗಿದೆ. ಅದರಲ್ಲೂ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಇಂಗಿತವನ್ನು ವ್ಯಕ್ತಪಡಿಸುವವರ ಸಂಖ್ಯೆ ಹೆಚ್ಚುತ್ತಿದೆ. ಹೀಗಾಗಿ ನಮ್ಮಲ್ಲಿರುವ ಭೌತಿಕ ಮತ್ತು ಮಾನವ ಸಂಪನ್ಮೂಲಗಳನ್ನು ದೃಷ್ಟಿಯಲ್ಲಿಟ್ಟುಕೊಂಡು 5ರಿಂದ 10ನೇ ತರಗತಿಯವರೆಗಿನ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಪ್ರತಿ ತರಗತಿಗೆ 30 ವಿದ್ಯಾರ್ಥಿಗಳಂತೆ 180 ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ನೀಡುವ ಸಂಕಲ್ಪ ಮಾಡಿದ್ದೇವೆ’ ಎಂದು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಈಗಾಗಲೇ ₹ 30 ಲಕ್ಷ ವೆಚ್ಚದಲ್ಲಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಬಾಲಕಿಯರ ಮತ್ತು ಬಾಲಕರ ವಿದ್ಯಾರ್ಥಿ ನಿಲಯಗಳನ್ನು ದುರಸ್ತಿ ಮಾಡಿಸಿ ಸುಣ್ಣ, ಬಣ್ಣ ಮಾಡಿಸಲಾಗಿದೆ. ಶೈಕ್ಷಣಿಕ ಪ್ರಗತಿಗೆ ಸಿಬ್ಬಂದಿ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಕೈಲಾದ ಮಟ್ಟಿಗೆ ನೆರವಾಗುವುದು ಎಲ್ಲರ ಆದ್ಯ ಕರ್ತವ್ಯ. ಹೀಗಾಗಿ ಎಂದಿನಂತೆ ಮಠದ ಭಕ್ತರು, ಅನುಯಾಯಿ, ಅಭಿಮಾನಿಗಳು, ಹಳೆಯ ವಿದ್ಯಾರ್ಥಿಗಳು ಮೊದಲಾದವರೆಲ್ಲರೂ ಹಣದ ರೂಪದಲ್ಲಿ, ದವಸ-ಧಾನ್ಯ, ತರಕಾರಿ, ಶೈಕ್ಷಣಿಕ ಪರಿಕರಗಳ ರೂಪದಲ್ಲಿ ಸಹಾಯ ಮಾಡುವವರು ಮುಂದೆ ಬರಬೇಕಾಗಿದೆ.

ಹಣದ ರೂಪದಲ್ಲಿ ಸಹಾಯ ಮಾಡುವವರು ಎಸ್‌ಬಿ ಖಾತೆ ಸಂಖ್ಯೆ: 10796101011119 (IFSC: PKGB0010796)ಗೆ ಆರ್‌ಟಿಜಿಎಸ್ ಅಥವಾ ನೆಫ್ಟ್ ಮೂಲಕ ವರ್ಗಾಯಿಸಬಹುದು. ಆದಾಯ ತೆರಿಗೆ ವಿನಾಯಿತಿಗೆ ಸಂಬಂಧಿಸಿ ‘80 ಜಿ’ ರಸೀದಿಯನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಮೊ. 9663177254, 9741014115, 9972704696 ಸಂಪರ್ಕಿಸಬಹುದು ಎಂದು ಮಠದ ಪ್ರಕಟಣೆ ತಿಳಿಸಿದೆ.

ಹೊಸದುರ್ಗ ತಾಲ್ಲೂಕಿನ ಸಾಣೇಹಳ್ಳಿಯಲ್ಲಿರುವ ಶಿವಕುಮಾರ ಸ್ವಾಮೀಜಿ ವಿದ್ಯಾರ್ಥಿ ನಿಲಯ

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ಬ್ರಾಹ್ಮಣ, ಬ್ರಾಹ್ಮಣ್ಯ ಮತ್ತು ಜಾತಿನಿಂದನೆ
ಸಂವಾದದಲ್ಲಿ ಭಾಗವಹಿಸುವವರು

ಮೂಡ್ನಾಕೂಡು ಚಿನ್ನಸ್ವಾಮಿ
ಕವಿ, ಸಂಸ್ಕೃತಿ ಚಿಂತಕ

ಎಚ್.ಎನ್. ನಾಗಮೋಹನದಾಸ್
ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಅರವಿಂದ ಚೊಕ್ಕಾಡಿ
ಅಂಕಣಕಾರ, ಅಧ್ಯಾಪಕ
ಇಂದು ಮಧ್ಯಾಹ್ನ 12 ರಿಂದ 1

ಪ್ರಜಾವಾಣಿ ಕನ್ನಡ ಧ್ವನಿ
'ಕನ್ನಡ ಧ್ವನಿ' ಪಾಡ್‌ಕಾಸ್ಟ್ ಚಾನೆಲ್‌ನ
ಪ್ರತಿ ಶನಿವಾರದ 'ಹರಟೆ ಕಟ್ಟೆ'
ಹೊಸ ರಾಷ್ಟ್ರೀಯ ಶಿಕ್ಷಣ ನೀತಿ
ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ
ಪ್ರೊ.ಎಂ.ಕೆ. ಶ್ರೀಧರ್
ನೂತನ ಶಿಕ್ಷಣ ನೀತಿ ಸಮಿತಿಯ ಸದಸ್ಯ
ಡಾ. ನಿರಂಜನ ವಾನಳ್ಳಿ
ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ

ಸಂಜೆ 4 ಗಂಟೆಗೆ
ನೀವೂ ಆಲಿಸಿರಿ, ಸ್ನೇಹಿತರಿಗೂ ಕೇಳಿಸಿರಿ

https://www.prajavani.net/podcast

ಕಾನೂನುಬಾಹಿರ ಕೃತ್ಯ ತಡೆ ಕಾಯ್ದೆ: ಹೈಕೋರ್ಟ್ ವ್ಯಾಖ್ಯಾನ ಪರಿಶೀಲಿಸಲು ಒಪ್ಪಿಗೆ

ವಿದ್ಯಾರ್ಥಿಗಳ ಜಾಮೀನು ರದ್ದತಿಗೆ 'ಸುಪ್ರೀಂ' ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಗಲಭೆ ಪ್ರಕರಣದಲ್ಲಿ ಮೂವರು ವಿದ್ಯಾರ್ಥಿಗಳಿಗೆ ಜಾಮೀನು ನೀಡಿರುವ ದೆಹಲಿ ಹೈಕೋರ್ಟ್‌ನ ಆದೇಶದಲ್ಲಿ ಮಧ್ಯಪ್ರವೇಶಿಸುವುದಿಲ್ಲ, ವಿದ್ಯಾರ್ಥಿಗಳ ಜಾಮೀನಿಗೆ ತಡೆ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. 'ಆದರೆ, ಕಾನೂನುಬಾಹಿರ ಕೃತ್ಯ ತಡೆ ಕಾಯ್ದೆಯನ್ನು (ಯುಎಪಿಎ) ಸಂಕುಚಿತವಾಗಿ ವ್ಯಾಖ್ಯಾನಿಸುವುದು ಅಖಿಲ ಭಾರತ ಮಟ್ಟದಲ್ಲಿ ಪರಿಣಾಮ ಉಂಟು ಮಾಡುತ್ತದೆ. ಹೀಗಾಗಿ ಮೂವರು ವಿದ್ಯಾರ್ಥಿಗಳಿಗೆ ದೆಹಲಿ ಹೈಕೋರ್ಟ್ ಜಾಮೀನು ನೀಡಿದ್ದನ್ನು ದೇಶದ ಯಾವುದೇ ನ್ಯಾಯಾಲಯಗಳು, ಯಾವುದೇ ಪ್ರಕರಣಗಳಲ್ಲಿ ಪೂರ್ವನಿದರ್ಶನವಾಗಿ ಪರಿಗಣಿಸಬಾರದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮೂವರು ವಿದ್ಯಾರ್ಥಿಗಳಿಗೆ ದೆಹಲಿ ಹೈಕೋರ್ಟ್ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ದೆಹಲಿ ಪೊಲೀಸರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ವಿ.ರಾಮಸುಬ್ರಮಣಿಯನ್ ಅವರ ಪೀಠವು ಅರ್ಜಿಯ ವಿಚಾರಣೆ ನಡೆಸಿದೆ.

ಮುಖ್ಯಾಂಶಗಳು

- ಹೈಕೋರ್ಟ್ ಆದೇಶವನ್ನು ಪೂರ್ವನಿದರ್ಶನ ಎಂದು ಪರಿಗಣಿಸದಂತೆ ಸೂಚನೆ
- ಬೇರೆ ಯಾವುದೇ ಪ್ರಕರಣಗಳಿಗೂ ಅನ್ವಯಿಸದಂತೆ ಸೂಚನೆ
- ಜುಲೈ 19ರ ನಂತರ ಅರ್ಜಿಯ ಮುಂದಿನ ವಿಚಾರಣೆ ನಿಗದಿ

'ಯುಎಪಿಎಯನ್ನು ದೆಹಲಿ ಹೈಕೋರ್ಟ್ ವ್ಯಾಖ್ಯಾನಿಸಿರುವ ರೀತಿ, ಕಾಯ್ದೆಯ ಉದ್ದೇಶವನ್ನೇ ತಲೆಕೆಳಗು ಮಾಡುತ್ತದೆ. ದೆಹಲಿಯಲ್ಲಿ ಈ ಸಂಚಿನಿಂದ ಉಂಟಾದ ಗಲಭೆಯಲ್ಲಿ 53 ಜನರು ಸತ್ತಿದ್ದಾರೆ. 700ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಈ ವಿದ್ಯಾರ್ಥಿಗಳು ಈ ಗಲಭೆಗೆ ಇತರರ ಜತೆ ಸೇರಿ ಸಂಚು ರೂಪಿಸಿದ್ದರು. ಈ ಆದೇಶದಿಂದ ಹೆಚ್ಚು ಹಾನಿಯಾಗುವುದನ್ನು ತಡೆಯಬೇಕು' ಎಂದು ದೆಹಲಿ ಪೊಲೀಸ್ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಪ್ರತಿಪಾದಿಸಿದರು.

ಆರೋಪ ಪಟ್ಟಿಯಲ್ಲಿರುವ ವಿವರವನ್ನು ಬದಿಗಿಟ್ಟು, ಸಾಮಾಜಿಕ ಜಾಲತಾಣಗಳಲ್ಲಿನ ಸಂಕಥನಗಳನ್ನು ಆಧರಿಸಿ ಹೈಕೋರ್ಟ್ ಜಾಮೀನು ಆದೇಶವನ್ನು ನೀಡಿದೆ
ದೆಹಲಿ ಪೊಲೀಸರ ಅರ್ಜಿಯಲ್ಲಿನ ತಕರಾರು

'ಈ ಆರೋಪಿಗಳು ಯಾವುದೇ ಕೃತ್ಯ ಎಸಗಿಲ್ಲ ಎಂದು ಹೈಕೋರ್ಟ್ ಹೇಳಿದೆ. ನಾನು ಎಲ್ಲಾದರೂ ಬಾಂಬ್ ಇರಿಸುತ್ತೇನೆ. ಅದು ಸಿಡಿಯುವ ಮುನ್ನವೇ ಭದ್ರತಾ ಸಿಬ್ಬಂದಿ ಅದನ್ನು ನಿಷ್ಕ್ರಿಯಗೊಳಿಸುತ್ತಾರೆ. ಆಗ ನಾನು ಮಾಡಿದ ಅಪರಾಧದ ಗಂಭೀರತೆ ಕಡಿಮೆಯಾಗುತ್ತದೆಯೇ? ಪ್ರತಿಭಟಿಸುವ ಹಕ್ಕು, ಕೊಲ್ಲುವ ಹಕ್ಕನ್ನು ಒಳಗೊಂಡಿಲ್ಲ. ಪ್ರಧಾನಿ ರಾಜೀವ್ ಗಾಂಧಿಯನ್ನು ಕೊಂದ ಮಹಿಳೆ ನಾನು ಪ್ರತಿಭಟಿಸುತ್ತಿದ್ದೆ ಎಂದಷ್ಟೇ ಹೇಳಿದಾಗ, ಅದನ್ನು ಹೈಕೋರ್ಟ್ ಒಪ್ಪಿಕೊಂಡರೆ ಏನಾಗುತ್ತದೆ. ಆರೋಪಿಗಳಿಗೆ ಜಾಮೀನು ನೀಡಿರುವುದಕ್ಕೆ ನಾನು ಆಕ್ಷೇಪ ವ್ಯಕ್ತಪಡಿಸುತ್ತಿಲ್ಲ. ಬದಲಿಗೆ ಆ ಆದೇಶದ ಪರಿಣಾಮವನ್ನು ತಡೆಯಿರಿ ಎಂದಷ್ಟೇ ಕೇಳಿಕೊಳ್ಳುತ್ತಿದ್ದೇನೆ' ಎಂದು ತುಷಾರ್ ಮೆಹ್ತಾ ಅವರು ಪ್ರತಿಪಾದಿಸಿದರು.

ಮೂವರು ವಿದ್ಯಾರ್ಥಿಗಳ ಪರವಾಗಿ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, 'ಹೈಕೋರ್ಟ್‌ನ ಆದೇಶಕ್ಕೆ ತಡೆ ನೀಡಬಾರದು. ಆದರೆ ಆ ಆದೇಶವನ್ನು ಬೇರೆ ಯಾವ ನ್ಯಾಯಾಲಯವೂ ಪೂರ್ವನಿದರ್ಶನ ಎಂದು ಪರಿಗಣಿಸಬಾರದು ಎಂದು ಆದೇಶಿಸಬಹುದು' ಎಂದು ಪ್ರತಿಪಾದಿಸಿದರು.

ವಾದ-ಪ್ರತಿವಾದಗಳನ್ನು ಆಲಿಸಿದ ಪೀಠವು, 'ಸದ್ಯದ ಮಟ್ಟಿಗೆ ಜಾಮೀನು ರದ್ದುಪಡಿಸುವುದಿಲ್ಲ' ಎಂದು ಹೇಳಿತು. 'ಆದರೆ, ಯುಎಪಿಎಯನ್ನು ಹೇಗೆ ವ್ಯಾಖ್ಯಾನಿಸಲಾಗಿದೆ ಎಂಬುದನ್ನು ನಾವು ಪರಿಶೀಲಿಸಬೇಕು. ಕೇವಲ ಒಂದು ಜಾಮೀನು ಅರ್ಜಿಯ ತೀರ್ಪನ್ನು 100 ಪುಟಗಳ ಆದೇಶದಲ್ಲಿ ವಿವರಿಸಲಾಗಿದೆ. ಇದೇ ಆಶ್ಚರ್ಯಕರ. 100 ಪುಟಗಳ ಆದೇಶವನ್ನು ನಾವು ಪರಿಶೀಲಿಸುತ್ತೇವೆ' ಎಂದು ಸುಪ್ರೀಂ ಕೋರ್ಟ್ ಪೀಠವು ಹೇಳಿತು.ಈ ಸಂಬಂಧ ಆರೋಪಿ ವಿದ್ಯಾರ್ಥಿಗಳಿಗೆ ಪೀಠವು ನೋಟಿಸ್ ನೀಡಿದೆ. ನಾಲ್ಕು ವಾರಗಳಲ್ಲಿ ಈ ನೋಟಿಸ್‌ಗೆ ಉತ್ತರಿಸುವಂತೆ ಸೂಚನೆ ನೀಡಿದೆ. ಜುಲೈ 3ನೇ ವಾರದಲ್ಲಿ ಮುಂದಿನ ವಿಚಾರಣೆಯನ್ನು ನಿಗದಿಪಡಿಸಿದೆ.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಮುರಳಿಕೃಷ್ಣನ್ ಎಸ್.** ಬೆಂಗಳೂರು	1,00,000
2	**ವಿಜಯ್ ಮುರಳೀಧರನ್,** 115, ಶೋಭಾ ಅಂಬರ್, ಬೆಂಗಳೂರು	25,000
3	**ರಾಜು ವಿ.ಎನ್.** ನಂ.59, ಫ್ಲ್ಯಾಟ್ 102, 1ನೇ ಮಹಡಿ, 10ನೇ ಮುಖ್ಯರಸ್ತೆ, 15ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು	15,001
4	**ವಿಜಯೇಂದ್ರ ಹೆಬ್ಬೂರ್ ದೇವರಾವ್,** 704/ಎ, 4ನೇ ಮುಖ್ಯರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು	10,000
5	**ಡಿ.ಸಿ.ಚಂದ್ರಶೇಖರಯ್ಯ,** 28, 5ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು	10,000
6	**ಎಚ್.ಬಸವರಾಜಪ್ಪ, ಹೂಟಗಳ್ಳಿ,** ಮೈಸೂರು	5,000
7	**ಗಿರೀಶ್ ಎಂ.ಎಲ್.,** ಹೊಯ್ಸಳ ನಗರ, ಹಾಸನ	5,000
8	**ಸುಷ್ಮಾ ಶ್ರೀನಿವಾಸನಗರ,** ಸುಂಕದಕಟ್ಟೆ, ಬೆಂಗಳೂರು	5,000
9	**ಬಿ.ಮೊಹಮ್ಮದ್,** ನಂ. 812, 12ನೇ ಮುಖ್ಯರಸ್ತೆ, ವಿನಾಯಕ ಲೇಔಟ್, ಸ್ವಾತಿ ಹೋಟೆಲ್ ಸಮೀಪ, 2ನೇ ಹಂತ, ನಾಗರಭಾವಿ, ಬೆಂಗಳೂರು	5,000
10	**ಉಷಾ ಡಿ.ಎಸ್.,** ನಾಗರಭಾವಿ 1ನೇ ಹಂತ, ಬೆಂಗಳೂರು	5,000
11	**ಎಂ.ನಿಂಗಯ್ಯ,** 525, 5ನೇ ಮುಖ್ಯರಸ್ತೆ, ಎನ್‌ಜಿಇಎಫ್ ಲೇಔಟ್, ಮಲ್ಲತ್ತಹಳ್ಳಿ, ಬೆಂಗಳೂರು	5,000
12	**ವೆಂಕಟಕೃಷ್ಣ,** ಎಕಿನಾಪ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ನಂ. 27, 80 ಅಡಿರಸ್ತೆ, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು	5,000
13	**ಕೆ.ಜಿ.ಮಂಗಳಾ,** 18/2, 6ನೇ ಅಡ್ಡರಸ್ತೆ, ಸರ್ಪೆಂಟೈನ್ ರಸ್ತೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು	5,000
14	**ಡಿ.ಸಿ.ಸಹನಾ,** ನಂ.28, ವಿ.ಆರ್.ಎಲಿಗೆನ್ಸಿ, 5ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು	5,000
15	**ಗೀತಾ ಪಾರ್ಥಸಾರಥಿ,** ನಂ.516, 27ನೇ ಅಡ್ಡರಸ್ತೆ, ಐ.ಎಚ್.ಲೇಔಟ್, ರಾಜೇಶ್ವರಿನಗರ, ಬೆಂಗಳೂರು	4,000
16	**ಕೃಷ್ಣರಾವ್,** ನಿವೃತ್ತ ಅಧಿಕಾರಿ, ಕರ್ನಾಟಕ ಗ್ರಾಮೀಣ ಬ್ಯಾಂಕ್, ನಂ. 3/3/21, ಫೋರ್ಟ್, ರಾಯಚೂರು	3,300
17	**ವಿಜಯ್,** ಶಿವಾನಂದ ನಗರ, ಬೆಂಗಳೂರು	3,000
18	**ಜೋಸೆಫ್ ದಾಸ್,** 1098, 3ನೇ ಡಿ ಮುಖ್ಯರಸ್ತೆ, ಕಾಚರಕನಹಳ್ಳಿ, ಬೆಂಗಳೂರು	3,000
19	**ಎನ್.ಶ್ರೀಕಂಠಪ್ಪ,** ನಂ.405, ಎ ಬ್ಲಾಕ್, ಸುವಿಟಿ ಒಟಿಯಂ ಅಪಾರ್ಟ್‌ಮೆಂಟ್, ಯೆಲೆನಹಳ್ಳಿ ಮುಖ್ಯರಸ್ತೆ, ಅಕ್ಷಯನಗರ, ಬೆಂಗಳೂರು	2,500
20	**ಕಣ್ಣನ್ ಜಿ.ವಿ.,** ಎಸ್.ಪಿ.ನಾಯ್ಡು ಲೇಔಟ್, ರಾಮಮೂರ್ತಿ ನಗರ, ಬೆಂಗಳೂರು	2,111
21	**ಟಿ.ವಿ.ಗೋವಿಂದನ್,** ಪ್ರೆಸ್ಟೀಜ್‌ಸೌತ್‌ರಿಜ್‌ಅಪಾರ್ಟ್‌ಮೆಂಟ್, ಬೆಂಗಳೂರು	2,001
22	**ಪ್ರಭಾಕರ ಜಾವಳಿ,** ರಮಣ್‌ಖಾನ್ ಎಸ್ಟೇಟ್, ಜಾವಳಿ, ಚಿಕ್ಕಮಗಳೂರು	2,001
23	**ವಿಕಾಸ್ ದಿವಾಕರ್,** ಮಂತ್ರಿ ಟ್ರಾಂಕ್ವಿಲ್, ಗುಬ್ಬಲಾಳ, ಬೆಂಗಳೂರು	2,001
24	**ದಕ್ಷಿಣಾಮೂರ್ತಿ,** ನಂ.18, ಶ್ರೀ ವೀರಭದ್ರೇಶ್ವರ ನಿಲಯ, ಕಲ್ಪವೃಕ್ಷ ಲೇಔಟ್, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು	2,001
25	**ಬಸವರಾಜ ಹಿರೇಕೊಡಿ,** ಆರ್.ಟಿ.ಪಿ.ಎಸ್. ಕಾಲೊನಿ, ಶಕ್ತಿನಗರ, ರಾಯಚೂರು	2,000
26	**ವರ್ಗೀಸ್ ಲಾಲ್,** ಡೆಕ್ಕನ್ ಗಾರ್ಡೆನಿಯಾ, 90/1, 1ನೇ ಮುಖ್ಯರಸ್ತೆ, ಗಾರ್ಡನ್ ವಿಲಾಸ್ ಎದುರು, ನಾಗರಬಾವಿ ಮುಖ್ಯರಸ್ತೆ, ಬೆಂಗಳೂರು	2,000
27	**ಶ್ರೀವತ್ಸ ಕೃಷ್ಣಸ್ವಾಮಿ,** 7ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಅರಕೆರೆ ಮೈಕೊ ಲೇಔಟ್, ಬೆಂಗಳೂರು	2,000
28	**ಕೇಶವ ಎಚ್.ಕೊರ್ಸೆ,** ಇಂಚರ, ನ್ಯೂ ಪಟೇಲ್ ಸಾಮಿಲ್ ರೋಡ್, ಕೆಳಗಿನ ಗುಡ್ಡದಮನೆ, ಶಿರಸಿ,	1,500
29	**ಜ್ಯೋತಿ ಹೊಸಮನಿ,** ನಂ.69, ಸಮೃದ್ಧಿ ನಿವಾಸ, ಕಲಬುರ್ಗಿ	1,500
30	**ತೇಜಸ್ವಿ ಕೊಡೂರಿ,** ಫ್ಲ್ಯಾಟ್ ಇ. 306, ನೆಸ್ಟರ್ ಹಾರ್ಮನಿ ಅಪಾರ್ಟ್‌ಮೆಂಟ್, ಮಹದೇವಪುರ, ಬೆಂಗಳೂರು	1,116
31	**ಬಸಮ್ಮ ಪಿ.ರಾಮಣ್ಣವರ,** ಜಾನಕಿ ನಿಲಯ, ನಂ.238ಬಿ, ವಿವೇಕಾನಂದ ನಗರ, ಪಿ&ಟಿ ಕ್ವಾಟ್ರಸ್ ಹಿಂಭಾಗ, ಗದಗ	1,111
32	**ಶ್ರೀನಿವಾಸ್ ಕೆ.ಆರ್.,** ಇ 604, ಶ್ರೀರಾಮ್ ಸಿಗ್ನಿಯಾ, ನೀಲಾದ್ರಿ ರಸ್ತೆ, ಇ.ಸಿ.ಫೇಸ್ 1, ಬೆಂಗಳೂರು	1,100
33	**ರತ್ನಯ್ಯ ಶೆಟ್ಟಿ,** ಇ 604, ಶ್ರೀರಾಮ್ ಸಿಗ್ನಿಯಾ, ನೀಲಾದ್ರಿ ರಸ್ತೆ, ಇ.ಸಿ.ಫೇಸ್ 1, ಬೆಂಗಳೂರು	1,100
34	**ರಿಕಬ್‌ಚಂದ್ ವರ್ಧಮಾನ್ ಮೆಹ್ತಾ,** ನಂ.76/1, ಹೋಲಿ ಫ್ಯಾಮಿಲಿ ಚರ್ಚ್ ಎದುರು, ರಾಮಮೂರ್ತಿನಗರ, ಬೆಂಗಳೂರು	1,100
35	**ಡಾ.ಸಿರಾ ಅಬ್ದುಲ್ ರೆಹಮಾನ್,** 4ನೇ ಬ್ಲಾಕ್, ಜಯನಗರ, ಬೆಂಗಳೂರು	1,050
36	**ಕೋಮಲಾ ಸಿ.** ಫ್ಲ್ಯಾಟ್ 204, ಲಕ್ಷ್ಮಿ ಹೆರಿಟೇಜ್, 2ನೇ ಮುಖ್ಯರಸ್ತೆ, ಎಲ್.ಎನ್.ಪುರಂ, ಬೆಂಗಳೂರು	1,010
37	**ಸೋಹಂ ಘೋಷ್,** 4/1, 2ನೇ ಮಹಡಿ, ಈಗಲ್ ಸ್ಟ್ರೀಟ್, ಲ್ಯಾಂಗ್‌ಫೋರ್ಡ್ ಟೌನ್, ಬೆಂಗಳೂರು	1,001
38	**ಗೋಪಮ್ಮ ಮಂಜುನಾಥ್,** ಜನನಿ, ಸಿದ್ಧಾರೂಢ ನಗರ, ನ್ಯೂ ಬ್ರಿಡ್ಜ್ ರೋಡ್, ಭದ್ರಾವತಿ	1,001
39	**ನಚಿಕೇತ್ ನಾಡಿಗ್,** 31, 1ನೇ ಅಡ್ಡರಸ್ತೆ, ಎಸ್.ವಿ.ಕೆ. ಲೇಔಟ್, ಕಾವೇರಿ ನಗರ, ಬಸವೇಶ್ವರ ನಗರ, ಬೆಂಗಳೂರು	1,001
40	**ಅರುಣ್ ಚೆಬೋಲು,** ಎ 1270, 16ನೇ ಮುಖ್ಯರಸ್ತೆ, 20ನೇ ಅಡ್ಡರಸ್ತೆ, ಸಹಕಾರ ನಗರ, ಬೆಂಗಳೂರು	1,001
41	**ಉಪೇಂದ್ರನಾಥ ಚೆಬೋಲು,** ಎ 1270, 16ನೇ ಮುಖ್ಯರಸ್ತೆ, 20ನೇ ಅಡ್ಡರಸ್ತೆ, ಸಹಕಾರ ನಗರ, ಬೆಂಗಳೂರು	1,001
42	**ಶ್ರೀಹರಿ ಜಿ.ಎಸ್.,** ಜೆ.ಪಿ.ನಗರ, 5ನೇ ಹಂತ, ಬೆಂಗಳೂರು	1,001
43	**ವಿಜಯಲಕ್ಷ್ಮಿ ಪುನೀತ್,** ನಂ.6/19, 1ನೇ ಮಹಡಿ, 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು	1,001
44	**ಆಘಾ ರಝಾ ಅಲಿ,** 605/ಬಿ, 6ನೇ ಜಿ ಅಡ್ಡರಸ್ತೆ, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು	1,000
45	**ಬಾಲಚಂದ್ರ ಬಿ.ಭಟ್,** ನಂ.10, 16ನೇ ಅಡ್ಡರಸ್ತೆ, ಗಾಯತ್ರಿ ಲೇಔಟ್, ಕೆ.ಆರ್.ಪುರಂ, ಬೆಂಗಳೂರು	1,000
46	**ಆದಿತ್ಯ ಅಗ್ನಿಹೋತ್ರಿ,** ಎ.201, ಫೆರ್ನ್ ಸರೋಜ್ ಅಪಾರ್ಟ್‌ಮೆಂಟ್ಸ್, ಎಲ್.ಬಿ.ಶಾಸ್ತ್ರಿ ನಗರ, ಬೆಂಗಳೂರು	1,000
47	**ಅನುಪಮಾ ಅಶೋಕ್ ಖೈಡಿ,** ಬೆಂಗಳೂರು	1,000
48	**ಟಿ.ಪಿ.ಜ್ಯೋತಿ,** 194, 1ನೇ ಮಹಡಿ, 2ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ವಿಜಯನಗರ 1ನೇ ಹಂತ, ಮೈಸೂರು	1,000
49	**ಕುಮಾರ್ ನರಸಿಂಹನ್,** 108, ಎಸ್.ಕೆ.ಟುಲಿಪ್ ಅಪಾರ್ಟ್‌ಮೆಂಟ್ಸ್, 5, ಚೇರ್‌ಮನ್ ಲೇಔಟ್, 9ನೇ ಬಿ ಮುಖ್ಯರಸ್ತೆ, ಬಾಣಸವಾಡಿ, ಬೆಂಗಳೂರು	1,000
50	**ಕೃಷ್ಣಮೂರ್ತಿ,** ನಂ.8, 5ನೇ ಅಡ್ಡರಸ್ತೆ, ಕಾಮಾಕ್ಯ ಲೇಔಟ್, ಬನಶಂಕರಿ 3ನೇ ಹಂತ, ಬೆಂಗಳೂರು	1,000

ಸ್ವಯಂ ಪ್ರೇರಿತ ವಿಚಾರಣೆ ಇತ್ಯರ್ಥಪಡಿಸಿದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಪ್ರಧಾನ ಪೀಠ

ಮೇಕೆದಾಟು: ರಾಜ್ಯದ ಮತ್ತೊಂದು ಆತಂಕ ದೂರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ದಕ್ಷಿಣ (ಚೆನ್ನೈ)ದ ಪೀಠ ಆರಂಭಿಸಿದ್ದ ಸ್ವಯಂ ಪ್ರೇರಿತ ವಿಚಾರಣೆಯನ್ನು ಇತ್ಯರ್ಥಪಡಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ)ಯ ಪ್ರಧಾನ ಪೀಠ ಶುಕ್ರವಾರ ತೀರ್ಪು ನೀಡಿದೆ.

ಮೇಕೆದಾಟು ಯೋಜನೆಯನ್ನೇ ಪ್ರಶ್ನಿಸಿ ತಮಿಳುನಾಡು ಸಲ್ಲಿಸಿರುವ ಪ್ರಕರಣದ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ. ಈ ಸಂಬಂಧ ಅಗತ್ಯ ಪರಿಸರ ಅನುಮತಿ ಕೋರಿ ಕರ್ನಾಟಕ ಸಲ್ಲಿಸಿರುವ ಅರ್ಜಿಯೂ ಕೇಂದ್ರ ಸರ್ಕಾರದೆದುರು ಬಾಕಿ ಇದೆ. ಈ ಹಂತದಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿ, ವಿಚಾರಣೆ ನಡೆಸುವಂತಿಲ್ಲ ಎಂದು ನ್ಯಾಯಮೂರ್ತಿ ಆದರ್ಶಕುಮಾರ್ ಗೋಯೆಲ್ ನೇತೃತ್ವದ ಪೀಠ ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದೆ.

'ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ಅನುಮತಿ ಪಡೆಯದೆಯೇ ಅಣೆಕಟ್ಟೆ ನಿರ್ಮಿಸಲಾಗುತ್ತಿದೆ' ಎಂಬ ಚೆನ್ನೈ ಮೂಲದ ಪತ್ರಿಕೆಯೊಂದರ ವರದಿ ಆಧರಿಸಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದ ಎನ್‌ಜಿಟಿಯ ದಕ್ಷಿಣ ಪೀಠ, ಸ್ಥಳ ಪರಿಶೀಲನೆಗಾಗಿ ಸಮಿತಿ ರಚಿಸಿ, ಜುಲೈ 5ರೊಳಗೆ ವರದಿ ಸಲ್ಲಿಸುವಂತೆ ಸೂಚಿಸಿ ಕಳೆದ ಮೇ 21ರಂದು ಆದೇಶ ಹೊರಡಿಸಿತ್ತು.

ಈ ಆದೇಶದ ಪುನರ್ ಪರಿಶೀಲನೆ ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಗುರುವಾರ ಪೂರ್ಣಗೊಳಿಸಿದ್ದ ಪ್ರಧಾನ ಪೀಠ ತೀರ್ಪು ಕಾಯ್ದಿರಿಸಿತ್ತು.

'ಯೋಜನೆಗಾಗಿ ಶಾಸನಬದ್ಧ ಪರಿಸರ ಅನುಮತಿ ಕೋರಿ ಕರ್ನಾಟಕವು ಕೇಂದ್ರದ ಪರಿಸರ ಮತ್ತು ಅರಣ್ಯ ಸಚಿವಾಲಯಕ್ಕೆ ಸಲ್ಲಿಸಿರುವ ಅರ್ಜಿಯು ಪರಿಗಣನೆಗೆ ಬಾಕಿ ಇದೆ ಎಂಬುದನ್ನು ಪತ್ರಿಕಾ ವರದಿಯಲ್ಲಿ ಉಲ್ಲೇಖಿಸಲಾಗಿಲ್ಲ ಎಂಬ ಕರ್ನಾಟಕದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಅವರ ವಾದವನ್ನು ಪರಿಗಣಿಸಿ ದಕ್ಷಿಣ ಪೀಠ ದಾಖಲಿಸಿಕೊಂಡ ಪ್ರಕರಣವನ್ನು ಕೈಬಿಡಲು ನಿರ್ಧರಿಸಲಾಗಿದೆ' ಎಂದು ಪೀಠ ಹೇಳಿದೆ.

ಅಲ್ಲದೆ, ಯೋಜನೆಗೆ ಅನುಮತಿ ನೀಡದಂತೆ ಕೋರಿ ತಮಿಳುನಾಡು ಸರ್ಕಾರ ಕೇಂದ್ರದ ಜಲಶಕ್ತಿ ಸಚಿವಾಲಯಕ್ಕೆ 2021ರ ಏಪ್ರಿಲ್ 27ರಂದು ಸಲ್ಲಿಸಿರುವ ದೂರಿನಲ್ಲಿ ಇದೇ ಪತ್ರಿಕಾ ವರದಿಯನ್ನು ಉದಾಹರಿಸಿದೆ. ಆದರೆ, ನ್ಯಾಯಮಂಡಳಿಗೆ ಸಲ್ಲಿಸಿರುವ ಹೇಳಿಕೆಯಲ್ಲಿ ಈ ವಿಷಯ ಮರೆಮಾಚಿದೆ ಎಂದೂ ಪೀಠ ಅಭಿಪ್ರಾಯಪಟ್ಟಿದೆ.

ಈ ಕಾರಣದಿಂದ ಹಸಿರು ನ್ಯಾಯಮಂಡಳಿಯ ದಕ್ಷಿಣ ಪೀಠವು ಪ್ರಕರಣದ ವಿಚಾರಣೆ ನಡೆಸುವ ಅಗತ್ಯ ಕಂಡುಬರುತ್ತಿಲ್ಲ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

ಕಾವೇರಿಯ ಹೆಚ್ಚುವರಿ ನೀರನ್ನು ತಡೆದು, ಬೆಂಗಳೂರು, ಕನಕಪುರ ಮತ್ತಿತರ ಸುತ್ತಮುತ್ತಲಿನ ಪ್ರದೇಶಗಳ ಜನತೆಗೆ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಮೇಕೆದಾಟು ಬಳಿ ಕೈಗೆತ್ತಿಕೊಳ್ಳಲಿರುವ ಯೋಜನೆಗೆ ಆರಂಭದಲ್ಲೇ ಎದುರಾಗಿರುವ ಮತ್ತೊಂದು ಆತಂಕ ಈ ತೀರ್ಪಿನಿಂದ ಕೊನೆಯಾದಂತಾಗಿದೆ.

ಸರ್ಕಾರದ ಮೈಮರೆವು ಅಪಾಯಕಾರಿ: ಎಚ್‌ಡಿಕೆ



ಬೆಂಗಳೂರು: ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನಡೆಸುತ್ತಿರುವ ಪ್ರಯತ್ನಗಳ ಬಗ್ಗೆ ರಾಜ್ಯದ ಬಿಜೆಪಿ ಸರ್ಕಾರ ಸರಿಯಾದ ಕ್ರಮ ಕೈಗೊಳ್ಳದೆ, ಆಂತರಿಕ ಕಲಹದಲ್ಲೇ ಮೈಮರೆತಿರುವುದು ಕರ್ನಾಟಕದ ಪಾಲಿಗೆ ಅಪಾಯಕಾರಿಯಾಗಲಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಎಚ್ಚರಿಸಿದ್ದಾರೆ.

ಈ ಕುರಿತು ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಕರ್ನಾಟಕದ ಮೇಕೆದಾಟು ಜಲಾಶಯ ನಿರ್ಮಾಣ ಕಾಮಗಾರಿಗೆ ತಡೆ ನೀಡುವಂತೆ ಮತ್ತು ಪ್ರಸಕ್ತ ವರ್ಷದಲ್ಲಿ ತಮಿಳುನಾಡಿನ ಪಾಲಿನ ಪೂರ್ಣ ನೀರನ್ನು ಬಿಡುಗಡೆ ಮಾಡಿಸುವಂತೆ ಸ್ಟಾಲಿನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಒತ್ತಾಯಿಸಿದ್ದಾರೆ. ಈ ಬಗ್ಗೆ ಕ್ಷಿಪ್ರವಾಗಿ ಪ್ರತಿಕ್ರಿಯಿಸಬೇಕಿದ್ದ ಆಡಳಿತಾರೂಢ ಬಿಜೆಪಿ ಮೈಮರೆತು ಕುಳಿತಿದೆ' ಎಂದು ಟೀಕಿಸಿದ್ದಾರೆ.

ಎರಡೂ ರಾಷ್ಟ್ರೀಯ ಪಕ್ಷಗಳ ಸರ್ಕಾರಗಳು ಇದ್ದಾಗ ಮೇಕೆದಾಟು ಯೋಜನೆ ರೂಪಿಸಲು ಸಾಧ್ಯವಾಗಿರಲಿಲ್ಲ. ತಮ್ಮ ಸರ್ಕಾರ ಅದನ್ನು ಜಾರಿಗೆ ತರುವ ಧೈರ್ಯ ತೋರಿತು. ರಾಜ್ಯ ಮತ್ತು ಕೇಂದ್ರ ಎರಡೂ ಕಡೆ ಬಿಜೆಪಿ ಸರ್ಕಾರ ಇದ್ದರೂ ಯೋಜನೆಗೆ ಅನಿಶ್ಚಿತತೆ ಎದುರಾಗಿದೆ. ಸರ್ಕಾರ ನಡೆಸಲಾಗದೆ ನಲುಗಿ ಹೋಗಿರುವ ಬಿಜೆಪಿಗೆ ನೆಲ, ಜಲ, ಭಾಷೆಯ ಬಗ್ಗೆ ಅಕ್ಕರೆ ಇದೆಯೆ ಎಂದು ಪ್ರಶ್ನಿಸಿದ್ದಾರೆ.

'ತಮಿಳುನಾಡಿನಲ್ಲಿ ಪ್ರಾದೇಶಿಕ ಪಕ್ಷ ಅಧಿಕಾರದಲ್ಲಿ ಇರುವುದರಿಂದ ಆ ನಾಡಿನ ಅಸ್ಮಿತೆ ಪ್ರಬಲವಾಗಿದೆ. ರಾಜ್ಯದಲ್ಲಿ ರಾಷ್ಟ್ರೀಯ ಪಕ್ಷಗಳೇ ಹೆಚ್ಚು ಅಧಿಕಾರ ನಡೆಸಿವೆ. ಆದರೆ, ರಾಜ್ಯದ ಹಿತಾಸಕ್ತಿ ರಕ್ಷಣೆ ಸಾಧ್ಯವಾಗುತ್ತಿಲ್ಲ ಎಂಬುದನ್ನು ಜನರು ಗಮನಿಸಬೇಕು ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಮೇಕೆದಾಟು: ರಾಜ್ಯದ ಪರ ಎನ್‌ಜಿಟಿ ಆದೇಶ


ಬಸವರಾಜ ಬೊಮ್ಮಾಯಿ

ಬೆಂಗಳೂರು: ಮೇಕೆದಾಟು ಯೋಜನೆಯಲ್ಲಿ ಯಾವುದೇ ರೀತಿಯ ಕಾನೂನು ಉಲ್ಲಂಘನೆ ಮಾಡಿಲ್ಲ ಹಾಗೂ ಪರಿಸರಕ್ಕೆ ಯಾವುದೇ ರೀತಿಯ ಹಾನಿ ಮಾಡಿಲ್ಲವೆಂದು ರಾಷ್ಟ್ರೀಯ ಹಸಿರು ಪೀಠಕ್ಕೆ (ಎನ್‌ಜಿಟಿ) ಸರ್ಕಾರ ಮನವರಿಕೆ ಮಾಡಿಕೊಟ್ಟಿದ್ದರಿಂದಾಗಿ, ರಾಜ್ಯದ ಪರವಾಗಿ ಪೀಠ ಆದೇಶ ನೀಡಿದೆ ಎಂದು ಕಾನೂನು ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಚೆನ್ನೈನಲ್ಲಿರುವ ಎನ್‌ಜಿಟಿ ಪೀಠವು ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಸ್ವಯಂಪ್ರೇರಣಾ ಪ್ರಕರಣ ದಾಖಲಿಸಿಕೊಂಡಿತ್ತು. ಈ ಕುರಿತು ಕಾನೂನು ಇಲಾಖೆ, ಅಡ್ವೊಕೇಟ್ ಜನರಲ್ ಹಾಗೂ ಕಾನೂನು ತಜ್ಞರ ತಂಡ ಕೂಲಂಕಶ ಚರ್ಚೆ ಮಾಡಿತ್ತಲ್ಲದೇ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಮಾರ್ಗದರ್ಶನದಲ್ಲಿ ಇದನ್ನು ನವದೆಹಲಿಯ ಎನ್‌ಜಿಟಿ ಪೀಠದ ಮುಂದೆ ಮಂಡಿಸಲಾಯಿತು ಎಂದು ಅವರು ಹೇಳಿದ್ದಾರೆ.

ನೆಲ-ಜಲದ ವಿಷಯವನ್ನು ನಮ್ಮ ಸರ್ಕಾರ ಗಂಭೀರವಾಗಿ ತೆಗೆದುಕೊಂಡು, ರಾಜ್ಯದ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬಂದಿದೆ. ಮೇಕೆದಾಟು ವಿಷಯದಲ್ಲಿ ಕರ್ನಾಟಕ ಕುರಿತಾದ ಒಂದು ಮುಖ್ಯ ಪ್ರಕರಣ ಸುಪ್ರೀಂಕೋರ್ಟಿನಲ್ಲಿದೆ. ಅಲ್ಲಿ ಕೂಡ ಕರ್ನಾಟಕದ ಹಿತಾಸಕ್ತಿ ಕಾಪಾಡುವ ಎಲ್ಲಾ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

ಪ್ರಜಾವಾಣಿ facebook LIVE
FB.com/prajavani.net
ಸರಣಿ ಚಿಂತನೆ
ಕೊರೊನಾ ಕಾಡಿದ ಸಮಯ ಆಗಿದ್ದು - ಆಗಬೇಕಾದ್ದು
ಶಾಸ್ತ್ರೀಯ ಕಲೆಗಳ ತಹತಹ

ಪ್ರತಿಭಾ ಪ್ರಹ್ಲಾದ್
ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು, ಅಂತರರಾಷ್ಟ್ರೀಯ ನೃತ್ಯ ಕಲಾವಿದೆ ಹಾಗೂ ಮುಖ್ಯ ಸಂಘಟಕಿ, ದೆಹಲಿ ಅಂತರರಾಷ್ಟ್ರೀಯ ಕಲಾ ಉತ್ಸವ
ಇಂದು ಸಂಜೆ 6 ರಿಂದ 7
ನಾಳೆಯ ವಿವರ
ಭಾನುವಾರ, 20 ನೇ ಜೂನ್
ಐ.ಎಂ.ವಿಠಲ ಮೂರ್ತಿ ಅವರಿಂದ ಚಿಂತನೆ
ಆಡಳಿತ ಮತ್ತು ದಕ್ಷತೆ

ಪ್ರಜಾವಾಣಿ
ಜಸ್ಟ್ ಮ್ಯೂಸಿಕ್– ಹಿತಾನುಭವ

ಒಂದು ರೂಪಾಯಿ ನೋಟಿನ ಕತೆ!
ಗಾಯಕಿ ಎಚ್.ಆರ್.ಲೀಲಾವತಿ ಅವರು ಒಂದು ರೂಪಾಯಿ ನೋಟೊಂದನ್ನು ಬಹಳ ಕಾಲ ಇಟ್ಟುಕೊಂಡಿದ್ದರು. ನಂತರ ಅದು ಸವೆದು ಹೋಯಿತು. ಆ ನೋಟಿನ ಹಿಂದಿನ ಕತೆ ಏನು ಗೊತ್ತಾ?
https://bit.ly/3gGgyKR

ಎರಡು ಹೆಣ್ಣುಹುಲಿಗಳ ನೀರಸ ಕಥನ

ಸರ್ಕಾರಿ ವ್ಯವಸ್ಥೆಯ ಹುಳುಕಿನ ಮೇಲೆ ಬೆಳಕು ಚೆಲ್ಲಿ 'ನ್ಯೂಟನ್' ಚಿತ್ರದ ಮೂಲಕ 'ಡಾರ್ಕ್ ಕಾಮಿಡಿ' ಹೊಮ್ಮಿಸಿದ್ದ ನಿರ್ದೇಶಕ ಅಮಿತ್ ಮಸುರ್ಕರ್ ಹದಕ್ಕೆ ಬೇಕಾದಷ್ಟು ಪಲ್ಯವೇ ಇಲ್ಲದ 'ಪಪ್ಸ್' ಅನ್ನು 'ಶೇರ್‌ನಿ' ರೂಪದಲ್ಲಿ ಕೊಟ್ಟಿದ್ದಾರೆ.

ಚಿತ್ರದಲ್ಲಿ ಎರಡು ಹೆಣ್ಣುಹುಲಿಗಳಿವೆ. ಒಂದು ಕಾಡಿನದ್ದು, ಇನ್ನೊಂದು ಅರಣ್ಯ ಇಲಾಖೆಯ ಅಧಿಕಾರಿ ಪಾತ್ರದ ರೂಹಿನದ್ದು. ವೃತ್ತಿಧರ್ಮದ ಕುದಿಬಿಂದುವಿನ ದೃಷ್ಟಿಯಲ್ಲಿ ಅವಳು ಮಾನಸಿಕವಾಗಿ ಹುಲಿ. ಅರಣ್ಯದಲ್ಲಿ ಎರಡು ಪುಟಾಣಿ ಮರಿಗಳನ್ನು ಪೋಷಿಸುತ್ತಾ ಉದರ ನಿಮಿತ್ತಂ ಅಡ್ಡಾಡುತ್ತಾ ಹಳ್ಳಿಜನರ ಕೆಂಗಣ್ಣಿಗೆ ಗುರಿಯಾಗುವ ಅಸಲಿ ಹೆಣ್ಣುಹುಲಿ ಪುರುಷ ಪ್ರಧಾನ ಸರ್ಕಾರಿ–ರಾಜಕೀಯ ವ್ಯವಸ್ಥೆಗೆ ಬಲಿಯಾಗುತ್ತದೆ. ನಾಯಕಿಯ ವೃತ್ತಿಬದುಕಿನಲ್ಲಿ ಆಗುವುದೂ ಅದೇ. ಕಾಡಿನ ನಡುವೆ ಕೆಲಸ ಮಾಡುತ್ತಾ ಜಿಗಿತ ಕಾಣಬೇಕೆಂದು ಬಯಸುವ ಅವಳು ಕೊನೆಗೆ ಮೃತ ಪ್ರಾಣಿಗಳ ಮ್ಯೂಸಿಯಂನಲ್ಲಿ ಕಾರ್ಯನಿರ್ವಹಿಸಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಪರಿಸರ ಸಂರಕ್ಷಣೆಯ ಸವಾಲು, ಅಭಿವೃದ್ಧಿಯ ಆಮಿಷ–ಇವೆರಡರ ನಡುವೆ ಇರುವ ಸರ್ಕಾರಿ ವ್ಯವಸ್ಥೆ


ಶೇರ್‌ನಿ ಚಿತ್ರದಲ್ಲಿ ವಿದ್ಯಾ ಬಾಲನ್

ರಾಜಕೀಯದ ಸಂಕೀರ್ಣ ವಸ್ತುವನ್ನು ನಿರ್ದೇಶಕರು ಎತ್ತಿಕೊಂಡಿದ್ದಾರೆ.

ವಸ್ತುವಿಷಯದ ದೃಷ್ಟಿಯಿಂದ ಅಪರೂಪದ್ದೂ, ಮುಖ್ಯವೂ ಆದ ಈ ಚಿತ್ರದಲ್ಲಿ ಸಿನಿಮೀಯ ರಸಾಸ್ವಾದವಿಲ್ಲ. ಸಣ್ಣ ಪುಟ್ಟ ವಿವರಗಳಲ್ಲೇ ವ್ಯಂಗ್ಯವನ್ನೂ ಕಟ್ಟಿಕೊಡಲು ಹೊರಡುವ ನಿರ್ದೇಶಕರು, ಅಲ್ಲಲ್ಲಿ ಸಾಕ್ಷ್ಯಚಿತ್ರದಂತಹ ದೃಶ್ಯಗಳನ್ನು ಉಳಿಸಿಬಿಟ್ಟಿದ್ದಾರೆ. ಸಹಜ ಧ್ವನಿಗಳನ್ನೇ ಹೆಚ್ಚಾಗಿ ಬಳಸಿಕೊಂಡು 'ರಿಯಲಿಸ್ಟಿಕ್ ಸಿನಿಮಾ' ಕೊಡಬೇಕೆಂಬ ಅವರ ಉಮೇದಿಗೆ ಕೂಡ ಅಂಥ ದೃಶ್ಯಗಳು ಇಂಧನವಾಗಿ ಒದಗಿಬಂದಿಲ್ಲ.

ಹುಲಿ ದಾಳಿಯಿಂದ ಗ್ರಾಮಸ್ಥನು ಮೃತಪಟ್ಟಾಗ ಅಲ್ಲಿನ ವಿರೋಧ ಪಕ್ಷದ ಮುಖಂಡನೊಬ್ಬ ಒಡನಾಡಿಗಳೊಂದಿಗೆ ಅರಣ್ಯ ಇಲಾಖೆ ಕಚೇರಿಗೆ ನುಗ್ಗುತ್ತಾನೆ. ಅವರಿಂದ ತಪ್ಪಿಸಿಕೊಂಡು ಕಚೇರಿಯ ಕೋಣೆಗಳಲ್ಲೇ ಅರಣ್ಯ ಇಲಾಖೆ ಮುಖ್ಯಸ್ಥ ಜೂಟಾಟ ಆಡುವ ದೃಶ್ಯವೊಂದು 'ಕಾಮಿಕ್ ರಿಲೀಫ್' ಅಷ್ಟೆ ಅಲ್ಲದೆ ನಮ್ಮ ವ್ಯವಸ್ಥೆಗೆ ಹಿಡಿಯುವ ವ್ಯಂಗ್ಯದ ಕನ್ನಡಿಯೂ ಆಗಿದೆ. ಐಟಂ ಹಾಡುಗಳನ್ನು ಹಾಡುತ್ತಾ ಸಂದಿಗ್ಧ ಪರಿಸ್ಥಿತಿಯಲ್ಲೂ ತನ್ನದೇ ಲೋಕದಲ್ಲಿ ಇರುವ ಆ ಮುಖ್ಯಸ್ಥ ವ್ಯವಸ್ಥೆಯ ಉಡಾಫೆಯ ಪ್ರತಿನಿಧಿ.

ರಾಕೇಶ್ ಹರಿದಾಸ್ ಸಿನಿಮಾಟೊಗ್ರಫಿ ಚಿತ್ರದ ಹೈಲೈಟ್. ಸಹಜತೆ ಹಾಗೂ ಭಾವಕ್ಕೆ ಒತ್ತುಕೊಟ್ಟ ಅವರ ಬೆಳಕಿನ ಸಂಯೋಜನೆ ಅರ್ಥವತ್ತಾಗಿದೆ. ವಿದ್ಯಾ ಬಾಲನ್ ಪಾತ್ರವನ್ನು ಜೀವಿಸಿದ್ದಾರೆ. ಅವರಿಗಿಂತ ಅಭಿನಯದಲ್ಲಿ ಹೆಚ್ಚು ಅಂಕ ಗಿಟ್ಟಿಸುವುದು ಬ್ರಿಜೇಂದ್ರ ಕಾಲಾ. ಅರಣ್ಯ ಇಲಾಖೆಯ ಮುಖ್ಯಸ್ಥನ 'ಕ್ಯಾರಿಕೇಚರ್' ಪಾತ್ರಕ್ಕೆ ಅವರು ಸವರಿರುವ ಅಭಿನಯದ ಗಂಧವನ್ನು ಆಘ್ರಾಣಿಸಿಯೇ ಅನುಭವಿಸಬೇಕು.

ವ್ಯವಸ್ಥೆಯ ವಿರುದ್ಧದ ಹೋರಾಟದಲ್ಲಿ ಅಸಹಾಯಕತೆಯೇ ಪೂರ್ಣವಿರಾಮವಾಗಬೇಕಿಲ್ಲ. ನಿಜ ಬದುಕಿನಲ್ಲಿ ಅದು ಹಾಗೆಯೇ ಇರಬಹುದು. ಆದರೆ, ಸಿನಿಮಾದಲ್ಲಾದರೂ ಆಶಾವಾದದ ದೃಷ್ಟಿಕೋನ ಮೂಡಿಸಲು ಸಾಧ್ಯವಿದೆ. ಈ ಚಿತ್ರದಲ್ಲಿ ನಿರ್ದೇಶಕರು ಯಾಕೋ, ಅದಕ್ಕೂ ಬೆನ್ನುಮಾಡಿಬಿಟ್ಟಿದ್ದಾರೆ.

ಅಮೆಜಾನ್ ಪ್ರೈಮ್‌ನಲ್ಲಿ ಈ ಸಿನಿಮಾ ಜೂನ್ 18ರಂದು ತೆರೆಕಂಡಿದೆ.

ವಿಶಾಖ ಎನ್.

ನಾವು ನೋಡಿದ ಸಿನಿಮಾ

ಶೇರ್‌ನಿ (ಹಿಂದಿ)
- ನಿರ್ಮಾಣ: ಟಿ–ಸೀರೀಸ್
- ನಿರ್ದೇಶನ: ಅಮಿತ್ ಮಸುರ್ಕರ್
- ತಾರಾಗಣ: ವಿದ್ಯಾ ಬಾಲನ್, ಬ್ರಿಜೇಂದ್ರ ಕಾಲಾ, ಶರತ್ ಸಕ್ಸೇನಾ, ವಿಜಯ್ ರಾಝ್, ನೀರಜ್ ಕಬಿ, ಮುಕುಲ್ ಛಡ್ಡಾ, ಇಳಾ ಅರುಣ್.

ಸ್ನಾತಕೋತ್ತರ ವೈದ್ಯ ಕೋರ್ಸ್: ಪರೀಕ್ಷೆ ರದ್ದತಿಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಪರೀಕ್ಷೆ ಬರೆಯಬೇಕಿರುವ ವೈದ್ಯರು ಕೋವಿಡ್ ಕರ್ತವ್ಯದಲ್ಲಿ ನಿರತರಾಗಿದ್ದಾರೆ ಎಂಬ ಕಾರಣಕ್ಕೆ ಸ್ನಾತಕೋತ್ತರ ವೈದ್ಯ ಕೋರ್ಸ್‌ನ ಅಂತಿಮ ಪರೀಕ್ಷೆಗಳನ್ನು ರದ್ದು ಮಾಡಬೇಕು ಅಥವಾ ಮುಂದೂಡಬೇಕು ಎಂದು ವೈದ್ಯಕೀಯ ವಿಶ್ವವಿದ್ಯಾಲಯಗಳಿಗೆ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಅಂತಿಮ ವರ್ಷದ ಪರೀಕ್ಷೆಗಳ ದಿನಾಂಕ ನಿಗದಿ ಮಾಡುವಾಗ ಕೋವಿಡ್ ಪರಿಸ್ಥಿತಿಯನ್ನು ಗಮನದಲ್ಲಿ ಇರಿಸಿಕೊಳ್ಳಬೇಕು ಎಂದು ರಾಷ್ಟ್ರೀಯ ವೈದ್ಯಕೀಯ ಪರಿಷತ್ (ಎನ್‌ಎಂಸಿ), ವಿಶ್ವವಿದ್ಯಾಲಯಗಳಿಗೆ ಈಗಾಗಲೇ ಸೂಚಿಸಿದೆ ಎಂಬುದನ್ನು ನ್ಯಾಯಾಲಯವು ಉಲ್ಲೇಖಿಸಿದೆ.

ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಸಿದ್ಧರಾಗಲು ಅಗತ್ಯ ಸಮಯ ನೀಡಬೇಕು ಎಂದು 29 ವೈದ್ಯರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

'ಪರೀಕ್ಷೆಗೆ ಸಿದ್ಧರಾಗಲು ಅಗತ್ಯ ಸಮಯ ಎಷ್ಟು ಎಂಬುದು ನಮಗೆ ತಿಳಿದಿಲ್ಲ. ಈ ಸಮಯವನ್ನು ನ್ಯಾಯಾಲಯ ತೀರ್ಮಾನಿಸುವುದು ಹೇಗೆ ಸಾಧ್ಯ? ಪ್ರತಿಯೊಬ್ಬರಿಗೂ ಈ ಸಮಯ ಬೇರೆಯೇ ಆಗಿರಬಹುದು. ಹಾಗಾಗಿ, ಎನ್‌ಎಂಸಿಯ ಸಲಹೆಯಂತೆ ವಿಶ್ವವಿದ್ಯಾಲಯಗಳೇ ಪರೀಕ್ಷೆಯ ಬಗ್ಗೆ ತೀರ್ಮಾನಿಸಲಿ' ಎಂದು ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಮತ್ತು ಎಂ.ಆರ್. ಶಾ ಅವರ ಪೀಠವು ಹೇಳಿದೆ.

ಮುಕುಲ್ ರಾಯ್ ಶಾಸಕ ಸ್ಥಾನ ಅನರ್ಹತೆ ಕೋರಿ ಅರ್ಜಿ

ಕೋಲ್ಕತ್ತ (ಪಿಟಿಐ): ಬಿಜೆಪಿ ತೊರೆದು ಟಿಎಂಸಿ ಪಕ್ಷಕ್ಕೆ ಸೇರ್ಪಡೆಯಾಗಿರುವ ಮುಕುಲ್ ರಾಯ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು ಎಂದು ಕೋರಿ ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರು ಸ್ಪೀಕರ್‌ಗೆ ಶುಕ್ರವಾರ ಅರ್ಜಿ ಸಲ್ಲಿಸಿದರು.

ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ಟಿಎಂಸಿ ಮುಖಂಡರು, 'ವಿಧಾನಸಭೆ ಚುನಾವಣೆಗೂ ಮುನ್ನ ಸುವೇಂದು ಅವರ ತಂದೆ ಶಿಶಿರ್ ಅಧಿಕಾರಿ ಅವರು ಟಿಎಂಸಿ ತೊರೆದು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಸಂಸದ ಸ್ಥಾನಕ್ಕೆ ಮೊದಲು ರಾಜೀನಾಮೆ ನೀಡಿ, ಮೇಲ್ಪಂಕ್ತಿ ಹಾಕುವಂತೆ ಸುವೇಂದು ಅಧಿಕಾರಿ ತಮ್ಮ ತಂದೆಯವರಿಗೆ ಮನವಿ ಮಾಡಲಿ' ಎಂದು ತಿರುಗೇಟು ನೀಡಿದ್ದಾರೆ.

ಮುಕುಲ್ ರಾಯ್ ಅವರು ಕೃಷ್ಣಾನಗರ (ಉತ್ತರ) ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.

ಗಾಜಿಯಾಬಾದ್ ಪ್ರಕರಣ: ಟ್ವಿಟರ್‌ಗೆ ನೋಟಿಸ್

ನವದೆಹಲಿ: ವೃದ್ಧ ಮುಸ್ಲಿಂ ವ್ಯಕ್ತಿಯನ್ನು ಥಳಿಸಿದ್ದ ಪ್ರಕರಣದ ಮೊಕದ್ದಮೆ ಸಂಬಂಧ ವಿಚಾರಣೆಯಲ್ಲಿ ಭಾಗವಹಿಸುವಂತೆ ಟ್ವಿಟರ್ ಸಂಸ್ಥೆಯ ಭಾರತದ ವ್ಯವಸ್ಥಾಪಕ ನಿರ್ದೇಶಕ ಮನೀಶ್ ಮಹೇಶ್ವರಿ ಅವರಿಗೆ ಉತ್ತರ ಪ್ರದೇಶದ ಗಾಜಿಯಾಬಾದ್ ಪೊಲೀಸರು ಗುರುವಾರ ರಾತ್ರಿ ನೋಟಿಸ್ ನೀಡಿದ್ದಾರೆ.

7 ದಿನಗಳ ಒಳಗೆ ಲೋನಿ ಪೊಲೀಸ್ ಠಾಣೆಗೆ ಹಾಜರಾಗಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಲು ಮನೀಶ್ ಅವರಿಗೆ ಸೂಚಿಸಿದ್ದಾರೆ.

ಜೈ ಶ್ರೀರಾಮ್ ಘೋಷಣೆ ಕೂಗುವಂತೆ ಒತ್ತಾಯಿಸಿ ವ್ಯಕ್ತಿಯ ಮೇಲೆ ಹಲ್ಲೆ ಮಾಡಲಾಗಿದೆ ಎಂದು ಬಿಂಬಿಸುವ ವಿಡಿಯೊವನ್ನು ಟ್ವಿಟರ್‌ನಲ್ಲಿ ಕೆಲವರು ಪೋಸ್ಟ್ ಮಾಡಿದ್ದರು. ಈ ವಿಡಿಯೋದಲ್ಲಿ ಸೆರೆಯಾಗಿರುವ ಘಟನೆ ವೈಯಕ್ತಿಕ ಕಾರಣಗಳಿಂದ ನಡೆದಿರುವ ಘಟನೆ. ಇದರಲ್ಲಿ ಕೋಮುದ್ವೇಷದ ಉದ್ದೇಶ ಇಲ್ಲ. ಆದರೆ ಈ ವಿಡಿಯೊಗಳನ್ನು ಕೋಮು ಸೌಹಾರ್ದ ಕದಡುವ ಉದ್ದೇಶದಿಂದ ಹಂಚಿಕೊಳ್ಳಲಾಗಿದೆ. ಆದರೆ ಈ ಟ್ವೀಟ್‌ಗಳನ್ನು ಅಳಿಸುವ ಕ್ರಮವನ್ನು ಟ್ವಿಟರ್ ಸಂಸ್ಥೆ ತೆಗೆದುಕೊಂಡಿಲ್ಲ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಇದೇ ಮೊದಲ ಬಾರಿಗೆ, ಹೊಸ ಮಾಹಿತಿ ತಂತ್ರಜ್ಞಾನ ನಿಯಮಗಳ ಅನ್ವಯ ಸರ್ಕಾರ ಕ್ರಮ ಕೈಗೊಂಡಿದೆ.

ಸಂಸದೀಯ ಸಮಿತಿ ಎದುರು ಟ್ವಿಟರ್

ಹೊಸ ಮಾಹಿತಿ ತಂತ್ರಜ್ಞಾನ ನಿಯಮಕ್ಕೆ ಸಂಬಂಧಿಸಿ ಕೇಂದ್ರ ಮತ್ತು ಟ್ವಿಟರ್ ನಡುವೆ ತಿಕ್ಕಾಟ ನಡೆಯುತ್ತಿರುವ ವೇಳೆಯೇ ಟ್ವಿಟರ್ ಅಧಿಕಾರಿಗಳು ಶುಕ್ರವಾರ ಸಂಸದೀಯ ಸಮಿತಿ ಎದುರು ಹಾಜರಾಗಿದ್ದರು.

ಸಾಮಾಜಿಕ ಜಾಲತಾಣ ದುರ್ಬಳಕೆ ಮತ್ತು ನಾಗರಿಕರ ಹಕ್ಕುಗಳ ಕುರಿತು ಮಾಹಿತಿ ಪಡೆಯಲು ಕಾಂಗ್ರೆಸ್ ಮುಖಂಡ ಶಶಿ ತರೂರ್ ನೇತೃತ್ವದ ಮಾಹಿತಿ ಮತ್ತು ತಂತ್ರಜ್ಞಾನ ಸ್ಥಾಯಿ ಸಮಿತಿ ಕಳೆದವಾರ ಟ್ವಿಟರ್‌ಗೆ ಸಮನ್ಸ್ ನೀಡಿತ್ತು.

ಅದರಂತೆ, ಟ್ವಿಟರ್ ಸಂಸ್ಥೆಯ ಭಾರತದ ನೀತಿ ನಿಯಮ ವ್ಯವಸ್ಥಾಪಕ ಶಗುಫ್ತಾ ಕಮ್ರಾನ್ ಮತ್ತು ಕಾನೂನು ಸಲಹೆಗಾರ್ತಿ ಆಯುಷಿ ಕಪೂರ್ ಸಮಿತಿ ಎದುರು ಹಾಜರಾದರು.

ಮಮತಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ 24ಕ್ಕೆ ಮುಂದೂಡಿಕೆ

ಕೋಲ್ಕತ್ತ (ಪಿಟಿಐ): ನಂದಿಗ್ರಾಮ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ಸುವೇಂದು ಅಧಿಕಾರಿ ಗೆಲುವನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯ ವಿಚಾರಣೆಯನ್ನು ಕಲ್ಕತ್ತ ಹೈಕೋರ್ಟ್ ಇದೇ 24ಕ್ಕೆ ಮುಂದೂಡಿದೆ.

ಈ ಅರ್ಜಿಯ ವಿಚಾರಣೆಯನ್ನು ಶುಕ್ರವಾರ ಕೈಗೆತ್ತಿಕೊಂಡ ನ್ಯಾಯಮೂರ್ತಿ ಕೌಶಿಕ್ ಚಂದ ಅವರಿದ್ದ ನ್ಯಾಯಪೀಠ, ಪ್ರತಿವಾದಿಗಳಿಗೆ ನೋಟಿಸ್ ಕಳುಹಿಸುವಂತೆ ಆದೇಶಿಸಿ ವಿಚಾರಣೆಯನ್ನು ಮುಂದೂಡಿದರು.

'ಇವಿಎಂಗಳ ದುರ್ಬಳಕೆ ಮಾಡಲಾಗಿದೆ. ಮತಗಳ ಮರು ಎಣಿಕೆ ಮಾಡಬೇಕು ಎಂಬ ನನ್ನ ಮನವಿಯನ್ನು ಚುನಾವಣಾ ಆಯೋಗವು ತಿರಸ್ಕರಿಸಿದೆ' ಎಂದು ಮಮತಾ ಬ್ಯಾನರ್ಜಿ ಅವರು ಅರ್ಜಿಯಲ್ಲಿ ತಿಳಿಸಿದ್ದಾರೆ.

❦ ಸುಭಾಷಿತ ❦

ಮಕ್ಕಳಿಗೆ ಹೇಗೆ ಯೋಚಿಸಬೇಕು ಎಂಬುದನ್ನು ಕಲಿಸಬೇಕೇ ವಿನಾ ಏನು ಯೋಚಿಸಬೇಕು ಎಂಬುದನ್ನಲ್ಲ.

–ಮಾರ್ಗರೇಟ್ ಮೀಡ್

'ಮುಕ್ತ ಸಮಾಜ'ದ ಪ್ರತಿಜ್ಞೆ ಆತ್ಮಾವಲೋಕನಕ್ಕೆ ಪ್ರೇರಣೆಯಾಗಲಿ

ಭಾಷೆ ಮತ್ತು ಪದಗಳ ಅರ್ಥಕ್ಕೆ ದೊಡ್ಡ ಸವಾಲು ಎದುರಾಗಿರುವ ಜಗತ್ತಿನಲ್ಲಿ ನಾವು ಇಂದು ಬದುಕುತ್ತಿದ್ದೇವೆ. ಪದಗಳು ತದ್ವಿರುದ್ಧ ಅರ್ಥ ಧ್ವನಿಸುತ್ತವೆ. ಬೇರೆ ಬೇರೆ ಜನರಿಗೆ ಬೇರೆ ಬೇರೆ ಅರ್ಥಗಳನ್ನು ಸ್ಫುರಿಸುತ್ತವೆ ಅಥವಾ ಅರ್ಥವೇ ಇಲ್ಲದ ಖಾಲಿ ಸದ್ದಷ್ಟೇ ಆಗಿವೆ. ಭಾಷೆಗಳ ರಾಜಕೀಕರಣವು ಸುಳ್ಳು ಮತ್ತು ತಪ್ಪು ಮಾಹಿತಿಯನ್ನೇ ಒಳಗೊಂಡಿರುವ ಸಂಪೂರ್ಣವಾಗಿ ಹೊಸದೇ ಆದ ಭಾಷೆಗಳನ್ನು ಸೃಷ್ಟಿಸಿದೆಯೇ ಎಂಬುದು ಚರ್ಚಾರ್ಹ. ಆದರೆ, ಹೊಸದಾಗಿ ಸೃಷ್ಟಿಯಾದ ಭಾಷೆಯು ಇತಿಹಾಸ ಮತ್ತು ನಾಗರಿಕತೆಯ ಮೂಲಕ ರೂಪುಗೊಂಡ ಮಾನವ ಕುಲದ ಶ್ರೇಷ್ಠವಾದ ಚಿಂತನೆಗಳನ್ನು ತಪ್ಪಾಗಿ ನಿರೂಪಿಸಲು ಬಳಕೆಯಾಗುತ್ತಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಹೀಗಾಗಿಯೇ, ಸ್ವಾತಂತ್ರ್ಯ ಎಂದರೆ ಕೆಲವೊಮ್ಮೆ ಪರತಂತ್ರ, ಪ್ರಜಾಪ್ರಭುತ್ವ ಎಂದರೆ ನಿರಂಕುಶಾಧಿಕಾರ ಎಂಬ ಅರ್ಥ ಉಂಟಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ಜಿ-7 ಶೃಂಗಸಭೆಯಲ್ಲಿ ಮಾಡಿದ ಭಾಷಣವನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಭಿನ್ನ ದೇಶದ, ಭಿನ್ನ ಭಾಷೆಯ ಅಪರಿಚಿತ ನಾಯಕನೊಬ್ಬ ಮಾಡಿದ ಭಾಷಣದಂತೆ ಅದು ಇತ್ತು. 'ನಿರಂಕುಶಾಧಿಕಾರ, ಭಯೋತ್ಪಾದನೆ ಮತ್ತು ಹಿಂಸಾತ್ಮಕ ತೀವ್ರವಾದ, ಸುಳ್ಳು ಮಾಹಿತಿ ಹಾಗೂ ಆರ್ಥಿಕ ನಿರ್ಬಂಧ'ಗಳಿಂದ ಹೊರಹೊಮ್ಮುವ ಹತ್ತಾರು ಬೆದರಿಕೆಗಳ ವಿರುದ್ಧದ ಹೋರಾಟದಲ್ಲಿ ಭಾರತವು ಸಹಜವಾದ ಮಿತ್ರನಾಗಿದೆ ಎಂದು ಜಗತ್ತಿನ ಪ್ರಮುಖ ಪ್ರಜಾಪ್ರಭುತ್ವ ದೇಶಗಳ ನಾಯಕರಿಗೆ ಮೋದಿ ಹೇಳಿದರು. ಪ್ರಜಾಸತ್ತೆ, ಚಿಂತನೆಯ ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯಕ್ಕೆ ಭಾರತವು ಹೇಗೆ ಬದ್ಧವಾಗಿದೆ ಎಂಬುದನ್ನು ವಿವರಿಸಿದರು. 'ನಿರಂಕುಶಾಧಿಕಾರ, ಚುನಾವಣೆ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ, ಮಾಹಿತಿಯ ತಿರುಚುವಿಕೆ, ಸುಳ್ಳು ಮಾಹಿತಿ ವಿನಿಮಯ, ಅಂತರ್ಜಾಲದ ದುಷ್ಪರಿಣಾಮಗಳು, ರಾಜಕೀಯ ಉದ್ದೇಶಕ್ಕಾಗಿ ಅಂತರ್ಜಾಲ ಸ್ಥಗಿತದಿಂದ ಎದುರಾಗುವ ಬೆದರಿಕೆಗಳ ಸಂಕೀರ್ಣ ಸನ್ನಿವೇಶದಲ್ಲಿ ನಾವು ಇದ್ದೇವೆ' ಎಂಬ 'ಓಪನ್ ಸೊಸೈಟೀಸ್' (ಮುಕ್ತ ಸಮಾಜಗಳು) ಘೋಷಣೆಯನ್ನು ಪ್ರಧಾನಿಯವರೂ ಅನುಮೋದಿಸಿದ್ದಾರೆ. 'ಅಂತರ್ಜಾಲ ಮತ್ತು ಅದರಾಚೆಗಿನ ಅಭಿವ್ಯಕ್ತಿ ಸ್ವಾತಂತ್ರ್ಯ'ಕ್ಕೂ ಬದ್ಧತೆ ತೋರಿದ್ದಾರೆ. ಈ ಪ್ರತಿಜ್ಞೆಗೆ ಸಹಿ ಹಾಕುವ ಮೂಲಕ ಪ್ರಧಾನಿಯವರು ತಮ್ಮನ್ನು ತಾವೇ ವಂಚಿಸಿಕೊಳ್ಳಲು ಯತ್ನಿಸಿದ್ದಾರೆ ಅಥವಾ ಇತರರನ್ನು ಹಾದಿ ತಪ್ಪಿಸಲು ಯತ್ನಿಸಿದ್ದಾರೆ ಎಂಬ ಭಾವನೆ ಮೂಡುತ್ತದೆ. ಏಕೆಂದರೆ, ಘೋಷಣೆಯಲ್ಲಿ ಪಟ್ಟಿ ಮಾಡಲಾದ, ಮುಕ್ತ ಸಮಾಜ ಎದುರಿಸುತ್ತಿರುವ ಹೆಚ್ಚಿನ ಬೆದರಿಕೆಗಳು ಸರ್ಕಾರ, ಸರ್ಕಾರ ನಡೆಸುವವರು ಮತ್ತು ಆಡಳಿತ ಪಕ್ಷದ ನಾಯಕರ ಬೆಂಬಲ ಮತ್ತು ಒತ್ತಾಸೆಯ ಮೂಲಕ ಭಾರತದಲ್ಲಿಯೂ ಕಾಣಸಿಗುತ್ತವೆ. ಟೀಕೆಯನ್ನು ದೇಶದ್ರೋಹ ಎಂದು ಪರಿಗಣಿಸಲಾಗುತ್ತಿದೆ, ಸರ್ಕಾರದ ವಿರುದ್ಧ ಮಾತನಾಡಿದ ಜನರನ್ನು ಜೈಲಿಗೆ ಅಟ್ಟಲಾಗುತ್ತಿದೆ, ವಿರೋಧ ಪಕ್ಷದವರು ಎಂಬ ಒಂದೇ ಕಾರಣಕ್ಕೆ ವಿರೋಧ ಪಕ್ಷದ ನಾಯಕರ ನಿವಾಸಗಳು ಶೋಧಕ್ಕೆ ಒಳಗಾಗುತ್ತಿವೆ, ಜನಾದೇಶವನ್ನು ಬುಡಮೇಲು ಮಾಡಲಾಗಿದೆ ಮತ್ತು ಪ್ರಜಾತಂತ್ರವನ್ನು ದುರ್ಬಲಗೊಳಿಸಲಾಗಿದೆ. ಕಳೆದ ವರ್ಷ, ಜಗತ್ತಿನಲ್ಲಿಯೇ ಅಂತರ್ಜಾಲ ಅತಿ ಹೆಚ್ಚು ಸ್ಥಗಿತ ಆಗಿರುವುದು ಭಾರತದಲ್ಲಿಯೇ. ಎಲ್ಲ ಸ್ವಾತಂತ್ರ್ಯವನ್ನು ಕಡೆಗಣಿಸಲಾಗಿದೆ. ಸತ್ಯವನ್ನು ಮರೆಮಾಚಲು ಸುಳ್ಳು ಮಾಹಿತಿಯ ಬಳಕೆಯಾಗುತ್ತಿದೆ.



ಜಿ-7 ಶೃಂಗಸಭೆಯ ಪ್ರತಿಜ್ಞೆ ಉಪದೇಶಕ್ಕೆ ಸೀಮಿತವಾಗಬಾರದು. ಕೃತಿಗೆ ಇಳಿಯಬೇಕು

ಪ್ರಧಾನಿಯವರು ಸಹಿ ಮಾಡಿದ ಪ್ರತಿಜ್ಞೆಗೆ ತದ್ವಿರುದ್ಧವಾದ ಪರಿಸ್ಥಿತಿಯು ಭಾರತದಲ್ಲಿ ಇದೆ ಎಂಬ ಆರೋಪವನ್ನು ವಿರೋಧ ಪಕ್ಷಗಳು ಕೆಲವು ವರ್ಷಗಳಿಂದ ಮಾಡುತ್ತಿವೆ. ತಾವು ಸಹಿ ಮಾಡಿದ ಪ್ರತಿಜ್ಞೆಯನ್ನು ಗೌರವಿಸಬೇಕು ಎಂದಿದ್ದರೆ ಪ್ರಧಾನಿಯವರು ಕಳೆದ ಏಳು ವರ್ಷಗಳ ಆಳ್ವಿಕೆಯನ್ನು ಮರು ಪರಿಶೀಲನೆಗೆ ಒಡ್ಡಬೇಕಾಗುತ್ತದೆ. ಹಲವು ವರ್ಷಗಳ ಹಿಂದೆ ಈ ದೇಶದ ಜನರು ತಮಗೆ ತಾವೇ ಕೊಟ್ಟುಕೊಂಡ ಸಂವಿಧಾನದ ಆಶಯವನ್ನು ಪ್ರಧಾನಿ ಅರಿಯಬೇಕಾಗುತ್ತದೆ. ಜಿ-7 ರಾಷ್ಟ್ರಗಳ ಮುಕ್ತ ಸಮಾಜ ಪ್ರತಿಜ್ಞೆಗಿಂತ ಉತ್ತಮವಾದ ಮಾರ್ಗದರ್ಶನ ಸಂವಿಧಾನದಲ್ಲಿ ದೊರೆಯುತ್ತದೆ. ಹೀಗೆ ಮಾಡಿದರೆ ಮಾತ್ರ ಜಿ-7 ಪ್ರತಿಜ್ಞೆಗೆ ಮಾಡಿದ ಸಹಿಯಲ್ಲಿ ಇರುವ ವ್ಯಂಗ್ಯ ಮತ್ತು ವಿರೋಧಾಭಾಸದಿಂದ ಹೊರಬರಲು ಸಾಧ್ಯ.

ದಿನದ ಟ್ವೀಟ್

ಹೊಸಬರಿಂದ ಮಾತ್ರ ಸಾಧ್ಯ!

ಕಾಂಗ್ರೆಸ್ ಅಥವಾ ಬಿಜೆಪಿ ಯಾವುದೂ ಕಪ್ಪುಹಣವನ್ನು ಮರಳಿ ತರಲಿಲ್ಲ. ಈ ಕೆಲಸವನ್ನು ಈ ಎರಡೂ ಪಕ್ಷಗಳು ಎಂದಿಗೂ ಮಾಡಲಾರವು. ಎರಡೂ ಪಕ್ಷಗಳ ರಾಜಕಾರಣಿಗಳು ಕಪ್ಪುಹಣವನ್ನು ತೆರಿಗೆಗಳ್ಳರ ಸ್ವರ್ಗದಲ್ಲಿ ಅಡಗಿಸಿ ಇಟ್ಟಿದ್ದಾರೆಯೇ? ಹೌದು ಎಂದಾದರೆ, ಇದೇ ಅಡ್ಡಿಯಾಗಿರುವುದು! ವಿಭಿನ್ನ ಚಿಂತನೆಯಿಂದ ಕೂಡಿದ ಹೊಸ ರಾಜಕಾರಣಿಗಳನ್ನು ಹೊಂದಿದ ನವೀನ ರಾಜಕೀಯ ಪಕ್ಷದಿಂದ ಈ ಕೆಲಸ ಸಾಧ್ಯ.

ಅನಿಲ್ ಆಲ್‌ಫ್ರೆಡ್ ಪಿಂಟೊ, ನಾಗರಿಕ

25 ವರ್ಷಗಳ ಹಿಂದೆ

ಬುಧವಾರ, 19-6-1996

● **ಪರಿಷತ್ ಚುನಾವಣೆ: ಬಿಜೆಪಿ ಗೆಲುವು**

ಬೆಂಗಳೂರು, ಜೂನ್ 18– ರಾಜ್ಯ ವಿಧಾನಪರಿಷತ್ತಿನ ಶಿಕ್ಷಕ ಮತ್ತು ಪದವೀಧರ ಕ್ಷೇತ್ರಗಳ 3 ಸ್ಥಾನಗಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಎರಡು ಸ್ಥಾನಗಳನ್ನು ಬಿಜೆಪಿಯ ಇಬ್ಬರು ಅಭ್ಯರ್ಥಿಗಳು ಹಾಗೂ ಆ ಪಕ್ಷದ ಬೆಂಬಲಿತ ಅಭ್ಯರ್ಥಿ ಮತ್ತೊಂದು ಸ್ಥಾನವನ್ನು ತಮ್ಮದಾಗಿಸಿಕೊಂಡಿದ್ದಾರೆ.

ಬೀದರ್, ಕಲಬುರ್ಗಿ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡ ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿಯ ಎಸ್.ಜಿ. ನಾಮೋಶಿ 4,038 ಮತಗಳಿಂದ ಜಯ ಗಳಿಸಿದರೆ, ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಕೆ. ನರಹರಿ 1,883 ಮತ ಪಡೆದು ವಿಜಯ ಸಾಧಿಸಿದ್ದಾರೆ.

ತುಮಕೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಯನ್ನು ಒಳಗೊಂಡ ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ. ಎ.ಎಚ್. ಶಿವಯೋಗಿ ಸ್ವಾಮಿ 4,374 ಮತ ಗಳಿಸಿ ಜಯ ಸಾಧಿಸಿದ್ದಾರೆ.

● **ಗೊಬ್ಬರ ಹಗರಣ– ಪ್ರಕಾಶ್, ಸಂಜೀವ ರಾವ್ ಬಂಧನ**

ನವದೆಹಲಿ, ಜೂನ್ 18 (ಪಿಟಿಐ)– ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರ ಬಂಧು ಸಂಜೀವ ರಾವ್ ಹಾಗೂ ಹಿಂದಿನ ಸರ್ಕಾರದ ರಸಗೊಬ್ಬರ ಸಚಿವ ರಾಮ್‌ಲಖನ್ ಸಿಂಗ್ ಯಾದವ್ ಅವರ ಮಗ ಪ್ರಕಾಶಚಂದ್ರ ಅವರನ್ನು ಸಿಬಿಐ ಇಂದು 133 ಕೋಟಿ ರೂಪಾಯಿ ಯೂರಿಯಾ ಹಗರಣದಲ್ಲಿ ಲಂಚ ಪಡೆದ ಆರೋಪದ ಮೇರೆಗೆ ಬಂಧಿಸಿತು.

ನರಸಿಂಹ ರಾವ್ ಅವರ ಪುತ್ರ ರಾಜೇಶ್ವರ ರಾವ್ ಅವರ ಭಾವ ಸಂಜೀವ ರಾವ್ ಅವರನ್ನು ಹೈದರಾಬಾದ್‌ನಲ್ಲಿ ಬಂಧಿಸಲಾಯಿತು. ಪ್ರಕಾಶ ಚಂದ್ರ ಅವರನ್ನು, ಸಿಬಿಐ ಕೇಂದ್ರ ಕಚೇರಿಯಲ್ಲಿ ಇಂದು ಮಧ್ಯಾಹ್ನ ಮೂರನೇ ಬಾರಿಗೆ ವಿಚಾರಣೆಗೆ ಒಳಪಡಿಸಿದ ನಂತರ ದಸ್ತಗಿರಿ ಮಾಡಲಾಯಿತು.

50 ವರ್ಷಗಳ ಹಿಂದೆ

ಶನಿವಾರ, 19-6-1971

● **ಭದ್ರತಾ ಶಾಸನದ ಮಸೂದೆಗೆ ಲೋಕಸಭೆ ಅಸ್ತು**

ನವದೆಹಲಿ, ಜೂನ್ 18– 'ನಾಚಿಕೆಗೇಡು!' 'ಫ್ಯಾಸಿಸ್ಟ್ ಮುರ್ದಾಬಾದ್' ಎಂದು ಹೇಳುತ್ತಾ ವಿರೋಧ ಪಕ್ಷಗಳು ಸಭಾತ್ಯಾಗ ಮಾಡುತ್ತಿದ್ದಂತೆಯೇ ಲೋಕಸಭೆಯು ಇಂದು 1971ರ ಆಂತರಿಕ ಭದ್ರತಾ ಮಸೂದೆಗೆ ಒಪ್ಪಿಗೆ ನೀಡಿತು.

ಆಂತರಿಕ ಭದ್ರತಾ ಮಸೂದೆಯನ್ನು ವಿರೋಧಿಸಿ ಎಲ್ಲ ವಿರೋಧಪಕ್ಷಗಳ ಸದಸ್ಯರೂ ಸಭಾತ್ಯಾಗ ಮಾಡಿದರು.

ಸ್ಪೀಕರ್ ಮಸೂದೆಯನ್ನು ಮತಕ್ಕೆ ಹಾಕಿದಾಗ ಜನಸಂಘದ ಸದಸ್ಯರು 'ಇಂದಿರಾ ಷಾಹಿ ಮುರ್ದಾಬಾದ್' ಎಂದೂ ಕಮ್ಯುನಿಸ್ಟ್ ಸದಸ್ಯರು 'ಫ್ಯಾಸಿಸ್ಟ್ ಮುರ್ದಾಬಾದ್' ಎಂದೂ ಕೂಗುತ್ತಾ ಸಭೆಯಿಂದ ಹೊರಬಂದರು.

ಕಾರ್ಮಿಕರು ಅಥವಾ ರೈತ ಚಳವಳಿ ವಿರುದ್ಧ ಈ ಶಾಸನವನ್ನು ಬಳಸಲಾಗುವುದಿಲ್ಲವೆಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಶ್ರೀ ಕೆ.ಸಿ. ಪಂತ್ ಭರವಸೆ ನೀಡಿದಾಗ್ಯೂ, ಈ ವಿಧೇಯಕದ ಬಗ್ಗೆ ಸಂಸ್ಥಾ ಕಾಂಗ್ರೆಸ್ ಸದಸ್ಯರು ಹೊರತು ಉಳಿದೆಲ್ಲ ವಿರೋಧಪಕ್ಷದ ಸದಸ್ಯರು ಅಸಮ್ಮತಿ ವ್ಯಕ್ತಪಡಿಸಿದರು.

● **ಕಳ್ಳರ ಕೈಗೆ ಸಿಕ್ಕಿದ ವಿಷ್ಣು ವಿದೇಶಕ್ಕೆ**

ನವದೆಹಲಿ, ಜೂನ್ 18– ಕಳವು ಮಾಡಿದ ಐದು ಅಡಿ ಎತ್ತರದ ವಿಷ್ಣು ದೇವರ ವಿಗ್ರಹವನ್ನು ಸರಕು ಕೊಂಡುಕೊಳ್ಳುವ ಅಮೆರಿಕದ ಒಬ್ಬರಿಗೆ 50 ಲಕ್ಷ ರೂ.ಗಳಿಗೆ ಮಾರಾಟ ಮಾಡಿದುದಕ್ಕೆ ಸಂಬಂಧಿಸಿದಂತೆ ಇಲ್ಲಿನ ಮೂರು ಮಂದಿ ಪ್ರಾಚೀನ ಕಲಾವಸ್ತುಗಳ ಮಾರಾಟಗಾರರನ್ನು ಬಂಧಿಸಲಾಗಿದೆ.

ರೋಗಿಗಳನ್ನು ರಕ್ಷಿಸಬೇಕಾದ ವೈದ್ಯ, ಹಲ್ಲೆಯಿಂದ ತನ್ನನ್ನೇ ರಕ್ಷಿಸಿಕೊಳ್ಳಬೇಕಾದಂಥ ಸ್ಥಿತಿ ಬಂದರೆ...

ವೈರಾಣು ಮತ್ತು ಹಿಂಸಾಚಾರ

ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

'ವೈರಸ್ ವಿತ್ ವಯೊಲೆನ್ಸ್' ಎಂಬ ಪರಿಸ್ಥಿತಿಯನ್ನು ವೈದ್ಯಕೀಯ ಜಗತ್ತು ಎದುರಿಸುತ್ತಿರುವುದು ಪ್ರತಿದಿನ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ವೈದ್ಯರ ಮೇಲಿನ ಹಲ್ಲೆಯ ಪ್ರಕರಣಗಳು ಭಾರತದ ಎಲ್ಲ ರಾಜ್ಯಗಳಿಂದಲೂ ವರದಿಯಾಗುತ್ತಿವೆ. ಈ ಪ್ರಕರಣಗಳಲ್ಲಿ ಒಂದೆಡೆ ವೈದ್ಯ-ವೈದ್ಯಕೀಯ ಸಿಬ್ಬಂದಿ ಗಂಭೀರವಾಗಿ ದೈಹಿಕವಾಗಿ, ಮಾನಸಿಕವಾಗಿ ಸಮಸ್ಯೆಗೀಡಾಗುತ್ತಾರೆ. ಇನ್ನೊಂದೆಡೆ, ಘಟನೆಯ ನಂತರದ ತನಿಖೆಯಲ್ಲಿ ಸಿಕ್ಕಿಬಿದ್ದ ಕೆಲವರು (ಇವರು ಸಾಮಾನ್ಯವಾಗಿ ಯುವಕರು ಎಂಬುದು ಗಮನಾರ್ಹ) ದಂಡಕ್ಕೆ, ಬಂಧನಕ್ಕೆ ಒಳಗಾಗುತ್ತಾರೆ. ಇಂಥ ಘಟನೆಗಳು ವೈದ್ಯಕೀಯ ಸೇವೆ ಉತ್ತಮಗೊಳಿಸುವುದು ಬಿಡಿ, ವೈದ್ಯರು ಮತ್ತಷ್ಟು ಎಚ್ಚರದಿಂದ ಇರುವಂತೆ, ಸೇವೆ ನೀಡಿಕೆ ತಡೆಹಿಡಿಯುವಂತೆ ಮಾಡಿಬಿಡುತ್ತವೆ.

ವೈದ್ಯರ ಮೇಲಿನ ಹಿಂಸೆಯನ್ನು ಭಾರತಕ್ಕಷ್ಟೇ ಸೀಮಿತವಾದದ್ದೆಂದು ತಿಳಿದರೆ ಅದು ತಪ್ಪು. ಇತಿಹಾಸವನ್ನು ಅವಲೋಕಿಸಿದರೆ, 135 ವರ್ಷಗಳ ಹಿಂದೆಯೇ, ಅಂದರೆ ಜನಸಂಖ್ಯೆ ಕಡಿಮೆಯಿದ್ದು, ವೈದ್ಯರಿಗೂ ಬಹಳಷ್ಟು ಸಮಯವಿದ್ದು, 'ವೈದ್ಯೋ ನಾರಾಯಣೋ ಹರಿಃ' ಎಂದು ಜನರೂ ಒಪ್ಪುತ್ತಿದ್ದ ಕಾಲದಲ್ಲಿ ಪ್ರತಿಷ್ಠಿತ ಜರ್ನಲ್ ಒಂದರಲ್ಲಿ ಪ್ರಕಟವಾಗಿದ್ದ ಲೇಖನದ ಕೆಲವು ಸಾಲುಗಳ ಅರ್ಥ ಹೀಗಿತ್ತು: 'ಯಾವ ವೈದ್ಯನೂ ತಾನು ಎಷ್ಟೇ ಎಚ್ಚರಿಕೆಯಿಂದ, ಆತ್ಮಸಾಕ್ಷಿಯಿಂದ ಇದ್ದರೂ, ತಾನು ಮಾಡದ ತಪ್ಪಿಗಾಗಿ ಹಲವು ರೀತಿಯ ಹಿಂಸೆಗಳನ್ನು ಎದುರಿಸುವ ಸಾಧ್ಯತೆ ಇದ್ದೇ ಇದೆ ಎಂಬುದನ್ನು ಗಮನಿಸಲೇಬೇಕು'.

ಭಾರತದಲ್ಲಿ ವೈದ್ಯರ ಮೇಲಿನ ಕ್ರೌರ್ಯದ ಪ್ರಕರಣಗಳು ಹೆಚ್ಚಾಗಿವೆ ಎಂಬುದನ್ನು ಅರಿಯಲು ನಾವು ಯಾವ ಅಧ್ಯಯನಗಳನ್ನೂ ಪರಿಶೀಲಿಸಬೇಕಾಗಿಲ್ಲ. ಅವು ಸುತ್ತಮುತ್ತ ನಿಚ್ಚಳವಾಗಿ ಗೋಚರಿಸುತ್ತವೆ. ಕೋವಿಡ್ ಸಮಯದಲ್ಲಂತೂ ಇಂಥ ಪ್ರಕರಣಗಳು ಮತ್ತಷ್ಟು ಹೆಚ್ಚಾಗಿವೆ. ತಂತ್ರಜ್ಞಾನದ ಬಲದಿಂದ ಇಂಥ ಪ್ರಕರಣಗಳನ್ನು ಮತ್ತಷ್ಟು 'ವೈರಲ್' ಆಗಿ ಹರಿಯಬಿಡುವುದು, ವೈರಸ್‌ಗಿಂತ ಅವು ವೇಗವಾಗಿಯೂ ತೀವ್ರವಾಗಿಯೂ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಅವುಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸದೆ, ತತ್‌ಕ್ಷಣದ ಪ್ರತಿಕ್ರಿಯೆ ನೀಡುವಂತೆ ಸಾವಿರಾರು ಮನಸ್ಸುಗಳನ್ನು ಪ್ರಚೋದಿಸುತ್ತವೆ. ಇಂತಹ ಸಂದೇಶಗಳು, ವಿಡಿಯೊಗಳನ್ನು 'ವೈರಲ್' ಎನ್ನುವುದಕ್ಕಿಂತ 'ಅಲ್ಟ್ರಾ ವೈರಲ್' ಎನ್ನುವುದೇ ಸರಿ!

ರೋಗಿಗಳ ಕುಟುಂಬದವರು ಏಕೆ ಹಿಂಸೆಗೆ ತೊಡಗುತ್ತಾರೆ ಎನ್ನುವುದರ ಹಿಂದಿನ ಮನಃಸ್ಥಿತಿಯನ್ನು ಗಮನಿಸೋಣ. ಈ ಮನಃಸ್ಥಿತಿಯ ಕೇಂದ್ರವೆಂದರೆ ಆತಂಕ. ಆತಂಕವು ಜನರನ್ನು ಬೆಂಬಲಕ್ಕಾಗಿ ಕರೆಯುವುದನ್ನು ಪ್ರಚೋದಿಸುತ್ತದೆ. ಬೆಂಬಲಕ್ಕೆ ಬಂದ ಹಲವರಿಗೆ ಕಾಯಿಲೆ-ರೋಗಿಯ ಪರಿಸ್ಥಿತಿಯ ತಲೆ-ಬುಡಗಳು ಗೊತ್ತಿರುವುದಿಲ್ಲ. ಸಾವು ಉಂಟಾಗಿದೆ ಅಥವಾ ರೋಗಿಯ ಪರಿಸ್ಥಿತಿ ಗಂಭೀರವಾಗಿದೆ ಎಂದಾಗ, ಮಾಹಿತಿ ಗೊತ್ತಿರುವ ರೋಗಿಯ ಪತಿ, ಪತ್ನಿ, ಹತ್ತಿರದ ಸಂಬಂಧಿ ಆತಂಕ-ದುಃಖದಲ್ಲಿ ಮುಳುಗಿರುತ್ತಾರೆ. ಬೆಂಬಲಕ್ಕಾಗಿ ಬಂದಿರುವ ಪರಿಚಿತರು, ಇತರ ಸಂಬಂಧಿಕರು ಅವರಿಗೆ ಹೇಗಾದರೂ ಸಹಾಯ ಮಾಡಬೇಕೆನ್ನುವ ಉದ್ದೇಶ ಹೊಂದಿರುತ್ತಾರೆ. ಕೆಲವೊಮ್ಮೆ 'ಗಲಾಟೆ ಮಾಡಿದರೆ ಸರಿ'ಯಾಗುತ್ತದೆ ಎನ್ನುವ ನಂಬಿಕೆ ಅವರಿಗಿರುತ್ತದೆ. ಇನ್ನು ಕೆಲವೊಮ್ಮೆ ತಮ್ಮ ಮುಖ್ಯ ಉದ್ದೇಶವಾದ 'ರೋಗಿ ಆರಾಮಾಗಬೇಕು' ಎಂಬುದನ್ನು ಬದಿಗಿರಿಸಿ ವೈದ್ಯರನ್ನು ಬೆದರಿಸಿ 'ಸರಿ' ಮಾಡುವುದನ್ನೇ ತಮ್ಮ ಮುಖ್ಯ ಗುರಿಯಾಗಿಸಿಕೊಂಡು ಬಿಡುತ್ತಾರೆ, ಗಲಾಟೆಯೆಬ್ಬಿಸುವುದು, ಹಿಂಸೆ ಮಾಡುವುದನ್ನೇ ಕೇಂದ್ರವಾಗಿಸಿ ಬಿಡುತ್ತಾರೆ. ಇದು ಚಿಕಿತ್ಸೆಗಾಗಿ ಕಾದಿರುವ ಇತರ ರೋಗಿಗಳಿಗೂ ಚಿಕಿತ್ಸೆ ನೀಡಲಾಗದ, ತನ್ನ ರಕ್ಷಣೆಯನ್ನು ಹೇಗಾದರೂ ಮಾಡಿಕೊಳ್ಳಬೇಕಾದ ತುರ್ತಿಗೆ ವೈದ್ಯನನ್ನು ತಳ್ಳುತ್ತದೆ.

ರೋಗಿಗಳು ಮತ್ತು ಆತನ ಮನೆಯವರಿಗೆ ವೈದ್ಯಕೀಯ ಸೇವೆಗಳನ್ನು ಪಡೆಯುವಲ್ಲಿ ಮುಖ್ಯ ಸವಾಲುಗಳೆಂದರೆ, ದೀರ್ಘ ಕಾಯುವ ಅವಧಿ, ತತ್‌ಕ್ಷಣ ಬೇಕಾದ ಪರೀಕ್ಷೆಗಳು ಸಕಾಲಕ್ಕೆ ದೊರೆಯದಿರುವುದು, ಮತ್ತೊಂದೆಡೆ ಕಳಿಸುವಷ್ಟರಲ್ಲಿ ತಡವಾಗುವುದು ಮತ್ತು ಜನಜಂಗುಳಿ. ಕೋವಿಡ್‌ನಂತಹ ಸಂದರ್ಭದಲ್ಲಿ ಮತ್ತಷ್ಟು ಸವಾಲುಗಳು- ಸಂಚಾರದ ತಡೆ, ಮಾಹಿತಿ ಪಡೆಯಲು ಒಬ್ಬರಿಗಿಂತ ಹೆಚ್ಚು ಜನರಿಗೆ ಸಾಧ್ಯವಾಗಿರುವುದು, ಐ.ಸಿ.ಯು ರೋಗಿಗಳು ಹೆಚ್ಚಿರುವುದು, ಈ ರೋಗಿಗಳ ಜೊತೆಗೆ ಯಾರನ್ನೂ ಇರಲು ಬಿಡದಿರುವುದು ಇತ್ಯಾದಿ.

ಸವಾಲುಗಳು ಕೇವಲ ರೋಗಿಗಷ್ಟೇ ಅಲ್ಲ, ವೈದ್ಯರಿಗೂ ಸವಾಲುಗಳೇ! ಇಂಥ ಸಮಯದಲ್ಲಿ 'ಸಿಕ್ಸ್ ಮಿನಿಟ್ಸ್ ಫಾರ್ ಎ ಪೇಷಂಟ್'- 'ಒಬ್ಬ ರೋಗಿಗೆ ಆರು ನಿಮಿಷಗಳು' ಎಂಬ ಸೂತ್ರದಂತೆ, 'ಟ್ರಯೇಜ್' ಅನ್ನು (Triage– ಅಂದರೆ ಚಿಕಿತ್ಸೆ ನೀಡಬೇಕಾದ ಕ್ರಮವನ್ನು ನಿರ್ಧರಿಸುವ ಒಂದು ವ್ಯವಸ್ಥೆ. ಯಾರು ಬೇಗ ಬಂದಿದ್ದಾರೆ ಎಂಬುದಕ್ಕಿಂತ, ಯಾರ ಸ್ಥಿತಿ ಗಂಭೀರವಾಗಿದೆ ಎಂದು ಗಮನಿಸಿ ಚಿಕಿತ್ಸೆ ನೀಡುವುದು) ವೈದ್ಯರು ಕರಗತ ಮಾಡಿಕೊಂಡರೂ ರೋಗಿಗೆ, ಆತನ ಆತ್ಮೀಯರಿಗೆ ಇವು ಅರ್ಥವಾಗುವುದು ಕಷ್ಟಸಾಧ್ಯ.

ಇವುಗಳ ಮಧ್ಯೆ ಮತ್ತೊಂದು ವಿಷಯ ಸಾಮಾನ್ಯವಾಗಿ ಎಲ್ಲ ವೈದ್ಯರನ್ನು ಕಾಡುತ್ತದೆ. ರೋಗಿಗಳಿಗೆ, ಅವರ ಮನೆಯವರಿಗೆ ಸರಿಯಾಗಿ ಮಾಹಿತಿ ತಿಳಿಸಿಕೊಡುವುದು ಈ ರೀತಿಯ ಹಿಂಸೆಗಳನ್ನು ತಡೆಯುತ್ತದೆ ಎಂದು ಬಹು ಜನ ಹಿರಿಯ ವೈದ್ಯರು ಸಾಮಾನ್ಯವಾಗಿ ಕಿರಿಯ ವೈದ್ಯರಿಗೆ ಕಿವಿಮಾತು ಹೇಳುತ್ತಾರಷ್ಟೆ. ಆದರೆ ಮಾಹಿತಿಯನ್ನು ರೋಗಿ, ಅವರ ಮನೆಯವರಿಗೆ ಕೊಡಬಹುದು.

ಆದರೆ, ಬರುತ್ತಲೇ ಇರಬಹುದಾದ ರೋಗಿಯ ಹಲವು ಸಂಬಂಧಿಕರಿಗೆ ಅದನ್ನು ಮತ್ತೆ ಮತ್ತೆ ಹೇಳುವುದು, ದಿನಕ್ಕೆ 50-70 ರೋಗಿಗಳನ್ನು ನೋಡಬೇಕಾದ ಅವಶ್ಯಕತೆಯಿರುವ ಗ್ರಾಮೀಣ- ಚಿಕ್ಕ ನಗರ ಪ್ರದೇಶಗಳ ವೈದ್ಯರಿಗೆ ಹೇಗೆ ಸಾಧ್ಯ? ಅದರ ಮೇಲೆ ಬಹು ಬಾರಿ ರೋಗಿಗಳ ಮನೆಯವರು ಸಾಮಾನ್ಯವಾಗಿ ರೋಗದ ಎಲ್ಲ ಲಕ್ಷಣ, ಅಪಾಯಗಳನ್ನು ವಿವರಿಸಿದ ಮೇಲೆ ಕೇಳುವ ಒಂದು ಪ್ರಶ್ನೆ 'ಮತ್ತೆ ಏನೂ ಅಪಾಯ ಇಲ್ಲ ಅಲ್ವ ಡಾಕ್ಟ್ರೇ?!' ಈ ಪ್ರಶ್ನೆಗೆ ವೈದ್ಯರು ನೀಡುವ ಉತ್ತರ 'ಇಲ್ಲ' ಎಂದಾದರೆ, ವೈದ್ಯರು ಅವರಿಗೆ ವಿವರಿಸಿದ ಎಲ್ಲ ಅಪಾಯಗಳನ್ನೂ ಬದಿಗಿರಿಸಿಬಿಡುವ ಸಾಧ್ಯತೆ ಎರಗಿಬಿಡುತ್ತದೆ. ಹಾಗಾಗಿಯೇ ಮತ್ತೆ ಈ ಪ್ರಶ್ನೆಗೆ ಇನ್ನೊಂದು ಬಾರಿ ರೋಗದ ಬಗ್ಗೆ ವಿವರಿಸಬೇಕಾಗುತ್ತದೆ.

ಇವುಗಳಿಗೆಲ್ಲ ಪರಿಹಾರ ಎರಡು ಹಂತಗಳಲ್ಲಿದೆ. ಮೊದಲನೆಯದು, ದೀರ್ಘಕಾಲ ಸಮಾಜವು ವೈದ್ಯಕೀಯ ಸೇವೆ ಉತ್ತಮಪಡಿಸಲು ಶ್ರಮಿಸಬೇಕಾದ ಹಾದಿ. ವೈದ್ಯ ಕೊನೆಯಲ್ಲಿ 'ಸಾವಿನ ಸುದ್ದಿ'ಯನ್ನು ತಲುಪಿಸುವ, 'ಹದಗೆಟ್ಟ ಒಂದು ವ್ಯವಸ್ಥೆ'ಯ ಪ್ರತಿನಿಧಿಯಾಗಿರಬಹುದು ಅಥವಾ ಕೆಲವೊಮ್ಮೆ ಕಾಯಿಲೆಯ ಆರಂಭಿಕ ಹಂತದಲ್ಲಿ ಚಿಕಿತ್ಸೆಗೆ ಒಳಪಡದ, ತಡವಾಗಿ ಬಂದು ಉಲ್ಬಣಗೊಂಡ ಕಾಯಿಲೆಯ ಸ್ಥಿತಿಯಿಂದ ಸಾವಿಗೀಡಾದ, ಅಪಾಯಕ್ಕೀಡಾದ ವ್ಯಕ್ತಿಯ ಕುಟುಂಬದವರ ಆರೋಪಕ್ಕೆ ಬಲಿಪಶುವಾಗುವ ಸಾಧ್ಯತೆಯೂ ಇರಬಹುದು. ಒಂದೊಮ್ಮೆ ವೈದ್ಯನ ತಪ್ಪು ಗ್ರಹಿಕೆಯಿಂದ, ನಿರ್ಲಕ್ಷ್ಯದ ನಡವಳಿಕೆಯಿಂದ ಸಾವು ಅಥವಾ ಅಪಾಯ ಒದಗಿದ್ದರೂ ಆತನನ್ನು ಸರಿ ಪಡಿಸುವ, ವೈದ್ಯಕೀಯ ಜಗತ್ತನ್ನು ಉತ್ತಮಪಡಿಸುವ ಸರಿದಾರಿಯೆಂದರೆ ಕಾನೂನುಬದ್ಧ ಹೋರಾಟ.

ವೈದ್ಯಕೀಯ ತರಬೇತಿಯಲ್ಲಿಯೂ ಹಲವು ಬದಲಾವಣೆಗಳು ಆರಂಭವಾಗಿವೆ. ಕಡಿಮೆ ಸಮಯದಲ್ಲಿ ಸರಿಯಾದ ಪದಗಳನ್ನು ಉಪಯೋಗಿಸುವ ಸಂವಹನದ ಸಾಮರ್ಥ್ಯ, ರೋಗಿಗಳು, ಅವರ ಮನೆಯವರಿಂದ ಹಿಂಸೆ ಎದುರಾಗುವ ಮುನ್ನವೇ ಅದನ್ನು ಗ್ರಹಿಸುವುದು, ರೋಗಿಗಳು, ಅವರ ಮನೆಯವರಿಗೆ ಅರಿವು ಮೂಡಿಸುವುದು, ಸಾವಿನಂತಹ ಕಷ್ಟದ ಸಂದರ್ಭಗಳಲ್ಲಿ ರೋಗಿಯನ್ನು ಕಳೆದುಕೊಂಡು ಪ್ರಕ್ಷುಬ್ಧವಾಗಿರುವ ಮನಃಸ್ಥಿತಿಯಲ್ಲಿ ಸ್ಥಿರತೆಯಿಂದ ಸಾಂತ್ವನ ಹೇಳುವ ಕಲೆಯನ್ನು ಅನುಭವದಿಂದ ರೂಢಿಸಿಕೊಳ್ಳುವುದು ಇವುಗಳನ್ನು ಇಂದಿನ ವೈದ್ಯಕೀಯ ಪದವಿ- ಸ್ನಾತಕೋತ್ತರ ಪದವಿಗಳಲ್ಲಿ ಕಲಿಸುವುದು ಅಗತ್ಯ.

ವೈದ್ಯರು- ಆಸ್ಪತ್ರೆ ವಿರುದ್ಧದ ಹಿಂಸೆಯು ಕ್ರಿಮಿನಲ್ ಅಪರಾಧ ಎಂಬುದು ವೈದ್ಯಕೀಯ ಜಗತ್ತಿಗೆ ಕಾನೂನು ನೀಡಿರುವ ರಕ್ಷಣೆ. ಆದರೆ ಇದರ ಅರಿವು ಜನರಲ್ಲಿ ವ್ಯಾಪಕವಾಗಿಲ್ಲ. ಆಡಳಿತ ವ್ಯವಸ್ಥೆ, ಮಾಧ್ಯಮಗಳು ವೈದ್ಯರ ಮೇಲಿನ ಹಲ್ಲೆ ಪ್ರಕರಣಗಳನ್ನು ಗಮನಿಸುವಂತೆ, ಆ ಕ್ಷಣದ ಪರ, ವಿರೋಧಗಳನ್ನು ವೈಭವೀಕರಿಸುವಂತೆ ಹಲ್ಲೆಯ ನಂತರದ ಘಟನಾವಳಿಗಳನ್ನು ಗಮನಿಸಲಾರವು. ಹೀಗೆ ಗಮನಿಸುವುದು ವೈದ್ಯಕೀಯ ಜಗತ್ತಿಗೆ-ಸಮಾಜಕ್ಕೆ ಪ್ರಬಲ ಸಂದೇಶ ನೀಡುವ ಎಲ್ಲ ಸಾಧ್ಯತೆಗಳೂ ಇವೆ. ವೈರಾಣು- ರೋಗಾಣುವಿನ ಜೊತೆಗೆ ಹೊಡೆದಾಡುತ್ತ ರೋಗಿಗಳನ್ನು ರಕ್ಷಿಸಬೇಕಾದ ವೈದ್ಯ, ರೋಗಿಗಳೊಡನೆಯೇ ಹೋರಾಡಬೇಕಾದ ವ್ಯವಸ್ಥೆಯನ್ನು ಸೃಷ್ಟಿಸದಿರೋಣ.

ಲೇಖಕಿ: ಮನೋವೈದ್ಯೆ, ಶಿವಮೊಗ್ಗ

ಚುರುಮುರಿ



ಫೋಟೊ ಫಿನಿಶ್!

● ಗುರು ಪಿ.ಎಸ್.

'ಏನ್ ಮುದ್ದಣ್ಣ ಅರ್ಜೆಂಟಾಗಿ ಎಲ್ಲೋ ಹೋಗ್ತಿದಿಯಾ... ಏನಿದು ಕೈಯಲ್ಲಿ ಇಷ್ಟೊಂದು ಫೋಟೊಗಳು' ಕುತೂಹಲದಿಂದ ಕೇಳ್ದ ವಿಜಿ.

'ಇವೆಲ್ಲ ನಮ್ಮ ಪೊಲಿಟಿಷಿಯನ್‌ಗಳ ಫೋಟೊಗಳು ಸರ್...'

'ಫೋಟೊ ಸ್ಟುಡಿಯೊ ಏನಾದರೂ ಇಡಬೇಕು ಅಂತಿದೀಯೋ ಹೇಗೆ?'

'ಏಯ್, ಇಲ್ಲ ಸರ್... ನಾನು ಪೋರ್ಚುಗಲ್‌ಗೆ ಹೋಗ್ತಿದೀನಿ ಅಂದೆ, ಅದಕ್ಕೆ ಅವರೆಲ್ಲ ಫೋಟೊ ಕೊಟ್ಟಿದ್ದಾರೆ'.

'ಹಾಗಂದ್ರೆ ಏನಯ್ಯ? ಸ್ವಲ್ಪ ಬಿಡಿಸಿ ಹೇಳು'.

'ನಾನು ಕ್ರಿಸ್ಟಿಯಾನೊ ರೊನಾಲ್ಡೊ ಅವರ ದೊಡ್ಡ ಅಭಿಮಾನಿ. ಅದಕ್ಕೆ ಪೋರ್ಚುಗಲ್‌ಗೆ ಹೋಗ್ತಿದೀನಿ. ಅವರು ಯಾವುದೋ ಕೂಲ್ ಡ್ರಿಂಕ್ಸ್ ಬಾಟಲನ್ನು ದೂರ ಸರಿಸಿ, ನೀರು ಕುಡಿಯಿರಿ ಅಂದಿದ್ದೇ 'ಕೋಲಾ'ಹಲ ಸೃಷ್ಟಿಯಾಗಿದೆಯಲ್ಲ ಸರ್. ಅದಾದ ಮೇಲೆ ಬಹಳಷ್ಟು ಜನ ಆ ಡ್ರಿಂಕ್ಸ್‌ನ ತಗೊಳೋದನ್ನೇ ಬಿಟ್ರಂತೆ. ಅದಕ್ಕೆ ಅವರಿಗೆ ವಿಶ್ ಮಾಡಿ, ಹಾರ ಹಾಕಿ ಬರೋಣ ಅಂದ್ಕೊಂಡಿದೀನಿ'.

'ನಮ್ ಪೊಲಿಟಿಷಿಯನ್‌ಗಳ ಫೋಟೊ ಯಾಕಪ್ಪ ಅದಕ್ಕೆ...' ಕೇಳ್ದ ವಿಜಿ.

'ಆಳ್ತಿರೋರು, ಆಳಬೇಕು ಅಂತಿರೋರು, ಆಳ್ತಿರೋರನ್ನ ಬೀಳಿಸಬೇಕು ಅಂತಿರೋರು, ಇವರು ಬಿದ್ದ ತಕ್ಷಣ ನಾವೆದ್ದು ಬರಬೇಕು ಅಂತಿರೋ ವಿರೋಧ ಪಕ್ಷದವರದೆಲ್ಲ ಫೋಟೊಗಳು ಇದರಲ್ಲಿ ಇವೆ ಸರ್'.

'ಪೋರ್ಚುಗಲ್‌ಗೆ ಹೋದ ತಕ್ಷಣ ರೊನಾಲ್ಡೊ ಕಡೆಯಿಂದ ನಾನು ಮತ್ತೊಂದು ಪ್ರೆಸ್ ಮೀಟ್ ಮಾಡಿಸಬೇಕಂತೆ. ಅವರ ಮುಂದೆ ಇವರೆಲ್ಲರ ಫೋಟೊ ಇಟ್ಟು, ಒಬ್ಬರದನ್ನು ಸೆಲೆಕ್ಟ್ ಮಾಡಿಸಬೇಕಂತೆ. ನನ್ನ ಫೋಟೊನೇ ಅವರ ಕೈಯಲ್ಲಿ ಹಿಡ್ಕೊಳಂಗೆ ಮಾಡು ಅಂತ ಎಲ್ರೂ ನನಗೆ ದುಡ್ಡು ಕೊಟ್ಟಿದ್ದಾರೆ ಸರ್...' ಸೂಟ್‌ಕೇಸ್ ತೋರಿಸಿದ ಮುದ್ದಣ್ಣ.

'ಅವರು ನೀರು ಕುಡೀರಿ ಅಂದಿದ್ದಕ್ಕೆ ಅದು ಮುಖ್ಯ ವಿಷಯವಾಯ್ತು. ಇವರೇನ್ ಮಾಡಿದ್ದಾರೆ?'

'ಇವರೂ ನೀರು ಮಾತ್ರ ಕುಡಿಸ್ತಿದಾರಲ್ಲ ಸರ್, ಊಟ, ಕೆಲಸ ಕೊಡದೆ' ವ್ಯಂಗ್ಯವಾಗಿ ಹೇಳ್ದ ಮುದ್ದಣ್ಣ.

'ಇವರೆಲ್ಲರ ಫೋಟೊಗಳನ್ನೂ ರೊನಾಲ್ಡೊ ದೂರ ಸರಿಸಿಬಿಟ್ಟರೆ...'

'ಎಲ್ಲರೂ ನೀರು ಕುಡಿತಾರಷ್ಟೇ...'

ಸಂಗತ

ಪ್ರಜ್ಞೆ ಕಟ್ಟುವ ಭಾವಕೇಂದ್ರಿತ ಪಠ್ಯ

ಪದವಿ ತರಗತಿಗಳಲ್ಲಿ ಭಾಷಾ ವಿಷಯವನ್ನು ಕಡೆಗಣಿಸುವುದು ಅಸಮತೋಲನ ಮತ್ತು ಅಸೂಕ್ಷ್ಮವಾದ ನಿರ್ಧಾರ

● ರಹಮತ್ ತರೀಕೆರೆ

ಆಚಾರ್ಯ ಬಿ.ಎಂ.ಶ್ರೀಯವರು, 20ನೇ ಶತಮಾನದ ಮೊದಲ ದಶಕಗಳಲ್ಲಿ ಎರಡು ಪರಿಕಲ್ಪನೆಗಳನ್ನು ಮುಂದಿಟ್ಟಿದ್ದರು. 1. ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ. 2. ಕನ್ನಡ ಮಾತು ತಲೆಯೆತ್ತುವ ಬಗೆ. ಈ ಪರಿಕಲ್ಪನೆಗಳನ್ನು ಈಗಿನ ಸನ್ನಿವೇಶಕ್ಕೆ ರೂಪಾಂತರಿಸಿ, ಹೊಸ ಆಯಾಮದಲ್ಲಿ ಮತ್ತೊಮ್ಮೆ ಮುಂದಿಡುವ ಅಗತ್ಯವಿದೆ. ಇದಕ್ಕೆ ಕಾರಣ, ಈಚೆಗೆ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ಭಾಗವಾಗಿ, ತಜ್ಞರ ಸಮಿತಿಯು ಎಂಟು ಸೆಮಿಸ್ಟರುಗಳ ಪದವಿ ತರಗತಿಗಳಲ್ಲಿ ಭಾಷಾ ವಿಷಯಗಳನ್ನು ಎರಡು ಸೆಮಿಸ್ಟರುಗಳಿಗೆ ಸೀಮಿತಗೊಳಿಸಲು ಮುಂದಿಟ್ಟಿರುವ ಪ್ರಸ್ತಾವ.

ಇದಕ್ಕೆ ಬರಗೂರು ರಾಮಚಂದ್ರಪ್ಪ ಮೊದಲಾದ ಲೇಖಕರಿಂದಲೂ ಅಧ್ಯಾಪಕ ಸಮುದಾಯದಿಂದಲೂ ಕನ್ನಡಪರ ಸಂಸ್ಥೆ- ಪ್ರಾಧಿಕಾರಗಳಿಂದಲೂ ಪ್ರತಿರೋಧ ವ್ಯಕ್ತವಾಗಿದೆ. ಇದಕ್ಕುತ್ತರವಾಗಿ ಉನ್ನತ ಶಿಕ್ಷಣ ಸಚಿವರು, ಭಾಷಾ ವಿಷಯಗಳನ್ನು ಹಿಂದಿನಂತೆ ನಾಲ್ಕು ಸೆಮಿಸ್ಟರುಗಳಿಗೆ ಮುಂದುವರಿಸುವುದಾಗಿ ಭರವಸೆ ನೀಡಿದ್ದಾರೆ.

ಪ್ರಶ್ನೆಯೆಂದರೆ, ತಜ್ಞರ ಸಮಿತಿ ಈ ಬಗೆಯ ಪ್ರಸ್ತಾವವನ್ನು ಯಾಕೆ ನೀಡಿತು ಎನ್ನುವುದು. ಇದಕ್ಕೆ ಹಲವು ಕಾರಣಗಳಿವೆ. ಅವುಗಳಲ್ಲಿ 'ಜ್ಞಾನಕೇಂದ್ರಿತ'ವಾದ ವಿಜ್ಞಾನ, ವಾಣಿಜ್ಯ, ಸಮಾಜವಿಜ್ಞಾನದ ವಿಷಯಗಳ ಹಾಗೂ 'ಭಾವಕೇಂದ್ರಿತ'ವಾದ ಭಾಷೆ, ಸಾಹಿತ್ಯದ ವಿಷಯಗಳ ನಡುವೆ ಶಿಕ್ಷಣ ವ್ಯವಸ್ಥೆಯಲ್ಲಿ ಮೊದಲಿಂದಲೂ ಇರುವ ಅಘೋಷಿತ ತರತಮವೂ ಒಂದು. ಮಾಹಿತಿಯನ್ನು ತಾರ್ಕಿಕವಾಗಿ ಮಥಿಸಿ ಹುಟ್ಟುವ ವಸ್ತುಜ್ಞಾನ ಮತ್ತು ಲೋಕಜ್ಞಾನಗಳು, ಅನುಭವ ಕಲ್ಪನೆ ಚಿಂತನೆ ಮತ್ತು ಭಾವನಾತ್ಮಕತೆ ಪ್ರಧಾನವಾಗಿರುವ ಕಲಾಭಿವ್ಯಕ್ತಿಗಳಿಗಿಂತ ಮುಖ್ಯವಾದವು ಮತ್ತು ಉಪಯುಕ್ತವಾದವು ಎಂಬ ಗ್ರಹಿಕೆಯ ಪರಿಣಾಮವಿದು. ಅದರಲ್ಲೂ ವಿಜ್ಞಾನ ಮತ್ತು ತಂತ್ರಜ್ಞಾನಗಳು, ಆಯಾ ಕಾಲದ ಉದ್ಯಮ-ಪ್ರಧಾನ ಆರ್ಥಿಕತೆಯ ಜತೆ ನಂಟನ್ನು ಪಡೆದುಕೊಂಡ ಬಳಿಕ, ಈ ಗ್ರಹಿಕೆ ಮತ್ತಷ್ಟು ದೃಢಗೊಂಡಿತು. ಹೀಗಾಗಿಯೇ ಜ್ಞಾನಕೇಂದ್ರಿತ ವಿಷಯಗಳ ಪಾಠದಿಂದ ದಣಿದ ವಿದ್ಯಾರ್ಥಿಗಳಿಗೆ ಮನಸ್ಸನ್ನು ಹಗುರಗೊಳಿಸುವ ರಂಜನ ಸಾಮಗ್ರಿಯಾಗಿ ಭಾಷೆ, ಸಾಹಿತ್ಯವನ್ನು ಪರಿಭಾವಿಸಿದವರು ಕಾಣಸಿಗುವರು.

ಹಲವು ಬಗೆಯ ಕಸುವುಳ್ಳ ತಿನಿಸಿನಿಂದ ದೇಹಾರೋಗ್ಯ ಬಲಗೊಳ್ಳುವಂತೆ, ಹಲವು ನೆಲೆಯ ಮಾಹಿತಿ, ಜ್ಞಾನ ಹಾಗೂ ಕಲಾಭಿವ್ಯಕ್ತಿಗಳ ಮೂಲಕ ವಿದ್ಯಾರ್ಥಿ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಈ ಪ್ರಕ್ರಿಯೆಯಲ್ಲಿ ಭಾಷಾವಿಷಯ ಕಡೆಗಣಿಸುವುದು, ಅಸಮತೋಲನ ಮತ್ತು ಅಸೂಕ್ಷ್ಮ ನಿರ್ಧಾರ. ಶಿಕ್ಷಣನೀತಿ ರೂಪಿಸುವಲ್ಲಿ ಅದರ ಬಾಧ್ಯಸ್ಥರೆಲ್ಲರೂ ಭಾಗವಹಿಸದೆ ಹೋದಾಗ, ಅದರಲ್ಲೂ ಉದ್ಯಮಿಗಳು ಪ್ರಧಾನವಾಗಿರುವ ಕಡೆ, ಈ ಬಗೆಯ ಅಸಮತೋಲನ ಸಹಜ.

ಪ್ರಜೆಗಳು ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಮೂಲಕ ಅತ್ಯುತ್ತಮ ನಾಗರಿಕರಾಗಲು ರೂಪುಗೊಳಿಸಲ್ಪಟ್ಟ ಹಾದಿಯಲ್ಲಿ, ಅವರಿಗೆ ಜ್ಞಾನಕೇಂದ್ರಿತ ವಿಷಯಗಳಷ್ಟೇ ಭಾವಕೇಂದ್ರಿತ ವಿಷಯಗಳೂ ಅಗತ್ಯ. ಭಾವಕೇಂದ್ರಿತ ವಿಷಯಗಳು ಮಾನವರು ಸಹಮಾನವರ ಹಾಗೂ ಇತರ ಜೀವಿಗಳ ಜತೆ ಒಟ್ಟಿಗೆ ಬದುಕುತ್ತಿರುವ ಪರಿಸರದ ಬಗ್ಗೆ ನಮ್ಮ ಪ್ರಜ್ಞೆಯನ್ನು ಕಟ್ಟುತ್ತವೆ. ಸಂವಿಧಾನದ ಬಗ್ಗೆ ವಿದ್ಯಾರ್ಥಿಗಳು ರಾಜ್ಯಶಾಸ್ತ್ರದ ಚೌಕಟ್ಟಿನಲ್ಲಿ ಪಡೆವ ಅರಿವನ್ನು, ಟ್ಯಾಗೋರರ 'ವೇರ್ ದಿ ಮೈಂಡ್ ಈಸ್' ಕವನ ಅಥವಾ ಕುವೆಂಪು ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಲೇಖನ ತನ್ನ ಭಾವ ಮತ್ತು ಚಿಂತನೆಯ ಮೂಲಕ ಅರ್ಥಪೂರ್ಣವಾಗಿ ಉದ್ದೀಪಿಸಬಲ್ಲದು.

ಭಾವಕೇಂದ್ರಿತ ಪಠ್ಯಗಳು ನಮ್ಮ ನಾಡಿನ ಮತ್ತು ಜಗತ್ತಿನ ಬೇರೆಬೇರೆ ಸಂಸ್ಕೃತಿ, ಪರಂಪರೆಗಳ ಬಗ್ಗೆ ಸೂಕ್ಷ್ಮತೆಯನ್ನು ಬೆಳೆಸುತ್ತವೆ. ಈ ಸಂವೇದನೆ ರೂಪಿಸುವ ಮತ್ತು ಸೂಕ್ಷ್ಮತೆ ಬೆಳೆಸುವ ಕೆಲಸವನ್ನು, ಅತ್ಯುತ್ತಮ ಸಾಹಿತ್ಯವೂ ಒಳಗೊಂಡಂತೆ ಸಂಗೀತ, ರಂಗಭೂಮಿ, ಚಿತ್ರಕಲೆ, ಸಿನಿಮಾ ಮುಂತಾದ ಕಲೆಗಳು ಹಿಂದಿನಿಂದಲೂ ಮಾಡುತ್ತ ಬಂದಿವೆ. ಭಾವಕೇಂದ್ರಿತ ಪಠ್ಯ ಮತ್ತು ಕಲೆಗಳಿಗೆ ಮುಖಾಮುಖಿಯಾಗುವ ವಿದ್ಯಾರ್ಥಿಗಳು ಜ್ಞಾನಕ್ಕೆ ತೆರೆದುಕೊಳ್ಳುವುದಿಲ್ಲ. ಸಮಾಜ ಮತ್ತು ನಿಸರ್ಗ ಪರಿಸರಗಳ ಬಗ್ಗೆ ಸಂವೇದನೆ ಬೆಳೆಸಿಕೊಳ್ಳುತ್ತಾರೆ; ಬಾಳಿನಲ್ಲಿ ಮಾನವೀಯ ಸಂಬಂಧಗಳ ನಿರ್ವಹಣೆಗೆ ಬೇಕಾದ ಭಾಷಿಕ ಮತ್ತು ಸಾಂಸ್ಕೃತಿಕ ನುಡಿಗಟ್ಟು ಪಡೆದುಕೊಳ್ಳುತ್ತಾರೆ.

ಈಚೆಗೆ ಭಾಷಾಪಠ್ಯಗಳು ಕೇವಲ ಸಂಧಿ ಸಮಾಸಗಳಿಗೆ ಅಥವಾ ಕತೆ ಕವಿತೆ ನಾಟಕದಂತಹ 'ಸೃಜನಶೀಲ' ಪಠ್ಯಗಳಿಗೆ ಸೀಮಿತವಾಗಿಲ್ಲ. ಈಗ ಸಾಹಿತ್ಯದ ಪರಿಕಲ್ಪನೆಯೇ ವಿಸ್ತಾರಗೊಂಡಿದೆ. ಅದರಲ್ಲಿ ಜನಪ್ರಿಯ ವಿಜ್ಞಾನ, ಆತ್ಮಕತೆ, ಪತ್ರಿಕಾ ಲೇಖನ, ಅಂಕಣ ಬರಹ, ತತ್ವಪದ ಒಳಗೊಂಡಂತೆ, ಕನ್ನಡ ಭಾಷೆಯ ಮೂಲಕ ಸೃಷ್ಟಿಯಾಗಿರುವ ವಿಶಾಲ ವಾಙ್ಮಯವಿದೆ. ಅದರೊಳಗೆ ಜಗತ್ತಿನ ಅತ್ಯುತ್ತಮ ವಾಙ್ಮಯದ ಅನುವಾದವೂ ಸೇರಿಕೊಂಡಿದೆ. ಈ ಸಾಹಿತ್ಯಕ್ಕೆ ಸಿನಿಮಾ, ರಂಗಭೂಮಿ, ಸಂಗೀತಗಳಿಗೆ ಹೊರಚಾಚುಗಳು ಲಗತ್ತಾಗಿವೆ. ಆದ್ದರಿಂದ ಭಾಷಾ ವಿಷಯಗಳಿಗೆ ಅವಕಾಶ ಕಡಿತ ಮಾಡಿರುವುದು, ಕೇವಲ ಬೋಧನ ಸಮಯದ ಕಡಿತಕ್ಕೆ ಅಥವಾ ಅಧ್ಯಾಪಕರ ಉದ್ಯೋಗಕ್ಕೆ ಸೀಮಿತವಾದ ವಿಷಯವಲ್ಲ. ಬದಲಿಗೆ ಭಾಷೆ, ಸಾಹಿತ್ಯದ ವಿಷಯಗಳಲ್ಲಿ ಜನಪ್ರಿಯವಾಗಿರುವ ತಪ್ಪು ಕಲ್ಪನೆಗೆ ಸಂಬಂಧಿಸಿದ ಸಂಗತಿ.

ಮಾರುಕಟ್ಟೆ ಆರ್ಥಿಕತೆಯು ದೇಶೀ ಭಾಷೆಗಳ ವಿಷಯದಲ್ಲಿ ಮಾಡಬಹುದಾದ ಮಾರಣಾಂತಿಕ ಪರಿಣಾಮ ಮನಸ್ಸಿನಲ್ಲಿಟ್ಟುಕೊಂಡು, ನಾವೀಗ ಎಚ್ಚರದಿಂದ ತೀರ್ಮಾನ ತೆಗೆದುಕೊಳ್ಳಬೇಕಿದೆ. ಇಲ್ಲದಿದ್ದಲ್ಲಿ ಕನ್ನಡ ನುಡಿಯು ಬರಹ ಮತ್ತು ಮೌಖಿಕ ರೂಪದಲ್ಲಿ ಶತಮಾನಗಳಿಂದ ಸೃಷ್ಟಿಸಿರುವ, ಈಗಲೂ ಬಹು ಪ್ರಕಾರಗಳಲ್ಲಿ ಸೃಷ್ಟಿಸುತ್ತಿರುವ ವಿಶಾಲ ವಾಙ್ಮಯಕ್ಕೆ, ಮುಂಬರುವ ಪದವೀಧರರನ್ನು ಬೆನ್ನು ತಿರುಗಿಸುವಂತೆ ಮಾಡುವ ಘಾತಕ ಕೆಲಸವಾಗುವುದು.

ವಾಚಕರ ವಾಣಿ

ಕೋವಿಡ್‌ನಿಂದ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ!

'ಸಾರ್ವಜನಿಕ ಆರೋಗ್ಯ ಮತ್ತು ಒಕ್ಕೂಟ ವ್ಯವಸ್ಥೆ' ಕುರಿತ ವಸಂತ ಶೆಟ್ಟಿ ಅವರ ಲೇಖನದಲ್ಲಿ (ಪ್ರ.ವಾ., ಜೂನ್ 18) ನಮ್ಮ ದೇಶದ ಆರೋಗ್ಯ ಸಮಸ್ಯೆಗಳ ಬಗ್ಗೆ ಸೂಕ್ತವಾಗಿ ವಿಶ್ಲೇಷಣೆ ಮಾಡಲಾಗಿದೆ. ಆದರೆ ಒಂದಂತೂ ನಿಜ; ಕೊರೊನಾ ದೆಸೆಯಿಂದ ದೇಶದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ಆಮೂಲಾಗ್ರವಾಗಿ ಅಭಿವೃದ್ಧಿ ಹೊಂದಿದೆ! ಸರ್ಕಾರಿ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಬೆಡ್‌ಗಳ ಸಂಖ್ಯೆ ಹೆಚ್ಚಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಆಕ್ಸಿಜನ್ ಉತ್ಪಾದನಾ ಘಟಕಗಳು ಪ್ರಾರಂಭವಾಗುತ್ತಿವೆ. ಅತ್ಯಾಧುನಿಕ ವೆಂಟಿಲೇಟರ್‌ಗಳು ಮತ್ತು ಇತರ ವೈದ್ಯಕೀಯ ಉಪಕರಣಗಳ ಖರೀದಿ ಆಗುತ್ತಿದೆ. ವೈದ್ಯಕೀಯ ಮತ್ತು ಅರೆವೈದ್ಯಕೀಯ ಸಿಬ್ಬಂದಿಯ ನೇಮಕಾತಿ ಆಗುತ್ತಿದೆ. ಒಟ್ಟಾರೆ ಹೇಳುವುದಾದರೆ, ಸರ್ಕಾರಿ ಆಸ್ಪತ್ರೆಗಳು ಗಣನೀಯವಾಗಿ ಪ್ರಗತಿ ಹೊಂದುತ್ತಿವೆ. ಆದರೆ ಎಂದೋ ಆಗಬೇಕಾಗಿದ್ದ ಈ ರೀತಿಯ ಅಭಿವೃದ್ಧಿಗೆ ಕೋವಿಡ್‌ನಂತಹ ರೋಗ ಬರುವವರೆಗೆ ಕಾಯಬೇಕಾಗಿ ಬಂದದ್ದು ಒಂದು ವಿರೋಧಾಭಾಸದಂತೆ ಕಾಣುತ್ತದೆ.

ಡಾ. ಕೆ.ಎಸ್.ಗಂಗಾಧರ, ಶಿವಮೊಗ್ಗ

ವಿದ್ಯಾರ್ಥಿಗಳು ಕಾಲೇಜು ಕಡೆ ಮುಖ ಮಾಡಬೇಕು

ಕುವೆಂಪು ವಿಶ್ವವಿದ್ಯಾಲಯ ಸೇರಿ ದೇಶದ 38 ವಿಶ್ವವಿದ್ಯಾಲಯಗಳಿಗೆ ಪೂರ್ಣ ಪ್ರಮಾಣದಲ್ಲಿ ಆನ್‌ಲೈನ್ ಕೋರ್ಸ್ ಆರಂಭಿಸಲು ಯುಜಿಸಿ ಅನುಮತಿ ನೀಡಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹ ತುಂಬಲು, ಅವರು ಹೊಸ ಹೊಸ ವಿಷಯಗಳನ್ನು ಕಲಿಯಲು, ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಕಾಲೇಜಿನ ವಾತಾವರಣ, ಗೆಳೆತನ ಸಹಕಾರಿ. ಆದರೆ ಪೂರ್ಣ ಪ್ರಮಾಣದ ಆನ್‌ಲೈನ್ ಕೋರ್ಸ್‌ನಿಂದ ವಿದ್ಯಾರ್ಥಿಗಳು ಮಾನಸಿಕವಾಗಿ ಒತ್ತಡ ಅನುಭವಿಸುತ್ತಾರೆ. ಯಾವುದೇ ಚಟುವಟಿಕೆಯಿಲ್ಲದೆ ಮಾನಸಿಕವಾಗಿ ದುರ್ಬಲರಾಗುತ್ತಾರೆ. ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವಿನ ಸಂಬಂಧಕ್ಕೆ ಕೊಡಲಿಪೆಟ್ಟು ಬಿದ್ದಂತಾಗುತ್ತದೆ. ನಾಲ್ಕು ಗೋಡೆಗಳ ಮಧ್ಯೆ ಕಲಿಯುವುದಕ್ಕಿಂತ ನಾಲ್ಕಾರು ಜನರೊಂದಿಗೆ ಬೆರೆತು ಕಲಿಯುವುದು ಉತ್ತಮ.

ಈಗ ಕೋವಿಡ್ ಕಾರಣದಿಂದ ಕಾಲೇಜುಗಳಿಗೆ ತಾತ್ಕಾಲಿಕವಾಗಿ ಬೀಗ ಬಿದ್ದಿದೆ. ಕೋವಿಡ್ ಅಬ್ಬರ ತಗ್ಗಿದ ಬಳಿಕ ವಿದ್ಯಾರ್ಥಿಗಳು ಮತ್ತೆ ಕಾಲೇಜುಗಳ ಕಡೆ ಮುಖ ಮಾಡುವತ್ತ ಗಮನಹರಿಸಬೇಕು. ಅದುಬಿಟ್ಟು ಈ ರೀತಿ ಪೂರ್ಣಪ್ರಮಾಣದ ಆನ್‌ಲೈನ್ ಕೋರ್ಸ್ ಮುಖಾಂತರ ವಿದ್ಯಾರ್ಥಿಗಳಿಗೆ ಕಾಲೇಜನ್ನು ಮರೆಸುವಂತೆ, ಅದರ ಅನುಭವವೇ ಆಗದಂತೆ ಮಾಡುವುದು ಸರಿಯಲ್ಲ. ಹೀಗೆ ಮಾಡಿದರೆ ವಿದ್ಯಾರ್ಥಿಗಳು ವಿದ್ಯಾವಂತರಾಗುವ ಬದಲು ಯಂತ್ರಗಳಂತೆ ಆಗುತ್ತಾರೆ. ಕೌಶಲಕ್ಕೆ ಅವಕಾಶ ಇಲ್ಲದಂತಾಗುತ್ತದೆ ಅಷ್ಟೆ.

ಆಕಾಶ್ ಆರ್.ಎಸ್., ಶಿವಮೊಗ್ಗ

ಮಳೆ!

ಹತ್ತು ಮಕ್ಕಳನ್ನು ಒಟ್ಟಿಗೇ
ಹೆತ್ತ ದಕ್ಷಿಣ ಆಫ್ರಿಕಾದ ಮಹಿಳೆ:
(ಎಲ್ಲ ಪತ್ರಿಕೆಗಳಲ್ಲಿ ಬಂದಿದೆ)
ಹಸುಳೆಗಳ ಪ್ರಸವವಲ್ಲ, ಮಳೆ!
ಆ 'ಮಹಾಮಾತೆ'ಯನ್ನು ಚೀನಾಕ್ಕೆ
ಕಳುಹಿಸಿ, ಅಲ್ಲಿನ ಪೌರತ್ವ
ಕೊಡಿಸಬೇಕು.
ಹತ್ತಲ್ಲ, ಇಪ್ಪತ್ತು ಹಡೆಯಲಿ;
ಆಗಲಿ ಅಭಿನವ ಗಾಂಧಾರಿ!
ಚೀನಾ ಆಗುವುದು ಆಭಾರಿ
(ಅದಕ್ಕೆ ಜನ ಬೇಕು!)

ಸಿ.ಪಿ.ಕೆ., ಮೈಸೂರು

ಮಹಿಳೆಯ ಘನತೆಗೆ ಧಕ್ಕೆ ತರದಿರಿ

'ಅಡುಗೆ, ಅಧಿಕಾರ, ಅಹಂಕಾರ' ಎಂಬ ಡಾ. ಗೀತಾ ವಸಂತ ಅವರ ಲೇಖನ (ಪ್ರ.ವಾ., ಜೂನ್ 17) ಔಚಿತ್ಯಪೂರ್ಣವಾಗಿದೆ. ಹೆಣ್ಣಿಗೆ ಸಮಯವೆಂಬುದು ಎಷ್ಟು ಮರೀಚಿಕೆಯಾಗಿದೆ ಎಂಬುದು ಈ ಪುರುಷಪ್ರಾಬಲ್ಯದ ಸಮಾಜದಲ್ಲಿ ಯಾರಿಗೂ ತಿಳಿಯುವುದಿಲ್ಲ. ಮನೆಯ ಒಳಗೂ ಹೊರಗೂ ಅವಳು ಅವಳ ಸಮಯಕ್ಕಾಗಿ ಹಪಹಪಿಸುತ್ತಿರುತ್ತಾಳೆ. ಎಷ್ಟೇ ಓದಿಕೊಂಡು ಎಂತಹ ಉನ್ನತ ಹುದ್ದೆಯಲ್ಲಿದ್ದರೂ ಅವಳೊಬ್ಬಳು ಹೆಣ್ಣು ಎಂಬ ಒಂದೇ ಕಾರಣ ಸಾಕು ಈ ಸಮಾಜಕ್ಕೆ ಅವಳನ್ನು ಹೀಗಳೆಯಲು.

ಪುರುಷನಾಗಲೀ ಮಹಿಳೆಯಾಗಲೀ ಮನೆಯಿಲ್ಲದೆ ಬದುಕಲು ಸಾಧ್ಯವಿಲ್ಲ. ಇಲ್ಲಿ ಮನೆ ಪದ ನಿರ್ಜೀವ, ಆದರೆ ಆ ಮನೆಯೊಳಗೊಬ್ಬಳು ಹೆಣ್ಣು ಜೀವಿಸಿದರೆ ಮನೆ ಸದಾ ಜೀವಂತ. ಮನೆಯ ಒಳಗೂ ಹೊರಗೂ ಅವಳ ಕೆಲಸಗಳಿಗೆ ಸಹಾಯ ಮಾಡದಿದ್ದರೆ ಬೇಡ, ಕನಿಷ್ಠಪಕ್ಷ ಕುಹಕವಾಡದೆ ಅವಳನ್ನು ಬದುಕಲು ಬಿಟ್ಟರೆ ಸಾಕು ಎಂಬಂತಿದೆ ಈಗಿನ ಪರಿಸ್ಥಿತಿ. ನನ್ನಂತಹ ಉದ್ಯೋಗಸ್ಥ ಹೆಣ್ಣುಮಕ್ಕಳು ಇಂತಹ ಸಮಾಜದಲ್ಲಿ ಅಪರಾಧಿ ಪ್ರಜ್ಞೆಯಲ್ಲೇ ಬದುಕಬೇಕಾಗಿದೆ. ಮಹಿಳೆಯರ ಘನತೆಗೆ ಧಕ್ಕೆ ತರದಿದ್ದರೆ ಮಾತ್ರ ಈ ಸಮಾಜ ಘನತೆಗೆ ಬದ್ಧವಾಗಿರುತ್ತದೆ.

ಮಹಾಲಕ್ಷ್ಮಿ ಎಂ. ಕೃಷ್ಣಮೂರ್ತಿ, ಬೆಂಗಳೂರು

ಕಾರ್ಯಕರ್ತೆಯರ ಹುದ್ದೆ ಭರ್ತಿ ಮಾಡಿ

ಕಳೆದೊಂದು ದಶಕದಿಂದ ಅತ್ಯಂತ ಕಡಿಮೆ ಸಂಭಾವನೆ ಮತ್ತು ಸೌಲಭ್ಯ ಪಡೆಯುತ್ತಿದ್ದರೂ ಪ್ರತಿಕೂಲ ಸಂದರ್ಭ, ಸನ್ನಿವೇಶಗಳಲ್ಲಿ ಕೂಡ ವಿಕೇಂದ್ರೀಕೃತ ವ್ಯವಸ್ಥೆಯ ತಳಮಟ್ಟಕ್ಕೆ ಆರೋಗ್ಯಸೇವೆಯನ್ನು ತಲುಪಿಸುತ್ತಿರುವವರು ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು. ಆದರೆ ಜನಸಂಖ್ಯೆಗೆ ಅನುಗುಣವಾಗಿ ಇವರ ಹುದ್ದೆಗಳನ್ನು ಭರ್ತಿಗೊಳಿಸದಿರುವುದು, ಜನರನ್ನು ಆರೋಗ್ಯದ ಹಕ್ಕಿನಿಂದ ವಂಚಿತಗೊಳಿಸುವಂಥದ್ದಾಗಿದೆ.

ಸದ್ಯ ರಾಜ್ಯದಲ್ಲಿ 65,911 ಅಂಗನವಾಡಿ ಕಾರ್ಯಕರ್ತೆಯರು, 62,580 ಸಹಾಯಕಿಯರು, 42,000 ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ, ರಾಜ್ಯದಲ್ಲಿ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುವ ಕುರಿತಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸುತ್ತಿದೆ. ರಾಜ್ಯದಲ್ಲಿ 1,488 ಅಂಗನವಾಡಿ ಕಾರ್ಯಕರ್ತೆಯರು ಮತ್ತು 2,811 ಸಹಾಯಕಿಯರ ಹುದ್ದೆಗಳು ಖಾಲಿ ಇದ್ದು ಅಪೌಷ್ಟಿಕತೆ ನಿವಾರಣೆ ಹಾಗೂ ನಿರ್ವಹಣೆ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರುತ್ತದೆ; ಹೀಗಾಗಿ, ತಕ್ಷಣವೇ ಈ ಹುದ್ದೆಗಳನ್ನು ಭರ್ತಿ ಮಾಡಿಸಬೇಕೆಂದು ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರವು ಪೀಠಕ್ಕೆ ಸಲಹೆ ನೀಡಿದೆ. ಇದು ಸ್ವಾಗತಾರ್ಹವಾಗಿದ್ದು, ತಕ್ಷಣವೇ ಅನುಷ್ಠಾನವಾಗಬೇಕು. ಇದೇ ರೀತಿ, ಜನಸಂಖ್ಯೆ ಆಧಾರಿತವಾಗಿ ಸಾವಿರಾರು ಸಂಖ್ಯೆಯಲ್ಲಿ ಆಶಾ ಕಾರ್ಯಕರ್ತೆಯರ ಹುದ್ದೆಗಳು ಖಾಲಿ ಇವೆ. ಇವನ್ನೂ ತಕ್ಷಣವೇ ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು. ತನ್ಮೂಲಕ ಗ್ರಾಮೀಣ ಮತ್ತು ವ್ಯವಸ್ಥೆಯ ತಳಮಟ್ಟಕ್ಕೆ ಆರೋಗ್ಯ ಸೌಲಭ್ಯವನ್ನು ಖಾತರಿಗೊಳಿಸಬೇಕು.

ರೂಪ ಹಾಸನ, ಹಾಸನ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕೇ?

ಜಿಎಸ್‌ಟಿ ವ್ಯಾಪ್ತಿಗೆ ತಂದರೆ ಜನರಿಗೆ ಲಾಭ

● ಅನುಪಮ್ ಮಣೂರ್

ಪೆಟ್ರೋಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದರೆ ಮುಖ್ಯವಾಗಿ ದರದಲ್ಲಿ ಸ್ಥಿರತೆ ಕಾಣಿಸುತ್ತದೆ. ಜತೆಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಣದ ಕೊರತೆ ಬಿದ್ದಾಗಲೆಲ್ಲಾ ಪೆಟ್ರೋಲ್ ಮೇಲಿನ ತೆರಿಗೆ ಹೆಚ್ಚಿಸುವ ಪ್ರಲೋಭನೆಗೆ ಬೀಳುವುದಕ್ಕೂ ತಡೆಬೀಳುತ್ತದೆ. ಸಿಗರೇಟು, ಮದ್ಯದಂತೆ ಪೆಟ್ರೋಲ್ ಸಹ ಸರ್ಕಾರಗಳಿಗೆ ಹಣವನ್ನು ತಂದುಕೊಡುವ ಕಾಮಧೇನುವಿನಂತಾಗಿದೆ

ಜೂನ್ 12ರಂದು ಪೆಟ್ರೋಲ್ ದರವು ₹100ರ ಗಡಿ ತಲುಪುವ ಮೂಲಕ, ಕರ್ನಾಟಕವು ಈ ಗಡಿಯನ್ನು ತಲುಪಿದ ದೇಶದ ಏಳನೆಯ ರಾಜ್ಯವೆನಿಸಿತು. ಬೀದರ್, ಬಳ್ಳಾರಿ, ಕೊಪ್ಪಳ, ದಾವಣಗೆರೆ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪೆಟ್ರೋಲ್ ಬೆಲೆಯು ₹100ರ ಗಡಿಯನ್ನು ದಾಟಿದೆ. ಗ್ರಾಹಕರು ಪ್ರತಿ ಲೀಟರ್‌ಗೆ ನೀಡುವ ದರದಲ್ಲಿ ಶೇ 60ಕ್ಕೂ ಹೆಚ್ಚು ಪ್ರಮಾಣವು ತೆರಿಗೆಯ ರೂಪದಲ್ಲಾಗಿದೆ ಎಂಬ ಕಾರಣಕ್ಕೆ, ಪೆಟ್ರೋಲ್ ಮೇಲಿನ ತೆರಿಗೆಯನ್ನು ಕಡಿತಗೊಳಿಸಬೇಕು ಮತ್ತು ತೈಲವನ್ನೂ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರಬೇಕು ಎಂಬ ಕೂಗು ಇತ್ತೀಚೆಗೆ ಬಲವಾಗುತ್ತಿದೆ.

2021ರ ಜೂನ್ 1ರಂದು ಒಂದು ಲೀಟರ್ ಕಚ್ಚಾ ತೈಲದ ದರವು ₹ 32.40ರಷ್ಟಿತ್ತು. ಒಂದು ಲೀಟರ್ ಕಚ್ಚಾ ತೈಲವನ್ನು ಸಂಸ್ಕರಿಸಿ ಪೆಟ್ರೋಲ್ ಪಂಪ್‌ವರೆಗೆ ಸಾಗಿಸಲು ಸುಮಾರು ₹3.60 ವೆಚ್ಚ ಬರುತ್ತದೆ. ಅಂದರೆ ಪೆಟ್ರೋಲ್ ಪಂಪ್‌ಗೆ ಬರುವಾಗ ಒಂದು ಲೀಟರ್ ಪೆಟ್ರೋಲ್‌ನ ದರವು ಸುಮಾರು ₹ 36 ಆಗಿರುತ್ತದೆ. ಈ ಹಂತದಿಂದ ತೆರಿಗೆಗಳ ಜೋಡಣೆ ಆರಂಭವಾಗುತ್ತದೆ. ಎಕ್ಸೈಸ್ ಸುಂಕ, ಹೆಚ್ಚುವರಿ ಎಕ್ಸೈಸ್ ಸುಂಕ, ಕೃಷಿ ಸೆಸ್, ರಸ್ತೆ ಮತ್ತು ಮೂಲಸೌಲಭ್ಯ ಸೆಸ್ ರೂಪದಲ್ಲಿ ಕೇಂದ್ರ ಸರ್ಕಾರವು ಒಟ್ಟು ₹32.90 ಪಡೆಯುತ್ತದೆ. ಇದಕ್ಕೆ ಡೀಲರ್‌ಗಳ ಕಮಿಷನ್ ₹3.80 ಸೇರಿದಾಗ, ಪೆಟ್ರೋಲ್ ದರವು ಲೀಟರ್‌ಗೆ ₹72.68ರಷ್ಟಾಗುತ್ತದೆ.

ಇನ್ನು ರಾಜ್ಯ ಸರ್ಕಾರದ ಸರದಿ. ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಹಾಗೂ ಇತರ ತೆರಿಗೆಗಳನ್ನು ರಾಜ್ಯಗಳೂ ವಿಧಿಸುತ್ತವೆ. ಪೆಟ್ರೋಲ್ ಮೇಲೆ ಶೇ 35ರಷ್ಟು ವ್ಯಾಟ್ ವಿಧಿಸುವ ಮೂಲಕ ಕರ್ನಾಟಕವು ದೇಶದಲ್ಲೇ ಅತಿ ಹೆಚ್ಚು ವ್ಯಾಟ್ ವಿಧಿಸುವ ರಾಜ್ಯವೆನಿಸಿದೆ. ಇದು ಸುಮಾರು ₹25.40ರಷ್ಟಾಗುತ್ತದೆ. ಎಲ್ಲಾ ಸೇರಿದಾಗ ಪೆಟ್ರೋಲ್ ದರ ಸುಮಾರು ₹98 ಅಥವಾ ಅದಕ್ಕೂ ಹೆಚ್ಚಾಗುತ್ತದೆ (ಆಯಾ ರಾಜ್ಯದ ಸೆಸ್‌ಗೆ ಅನುಗುಣವಾಗಿ). ಗ್ರಾಹಕರು ತಮ್ಮ ವಾಹನದ ಟ್ಯಾಂಕ್ ತುಂಬಿಸುವಾಗ ಇಷ್ಟೆಲ್ಲವನ್ನೂ ಪಾವತಿಸಬೇಕು.

ಗ್ರಾಹಕರು ಒಟ್ಟಾರೆ ಪಾವತಿಸುವ ತೆರಿಗೆ ₹58.34 ಹಾಗೂ ಸಂಸ್ಕರಿತ ಪೆಟ್ರೋಲ್‌ನ ಮೂಲ ದರ ₹36ನ್ನು ಲೆಕ್ಕ ಹಾಕಿದಾಗ ತೆರಿಗೆಯ ಪ್ರಮಾಣವು ಶೇ 162ರಷ್ಟಾಗುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು.

ತೈಲವನ್ನೂ ಜಿಎಸ್‌ಟಿ ಅಡಿ ತನ್ನಿ: ಪೆಟ್ರೋಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದಕ್ಕೆ ಆಗುವ ಪ್ರಮುಖ ಲಾಭವೆಂದರೆ ಗ್ರಾಹಕರಿಗೆ ಅದು ಕಡಿಮೆ ಬೆಲೆಗೆ ಲಭ್ಯವಾಗುತ್ತದೆ. ದುಬಾರಿ ತೈಲ ಬೆಲೆಯು ಅರ್ಥ ವ್ಯವಸ್ಥೆಗೆ ಹಲವು ವಿಧಗಳಲ್ಲಿ ಹಾನಿಯನ್ನುಂಟುಮಾಡುತ್ತದೆ. ವಿಶೇಷವಾಗಿ ಜನರ ಖರ್ಚುಮಾಡುವ ಶಕ್ತಿಯನ್ನೇ ಇದು ಕುಂದಿಸುತ್ತದೆ. ಕೋವಿಡ್ ಪಿಡುಗಿನಿಂದಾಗಿ ಜನರು ಕೆಲಸ ಕಳೆದುಕೊಂಡಿದ್ದಾರೆ ಅಥವಾ ಹಲವರ ಆದಾಯ ಕುಸಿತವಾಗಿದೆ. ಇದರಿಂದಾಗಿ ಬೇಡಿಕೆ ಕುಸಿದು, ಆರ್ಥಿಕತೆ ಸಂಕುಚಿತಗೊಂಡಿದೆ.

ಇಂಥ ಸಮಯದಲ್ಲಿ ಪೆಟ್ರೋಲ್‌ನಂಥ ಅಗತ್ಯ ವಸ್ತುವಿನ ಮೇಲೆ ಹೆಚ್ಚಿನ ತೆರಿಗೆ ವಿಧಿಸಿ ಜನರನ್ನು ಪೀಡಿಸುವುದು ಅರ್ಥವ್ಯವಸ್ಥೆಗೆ ಇನ್ನಷ್ಟು ಹಾನಿ ಉಂಟುಮಾಡುತ್ತದೆ. ತೆರಿಗೆ ರೂಪದಲ್ಲಿ ಗ್ರಾಹಕರು ನೀಡುವ ಪ್ರತಿ ರೂಪಾಯಿಯೂ ವಾಸ್ತವದಲ್ಲಿ ಅವರು ತಮ್ಮ ಬಳಕೆಗಾಗಿ ಮಾಡುವ ವೆಚ್ಚವಾಗಿರುವುದಿಲ್ಲ. ಜನರು ವೆಚ್ಚ ಕಡಿಮೆ ಮಾಡಿದಾಗ ಇದಕ್ಕೆ ಪ್ರತಿಕ್ರಿಯೆಯಾಗಿ ತಯಾರಕರು ಉತ್ಪಾದನೆ ಕಡಿಮೆ ಮಾಡುತ್ತಾರೆ. ಜತೆಗೆ ತಮ್ಮಲ್ಲಿರುವ ಉದ್ಯೋಗಿಗಳ ಸಂಖ್ಯೆಯನ್ನೂ ಕಡಿತ ಮಾಡುತ್ತಾರೆ. ಇದು ಇನ್ನಷ್ಟು ಮಂದಿಯ ಆದಾಯ ಕಡಿತಕ್ಕೆ ಮತ್ತು ಖರೀದಿ ಪ್ರಮಾಣ ಇಳಿಕೆಗೆ ಕಾರಣವಾಗುತ್ತದೆ. ಆರ್ಥಿಕತೆಯು ಸಂಕುಚಿತ ಗೊಳ್ಳುತ್ತಿರುವ ಸಂದರ್ಭದಲ್ಲಿ ಜನರ ವೆಚ್ಚ ಮಾಡುವ ಸಾಮರ್ಥ್ಯವನ್ನು ಹೆಚ್ಚಿಸುವುದು ಸರಿಯಾದ ನೀತಿಯೇ ವಿನಾ, ಹೆಚ್ಚು ಹೆಚ್ಚು ತೆರಿಗೆ ವಿಧಿಸುವುದಲ್ಲ.

ಪೆಟ್ರೋಲ್ ದರ ಹೆಚ್ಚಾದರೆ ಸ್ವಂತ ವಾಹನಗಳನ್ನು ಹೊಂದಿರುವ, ಮಧ್ಯಮ ಮತ್ತು ಮೇಲ್ವರ್ಗದ ಜನರಿಗೆ ಮಾತ್ರ ತೊಂದರೆಯಾಗುತ್ತದೆಯೇ ವಿನಾ ಬಡವರಿಗಲ್ಲ ಎಂದು ತಪ್ಪಾಗಿ ಭಾವಿಸಲಾಗುತ್ತಿದೆ. ದುರದೃಷ್ಟವಶಾತ್ ಪೆಟ್ರೋಲ್ ದರ ಏರಿಕೆಯು ಜನಸಾಮಾನ್ಯರು ಬಳಸುವ ಎಲ್ಲಾ ಸರಕುಗಳ ಬೆಲೆ ಏರಿಕೆಗೆ ಮತ್ತು ಹಣದುಬ್ಬರಕ್ಕೆ ಕಾರಣವಾಗುತ್ತದೆ. ಉದಾಹರಣೆ ನೀಡಬೇಕೆಂದರೆ, ಸಾಗಾಣಿಕೆಯ ವೆಚ್ಚವು ಹೆಚ್ಚಾಗುವುದರಿಂದ ತರಕಾರಿ ಮತ್ತು ಇತರ ಅಗತ್ಯ ಆಹಾರ ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ಸಾರ್ವಜನಿಕ ಸಾರಿಗೆಯೂ ದುಬಾರಿಯಾಗುತ್ತದೆ. ಸ್ವಂತ ವಾಹನ ಇಲ್ಲದವರಿಗೆ ಇದು ಹೊರೆಯಾಗುತ್ತದೆ.

ಪೆಟ್ರೋಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದರೆ ಮುಖ್ಯವಾಗಿ ದರದಲ್ಲಿ ಸ್ಥಿರತೆ ಕಾಣಿಸುತ್ತದೆ. ಜತೆಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಣದ ಕೊರತೆ ಬಿದ್ದಾಗಲೆಲ್ಲಾ ಪೆಟ್ರೋಲ್ ಮೇಲಿನ ತೆರಿಗೆ ಹೆಚ್ಚಿಸುವ ಪ್ರಲೋಭನೆಗೆ ಬೀಳುವುದಕ್ಕೂ ತಡೆಬೀಳುತ್ತದೆ. ಸಿಗರೇಟು, ಮದ್ಯದಂತೆ ಪೆಟ್ರೋಲ್ ಸಹ ಸರ್ಕಾರಗಳಿಗೆ ಹಣವನ್ನು ತಂದುಕೊಡುವ ಕಾಮಧೇನುವಿನಂತಾಗಿದೆ. ಇವುಗಳ ದರವು ಎಷ್ಟೇ ಹೆಚ್ಚಿದರೂ ಜನರು ಖರೀದಿಸುವುದನ್ನು ನಿಲ್ಲಿಸುವುದಿಲ್ಲ.

ತನ್ನ ವೆಚ್ಚಗಳನ್ನು ನಿಭಾಯಿಸಲು ತೈಲದ ಮೇಲಿನ ತೆರಿಗೆಯನ್ನು ಅವಲಂಬಿಸಲಾಗುವುದಿಲ್ಲ ಎಂಬ ಸ್ಥಿತಿ ನಿರ್ಮಾಣವಾದರೆ ಆರ್ಥಿಕತೆಯಲ್ಲಿ ಒಂದಿಷ್ಟು ಶಿಸ್ತು ಮೂಡಿಸುವುದು ಸರ್ಕಾರಗಳಿಗೆ ಅನಿವಾರ್ಯವಾಗುತ್ತದೆ. ಅದಕ್ಕಾಗಿ ಸರ್ಕಾರಗಳು ತಮ್ಮ ವ್ಯರ್ಥ ವೆಚ್ಚಗಳನ್ನು ಕಡಿತಗೊಳಿಸಬೇಕಾಗುತ್ತವೆ ಅಥವಾ ಬೇರೆ ಕಡೆಗಳಲ್ಲಿ ತೆರಿಗೆ ಸಂಗ್ರಹವನ್ನು ಉತ್ತಮಗೊಳಿಸುವತ್ತ ಗಮನಹರಿಸಬೇಕಾಗುತ್ತದೆ.

ಹೇಗೆ ಸಾಧ್ಯ?: ಭಾರಿ ಪ್ರಮಾಣದಲ್ಲಿ ಆದಾಯ ನಷ್ಟವಾಗುತ್ತದೆ ಎಂಬ ಕಾರಣಕ್ಕೆ ಪೆಟ್ರೋಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದಕ್ಕೆ ಪ್ರಬಲ ವಿರೋಧ ಬರುವುದು ಸರ್ಕಾರದಿಂದಲೇ. 2019–20ರಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಗಳ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟಾಗಿ ₹4.24 ಲಕ್ಷ ಕೋಟಿಯನ್ನು ಸಂಗ್ರಹಿಸಿವೆ. ಪೆಟ್ರೋಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದರೆ ರಾಜ್ಯ ಸರ್ಕಾರಗಳೇ ಸುಮಾರು ₹2ಲಕ್ಷ ಕೋಟಿ ಆದಾಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಅವುಗಳು ಸಹ ತಮ್ಮ ಆದಾಯದ ಪ್ರಮುಖ ಮೂಲವನ್ನು ಬಿಟ್ಟುಕೊಡಲು ಸಿದ್ಧರಾಗಲಾರವು.

ಈ ಸ್ಥಿತ್ಯಂತರವನ್ನು ಸಾಧಿಸಲು ಇರುವ ಒಂದು ಮಾರ್ಗವೆಂದರೆ ಪೆಟ್ರೋಲ್ ಅನ್ನು ಗರಿಷ್ಠ ಸ್ಲ್ಯಾಬ್ ಅಡಿಗೆ (ಶೇ 28) ತರುವುದು. ಜತೆಗೆ, ಆದಾಯ ನಷ್ಟವನ್ನು ಸರಿದೂಗಿಸಲು 'ಪರಿಹಾರ ಸೆಸ್' ಅನ್ನು ವಿಧಿಸುವುದು. ಇದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನಾಗಿ ಹಂಚಿಕೆ ಮಾಡಿಕೊಳ್ಳಬೇಕು. ಹಾಗೆ ಮಾಡಿದರೆ ರಾಜ್ಯಗಳೂ ಒಪ್ಪಿಗೆ ಸೂಚಿಸಬಹುದು. ಹಂತಹಂತವಾಗಿ ಇಳಿಕೆ ಮಾಡುವ ಸ್ಪಷ್ಟ ಹಾದಿಯನ್ನು ಸೂಚಿಸುವ ಮೂಲಕವೇ ಪರಿಹಾರ ಸೆಸ್ ಅನ್ನು ವಿಧಿಸಬೇಕು. ಉದಾಹರಣೆಗೆ, ಶೇ 30ರಷ್ಟು ಪರಿಹಾರ ಸೆಸ್ ವಿಧಿಸಿ, ಅದನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ಶೇ 5ರಷ್ಟು ಇಳಿಕೆ ಮಾಡುತ್ತಲೇ ಬರಬೇಕು. ಹೀಗೆ ಮಾಡಿದರೆ 15 ವರ್ಷಗಳಲ್ಲಿ ಪರಿಹಾರ ಸೆಸ್ ಅನ್ನು ಪೂರ್ಣವಾಗಿ ರದ್ದು ಮಾಡಬಹುದು. ಇದರಿಂದ ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಲು ರಾಜ್ಯಗಳಿಗೆ ಸಾಕಷ್ಟು ಕಾಲಾವಕಾಶ ನೀಡಿದಂತೆ ಮತ್ತು ಆದಾಯ ಕೊರತೆಯನ್ನು ಸರಿದೂಗಿಸಲು ಉತ್ತಮ ಹಣಕಾಸು ತಂತ್ರ ರೂಪಿಸಲು ಅವಕಾಶ ನೀಡಿದಂತಾಗುತ್ತದೆ.

ಪೆಟ್ರೋಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದರೆ ಅನೇಕ ಲಾಭಗಳಿವೆ. ಗ್ರಾಹಕರ ಕೈಯಲ್ಲಿ ವೆಚ್ಚ ಮಾಡಲು ಹೆಚ್ಚಿನ ಹಣ ಇರುತ್ತದೆ. ಇದು ಹೆಚ್ಚು ತೆರಿಗೆ ವಿಧಿಸುವುದರಿಂದ ಆಗುವ ಲಾಭಕ್ಕಿಂತಲೂ ಹೆಚ್ಚಿನ ಲಾಭವನ್ನು ಅರ್ಥವ್ಯವಸ್ಥೆಯ ಮೇಲೆ ಉಂಟುಮಾಡಬಲ್ಲದು.

ಲೇಖಕ: ತಕ್ಷಶಿಲಾ ಇನ್‌ಸ್ಟಿಟ್ಯೂಟ್‌ನಲ್ಲಿ ಅರ್ಥಶಾಸ್ತ್ರದ ಸಹಾಯಕ ಪ್ರಾಧ್ಯಾಪಕ

ಪೆಟ್ರೋಲ್ ಕೈತಪ್ಪಿದರೆ ರಾಜ್ಯಗಳಿಗೇ ಹೆಚ್ಚು ನಷ್ಟ

● ರಕ್ಷಿತ್ ಎಸ್. ಪೊನ್ನಾಥಪುರ

ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದರಿಂದ ಒಕ್ಕೂಟ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒಟ್ಟಿಗೇ ಆದಾಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಹೀಗಾಗಿಯೇ ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು ಎನ್ನುವ ಕೂಗು ರಾಜಕೀಯ ಘೋಷಣೆಯಿಂದ, ಪ್ರಸ್ತಾವದ ಮಟ್ಟಕ್ಕೆ ಬರುವುದೇ ಇಲ್ಲ

ಹಲವು ತಿಂಗಳುಗಳಿಂದ ಇಂಧನಗಳ ಬೆಲೆ ಗಗಕ್ಕೇರುತ್ತಲೇ ಇದೆ. ಹಲವು ರಾಜ್ಯಗಳಲ್ಲಿ ಇಂಧನದ ಬೆಲೆ ಪ್ರತಿ ಲೀಟರ್‌ಗೆ ₹100ರ ಗಡಿ ದಾಟಿದೆ. ಕೋವಿಡ್ ಸಾಂಕ್ರಾಮಿಕದ ಕಾರಣದಿಂದ ಲಾಕ್‌ಡೌನ್, ಉದ್ಯೋಗ ನಷ್ಟ ಮತ್ತು ನಿರುದ್ಯೋಗದ ಸಮಸ್ಯೆಯು ದೇಶದ ಬಹುತೇಕ ಜನರ ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವಂತೆ ಮಾಡಿದೆ. ಇಂತಹ ಸಂದರ್ಭದಲ್ಲಿ ಇಂಧನಗಳ ಬೆಲೆ ಗಗನಕ್ಕೇರಿರುವುದಕ್ಕೆ ಎಲ್ಲೆಡೆಯಿಂದ, ಅದರಲ್ಲೂ ವಿರೋಧ ಪಕ್ಷಗಳಿಂದ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿದೆ. ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಜಿಎಸ್‌ಟಿ ಅಡಿ ತಂದರೆ ಬೆಲೆ ಏರಿಕೆ ನಿಯಂತ್ರಿಸಬಹುದು ಎಂಬುದು ಈ ಅವಧಿಯಲ್ಲಿ ಸೂಚಿಸಲಾಗುತ್ತಿರುವ ಪ್ರಮುಖ ಪರಿಹಾರೋಪಾಯ. ಆದರೆ ಹೀಗೆ ಮಾಡಿದರೆ ಒಳಿತಾಗುವುದಕ್ಕಿಂತ ಕೆಡುಕಾಗುವುದೇ ಹೆಚ್ಚು, ಅದರಲ್ಲೂ ರಾಜ್ಯಗಳಿಗೆ ಹೆಚ್ಚು ಹಾನಿಯಾಗುತ್ತದೆ.

ಬೇರೆ ಬೇರೆ ತೆರಿಗೆಗಳ ವ್ಯಾಪ್ತಿಯಲ್ಲಿದ್ದ ಎಲ್ಲಾ ಸರಕುಗಳು 2017ರಲ್ಲಿ ಜಿಎಸ್‌ಟಿ ಜಾರಿಗೆ ಬಂದ ನಂತರ, ಜಿಎಸ್‌ಟಿ ವ್ಯಾಪ್ತಿಗೆ ಬಂದವು. ಆದರೆ ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗೆ ಇಡಲಾದ ಕೆಲವೇ ಸರಕುಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳೂ ಒಂದು. ಹೀಗಾಗಿಯೇ ರಾಜ್ಯಗಳು ವಿಧಿಸುವ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಅನ್ವಯ ರಾಜ್ಯದಿಂದ ರಾಜ್ಯಕ್ಕೆ ಇಂಧನಗಳ ಚಿಲ್ಲರೆ ಮಾರಾಟ ಬೆಲೆಯಲ್ಲಿ ವ್ಯತ್ಯಾಸವಾಗುತ್ತದೆ. (ಚಿಲ್ಲರೆ ಮಾರಾಟ ಬೆಲೆಯಲ್ಲಿ ಕೇಂದ್ರೀಯ ಅಬಕಾರಿ ತೆರಿಗೆ, ಡೀಲರ್ ಕಮಿಷನ್ ಮತ್ತು ಕಚ್ಚಾತೈಲದ ಬೆಲೆಯೂ ಸೇರಿರುತ್ತದೆ. ಈ ಎಲ್ಲಾ ಬೆಲೆ ಮತ್ತು ತೆರಿಗೆ ಮೊತ್ತವು ಎಲ್ಲಾ ರಾಜ್ಯದಲ್ಲೂ ಸಮನಾಗಿಯೇ ಇರುತ್ತವೆ). ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಏರಿಕೆಯಾಗುತ್ತಿದ್ದರೂ, ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿರುವುದು ತೆರಿಗೆ ಏರಿಕೆಯೇ ಆಗಿದೆ.

ಇಂಧನಗಳ ಮೇಲೆ ವಿಧಿಸಲಾಗುವ ಒಟ್ಟು ತೆರಿಗೆಯಲ್ಲಿ ರಾಜ್ಯಗಳ ವ್ಯಾಟ್‌ಗಿಂತ ಕೇಂದ್ರ ಅಬಕಾರಿ ತೆರಿಗೆಯ ಪ್ರಮಾಣವೇ ಹೆಚ್ಚು. 2014ಕ್ಕೆ ಹೋಲಿಸಿದರೆ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರ ಅಬಕಾರಿ ತೆರಿಗೆಯಲ್ಲಿ ಶೇ 300ಕ್ಕಿಂತಲೂ ಹೆಚ್ಚು ಏರಿಕೆಯಾಗಿದೆ. 2014ರಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್‌ನ ಮೇಲೆ ಕ್ರಮವಾಗಿ ಶೇ 9 ಮತ್ತು ಶೇ 3ರಷ್ಟು ಕೇಂದ್ರ ಅಬಕಾರಿ ತೆರಿಗೆ ಸಂಗ್ರಹಿಸಲಾಗುತ್ತಿತ್ತು. ಈಗ ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್‌ಗೆ ಕ್ರಮವಾಗಿ ಶೇ 33 ಮತ್ತು ಶೇ 32ರಷ್ಟು ಕೇಂದ್ರ ಅಬಕಾರಿ ಸುಂಕ ಸಂಗ್ರಹಿಸಲಾಗುತ್ತಿದೆ. ಈ ವರ್ಷದ ಆರಂಭದಲ್ಲಿ ಇಂಧನಗಳ ಬೆಲೆ ಏರಿಕೆಯಾದಾಗ ಪಶ್ಚಿಮ ಬಂಗಾಳ ಮತ್ತು ರಾಜಸ್ಥಾನ ಸರ್ಕಾರಗಳು ವ್ಯಾಟ್ ದರವನ್ನು ಇಳಿಕೆ ಮಾಡಿದ್ದವು. ಆದರೆ ಕೇಂದ್ರ ಅಬಕಾರಿ ತೆರಿಗೆಯನ್ನು ಕಡಿತ ಮಾಡಿರಲಿಲ್ಲ.

ಜಿಎಸ್‌ಟಿ ಬಂದ ನಂತರ ತೆರಿಗೆ ವಿಧಿಸುವ ಅಧಿಕಾರವನ್ನು ಕಳೆದುಕೊಂಡಿದ್ದು ರಾಜ್ಯಗಳೇ ಎಂಬುದನ್ನು ನಾವು ಗಮನದಲ್ಲಿ ಇರಿಸಿಕೊಳ್ಳಬೇಕು. ರಾಜ್ಯಗಳು ತೆರಿಗೆ ವಿಧಿಸಬಹುದಾದ ಅಧಿಕಾರ ಇರುವ ಕೆಲವೇ ಕೆಲವು ಸರಕುಗಳು ಇನ್ನೂ ಉಳಿದಿವೆ. ಅವು ಮದ್ಯ ಮತ್ತು ಪೆಟ್ರೋಲಿಯಂ ಉತ್ಪನ್ನಗಳು ಮಾತ್ರ. ಈ ಸರಕುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವಂತಹ ಯಾವುದೇ ಕ್ರಮವೂ ಒಕ್ಕೂಟ ಸರ್ಕಾರಕ್ಕಿಂತ, ರಾಜ್ಯ ಸರ್ಕಾರಗಳ ಆದಾಯಕ್ಕೇ ಹೆಚ್ಚು ಹಾನಿ ಮಾಡುತ್ತವೆ. ಇಂಧನಗಳ ಮೇಲೆ ಒಕ್ಕೂಟ ಸರ್ಕಾರವೇ ಭಾರಿ ಪ್ರಮಾಣದ ತೆರಿಗೆ ಹೇರುತ್ತಿರುವ ಈ ಸಂದರ್ಭದಲ್ಲಿ ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದರೆ, ಒಕ್ಕೂಟ ಸರ್ಕಾರದ ತಪ್ಪಿಗೆ ರಾಜ್ಯ ಸರ್ಕಾರಗಳಿಗೆ ಶಿಕ್ಷೆ ವಿಧಿಸಿದಂತಾಗುತ್ತದೆ.

ಎರಡನೆಯದಾಗಿ ಈಚಿನ ವರ್ಷಗಳಲ್ಲಿ ಆದಾಯದ ಪ್ರಮಾಣ ಕಡಿಮೆಯಾಗಿರುವ ಕಾರಣ ರಾಜ್ಯ ಸರ್ಕಾರಗಳು, ಒಕ್ಕೂಟ ಸರ್ಕಾರದ ಹಣ ವರ್ಗಾವಣೆಯನ್ನೇ ಅವಲಂಭಿಸಬೇಕಾದ ಸ್ಥಿತಿ ಇದೆ. ಇನ್ನೊಂದೆಡೆ ಕೋವಿಡ್ ಸಾಂಕ್ರಾಮಿಕದಿಂದ ಲಾಕ್‌ಡೌನ್ ಮತ್ತು ಕುಂಠಿತ ಆರ್ಥಿಕತೆಯಿಂದಾಗಿ ಒಕ್ಕೂಟ ಸರ್ಕಾರವು ರಾಜ್ಯ ಸರ್ಕಾರಕ್ಕೆ ಕೊಡಬೇಕಾದ ತೆರಿಗೆ ಪಾಲಿನ ವರ್ಗಾವಣೆಗೂ ಹೊಡೆತ ಬಿದ್ದಿದೆ. ಒಕ್ಕೂಟ ಸರ್ಕಾರವು ಭರವಸೆ ನೀಡಿದ್ದಷ್ಟು ಜಿಎಸ್‌ಟಿ ಪರಿಹಾರವನ್ನು ಪಡೆದುಕೊಳ್ಳುವಲ್ಲಿಯೂ ರಾಜ್ಯ ಸರ್ಕಾರಗಳು ಹಲವು ಸಮಸ್ಯೆ ಎದುರಿಸುತ್ತಿವೆ. ಹೀಗಾಗಿಯೇ ರಾಜ್ಯ ಸರ್ಕಾರಗಳು ಜಿಎಸ್‌ಟಿ ಕೊರತೆಯನ್ನು ಸರಿದೂಗಿಸಿಕೊಳ್ಳಲು ಸಾಲದ ಮೊರೆ ಹೋಗಬೇಕಾದ ಅನಿವಾರ್ಯ ಎದುರಿಸಿದವು. ಇವೆಲ್ಲವುಗಳ ಕಾರಣದಿಂದ ರಾಜ್ಯಗಳು ಹಣಕಾಸಿನ ಬಿಕ್ಕಟ್ಟು ಎದುರಿಸುತ್ತಿವೆ. ಕೋವಿಡ್ ಪರಿಹಾರ ಮತ್ತು ನೆರವು ಯೋಜನೆಗಳ ಕಾರಣ ಆರ್ಥಿಕ ಹೊರೆ ಹೆಚ್ಚಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವ ಆರ್ಥಿಕ ಅಧಿಕಾರವನ್ನು ರಾಜ್ಯ ಸರ್ಕಾರಗಳು ಇಂತಹ ಅನಿಶ್ಚಿತ ಪರಿಸ್ಥಿತಿಯಲ್ಲಿ ಬಿಟ್ಟುಕೊಡುವುದು ಮರಣ ಮೃದಂಗವೇ ಆಗುತ್ತದೆ. ಆದಾಯ ಸಂಗ್ರಹಕ್ಕೆ ಬೇರೆ ಬೇರೆ ಆಯ್ಕೆಗಳನ್ನು ಹೊಂದಿರುವ ಒಕ್ಕೂಟ ಸರ್ಕಾರವೇ, ಇಂಧನಗಳ ಮೇಲಿನ ತೆರಿಗೆಯನ್ನು ಕಡಿತ ಮಾಡುವ ಮೂಲಕ ಸಾರ್ವಜನಿಕರ ಹೊರೆಯನ್ನು ಸ್ವಲ್ಪ ಕಡಿಮೆ ಮಾಡಬಹುದು.

ಇದಕ್ಕಿಂತಲೂ ಮುಖ್ಯವಾಗಿ, ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದರಿಂದ ಒಕ್ಕೂಟ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒಟ್ಟಿಗೇ ಆದಾಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಹೀಗಾಗಿಯೇ ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು ಎನ್ನುವ ಕೂಗು ರಾಜಕೀಯ ಘೋಷಣೆಯಿಂದ, ಪ್ರಸ್ತಾವದ ಮಟ್ಟಕ್ಕೆ ಬರುವುದೇ ಇಲ್ಲ. ಕೋವಿಡ್ ಸಾಂಕ್ರಾಮಿಕದಿಂದ ತತ್ತರಿಸಿರುವ ಜನರಿಗೆ ಪರಿಹಾರ ಮತ್ತು ನೆರವು ನೀಡಬೇಕಿರುವುದರಿಂದ ತೆರಿಗೆ ವ್ಯಾಪ್ತಿಯನ್ನು ವಿಸ್ತರಿಸುವುದು ಒಕ್ಕೂಟ ಮತ್ತು ರಾಜ್ಯ ಸರ್ಕಾರಗಳಿಗೆ ಅನಿವಾರ್ಯವಾಗಿದೆ. ಇಂತಹ ಸಂದರ್ಭದಲ್ಲಿ ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವಂತಹ ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಅತ್ಯಂತ ಕಡಿಮೆ. ದೇಶವು ಹಂತಹಂತವಾಗಿ ಅನ್‌ಲಾಕ್‌ನತ್ತ ಮರಳಿದಂತೆ ಮತ್ತು ಆರ್ಥಿಕತೆಗೆ ಚಾಲನೆ ದೊರೆತ ಹಾಗೆ, ಕೇಂದ್ರ ಅಬಕಾರಿ ತೆರಿಗೆ ಮತ್ತು ರಾಜ್ಯ ಮೌಲ್ಯವರ್ಧಿತ ತೆರಿಗೆಗಳನ್ನು ಹಂತಹಂತವಾಗಿ ಇಳಿಕೆ ಮಾಡಿಕೊಂಡು ಬರುವುದೇ ಈಗ ಇರುವ ಏಕೈಕ ಪರಿಹಾರ ಮಾರ್ಗ.

ಲೇಖಕ: ಚೆನ್ನೈನ 'ದ್ವಾರ ರಿಸರ್ಚ್' ಸಂಸ್ಥೆಯ ಸಂಶೋಧನಾ ಸಹಾಯಕ

ಅಮಿತಾಭ್ ಬಚ್ಚನ್, ಅಕ್ಷಯ್ ಕುಮಾರ್, ಅನುಪಮ್ ಖೇರ್ ಮತ್ತು ಬಾಬಾ ರಾಮದೇವ್ ಅವರ ಮುಖವಾಡ ತೊಟ್ಟ ಜನರು ಪೆಟ್ರೋಲ್ ದರ ಏರಿಕೆ ವಿರುದ್ಧ ಮುಂಬೈಯಲ್ಲಿ ಪ್ರತಿಭಟನೆ ನಡೆಸಿದರು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'**ಕೋವಿಡ್ ಲಸಿಕೆ** ಹಾಕಿಸಿಕೊಂಡವರು ಅರಿವಳಿಕೆ ಚುಚ್ಚುಮದ್ದು ತೆಗೆದುಕೊಂಡರೆ ಜೀವಕ್ಕೆ ಅಪಾಯವಿದೆ. ನನ್ನ ಗೆಳೆಯನೊಬ್ಬ ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದ. ಎರಡೇ ದಿನದಲ್ಲಿ ಹಲ್ಲಿನ ಚಿಕಿತ್ಸೆಗಾಗಿ ದಂತವೈದ್ಯರ ಬಳಿ ಹೋಗಿದ್ದ. ವೈದ್ಯರು ಆತನಿಗೆ ಅರಿವಳಿಕೆ ನೀಡಿದರು. ಅವನು ತಕ್ಷಣವೇ ಸತ್ತುಹೋದ' ಎಂಬ ವಿವರ ಇರುವ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಇದು ಸುಳ್ಳು ಸುದ್ದಿ ಎಂದು ಹಲವು ಫ್ಯಾಕ್ಟ್‌ಚೆಕ್ ವೇದಿಕೆಗಳು ತಿಳಿಸಿವೆ. 'ಕೋವಿಡ್ ಲಸಿಕೆ ಹಾಕಿಸಿಕೊಂಡವರು ಅರಿವಳಿಕೆ ತೆಗೆದುಕೊಂಡರೆ ಜೀವಕ್ಕೆ ಅಪಾಯ, ಸಾವು ಸಂಭವಿಸುತ್ತದೆ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಆಧಾರವಿಲ್ಲ. ಈ ಸುಳ್ಳುಸುದ್ದಿಯನ್ನು ನಂಬಬೇಡಿ. ಎಲ್ಲರೂ ಲಸಿಕೆ ಹಾಕಿಸಿಕೊಳ್ಳಿ' ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ರೋಗನಿರೋಧಕ ಯೋಗ

ಧರ್ಮಗಳ ತವರೂರು ಭಾರತ. ಇಲ್ಲಿ ದೇವರು, ಧರ್ಮದಾಚೆ ನೋಡುವ ಅಧ್ಯಾತ್ಮಲೋಕ ಅಗಾದವಾಗಿ ಬೆಳೆದಿದೆ. ನಮ್ಮನ್ನು ಸೃಷ್ಟಿಸಿದ ದೇವರಿದ್ದಾನೆಯೇ? ಆ ದೇವನ ಸೃಷ್ಟಿಕರ್ತ ಯಾರು? ಬ್ರಹ್ಮಾಂಡದಲ್ಲಿ ಅಸಂಖ್ಯಾತ ನಕ್ಷತ್ರ ಆಕಾಶ ಕಾಯಗಳನ್ನೆಲ್ಲಾ ದೇವರು ಏಕೆ ಸೃಷ್ಟಿಸಿದ? ಅವನ ಉದ್ದೇಶವೇನು? ಪ್ರತಿ ಜೀವಿಯೊಳಗೂ ಆತ್ಮವಿದೆಯೇ? ಇದ್ದರೆ ಜೀವಿ ಗತಿಸಿದ ಮೇಲೆ ಜೀವಾತ್ಮ ಎಲ್ಲಿ ಹೋಗುತ್ತದೆ? - ಮುಂತಾದ ವಿಚಾರಗಳಿಗೆ ಉತ್ತರ ಹುಡುಕುವ ಭಾರತೀಯ ಅಧ್ಯಾತ್ಮ ಚಿಂತನೆ, ನಿಜಾರ್ಥದಲ್ಲಿ ವೈಜ್ಞಾನಿಕ ಸಂಶೋಧನಾ ರೂಪವಾಗಿದೆ.

ಇಡೀ ಮಾನವಜಗತ್ತು ಅಜ್ಞಾನದ ಕತ್ತಲೆಯಲ್ಲಿದ್ದಾಗ ಭಾರತದ ನೆಲದಲ್ಲಿ ಅಧ್ಯಾತ್ಮದಂಥ ವಿಚಾರಜ್ಞಾನ ಬೆಳಗುತ್ತಿತ್ತು. ಸಾವಿರಾರು ವರ್ಷಗಳ ಹಿಂದೆಯೇ ಭಾರತೀಯ ಋಷಿಗಳು-ಚಿಂತಕರು ಬ್ರಹ್ಮಾಂಡದ ಅವಲೋಕನಕ್ಕಿಳಿದಿದ್ದರು. ದೇವರು ಇದ್ದಾನೆಯೇ? ಇದ್ದರೆ ಹೇಗಿರುತ್ತಾನೆ? ಆತ ಮನುಷ್ಯರಂತಿದ್ದಾನಾ? ಆತನಿಗೆ ರೂಪವೇ ಇಲ್ಲವಾ? – ಇಂಥ ಆಸ್ತಿಕವಿಚಾರದ ಜೊತೆಯಲ್ಲೇ, ದೇವರು ಎಂಬುದು ಕಲ್ಪನೆಯೇ? ದೇವರು ಇದ್ದರೆ ಪ್ರತ್ಯಕ್ಷನಾಗುತ್ತಿರಲಿಲ್ಲವೇ? – ಎಂಬಂಥ ನಾಸ್ತಿಕವಾದ ಸಹ ಬೆಳೆಯಿತು. ಭಾರತದಲ್ಲಿ ಆಸ್ತಿಕ-ನಾಸ್ತಿಕ ವಿಚಾರಧಾರೆಗಳು ಬೆಳೆದಂತೆ ಹುಟ್ಟು ಮತ್ತು ಸಾವಿನಾಚೆಗಿನ ಆಧ್ಯಾತ್ಮಿಕ ವಿಚಾರ ಪ್ರಚಲಿತಕ್ಕೆ ಬಂತು. ಅಧ್ಯಾತ್ಮದ ಅಧ್ಯಯನಕ್ಕಿಳಿದ ಭಾರತೀಯ ಋಷಿಗಳು ಧ್ಯಾನ ಮತ್ತು ಯೋಗಕ್ಕೆ ಆದ್ಯತೆ ಕೊಟ್ಟರು. ಏಕೆಂದರೆ, ಬ್ರಹ್ಮಾಂಡ ರಹಸ್ಯ ಭೇದಿಸುವುದು ಅಷ್ಟು ಸುಲಭವಲ್ಲ. ಅದಕ್ಕೆ ಅಗಾದವಾದ ಜ್ಞಾನದ ಪ್ರಭೆ ಬೇಕು. ಆ ಪ್ರಭೆಯನ್ನು ತಡೆದುಕೊಳ್ಳುವ ದೈಹಿಕ ಮತ್ತು ಮಾನಸಿಕ ಚೈತನ್ಯವೂ ಬೇಕು. ಪತಂಜಲಿಯಂಥ ಮಹರ್ಷಿ ಧ್ಯಾನದ ಜೊತೆಗೆ ದೇಹ ಮತ್ತು ಮನಸ್ಸನ್ನು ನಿಯಂತ್ರಿಸುವ ಯೋಗದ ಮೊರೆಹೋದರು.

ಯೋಗಾಸನದಿಂದ ಶರೀರ ಚೈತನ್ಯಪೂರ್ಣವಾಗುವುದರಿಂದ ಯೋಗಾಸನ ಕೇವಲ ಕಾಡಿನಲ್ಲಿ ತಪಸ್ಸು ಮಾಡುವ ಯೋಗಿಗಳಿಗಲ್ಲದೆ, ನಾಡಿನಲ್ಲಿರುವ ಭೋಗಿಗಳಿಗೂ ಅಗತ್ಯವಾಗಿ ಬೇಕು. ಋಷಿಗಳಂತೆ ನಾಡಿನ ಜನ ಕಾಡಿನಲ್ಲಿ ತಪಸ್ಸು ಮಾಡದೆ ಇರಬಹುದು. ಆದರೆ ಕಾಡಿನಂಥ ಮನಸ್ಸನ್ನು ಹೊಂದಿರುವ ನಾಡಿನ ಜನ ಮಾನಸಿಕವಾಗಿ ಪ್ರಬಲಗೊಳ್ಳಲು ಯೋಗವಿದ್ಯೆಯನ್ನು ಕಲಿಯಲೇ ಬೇಕು. ನಿತ್ಯ ಕಾಡುವ ರೋಗಗಳು, ಮನಸ್ಸನ್ನು ಬಾಡಿಸುವ ವಿಚಾರಗಳಿಂದ ಸದಾ ತಳಮಳದಲ್ಲೇ ಬದುಕುವ ಆಧುನಿಕ ಮನುಷ್ಯ ಸದೃಢನಾಗಿ ಬೆಳೆಯಲು ಧ್ಯಾನ–ಯೋಗ ಅತ್ಯವಶ್ಯಕ.

ದೇಹಕ್ಕೆ ಆಹಾರ ಹೇಗೆ ನಿತ್ಯ ಅಗತ್ಯವೋ, ಹಾಗೇ ಯೋಗ-ಧ್ಯಾನ ಸಹ ಅಗತ್ಯವಾಗಿ ಬೇಕು. ದಿನಕ್ಕೊಂದೊಂದು ರೀತಿ ದಾಳಿ ಮಾಡುವ ರೋಗಾಣುಗಳನ್ನು ಹಿಮ್ಮೆಟ್ಟಿಸಲು ಆಧುನಿಕ ಮನುಷ್ಯ ವಿವಿಧ ಔಷಧಗಳನ್ನು ಆಶ್ರಯಿಸಿದ್ದಾನೆ. ಇದೆಲ್ಲಾ ತಾತ್ಕಾಲಿಕ ಮದ್ದು. ಮಧುಮೋಹದಿಂದ ಬರುವ ಮಧುಮೇಹ ಮತ್ತು ಬದುಕಿನ ಜಂಜಡಗಳಿಂದ ಬರುವ ರಕ್ತದೊತ್ತಡಗಳನ್ನು ನಿವಾರಿಸಲು ಯೋಗವೇ ಸರಿಯಾದ ಮದ್ದು. ಅದಕ್ಕಾಗಿ ಭೋಗಜೀವನದಿಂದ ಯೋಗಜೀವನಕ್ಕೆ ಮರಳುವುದೇ ಮಾನವರ ಉಳಿವಿಗಿರುವ ಏಕೈಕ ಮಾರ್ಗ. ಹೀಗಾಗಿ ದೇಹದ ಶಕ್ತಿಗೆ ಪೌಷ್ಟಿಕ ಆಹಾರ ಸೇವಿಸಿದಂತೆ, ಮಾನಸಿಕಶಕ್ತಿ ಹೆಚ್ಚಿಸಲು ಯೋಗ-ಧ್ಯಾನವನ್ನು ಮಾಡಲೇಬೇಕು.

ದಿನ ಕಳೆದಂತೆ ಮಾನವರ ಬದುಕು ಬಹಳ ಸಂಕೀರ್ಣವಾಗುತ್ತಿದೆ. ಪ್ರಕೃತಿಗೆ ವಿರುದ್ಧವಾಗಿ ನಡೆಸುತ್ತಿರುವ ವಿಲಾಸಿಜೀವನ ಮಾನವರ ಬದುಕನ್ನೇ ಆಪೋಷಣ ತೆಗೆದುಕೊಳ್ಳುತ್ತಿದೆ. ನಮಗೇ ಅರಿವಿಲ್ಲದೆ ನಾವೇ ಸೃಷ್ಟಿಸಿಕೊಂಡಿರುವ ಆಧುನಿಕ ವಿಷವರ್ತುಲಗಳಿಂದ ಕೊರೊನಾದಂಥ ಕ್ರಿಮಿಗಳು ಬಾಧಿಸುತ್ತಿವೆ. ಇಂಥ ವಿಷಜಂತುಗಳಿಂದ ಪಾರಾಗಲು ಯೋಗಾಸನ ಸಹಾಯಕ. ಭೋಗವನ್ನು ಬಯಸಿ ರೋಗ ಬರಿಸಿಕೊಳ್ಳುವ ಐಷಾರಾಮಿ ಜೀವನವನ್ನು ಬಿಟ್ಟು, ಯೋಗದಿಂದ ಶ್ರಮಜೀವನವನ್ನು ಕಟ್ಟಿಕೊಳ್ಳುವ ಸಿದ್ಧಿಪಥದಿಂದ 'ಸಚ್ಚಿದಾನಂದ'ದ ನೆಮ್ಮದಿಯ ಬದುಕು ಸಾಕಾರವಾಗುತ್ತದೆ.

ದಿನ ಭವಿಷ್ಯ

ಶನಿವಾರ ಜೂನ್ 19, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮೃಗಶಿರ ನವಮೀ ಗಂ. 20-49 (ಹ. 2-22) ಶನಿವಾರ ನಿತ್ಯ ನಕ್ಷತ್ರ ಹಸ್ತ ಗಂ. 27-9 (ಸಾ. 4-53) ವರೀಯನ್ ನಾಮ ಯೋಗ ಗಂ. 38-1 ಕೌಲವ ಕರಣ ಗಂ. 20-49 ವಿಷ ಗಂ. 46-5 ಅಮೃತ ಗಂ. 12-21 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 5-58 ಸೂರ್ಯಾಸ್ತ: 6-44 ಅದೃಷ್ಟ ಸಂಖ್ಯೆ 2 4

ಮೇಷ: ಹಿರಿಯರೊಂದಿಗೆ ಶಾಂತತೆಯಿಂದ ವ್ಯವಹರಿಸುವುದು ಉತ್ತಮ. ವೃಥಾ ಖರ್ಚ. ಸಾಮಾಜಿಕ ಕಾರ್ಯಗಳಲ್ಲಿ ಹೊಂದಾಣಿಕೆ ಅವಶ್ಯ. ಕಿವಿ, ಗಂಟಲು ನೋವುಗಳು ನಿಮ್ಮನ್ನು ಪೀಡಿಸುವ ಸಾಧ್ಯತೆ.

ವೃಷಭ: ವ್ಯವಹಾರಗಳಿಂದ ಉತ್ತಮ ಆದಾಯ ಲಭಿಸುವುದು. ಪ್ರತಿಯೊಂದು ವಿಷಯದಲ್ಲೂ ನೀವು ತೆಗೆದುಕೊಳ್ಳುವ ನಿರ್ಧಾರವೇ ಸರಿಯಾಗಿರುವುದು. ಧಾರ್ಮಿಕ ಕಾರ್ಯಗಳಲ್ಲಿ ಸಕ್ರಿಯ ಭಾಗಿಯಾಗುವ ನಿರೀಕ್ಷೆ.

ಮಿಥುನ: ಮಾನಸಿಕ ಉದ್ವೇಗದಿಂದ ಉದ್ಯೋಗದಲ್ಲಿ ತೊಡಕುಂಟಾಗುವುದು. ಅಜೀರ್ಣವೇ ಮುಂತಾದ ತೊಂದರೆ ಬಂದೊದಗಬಹುದು. ನೀರು ಆಹಾರದ ವಿಷಯದಲ್ಲಿ ಜಾಗೃತೆ ಅಗತ್ಯ. ಸಂಗಾತಿಯೊಂದಿಗೆ ವಿರಸ ಸಾಧ್ಯತೆ.

ಕರ್ಕಾಟಕ: ನಿಮ್ಮ ಸಂಕಷ್ಟಗಳು ಪರಿಹಾರವಾಗಲಿದೆ. ಹಿಂದಿನ ಕೆಲಸಗಳಿಗೆ ಪುನಃ ಚಾಲನೆ ದೊರೆತು ಪ್ರಗತಿ ಪಥದಲ್ಲಿ ಸಾಗುವುದು. ದುಡುಕು ತನ ಬೇಡ ಉದ್ವೇಗಗೊಳ್ಳುವುದರಿಂದ ಸಮಸ್ಯೆಗಳು ತಲೆದೋರಬಹುದು.

ಸಿಂಹ: ಮಂಗಳ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ನೌಕರಸ್ಥರಿಗೆ ಬಡ್ತಿಯೊಂದಿಗೆ ಉದ್ಯೋಗದಲ್ಲಿ ಬದಲಾವಣೆ ಕಂಡುಬರುವುದು. ಆರ್ಥಿಕ ಅನುಕೂಲತೆ ಒದಗಿಬರುವುದು. ಬಂಧುಗಳಿಂದ ಅಶುಭ ಸುದ್ದಿ ಸಾಧ್ಯತೆ.

ಕನ್ಯಾ: ಕಣ್ಣು ಅಥವಾ ತಲೆನೋವು ತೀವ್ರವಾಗಿ ಕಾಡುವ ಸಾಧ್ಯತೆ. ವಾದವಿವಾದದಿಂದಾಗಿ ಅನಗತ್ಯ ವೈರತ್ವ ಉಂಟಾಗಬಹುದು. ಅಯೋಗ್ಯರೊಂದಿಗೆ ಯಾವುದೇ ಕಾರಣಕ್ಕೂ ವ್ಯವಹಾರ ಬೇಡ. ಆಯಾಸ ತಲೆದೋರೀತು.

ತುಲಾ: ಆರ್ಥಿಕ ಪ್ರಗತಿ ಉತ್ತಮಗೊಂಡು ಸಂತೋಷ ಮೂಡುವುದು. ಶತ್ರುಗಳ ವಿರುದ್ಧ ಜಯ ನಿಮ್ಮದಾಗಲಿದೆ. ಬಹಳ ದಿನಗಳ ಸಮಸ್ಯೆಗಳು ಪರಿಹಾರವಾಗಲಿದೆ. ಬೇಡಿ ಬಂದವರಿಗೆ ಸಹಾಯ ಮಾಡುವಿರಿ.

ವೃಶ್ಚಿಕ: ಸ್ವಂತ ಉದ್ಯೋಗಸ್ಥರು ಹಾಗೂ ನೌಕರಿಯಲ್ಲಿರುವವರು ತಮ್ಮ ನಡೆ ನುಡಿ, ಕೆಲಸಗಳ ಬಗ್ಗೆ ಜಾಗ್ರತೆಯಿಂದಿರುವುದು ಸೂಕ್ತ. ಚಿಕ್ಕ ತಪ್ಪಿಗೂ ಮಹತ್ತರ ದಂಡ ತೆರಬೇಕಾದೀತು. ನೌಕರಿ ಅಥವಾ ವಾಸಸ್ಥಳದ ಪಲ್ಲಟವಾಗುವ ಸಾಧ್ಯತೆ.

ಧನು: ನಿಮ್ಮ ಕೆಲಸ ಕಾರ್ಯಗಳು ಮಂದಗತಿಯಲ್ಲಿ ಸಾಗುವವು. ಆರೋಗ್ಯದಲ್ಲಿ ಸಣ್ಣಪುಟ್ಟ ತೊಂದರೆಗಳು ಕಾಣಿಸಿಕೊಳ್ಳುವ ಸಾಧ್ಯತೆ. ಹೊಸ ಕೆಲಸಗಳನ್ನು ಪ್ರಾರಂಭಿಸುವುದು ಬೇಡ. ಅಪವಾದಕ್ಕೆ ತುತ್ತಾಗುವ ಸಾಧ್ಯತೆ.

ಮಕರ: ಆದಾಯ ಮತ್ತು ಉಳಿಕೆಗಳಲ್ಲಿ ಪ್ರಗತಿಯಿರುವುದು. ಆರೋಗ್ಯದಲ್ಲಿ ಸುಧಾರಣೆ ಕಂಡು ನೆಮ್ಮದಿ. ಸಂಬಂಧಿಗಳಲ್ಲಿ ವಂಶವೃದ್ಧಿಯ ಶುಭ ಸಂದೇಶ ಕೇಳಲಿದ್ದೀರಿ. ನಿಂತುಹೋದ ಕೆಲಸಗಳಿಗೆ ಮರುಚಾಲನೆ.

ಕುಂಭ: ಆರ್ಥಿಕ ಸುಧಾರಣೆ ಕಂಡುಬರುವುದು. ಧಾರ್ಮಿಕ ಕಾರ್ಯಗಳಿಗೆ ಖರ್ಚುಮಾಡುವ ಸಾಧ್ಯತೆ ಇದ್ದು ಕೈಗೊಳ್ಳುವ ಕಾರ್ಯದಲ್ಲಿ ಯಶಸ್ಸು ಸಾಧಿಸಿ ಕೀರ್ತಿ ಸಂಪಾದನೆ. ಧೈರ್ಯದಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಿ.

ಮೀನ: ಅಶುಭ ಸ್ವಪ್ನಗಳಿಂದಾಗಿ ಮಾನಸಿಕ ಚಿಂತೆ. ನಿರಾಸೆಯಿಂದಾಗಿ ದುಃಖದ ಅನುಭವ. ಸಂಗಾತಿಯ ಆರೋಗ್ಯದ ಬಗ್ಗೆ ವಿಶೇಷ ಗಮನವಿರಲಿ. ಬೇರೆಯವರ ಅಪಹಾಸ್ಯಕ್ಕೆ ಒಳಗಾಗುವ ಸಾಧ್ಯತೆ.

ನಿಮ್ಮ ಜನ್ಮದಿನ 19-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ನಿತ್ಯ ಜೀವನಕ್ಕೆ ಬೇಕಾದ ಎಲ್ಲ ಸೌಲಭ್ಯಗಳು ಒದಗಿಬರುವುದು. ಸಾಮಾಜಿಕ ಕೆಲಸಗಳ ಬಗ್ಗೆ ಕಾಳಜಿ ಹೊಂದಿದವರಾದರೂ ರಾಜಕಾರಣವು ಒಗ್ಗಿ ಬರಲಾರದು. ಉತ್ತಮ ಸಂಗಾತಿಯಿಂದಾಗಿ ಎದುರಾದ ಗಂಡಾಂತರಗಳು ಕರಗಿಹೋಗಲಿವೆ.

ಪದಬಂಧ 4632 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಸೆಮಣೆಯನ್ನೇರುತ್ತಿರುವ ಪುತ್ರ (4)
3.ರಾಜನ ದರ್ಬಾರು (4)
5.ಒಲುಮೆಯಿಂದಲೇ ಮಾಡಿದ ಒತ್ತಾಯ (3)
6.ಅಶ್ವವನ್ನೇರಲು ಬಳಸುವ ಬಳೆ (3)
8.ಮರುಳನ ಜೊತೆ ನೀಚ ವ್ಯಕ್ತಿ ಇದ್ದಾನಲ್ಲಾ? (3)
9.ಕಣ್ಣು ಮುಚ್ಚಿ ತೆಗೆಯುವಷ್ಟು ಕಾಲ (3)
10.ಕೈಯ್ಯಲ್ಲಿರುವ ಹಣ (3)
12.ಅರ್ಹವಾಗಿದ್ದು ಒದಗಬಹುದಾದದ್ದು (3)
14.ಯುದ್ಧದ ನಗಾರಿ (4)
15.ಅದೃಷ್ಟವೇ ಇಲ್ಲದವ (4)

ಮೇಲಿಂದ ಕೆಳಕ್ಕೆ
1.ಮತ್ತೇರಿದ ಆನೆ (4)
2.ಛೇ!ಗಲ್ಲಿ ಆಜುಬಾಜು ಎಲ್ಲಾ ಕೊಳೆ! (3)
3.ಜುಲುಮೆಯಿಂದ ಮೂಡಿತೇ ಈ ಪ್ರೀತಿ? (3)
4.ಕುಳ್ಳನಲ್ಲ ಬಿಡಿ!ಭಾರೀ ಶ್ರೀಮಂತ! (4)
7.ಹರುಷ ತೋರುತ್ತಿರುವ ಗಂಡುವ್ಯಕ್ತಿ (3)
8.ಸನ್ಮಾನ ಮಾಡಿದರೂ ಹೀಗೆ ದುಗುಡವೇ? (3)
9.ಉತ್ತರವೇ ಇಲ್ಲದ ಮೌನ (4)
11.ಕೆಟ್ಟ ಅದೃಷ್ಟವಿದು (4)
12.ತಿರುಗುತ್ತಲೇ ಇರುವವನು (3)
13.ವ್ಯವಸಾಯಗಾರನ ಅಳಲು (3)



4631ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಮಪದ 4.ಕಟಾಕ್ಷ 5.ನಿಶಾಂತ 6.ಸರಸ 10.ವಿನಿಯೋಗ 11.ಜೀವಚ್ಛವ 12.ಸುದಿನ 14.ಸಂದೂಕ 16.ಬುದ್ಬುದ 17.ವಿಧಾನಸೌಧ

ಮೇಲಿಂದ ಕೆಳಕ್ಕೆ: 1.ಪಕ್ಷ 2.ಮಸೂರ 3.ದನಿ 6.ಸವಿಗನಸು 7.ಸಹಜೀವನ 8.ಹವಿಸ್ಸು 9.ಆವರ್ತ 13.ದಿವಾನ 15.ಕವಿ 16.ಬುಧ

ಸುಡೊಕು 5018

				6				2
6		2	4		9			
	8					6		9
3	5	7	2			4		
		8		4			3	7
4					3	2		8
		9	8					4
8					4		2	
		3		2		7		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5017 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಜನನ : 12-04-1942 ಮರಣ: 10-06-2021

ಎಂ. ರಾಮಯ್ಯ
ಕಾಂಗ್ರೆಸ್ ಹಿರಿಯ ಮುಖಂಡರು

ನೀವು ನಮ್ಮನ್ನು ಅಗಲಿದ ಘಳಿಗೆಯಿಂದ ನಿಮ್ಮ ಮಮತೆ ವಾತ್ಸಲ್ಯ ನಮ್ಮೆಲ್ಲರನ್ನೂ ಸದಾ ಕಾಡುತ್ತಿದೆ.

ಆತ್ಮೀಯ ಬಂಧುಗಳೆ,

ನಮ್ಮ ತಂದೆಯವರಾದ ಎಂ. ರಾಮಯ್ಯ (ಚಿಕ್ಕಮುನಿಯಪ್ಪನವರ ಮಗ) ನವರು ದಿನಾಂಕ 10-06-2021ರ ಬೆಳಿಗ್ಗೆ 11.40 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ತತ್ಸಂಬಂಧವಾಗಿ ಇವರ ವೈಕುಂಠ ಸಮಾರಾಧನೆಯನ್ನು ದಿನಾಂಕ: 20-06-2021 ರ ಭಾನುವಾರ ಬೆಳಿಗ್ಗೆ 10 ರಿಂದ 12 ಗಂಟೆಯೊಳಗೆ ನಮ್ಮ ಸ್ವಗೃಹ ನಂ. 202, ಕರಗದಮ್ಮ ನಿಲಯ, ಗಣಪತಿ ದೇವಸ್ಥಾನದ ರಸ್ತೆ, ಹೋಲಿಚೈಲ್ಡ್ ಹಿಂಭಾಗ, ಪಂತರಪಾಳ್ಯ, ನಾಯಂಡಹಳ್ಳಿ ಅಂಚೆ, ಮೈಸೂರು ರಸ್ತೆ, ಬೆಂಗಳೂರು-39 ಇಲ್ಲಿ ಹಮ್ಮಿಕೊಂಡಿದ್ದೇವೆ.

ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸಿಕೊಳ್ಳುವ
ಇಂತಿ ಸದಾ ನಿಮ್ಮ ಪರಿಕಲ್ಪನೆಯಲ್ಲಿ ...
ಮಕ್ಕಳು, ಮೊಮ್ಮಕ್ಕಳು, ವಂಶಸ್ಥರು ಹಾಗೂ ಬಂಧು ಮಿತ್ರರು.
(ಫೋನ್: 9845085708)

ಸವಿನೆನಪು



ಆರ್. ಸುಬ್ಬರಾಜು
ನಿಧನ: 19-06-2005

ನೀವು ನಮ್ಮನ್ನಗಲಿ ಇಂದಿಗೆ ಹದಿನಾರು ವರ್ಷಗಳು ನಿಮ್ಮ ನೆನಪು ಸದಾ ಹಸಿರು. ನಿಮ್ಮ ತಾಳ್ಮೆ, ತ್ಯಾಗ, ಪ್ರೀತಿ, ಆದರ್ಶಮಯ ಜೀವನ ನಮಗೆ ದಾರಿದೀಪ... ಪ್ರತಿ ದಿನವೂ ಪ್ರತಿ ಕ್ಷಣವೂ ಹೆಮ್ಮೆಯಿಂದ ಸ್ಮರಿಸುವ..
ಮಗ ಬಿ.ಎಸ್. ಕೃಷ್ಣ ಮತ್ತು ಕುಟುಂಬವರ್ಗ
ಸಿಬ್ಬಂದಿ ವರ್ಗ, ಬನಶಂಕರಿ ಗ್ಲಾಸ್ ಅಂಡ್ ಪ್ಲೈವುಡ್ಸ್

ವೈಕುಂಠ ಸಮಾರಾಧನೆ

ಶ್ರೀಮತಿ ಶಾರದಮ್ಮನವರು
(ದಿ|| ಶ್ರೀ ಟಿ.ಕೆ. ಕಂಬಯ್ಯನವರ ಧರ್ಮಪತ್ನಿ)

ತಾ|| 08-06-2021ನೇ ಮಂಗಳವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ತಾ|| 19-06-2021ನೇ ಶನಿವಾರ ಬೆಳಿಗ್ಗೆ 11 ಘಂಟೆಗೆ ಮೃತರ ಸ್ವಗೃಹದಲ್ಲಿ ನಡೆಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು, ಕುಟುಂಬದವರು
ದೂರವಾಣಿ : 9611831521, 9900143153

LOOKING TO BUILD, BUY OR SELL A PROPERTY

Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಮುಖರ ಸಮಿತಿ ಸಭೆ ಬಳಿಕ ಎಚ್ಚರಿಕೆ ನೀಡಿದ ಉಸ್ತುವಾರಿ ಅರುಣ್‌ಸಿಂಗ್

ಶಿಸ್ತು ಉಲ್ಲಂಘಿಸಿದರೆ ತಕ್ಕ ಶಾಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷಕ್ಕೆ ನಷ್ಟವಾಗುವ ರೀತಿಯಲ್ಲಿ ಇಬ್ಬರು- ಮೂವರು ಕೆಲಸ ಮಾಡುತ್ತಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಹೇಳಿದರು.

ಮೂರು ದಿನಗಳ ರಾಜ್ಯ ಭೇಟಿಯ ಬಳಿಕ ದೆಹಲಿಗೆ ತೆರಳುವ ಮುನ್ನ ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು ಪಕ್ಷ ವಿರೋಧಿ ಹೇಳಿಕೆ ನೀಡುವವರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ಪಕ್ಷದ ವಿರುದ್ಧ ಯಾರೂ ಮಾತನಾಡಬಾರದು. ಅಂತಹ ಹೇಳಿಕೆಗಳನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ನಿರ್ದಾಕ್ಷಿಣ್ಯವಾಗಿ ಶಿಸ್ತುಕ್ರಮ ಜರುಗಿಸಲಾಗುವುದು ಎಂದರು.

ನಿಮ್ಮ ಟೀಕೆಗಳೇನಿದ್ದರೂ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಮಾತ್ರ ಇರಲಿ. ಪಕ್ಷಕ್ಕೆ ಹಾನಿ ಮಾಡುವುದನ್ನು ಸಹಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಶಾಸಕರು ಮತ್ತು ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಬೇಕು. ಯಡಿಯೂರಪ್ಪ ಸರ್ಕಾರ ಹಲವು ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದೂ ಅವರು ಹೇಳಿದರು.

ಪ್ರಮುಖ ಸಮಿತಿ ಸಭೆಯ ನಿರ್ಣಯ: ಪಕ್ಷದ ಪ್ರಮುಖರ ಸಮಿತಿ ಸಭೆಯ(ಕೋರ್ ಕಮಿಟಿ) ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದ ಕಂದಾಯ ಸಚಿವ ಆರ್.ಅಶೋಕ, ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಿದ ಕಾರಣ ಜೂನ್ 25 ನ್ನು ಕರಾಳ ದಿನವನ್ನಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ತುರ್ತುಪರಿಸ್ಥಿತಿಯಲ್ಲಿ ಜೈಲುವಾಸ ಅನುಭವಿಸಿದವರಿಗೆ ಗೌರವಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ನರೇಂದ್ರಮೋದಿ ಸರ್ಕಾರ ಅನಾಥ ಮಕ್ಕಳಿಗೆ ₹10 ಲಕ್ಷ ನೀಡುವ ಯೋಜನೆ ಮತ್ತು 10 ಕೋಟಿ ಜನರಿಗೆ ದೀಪಾವಳಿವರೆಗೂ ಉಚಿತ ಪಡಿತರ ವಿತರಿಸುವ ನಿರ್ಧಾರ ತೆಗೆದುಕೊಂಡಿದೆ. ಕೋವಿಡ್‌ನಿಂದ ಮೃತಪಟ್ಟ ಬಿಪಿಎಲ್ ಕುಟುಂಬದವರಿಗೆ ₹1 ಲಕ್ಷ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಈ ಮಾಹಿತಿಯನ್ನು ಗ್ರಾಮ ಮಟ್ಟದವರೆಗೂ ತಲುಪಿಸಲು ಕಾರ್ಯಕ್ರಮ ರೂಪಿಸಲಾಗುವುದು ಎಂದು ಹೇಳಿದರು.

ತೀರ್ಮಾನಗಳು

- ಜೂನ್ 21 ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆ.
- ಜೂನ್ 26 ರಂದು ಬೆಂಗಳೂರಿನಲ್ಲಿ ಪಕ್ಷದ ರಾಜ್ಯ ಕಾರ್ಯಕಾರಿಣಿ ಸಭೆ
- ಜುಲೈ 1 ರಿಂದ 15 ರೊಳಗೆ ಜಿಲ್ಲಾ ಕಾರ್ಯಕಾರಿಣಿ ಮತ್ತು ಜುಲೈ 16 ರಿಂದ 31 ರವರೆಗೆ ಮಂಡಲ ಕಾರ್ಯಕಾರಿಣಿ.

> ಪ್ರಮುಖರ ಸಮಿತಿ ಸಭೆಯಲ್ಲಿ ಸಚಿವ ಸಂಪುಟ ವಿಸ್ತರಣೆ ವಿಷಯ ಹಾಗೂ ನಾಯಕತ್ವ ಬದಲಾವಣೆ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಪಕ್ಷದ ಬಲವರ್ಧನೆ ಕುರಿತ ಚರ್ಚೆ ನಡೆದಿದೆ
> **ಆರ್. ಅಶೋಕ,** ಕಂದಾಯ ಸಚಿವ

ಜಗನ್ನಾಥ ಭವನದಲ್ಲಿ ನಡೆದ ಪಕ್ಷದ ಪ್ರಮುಖ ನಾಯಕರ ಸಭೆ

ನಿಗಮ ಮಂಡಳಿಗಳಲ್ಲಿ ಬದಲಾವಣೆ?

ನಿಗಮ- ಮಂಡಳಿಗಳ ಬಹುತೇಕ ಅಧ್ಯಕ್ಷರು ಮತ್ತು ಸದಸ್ಯರನ್ನು ಬದಲಾವಣೆ ಮಾಡಲು ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಸಾಕಷ್ಟು ನಿಗಮ ಮಂಡಳಿಗಳ ಅಧ್ಯಕ್ಷರು ಪಕ್ಷದ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತಿಲ್ಲ. ಅಂತಹವರನ್ನು ಬದಲಿಸಿ, ಹೆಚ್ಚು ಕ್ರಿಯಾಶೀಲರಾಗಿರುವವರನ್ನು ನೇಮಿಸಲು ನಿರ್ಧರಿಸಲಾಗಿದೆ. ಈ ಪ್ರಕ್ರಿಯೆಗೆ ಆದಷ್ಟು ಬೇಗನೇ ಚಾಲನೆ ಸಿಗಲಿದೆ. ಪಕ್ಷ ಮತ್ತು ಸಿದ್ಧಾಂತ ನಿಷ್ಠರಿಗೆ ಆ ಸ್ಥಾನಗಳನ್ನು ನೀಡಬೇಕು ಎಂಬ ಚರ್ಚೆ ನಡೆಯಿತು ಎಂದು ಹೇಳಿದರು.

9 ನಿಗಮಗಳ ಅಧ್ಯಕ್ಷರ ವಾಗ್ದಾಳಿ

‘ಅಳಿಯನಿಗೆ ಆಯಕಟ್ಟಿನ ಹುದ್ದೆ ಕೊಡಿಸಲು ವಿಶ್ವನಾಥ್ ಲಾಬಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್.ವಿಶ್ವನಾಥ್ ಒಬ್ಬ ರಾಜಕೀಯ ವ್ಯಾಪಾರಿಯಾಗಿದ್ದು, ಎಂಜಿನಿಯರ್ ಅಳಿಯನಿಗೆ ಆಯಕಟ್ಟಿನ ಹುದ್ದೆ ಕೊಡಿಸುವುದಕ್ಕೆ ಹಾಗೂ ಮಕ್ಕಳ ರಾಜಕೀಯ ಭವಿಷ್ಯ ರೂಪಿಸುವುದಕ್ಕೆ ಅವರ ರಾಜಕೀಯ ಜೀವನ ಮೀಸಲಾಗಿದೆ’ ಎಂದು 9 ನಿಗಮ-ಮಂಡಳಿಗಳ ಅಧ್ಯಕ್ಷರು ಜಂಟಿ ಹೇಳಿಕೆಯಲ್ಲಿ ಟೀಕಿಸಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಪ್ತವಲಯದಲ್ಲಿ ಗುರುತಿಸಿಕೊಂಡಿರುವ ಅಧ್ಯಕ್ಷರು ಸುದೀರ್ಘ ಹೇಳಿಕೆ ನೀಡಿದ್ದಾರೆ.

ಜೆಡಿಎಸ್‌ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವಾಗ ಯಡಿಯೂರಪ್ಪನವರ ವಯಸ್ಸು, ಉತ್ಸಾಹ ನಿಮ್ಮ ಸಮಯ ಸಾಧಕತನದ ಮಬ್ಬಿನ ಕಣ್ಣಿಗೆ ಏಕೆ ಕಾಣಲಿಲ್ಲ ಎಂದು ಪ್ರಶ್ನಿಸಿರುವ ಅವರು, ನೆಂಟರಿಷ್ಟರಿಗೆ ಕಾಮಗಾರಿಗಳ ಗುತ್ತಿಗೆ ಕೊಡಿಸುವುದಕ್ಕೇ ನಿಮ್ಮ ಇಡೀ ರಾಜಕೀಯ ಜೀವನ ಮೀಸಲಾಗಿದೆ ಎಂದು ಹಂಗಿಸಿದ್ದಾರೆ.

ಸ್ವಾರ್ಥ ಮತ್ತು ಸ್ವಜನ ಪಕ್ಷಪಾತಕ್ಕೆ ರಾಜಕೀಯ ಕ್ಷೇತ್ರವನ್ನು ಮೀಸಲಾಗಿರಿಸಿಕೊಂಡಿರುವ ನೀವು, ಬಗ್ಗಿದರೆ ಜುಟ್ಟು ಹಿಡಿಯುವುದು, ಎದ್ದರೆ ಕಾಲು ಎಳೆಯುವ ನೈತಿಕ ದಿವಾಳಿತನದ ರಾಜಕಾರಣ ಮಾಡುತ್ತಲೇ ಬಂದಿದ್ದೀರಿ. ಇದನ್ನು ನೋಡುತ್ತಿದ್ದರೆ ನಿಮ್ಮ ಬಗ್ಗೆ ಮರುಕ ಪಡುವುದಕ್ಕೂ ಅಸಹ್ಯವಾಗುತ್ತಿದೆ ಎಂದು ಟೀಕಿಸಿದ್ದಾರೆ.

ದೇವರಾಜ ಅರಸ್ ಅವರಿಂದ ಅಧಿಕಾರದ ಭಿಕ್ಷೆ ಪಡೆದ ನೀವು ಅವರ ಬೆನ್ನಿಗೇ ಇರಿದು ಉಂಡ ಮನೆಗೆ ದ್ರೋಹ ಬಗೆದವರು. ವೀರೇಂದ್ರ ಪಾಟೀಲ, ಬಂಗಾರಪ್ಪ, ವೀರಪ್ಪ ಮೊಯ್ಲಿ, ಎಸ್.ಎಂ.ಕೃಷ್ಣ, ಎಚ್.ಡಿ.ದೇವೇಗೌಡರಿಗೂ ಅದನ್ನೇ ಮಾಡಿದಿರಿ. ರಾಜಕೀಯದಲ್ಲಿ ಪಾತಾಳಕ್ಕೆ ಬಿದ್ದಿದ್ದ ನಿಮ್ಮನ್ನು ಕನಿಕರದಿಂದ ಮೇಲೆತ್ತಿ ವಿಧಾನ ಪರಿಷತ್ ಸ್ಥಾನ ಕರುಣಿಸಿದ ಬಿಜೆಪಿ ಹಾಗೂ ಯಡಿಯೂರಪ್ಪನವರ ವಿಶ್ವಾಸಕ್ಕೇ ಇರಿಯುವ ಧೂರ್ತತನ ಪ್ರದರ್ಶಿಸುತ್ತಿದ್ದೀರಿ ಎಂದು ದೂರಿದ್ದಾರೆ.

ಬಿ.ವೈ.ವಿಜಯೇಂದ್ರ ಅಪರೂಪದ ಸಂಘಟನಾ ಚತುರರಾಗಿದ್ದು, ಪಕ್ಷ ಹಾಗೂ ರಾಜ್ಯದ ಜನ ಅವರನ್ನು ಒಪ್ಪಿದ್ದಾರೆ. ಅವರ ವಿರುದ್ಧ ದುರುದ್ದೇಶದ ಟೀಕೆ ಮಾಡುತ್ತಿದ್ದೀರಿ. ನಿಮಗೆ ನೈತಿಕತೆ ಇದ್ದರೆ ಬಿಜೆಪಿ ಮತ್ತು ಯಡಿಯೂರಪ್ಪ ಅವರಿಂದ ಪಡೆದ ವಿಧಾನ ಪರಿಷತ್ ಸದಸ್ಯತ್ವದ ಭಿಕ್ಷೆಯನ್ನು ರಾಜೀನಾಮೆ ನೀಡಿ, ನಿಮ್ಮ ಗೌರವ ಉಳಿಸಿಕೊಳ್ಳಿ. ಇಲ್ಲವೇ ಬಿಜೆಪಿಯಿಂದ ಹೊರದೂಡುವ ಅಪಮಾನದ ಕ್ಷಣಗಳನ್ನು ಎದುರಿಸಲು ಸಿದ್ಧರಾಗಿ ಎಂದು ಸವಾಲು ಹಾಕಿದ್ದಾರೆ.

ಈ ಹೇಳಿಕೆಗೆ ವಿವಿಧ ನಿಗಮಗಳ ಅಧ್ಯಕ್ಷರಾದ ಎಂ. ರುದ್ರೇಶ್, ಆರ್. ರಘು ಕೌಟಿಲ್ಯ, ಬಾಬು ಪತ್ತಾರ್, ಗಿರೀಶ್ ಉಪ್ಪಾರ್, ಎಲ್.ಆರ್. ಮಹದೇವಸ್ವಾಮಿ, ಈಶ್ವರ್, ಕೃಷ್ಣಪ್ಪಗೌಡ, ಎಸ್. ಮಹದೇವಯ್ಯ, ಸಿ. ಮುನಿಕೃಷ್ಣ ಸಹಿ ಹಾಕಿದ್ದಾರೆ.

ಬಿಜೆಪಿ ವರಿಷ್ಠರತ್ತ ಅತೃಪ್ತರ ಚಿತ್ತ

ಒಂದನೇ ಪುಟದಿಂದ

51 ಶಾಸಕರು ಮಾತ್ರ ಅರುಣ ಸಿಂಗ್ ಅವರನ್ನು ಭೇಟಿ ಮಾಡಿದ್ದಾರೆ. ಸಚಿವರನ್ನು ಪ್ರತ್ಯೇಕವಾಗಿಟ್ಟುಕೊಂಡರೂ ಸುಮಾರು 40ಕ್ಕೂ ಹೆಚ್ಚು ಶಾಸಕರು ಉಸ್ತುವಾರಿ ಭೇಟಿ ಮಾಡುವ ಗೋಜಿಗೇ ಹೋಗಿಲ್ಲ. ಇವರ ಪೈಕಿ ಹೆಚ್ಚಿನವರು ತಟಸ್ಥ ಬಣದವರು ಎನ್ನಲಾಗುತ್ತಿದೆ.

ವರಿಷ್ಠರತ್ತ ಚಿತ್ತ:

ಈ ಹಿಂದೆ ಗುಜರಾತ್ ಮತ್ತು ಉತ್ತರಖಂಡ್‌ನಲ್ಲಿ ಮುಖ್ಯಮಂತ್ರಿಗಳನ್ನು ಬದಲಿಸಿದ ರೀತಿಯಲ್ಲೇ ರಾಜ್ಯದಲ್ಲೂ ಬದಲಾವಣೆ ಮಾಡಬಹುದು ಎಂಬ ನಿರೀಕ್ಷೆ ನಾಯಕತ್ವ ಬದಲಾವಣೆ ಪರ ಇರುವ ಶಾಸಕರದ್ದಾಗಿದೆ. ಆದರೆ, ಯಡಿಯೂರಪ್ಪ ಅವರನ್ನು ಬದಲಿಸಿದರೆ, ಪಕ್ಷಕ್ಕೆ ಸಂಕಷ್ಟ ಕಟ್ಟಿಟ್ಟ ಬುತ್ತಿ ಎಂಬುದು ಯಡಿಯೂರಪ್ಪ ಆಪ್ತ ಬಣದ ವಾದ. ಈ ಮಧ್ಯೆ, ಯಡಿಯೂರಪ್ಪ ಅವರ ಪರವಾಗಿ ವೀರಶೈವ- ಲಿಂಗಾಯತ ಮಠಗಳೂ ಹೇಳಿಕೆ ನೀಡಲಾರಂಭಿಸಿವೆ. ಈ ವಿಷಯವನ್ನೂ ಅರುಣ್‌ಸಿಂಗ್ ಗಮನಿಸಿದ್ದಾರೆ.

ತಮ್ಮನ್ನು ಭೇಟಿಯಾಗಲು ಬಂದ ಎಲ್ಲ ಶಾಸಕರ ಮಾತುಗಳನ್ನು ತಾಳ್ಮೆಯಿಂದಲೇ ಕೇಳಿಸಿಕೊಂಡಿದ್ದಾರೆ. ಕೆಲವರನ್ನು ಕುಮಾರಕೃಪಾ ಅತಿಥಿಗೃಹಕ್ಕೆ ಕರೆಸಿಕೊಂಡು ಮಾತನಾಡಿದ್ದಾರೆ. ಪಕ್ಷದ ಶಿಸ್ತಿನ ಬಗ್ಗೆ ಎಲ್ಲ ಶಾಸಕರಿಗೂ ಮನದಟ್ಟು ಮಾಡುವ ಪ್ರಯತ್ನವನ್ನು ಮೂರು ದಿನವೂ ಅವರು ನಡೆಸಿದ್ದಾರೆ.

ಬಿಎಸ್‌ವೈಗೆ ವೀರಶೈವ ಮಹಾಸಭಾ ಬೆಂಬಲ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಮುಖ್ಯಮಂತ್ರಿಯಾಗಿ ಮುಂದುವರಿಯಲು ಬಿ.ಎಸ್. ಯಡಿಯೂರಪ್ಪ ಅವರಿಗೆ ಅಖಿಲ ಭಾರತ ವೀರಶೈವ ಮಹಾಸಭಾ ಸಂಪೂರ್ಣ ಬೆಂಬಲ ನೀಡಲಿದೆ’ ಎಂದು ಕಾಂಗ್ರೆಸ್‌ನ ಹಿರಿಯ ಶಾಸಕರೂ ಆಗಿರುವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹೇಳಿದರು.

ಶಾಮನೂರು ಶಿವಶಂಕರಪ್ಪ

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪ್ರಸ್ತುತ ಸಂದರ್ಭದಲ್ಲಿ ಕೊರೊನಾ ತಡೆಯೇ ಮುಖ್ಯ. ಆದರೂ ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆ ಚರ್ಚೆ ನಡೆಯುತ್ತಿರುವ ಕಾರಣ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಮಹಾಸಭಾ ಬೆಂಬಲ ನೀಡುತ್ತದೆ ಎಂದು ಹಿಂದೆಯೂ ಹೇಳಿದ್ದೆವು. ಈಗಲೂ ಬೆಂಬಲ ನೀಡಲಿದೆ’ ಎಂದು ಸ್ಪಷ್ಟಪಡಿಸಿದರು.

ಯಡಿಯೂರಪ್ಪ ಅವರಿಗೆ ಮಠಾಧೀಶರ ಪರಿಷತ್ ಬೆಂಬಲ ನೀಡಿದೆಯಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಮಠಾಧೀಶರು ದೊಡ್ಡವರು. ಅವರ ಬಗ್ಗೆ ಮಾತನಾಡುವುದಿಲ್ಲ. ಬೇರೆ ವಿಷಯ ಗೊತ್ತಿಲ್ಲ. ಮಹಾಸಭಾದ ಬೆಂಬಲ ಯಡಿಯೂರಪ್ಪ ಅವರಿಗೆ ಇರುತ್ತದೆ’ ಎಂದರು.

ಸಿ.ಎಂ. ಬದಲಾವಣೆ ಸುಲಭವಲ್ಲ: ಸಂಸದ ದೇವೇಂದ್ರಪ್ಪ

ಕೂಡ್ಲಿಗಿ (ವಿಜಯನಗರ ಜಿಲ್ಲೆ): ‘ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಸುಲಭವಲ್ಲ’ ಎಂದು ಸಂಸದ ವೈ. ದೇವೇಂದ್ರಪ್ಪ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ರಾಜ್ಯದಲ್ಲಿ ಬಹುತೇಕ ಯಾವುದೇ ಬದಲಾವಣೆ ಆಗುವುದಿಲ್ಲ. ಬಿಜೆಪಿ ಹೈಕಮಾಂಡ್ ಬಹಳ ಬಿಗಿ ಇದೆ. ಮುಖ್ಯಮಂತ್ರಿ ಬದಲಾವಣೆ ಸುಲಭವಿಲ್ಲ’ ಎಂದು ಪ್ರತಿಕ್ರಿಯಿಸಿದರು.

ವ್ಯಕ್ತಿ ಪೂಜೆ ಮಾಡಲ್ಲ: ಶಾಸಕ ಅಪ್ಪಚ್ಚು ರಂಜನ್

ಮಡಿಕೇರಿ: ‘ನಾನು ಭಾರತೀಯ ಜನತಾ ಪಕ್ಷದ ಗುಂಪಿನಲ್ಲಿದ್ದೇನೆಯೇ ಹೊರತು, ಯಾರ ಪರವಾಗಿಯೂ ಇಲ್ಲ. ವ್ಯಕ್ತಿ ಪೂಜೆಯನ್ನೂ ನಾನು ಮಾಡುವುದಿಲ್ಲ’ ಎಂದು ಮಡಿಕೇರಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಶುಕ್ರವಾರ ಇಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ.

ಅಧಿವೇಶನ ಕರೆಯಲಿ: ಎಚ್‌ಡಿಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೋಲಾರ: ‘ರಾಜ್ಯ ಬಿಜೆಪಿ ಸರ್ಕಾರ ಕೋವಿಡ್ ಹೆಸರಿನಲ್ಲಿ ಲೂಟಿಗೆ ಇಳಿದಿದ್ದು, ಜನರ ಹಿತದೃಷ್ಟಿಯಿಂದ ತುರ್ತಾಗಿ ವಿಧಾನಮಂಡಲದ ಅಧಿವೇಶನ ಕರೆಯಬೇಕು. ಇಲ್ಲದಿದ್ದರೆ ಪಕ್ಷದಿಂದ ಹೋರಾಟ ನಡೆಸಲಾಗುವುದು’ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ಜಿಲ್ಲೆಯ ಮಾಲೂರಿನಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಸಿದ್ದರಾಮಯ್ಯ ಏನು ಮಹಾ ಹರಿಶ್ಚಂದ್ರರಾ? ಅವರಿಂದ ನಾನು ಏನೂ ಕಲಿಯಬೇಕಿಲ್ಲ. ಅವರು ನಾಲಿಗೆ ಬಿಗಿ ಹಿಡಿದು ಮಾತನಾಡಬೇಕು. ಜೆಡಿಎಸ್ ಅಥವಾ ನನ್ನ ಬಗ್ಗೆ ಲಘುವಾಗಿ ಮಾತನಾಡಿದರೆ ಹುಷಾರ್’ ಎಂದು ಎಚ್ಚರಿಸಿದರು.

‘2008ರ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಿಸಲು ಸಿದ್ದರಾಮಯ್ಯ ಮತ್ತು ಆಪ್ತರು ಯಡಿಯೂರಪ್ಪ ಬಳಿ ಹಣ ಪಡೆದ ಸಂಗತಿ ನನಗೆ ಗೊತ್ತಿದೆ. ನಾವು ಹಣಕ್ಕಾಗಿ ಜೆಡಿಎಸ್ ಪಕ್ಷವನ್ನು ಯಾರಿಗೂ ಮಾರಾಟ ಮಾಡಿಲ್ಲ. ಅವಕಾಶ ಬಳಸಿಕೊಂಡು ಕುತ್ತಿಗೆ ಕೊಯ್ಯುವುದು ಸಿದ್ದರಾಮಯ್ಯರ ಜಾಯಮಾನ’ ಎಂದು ಟೀಕಿಸಿದರು.

ಶಾಸಕರ ಜತೆ ಸಭಾಧ್ಯಕ್ಷ ಕಾಗೇರಿ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕೋವಿಡ್ ನಿಯಂತ್ರಣ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಕುರಿತು ಶಾಸಕರೊಂದಿಗೆ ಸಮಾಲೋಚನೆ ಮುಂದುವರಿಸಿದ್ದಾರೆ.

ವಿಶ್ವೇಶ್ವರ ಹೆಗಡೆ ಕಾಗೇರಿ

‘ಕೋವಿಡ್‌ನಿಂದ ಗುಣಮುಖರಾಗಿ ಬಂದಿರುವ ಸಭಾಧ್ಯಕ್ಷರು, ಪುನಃ ಶಾಸಕರೊಂದಿಗೆ ಸಮಾಲೋಚನೆ ಆರಂಭಿಸಿದ್ದಾರೆ. ಶಾಸಕರಿಗೆ ದೂರವಾಣಿ ಕರೆಮಾಡಿ, ಅವರ ಆರೋಗ್ಯ ವಿಚಾರಿಸುತ್ತಿದ್ದಾರೆ. ಆಯಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣ ಹಾಗೂ ಜನರ ನೆರವಿಗಾಗಿ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ಪಡೆಯುತ್ತಿದ್ದಾರೆ’ ಎಂದು ಸಭಾಧ್ಯಕ್ಷರ ಕಚೇರಿಯ ಪ್ರಕಟಣೆ ತಿಳಿಸಿದೆ.

ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಎಲ್ಲ ಶಾಸಕರಿಗೂ ಸಭಾಧ್ಯಕ್ಷರು ಸಲಹೆ ನೀಡುತ್ತಿದ್ದಾರೆ. ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು, ಕೈ ತೊಳೆದುಕೊಳ್ಳುವುದು, ಸ್ಯಾನಿಟೈಸರ್ ಬಳಕೆ ಕುರಿತು ನೆನಪಿಸುತ್ತಿದ್ದಾರೆ. ಪ್ರಯಾಣದ ಅವಧಿಯಲ್ಲಿ ಸ್ಯಾನಿಟೈಸರ್ ಜತೆಗೆ ಇರಿಸಿಕೊಳ್ಳುವಂತೆ ಸಲಹೆ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಕೋವಿಡ್ ಮತ್ತು ಲಾಕ್‌ಡೌನ್‌ನಿಂದ ತೊಂದರೆಗೊಳಗಾದ ಜನರಿಗೆ ನೆರವು ಒದಗಿಸುವ ನಿಮ್ಮ ಪ್ರಯತ್ನ ಶ್ಲಾಘನೀಯ. ಆದರೆ, ನಿಮ್ಮ ಆರೋಗ್ಯದ ಬಗ್ಗೆಯೂ ಕಾಳಜಿ ಇರಲಿ. ನೀವು ಆರೋಗ್ಯಯುತವಾಗಿ ಇದ್ದಲ್ಲಿ ಮಾತ್ರ ಜನರ ಸೇವೆ ಮಾಡಲು ಸಾಧ್ಯ. ಈ ಕಾರಣದಿಂದ ಜಾಗ್ರತೆಯಾಗಿ ಇರಿ. ಕೋವಿಡ್ ನಿಯಂತ್ರಣ ಕ್ರಮಗಳ ಕುರಿತು ಜನರಲ್ಲೂ ಅರಿವು ಮೂಡಿಸಿ’ ಎಂದು ಶಾಸಕರಿಗೆ ಕಾಗೇರಿ ಸಲಹೆ ನೀಡಿದ್ದಾರೆ.

ರಾಜ್ಯದ 224 ಶಾಸಕರ ಜತೆಗೂ ಸಭಾಧ್ಯಕ್ಷರು ಸಮಾಲೋಚನೆ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಲಸಿಕೆ ಪಡೆದ ಮೇಲೂ ಸೋಂಕು ತಗುಲಿದರೆ ಆಸ್ಪತ್ರೆಗೆ ದಾಖಲಿಸಬೇಕಾದ ಸಾಧ್ಯತೆ ಕಡಿಮೆ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ ಪಡೆದ ನಂತರವೂ ಕೊರೊನಾ ಸೋಂಕು ತಗುಲಿದ ರೋಗಿಗಳನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾದ ಸಾಧ್ಯತೆ ಶೇ 75-80ರಷ್ಟು ಕಡಿಮೆಯಾಗಿರುವುದು ಅಧ್ಯಯನದಿಂದ ಕಂಡುಬಂದಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ಹೇಳಿದೆ.

ಅಲ್ಲದೇ, ಶೇ 8ರಷ್ಟು ರೋಗಿಗಳಿಗೆ ಮಾತ್ರ ಆಮ್ಲಜನಕ ಪೂರೈಸಬೇಕಾದ ಅವಶ್ಯಕತೆ ಕಂಡುಬಂದಿದೆ ಎಂದೂ ತಿಳಿಸಿದೆ.

ಮೇ 7ರಂದು ದೇಶದಲ್ಲಿ ಗರಿಷ್ಠ ಸಂಖ್ಯೆಯ ಕೋವಿಡ್-19 ಪ್ರಕರಣಗಳು ವರದಿಯಾಗಿದ್ದವು. ಈಗ ಈ ಪ್ರಕರಣಗಳಲ್ಲಿ ಶೇ 85ರಷ್ಟು ಇಳಿಕೆಯಾಗಿದೆ. ಮೇ 10ರಂದು ಸಕ್ರಿಯ ಪ್ರಕರಣಗಳ ಸಂಖ್ಯೆಯೂ ಅಧಿಕವಾಗಿತ್ತು. ಈಗ ಈ ಪ್ರಕರಣಗಳಲ್ಲಿ ಶೇ 78.6ರಷ್ಟು ಇಳಿಕೆ ಕಂಡುಬಂದಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ವಾರದ ಅವಧಿಯಲ್ಲಿ ವರದಿಯಾಗುತ್ತಿರುವ ಕೋವಿಡ್ ದೃಢಪ್ರಮಾಣದಲ್ಲಿ ಸಹ ಶೇ 81ರಷ್ಟು ಇಳಿಕೆಯಾಗಿದೆ. ಏ. 30-ಮೇ 6ರ ಅವಧಿಯಲ್ಲಿ ಈ ಪ್ರಮಾಣ ಗರಿಷ್ಠ (ಶೇ 21.6) ಮಟ್ಟದಲ್ಲಿತ್ತು.

ದಾವಣಗೆರೆ ಜಿಲ್ಲೆಯಾದ್ಯಂತ ಹದ ಮಳೆಯಾಗಿ ಹಸಿರು ಚಿಗುರೊಡೆದಿದ್ದು ಹರಿಹರ ತಾಲ್ಲೂಕಿನ ಹೊರ ವಲಯದ ಜಮೀನಿನಲ್ಲಿ ಅಪರೂಪದ ಕೃಷ್ಣಮೃಗಗಳು ಮೇಯುತ್ತಿರುವುದು ಕ್ಯಾಮೆರಾ ಕಣ್ಣಿಗೆ ಸೆರೆಯಾಗಿದ್ದು ಹೀಗೆ –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಕೋವಿಡ್: ಮರಣ ಪ್ರಮಾಣ ಶೇ 2.90ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆಯಲ್ಲಿ ತುಸು ಏರಿಕೆ ಕಂಡಿದೆ. ಶುಕ್ರವಾರ 168 ಮಂದಿ ಅಸುನೀಗಿದ್ದಾರೆ. ಇದರಿಂದಾಗಿ ಈವರೆಗೆ ಸಾವಿಗೀಡಾದವರ ಸಂಖ್ಯೆ 33,602ಕ್ಕೆ ತಲುಪಿದ್ದು, ಮರಣ ಪ್ರಮಾಣ ದರ ಶೇ 2.90ಕ್ಕೆ ಹೆಚ್ಚಿದೆ.

ಸೋಂಕಿತರ ಸಂಖ್ಯೆ ಮತ್ತಷ್ಟು ಇಳಿದಿದೆ. ಹೊಸದಾಗಿ 5,783 ಮಂದಿಯಲ್ಲಿ ಕೋವಿಡ್ ದೃಢಪಟ್ಟಿದ್ದು, ಈವರೆಗೆ ಸೋಂಕಿಗೊಳಗಾದವರ ಸಂಖ್ಯೆ 28 ಲಕ್ಷದ (27.96 ಲಕ್ಷ) ಗಡಿ ಸಮೀಪಿಸಿದೆ.

ಒಂದು ದಿನದಲ್ಲಿ 1.42 ಲಕ್ಷ ಮಂದಿಯ ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ಸೋಂಕು ದೃಢ ಪ್ರಮಾಣ ಶೇ 4.05ಕ್ಕೆ ತಲುಪಿದೆ.

ಕೋವಿಡ್ ಪೀಡಿತರ ಪೈಕಿ 15,290 ಮಂದಿಯಲ್ಲಿ ಕಾಯಿಲೆ ವಾಸಿಯಾಗಿದೆ. ಹೀಗಾಗಿ ಗುಣಮುಖರ ಸಂಖ್ಯೆ 26.25 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳು 1.37 ಲಕ್ಷಕ್ಕೆ ಇಳಿಕೆಯಾಗಿವೆ.

ಬೆಂಗಳೂರು ಹಾಗೂ ದಕ್ಷಿಣ ಕನ್ನಡದಲ್ಲಿ ಕ್ರಮವಾಗಿ 1,100 ಮತ್ತು 1,006 ಪ್ರಕರಣಗಳು ವರದಿಯಾಗಿವೆ.

ಬಳ್ಳಾರಿ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ತುಮಕೂರು ಹಾಗೂ ಶಿವಮೊಗ್ಗ ಸೇರಿ ಒಟ್ಟು 13 ಜಿಲ್ಲೆಗಳಲ್ಲಿ 300ಕ್ಕಿಂತಲೂ ಕಡಿಮೆ ಪ್ರಕರಣಗಳು ದಾಖಲಾಗಿವೆ. 12 ಜಿಲ್ಲೆಗಳಲ್ಲಿ ಇದು ಎರಡಂಕಿಗೆ ಇಳಿದಿದೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ 39 ಮಂದಿ ಮೃತರಾಗಿದ್ದಾರೆ. ಬಳ್ಳಾರಿ ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 14, ಮೈಸೂರಿನಲ್ಲಿ 15 ಮತ್ತು ದಾವಣಗೆರೆಯಲ್ಲಿ 10 ಜನ ಅಸುನೀಗಿರುವುದು ವರದಿಯಾಗಿದೆ. 20 ಜಿಲ್ಲೆಗಳಲ್ಲಿ ಇದು ಒಂದಂಕಿಗೆ ಇಳಿಕೆಯಾಗಿದೆ. ಶುಕ್ರವಾರ ಸಾವಿಗೀಡಾದವರ ಪೈಕಿ ಬಹುಪಾಲು ಮಂದಿ ಉಸಿರಾಟದ ತೊಂದರೆ ಎದುರಿಸಿದ್ದರು. ಹಾಸನದಲ್ಲಿ ಎರಡು ತಿಂಗಳ ಹೆಣ್ಣು ಮಗು ಅಸುನೀಗಿದೆ.

ದೇಶದಲ್ಲಿ ಕೊರೊನಾ ಪಾಸಿಟಿವಿಟಿ ದರ ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಗಣನೀಯವಾಗಿ ಕೊರೊನಾ ಸೋಂಕಿನ ಪ್ರಮಾಣ ಇಳಿಮುಖವಾಗುತ್ತಿದ್ದು, ಕಳೆದ ಹನ್ನೊಂದು ದಿನಗಳಿಂದ ಪಾಸಿಟಿವಿಟಿ ದರ ನಿರಂತರವಾಗಿ ಶೇ 5ಕ್ಕಿಂತ ಕಡಿಮೆ ದಾಖಲಾಗಿದೆ.

ಪ್ರಸ್ತುತ ಪಾಸಿಟಿವಿಟಿ ಪ್ರಮಾಣ ಶೇ 3.24ರಷ್ಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶುಕ್ರವಾರ ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿ ತಿಳಿಸಿದೆ.

ಶುಕ್ರವಾರ ಬೆಳಿಗ್ಗೆ 8 ಗಂಟೆಯವರೆಗಿನ ಮಾಹಿತಿ ಪ್ರಕಾರ, ದೇಶದಲ್ಲಿ ಕಳೆದ ಇಪ್ಪತ್ನಾಲ್ಕು ಗಂಟೆಗಳಲ್ಲಿ ಒಟ್ಟು 62,480 ಹೊಸ ಕೊರೊನಾ ಸೋಂಕಿನ ಪ್ರಕರಣಗಳು ದಾಖಲಾಗಿವೆ.

ಇದು ಕಳೆದ 61 ದಿನಗಳಲ್ಲಿ ದಾಖಲಾದ ಅತಿ ಕಡಿಮೆ ಕೊರೊನಾ ಸೋಂಕಿನ ಪ್ರಕರಣಗಳಾಗಿವೆ ಎಂದು ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಒಟ್ಟು ಕೊರೊನಾ ಸೋಂಕಿನ ಪ್ರಕರಣಗಳ ಸಂಖ್ಯೆ 2,97, 62,793. ಇಪ್ಪತ್ನಾಲ್ಕು ಗಂಟೆಗಳಲ್ಲಿ ದೇಶದಲ್ಲಿ ಕೊರೊನಾದಿಂದ ಸಾವನ್ನಪ್ಪಿದವರ ಸಂಖ್ಯೆ 1587. ಇದರೊಂದಿಗೆ ದೇಶದಲ್ಲಿ ಒಟ್ಟು ಕೊರೊನಾ ಸೋಂಕಿನಿಂದ ಸತ್ತವರ ಸಂಖ್ಯೆ 3,83,490. ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 7,98,656ಕ್ಕೆ ಇಳಿದಿದೆ. ಇದೇ ರೀತಿ ಕೋವಿಡ್ ಸೋಂಕಿನಿಂದ ಗುಣಮುಖರಾಗುವವರ ಪ್ರಮಾಣ ಶೇ 96.03ಕ್ಕೆ ಏರಿದೆ.

ದೇಶದಲ್ಲಿ ಇಲ್ಲಿವರೆಗೆ 38,71,67,696 ಜನರಿಗೆ ಕೊರೊನಾ ಸೋಂಕು ಪರೀಕ್ಷೆ ನಡೆಸಲಾಗಿದೆ. ಗುರುವಾರ ಒಂದೇ ದಿನ 19,29,476 ಜನರಿಗೆ ಕೊರೊನಾ ಸೋಂಕು ಪರೀಕ್ಷಿಸಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ

Four Wheelers Selling

Others

ಯಶಸ್ಸು ಮೂರು ಚಿನ್ನದ ಆನೆಗಳೊಂದಿಗೆ
Ace GOLD ಪೆಟ್ರೋಲ್, ಡೀಸೆಲ್ ಮತ್ತು ಸಿಎನ್‌ಜಿ ವಾಹನ ಆಕರ್ಷಕ ಕೊಡುಗೆಗಳೊಂದಿಗೆ

ಇಂದೇ ಕೊಳ್ಳಿರಿ ನಿಮ್ಮ ಮಾಸಿಕ ಕಂತನ್ನು 2 ತಿಂಗಳ* ನಂತರ ಪ್ರಾರಂಭಿಸಿ
1.99%* ಬಡ್ಡಿದರ
ಎಕ್ಸ್‌ಚೇಂಜ್ ಬೋನಸ್ ₹15,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore -7259784441
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 96208 63338
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 73899 44057
Hubli/Belgaum 91088 64572
* ಷರತ್ತುಗಳು ಅನ್ವಯಿಸುತ್ತದೆ.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

ಭವಿಷ್ಯ

Astrology

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ಮುಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-.8792155097, 8792156697

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ವ್ಯಾಪಾರ

Business Offers

ಹಾಲಿ ಪ್ರಾವಿಜನ್ ಸ್ಟೋರ್ : ಬೆಂಗಳೂರಿನ ಶ್ರೀನಗರದಲ್ಲಿ ನಡೆಯುತ್ತಿದ್ದು , ಪಾಲುದಾರಿಕೆಯೊಂದಿಗೆ ಮುಂದುವರಿಸಲು ಆಸಕ್ತಿ ಇದ್ದಲ್ಲಿ ಸಂಪರ್ಕಿಸಿ : 9535663339.

For Online Classified Booking
Name Change / Education / Property / Job / Services and many more contact
9880856233
9886213331
dhclassifieds.com

ಕೋವಿಡ್ ಮುಂಚೂಣಿ ಕಾರ್ಯಕರ್ತರ ಕೌಶಲ ವೃದ್ಧಿಗೆ ಪ್ರಧಾನಿ ಮೋದಿ ಚಾಲನೆ

ನವದೆಹಲಿ (ಪಿಟಿಐ): ಒಂದು ಲಕ್ಷಕ್ಕೂ ಹೆಚ್ಚು ಕೋವಿಡ್ ಮುಂಚೂಣಿ ಕಾರ್ಯಕರ್ತರ ಕೌಶಲ ವೃದ್ಧಿಸುವ ಗುರಿ ಇಟ್ಟುಕೊಂಡು ರೂಪಿಸಲಾಗಿರುವ ತ್ವರಿತಗತಿಯ ತರಬೇತಿ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಚಾಲನೆ ನೀಡಿದರು.

ಆರು ನಿರ್ದಿಷ್ಟ ಸೇವೆಗಳಲ್ಲಿ ತ್ವರಿತಗತಿಯ ತರಬೇತಿಯನ್ನು ನೀಡಲಾಗುತ್ತದೆ. 'ಮನೆಯಲ್ಲಿಯೇ ಆರೈಕೆ, ಪ್ರಾಥಮಿಕ ಹಂತದ ಆರೈಕೆ, ಸುಧಾರಿತ ಕ್ರಮದಲ್ಲಿ ಆರೈಕೆ, ತುರ್ತು ಸಂದರ್ಭದ ಆರೈಕೆ, ಪರೀಕ್ಷೆ ಮಾದರಿ ಸಂಗ್ರಹ, ವೈದ್ಯಕೀಯ ಉಪಕರಣಗಳ ನೆರವು' ಸೇವೆಗಳಲ್ಲಿ ಹೆಚ್ಚಿನ ತರಬೇತಿ ನೀಡಲಾಗುವುದು.

ಈ ಕಾರ್ಯಕ್ರಮವು ವೈದ್ಯಕೀಯೇತರ ಆರೋಗ್ಯ ಕಾರ್ಯಕರ್ತರಲ್ಲಿ ಕೌಶಲ ಅಭಿವೃದ್ಧಿ ಮಾಡಲು ಅನುಕೂಲ ಮಾಡಿಕೊಡುತ್ತದೆ. ಸದ್ಯದ ಮತ್ತು ಮುಂಬರುವ ದಿನಗಳಲ್ಲಿ ಆರೋಗ್ಯ ವಲಯದಲ್ಲಿ ಉಂಟಾಗುವ ಮಾನವ ಸಂಪನ್ಮೂಲದ ಅಗತ್ಯ ಈ ಕಾರ್ಯಕ್ರಮದಿಂದಾಗಿ ಪೂರೈಕೆ ಆಗುತ್ತದೆ. ಎರಡರಿಂದ ಮೂರು ತಿಂಗಳ ಒಳಗೆ ತರಬೇತಿ ನೀಡಿ, ಆರೋಗ್ಯ ಕಾರ್ಯಕರ್ತರಲ್ಲಿ ಕೌಶಲ ಅಭಿವೃದ್ಧಿ ಮಾಡುವ ಗುರಿ ಹೊಂದಲಾಗಿದೆ. ಇದರಿಂದ ಮುಂಚೂಣಿ ಆರೋಗ್ಯ ಸೇವೆಗೆ ಹೊಸ ಹುರುಪು ಬರಲಿದೆ ಮತ್ತು ಯುವ ಸಮುದಾಯಕ್ಕೆ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಪ್ರಧಾನಿ ಹೇಳಿದ್ದಾರೆ.

ಮುಂಬರಲಿರುವ ಸವಾಲುಗಳನ್ನು ಎದುರಿಸಲು ದೇಶವನ್ನು ಮತ್ತಷ್ಟು ಸಜ್ಜುಗೊಳಿಸಬೇಕಿದೆ. ಇದೇ 21ರಿಂದ ದೇಶದ ಎಲ್ಲರಿಗೂ ಉಚಿತ ಲಸಿಕೆ ನೀಡಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಮೋದಿ ಹೇಳಿದರು. 1,500 ಆಮ್ಲಜನಕ ಘಟಕಗಳ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. ಎಲ್ಲಾ ರಾಜ್ಯಗಳಲ್ಲೂ ಆಮ್ಲಜನಕ ಘಟಕ ಸ್ಥಾಪಿಸಲಾಗುವುದು. ಕೋವಿಡ್ ಸಾಂಕ್ರಾಮಿಕ ಎಲ್ಲಾ ದೇಶಗಳ, ಸಮುದಾಯಗಳ, ಕುಟುಂಬಗಳ, ವ್ಯವಸ್ಥೆಗಳ ಬಲವನ್ನು ಪರೀಕ್ಷೆಗೆ ಒಡ್ಡಿದೆ ಎಂದು ಅವರು ಹೇಳಿದರು. ಭಾರತ ಈ ಸವಾಲನ್ನು ಸ್ವೀಕರಿಸಿ ಕೋವಿಡ್ ಆರೈಕೆ ಮತ್ತು ಚಿಕಿತ್ಸೆ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿದೆ ಎಂದು ವಿವರಿಸಿದರು.

ಕೋವಿಡ್ ಮುಂಚೂಣಿ ಕಾರ್ಯಕರ್ತರ ಕೌಶಲ ವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ವರ್ಚುವಲ್ ಆಗಿ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ

ಆರೋಗ್ಯ ಕಾರ್ಯಕರ್ತರಿಗೆ ಮೋದಿ ಶ್ಲಾಘನೆ

ಆರೋಗ್ಯ ಕಾರ್ಯಕರ್ತರಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆಶಾ ಕಾರ್ಯಕರ್ತರು, ಎಎನ್‌ಎಂ, ಅಂಗನವಾಡಿ ಮತ್ತು ಇತರ ಕಾರ್ಯಕರ್ತರ ಸೇವೆ ಶ್ಲಾಘನೀಯ ಎಂದು ಮೋದಿ ಹೇಳಿದ್ದಾರೆ. ಅವರನ್ನು ದೇಶದ ಆರೋಗ್ಯ ವಲಯದ ಸ್ತಂಬಗಳು ಎಂದು ಮೋದಿ ಬಣ್ಣಿಸಿದರು. ಸೋಂಕಿನ ಪ್ರಮಾಣ ಕಡಿಮೆಯಾಗುವ ನಿಟ್ಟಿನಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ ಮತ್ತು ಪ್ರಪಂಚದ ಅತಿ ದೊಡ್ಡ ಲಸಿಕೆ ಅಭಿಯಾನಕ್ಕೆ ಅವರು ಬೆಂಬಲವಾಗಿದ್ದಾರೆ ಎಂದರು.

> ಕೊರೊನಾ ವೈರಸ್ ಮತ್ತು ಅದರ ರೂಪಾಂತರ ತಳಿ ತಂದೊಡ್ಡುವ ಸವಾಲುಗಳನ್ನು ಎರಡನೇ ಅಲೆ ಎತ್ತಿ ತೋರಿಸಿದೆ. ಸಿದ್ಧತೆ ಹೆಚ್ಚಿಸಿಕೊಳ್ಳುವ ಮೂಲಕ ಸವಾಲು ಎದುರಿಸಲು ದೇಶ ಈಗ ಸಜ್ಜಾಗಬೇಕು
> **ನರೇಂದ್ರ ಮೋದಿ, ಪ್ರಧಾನ ಮಂತ್ರಿ**

₹276 ಕೋಟಿ ಯೋಜನೆ

26 ರಾಜ್ಯಗಳಲ್ಲಿ ಒಟ್ಟು 111 ಕೇಂದ್ರಗಳಲ್ಲಿ ತರಬೇತಿಯನ್ನು ಆರಂಭಿಸಲಾಗುವುದು. ಇದು ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆ 3.0 ಪ್ರಧಾನ ಘಟಕದ ವಿಶೇಷ ಕಾರ್ಯಕ್ರಮವಾಗಿದೆ. ಇದಕ್ಕೆ ₹ 276 ಕೋಟಿ ಅಂದಾಜು ವೆಚ್ಚ ತಗುಲಲಿದೆ.

ಮತಾಂತರ ನಿಷೇಧ ಕಾನೂನು: ಗುಜರಾತ್‌ನಲ್ಲಿ ಮೊದಲ ಬಂಧನ

ಪ್ರಜಾವಾಣಿ ವಾರ್ತೆ

ಅಹಮದಾಬಾದ್ (ಪಿಟಿಐ): ರಾಜ್ಯದಲ್ಲಿ ಹೊಸದಾಗಿ ಜಾರಿಗೆ ಬಂದಿರುವ, ಬಲವಂತದ ಅಥವಾ ಮೋಸದ ಮತಾಂತರ ವಿರೋಧಿ ಕಾನೂನಿನಡಿ ಗುಜರಾತ್ ಪೊಲೀಸರು ಮೊದಲ ಎಫ್‌ಐಆರ್ ದಾಖಲಿಸಿ ಒಬ್ಬ ಆರೋಪಿಯನ್ನು ಶುಕ್ರವಾರ ಬಂಧಿಸಿದ್ದಾರೆ.

ಧಾರ್ಮಿಕ ಸ್ವಾತಂತ್ರ್ಯ (ತಿದ್ದುಪಡಿ) ಕಾಯ್ದೆ–2021ರಡಿ ರೂಪಿಸಿರುವ ಕಾನೂನಿನ ಅಡಿಯಲ್ಲಿ ವಡೋದರ ನಗರದ ಗೋತ್ರಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು 26 ವರ್ಷ ವಯಸ್ಸಿನ ಸಮೀರ್ ಖುರೇಷಿ ಎಂಬಾತನನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಮದುವೆಯ ಮೂಲಕ ಒತ್ತಾಯದ ಮತಾಂತರಕ್ಕೆ ಒಳಪಡಿಸುವ ಅಪರಾಧಕ್ಕೆ ಕಠಿಣ ಶಿಕ್ಷೆ ವಿಧಿಸಲು ಈ ಕಾನೂನಿನಲ್ಲಿ ಅವಕಾಶವಿದೆ.

ಮಾಂಸ ಮಾರಾಟದ ಅಂಗಡಿ ನಡೆಸುತ್ತಿರುವ ಖುರೇಷಿಯು 2019ರಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ತನ್ನನ್ನು ಸ್ಯಾಮ್ ಮಾರ್ಟಿನ್, ತಾನು ಕ್ರೈಸ್ತ ಧರ್ಮಕ್ಕೆ ಸೇರಿದವನೆಂದು ಪರಿಚಯಿಸಿಕೊಂಡು ಇನ್ನೊಂದು ಧರ್ಮದ ಮಹಿಳೆಯನ್ನು ಪ್ರೀತಿಯ ಬಲೆಗೆ ಬೀಳಿಸಿಕೊಂಡಿದ್ದ.

'ಪ್ರೀತಿಯ ಬಲೆಗೆ ಬಿದ್ದಿದ್ದ ಮಹಿಳೆಯ ಚಿತ್ರಗಳನ್ನು ಬಳಸಿಕೊಂಡು ಆರೋಪಿಯು ಆಕೆಯನ್ನು ಬ್ಲ್ಯಾಕ್‌ಮೇಲ್ ಮಾಡಿ ತನ್ನನ್ನು ಮದುವೆಯಾಗುವಂತೆ ಒತ್ತಾಯಿಸಿದ್ದ. ಈ ಅವಧಿಯಲ್ಲಿ ಗರ್ಭಪಾತ ಮಾಡಿಸಲೂ ಆತ ಮಹಿಳೆಯನ್ನು ಒತ್ತಾಯಿಸಿದ್ದ ಎಂದು ದೂರಿನಲ್ಲಿ ತಿಳಿಸಲಾಗಿದೆ' ಎಂದು ಡಿಸಿಪಿ ಜಯರಾಜಸಿನ್ಹ ವಾಲಾ ತಿಳಿದ್ದಾರೆ.

ಮಹಿಳೆಯು ಒಂದು ವರ್ಷದ ಹಿಂದೆ ಮದುವೆಗೆ ಸಮ್ಮತಿ ಸೂಚಿಸಿದ್ದರು. ಆದರೆ, ಕ್ರೈಸ್ತ ಮತಾನುಸಾರ ಮದುವೆಯಾಗುವ ಬದಲು 'ನಿಕಾಹ್' ಆಯೋಜಿಸಲು ಆರೋಪಿಯು ಸಿದ್ಧತೆ ಮಾಡಿಕೊಂಡಾಗ ಆತ ಬೇರ ಧರ್ಮೀಯನೆಂಬುದು ಆಕೆಗೆ ತಿಳಿದು ಬಂದಿತ್ತು. ಮದುವೆಯ ಬಳಿಕ ಮೊದಲು ಆಕೆಯ ಹೆಸರು ಬದಲಿಸಲಾಯಿತು. ಆನಂತರ ಮತಾಂತರ ಆಗುವಂತೆ ಆಕೆಯ ಮೇಲೆ ಒತ್ತಡ ಹೇರಲು ಆರಂಭಿಸಿದ್ದ. ಆರೋಪಿಯು ಮಹಿಳೆಯ ಜಾತಿ ನಿಂದನೆಯನ್ನೂ ಮಾಡಿದ್ದ ಎಂದು ಅಧಿಕಾರಿ ತಿಳಿಸಿದ್ದಾರೆ.

ತಬ್ಲೀಗಿ ಜಮಾತ್ ವಿರುದ್ಧ ಕಾರ್ಯಕ್ರಮ ಪ್ರಸಾರ

ಕನ್ನಡದ ಸುದ್ದಿ ವಾಹಿನಿಗಳಿಗೆ ಎನ್‌ಬಿಎಸ್‌ಎ ದಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ತಬ್ಲಿಗಿ ಜಮಾತ್ ಸಂಘಟನೆಯನ್ನು ಗುರಿಯಾಗಿಸಿ ಸುದ್ದಿ ಪ್ರಸಾರ ಮಾಡಿರುವ ಕನ್ನಡದ ಎರಡು ಖಾಸಗಿ ಸುದ್ದಿ ವಾಹಿನಿಗಳ ಆಡಳಿತ ಮಂಡಳಿಗಳಿಗೆ ದಂಡ ವಿಧಿಸಿ ಆದೇಶ ಹೊರಡಿಸಿರುವ ಸುದ್ದಿ ಪ್ರಸಾರ ಗುಣಮಟ್ಟ ಪ್ರಾಧಿಕಾರ (ಎನ್‌ಬಿಎಸ್‌ಎ), ಈ ಸಂಬಂಧ ಇಂಗ್ಲಿಷ್ ಸುದ್ದಿ ವಾಹಿನಿಯೊಂದಕ್ಕೆ ಎಚ್ಚರಿಕೆ ನೀಡಿದೆ.

ಇಲ್ಲಿನ ನಿಜಾಮುದ್ದಿನ್ ಮರ್ಕಜ್‌ನಲ್ಲಿ 2020ರ ಮಾರ್ಚ್ ತಿಂಗಳು ನಡೆದಿದ್ದ ತಬ್ಲೀಗಿ ಜಮಾತ್‌ನ ಸಮಾವೇಶ ಹಾಗೂ ಅದರಲ್ಲಿ ಭಾಗವಹಿಸಿದ್ದ ಸಾವಿರಾರು ಜನ ಸದಸ್ಯರೇ ದೇಶದಾದ್ಯಂತ ಕೊರೊನಾ ಸೋಂಕು ಹರಡಲು ಕಾರಣ ಎಂಬ ಧಾಟಿಯಲ್ಲಿ ಬಿಂಬಿಸಲಾದ ಸುದ್ದಿಯನ್ನು ಪ್ರಸಾರ ಮಾಡಿರುವ ಕನ್ನಡದ 'ನ್ಯೂಸ್–18' ಸುದ್ದಿ ವಾಹಿನಿಗೆ ₹ 1 ಲಕ್ಷ, 'ಸುವರ್ಣ ನ್ಯೂಸ್' ವಾಹಿನಿಗೆ ₹ 50,000 ದಂಡ ವಿಧಿಸಲಾಗಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಕೆ. ಸಿಕ್ರಿ ನೇತೃತ್ವದ ಪ್ರಾಧಿಕಾರವು ಜೂನ್ 16ರಂದು ಈ ಆದೇಶ ಹೊರಡಿಸಿದ್ದು, 7 ದಿನಗಳೊಳಗೆ ದಂಡ ಪಾವತಿಸುವಂತೆ ಎರಡೂ ಸಂಸ್ಥೆಗಳಿಗೆ ಸೂಚಿಸಿದೆ.

ಆಧಾರರಹಿತ ಸುದ್ದಿ ಪ್ರಸಾರ ಮಾಡಿದ್ದಕ್ಕೆ ಜೂನ್ 23ರಂದು ರಾತ್ರಿ 9ಕ್ಕೆ ಪ್ರಧಾನ ಸುದ್ದಿ ಪ್ರಸಾರವಾಗುವ ಮುನ್ನ ಬೇಷರತ್ ಕ್ಷಮೆ ಯಾಚಿಸುವಂತೆಯೂ 'ನ್ಯೂಸ್–18' ವಾಹಿನಿಗೆ ಸೂಚಿಸಲಾಗಿದೆ.

ಯೂಟ್ಯೂಬ್, ವೆಬ್‌ಸೈಟ್ ಮತ್ತಿತರ ಕೊಂಡಿಗಳಲ್ಲಿ ಈ ಸುದ್ದಿಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ವಿಡಿಯೋ ಮತ್ತು ಸುದ್ದಿ ತುಣುಕುಗಳನ್ನು ತೆಗೆದು ಹಾಕುವಂತೆ ಪ್ರಾಧಿಕಾರ ನಿರ್ದೇಶನ ನೀಡಿದೆ.

ತಬ್ಲೀಗಿ ಜಮಾತ್ ಸಂಘಟನೆಗೆ ಸಂಬಂಧಿಸಿದ ಚರ್ಚೆಯಲ್ಲಿ ಭಾಗವಹಿಸಲು ಬಂದಿದ್ದ ವ್ಯಕ್ತಿಗಳು ಆಕ್ಷೇಪಾರ್ಹ ಅಭಿಪ್ರಾಯ ಮಂಡಿಸಿದ್ದು, ಅಂಥ ವ್ಯಕ್ತಿಗಳನ್ನು ಮತ್ತೆ ಚರ್ಚೆಗೆ ಆಹ್ವಾನಿಸದಂತೆ ಇಂಗ್ಲಿಷ್‌ನ 'ಟೈಮ್ಸ್ ನೌ' ಸುದ್ದಿ ವಾಹಿನಿಗೆ ಎಚ್ಚರಿಕೆ ನೀಡಲಾಗಿದೆ.

ತಬ್ಲೀಗಿ ಜಮಾತ್ ಕುರಿತು ಪ್ರಸಾರವಾದ ಸುದ್ದಿ ಹಾಗೂ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದ ರೀತಿಯು ಆಕ್ಷೇಪಾರ್ಹವಾಗಿತ್ತು. ವರದಿಯಲ್ಲಿ ಬಳಸಲಾದ ಭಾಷೆ ಪೂರ್ವಗ್ರಹದಿಂದ ಕೂಡಿತ್ತು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬೆಂಗಳೂರು ಮೂಲದ ಕ್ಯಾಂಪೇನ್ ಅಗೇನ್‌ಸ್ಟ್ ಹೇಟ್ ಸ್ಪೀಚ್ (ಸಿಎಎಚ್‌ಎಸ್) ಸಂಸ್ಥೆಯು ಈ ಮೂರೂ ಖಾಸಗಿ ಸುದ್ದಿ ವಾಹಿನಿಗಳು ಪ್ರಸಾರ ಮಾಡಿದ್ದ ದ್ವೇಷಪೂರಿತ ಸುದ್ದಿಗಳ ವಿರುದ್ಧ ಎನ್‌ಬಿಎಸ್‌ಎಗೆ ದೂರು ಸಲ್ಲಿಸಿತ್ತು.

ಎಂಟು ಮಂದಿ ವಿರುದ್ಧ ದೂರು ವಿಗ್ರಹಕ್ಕೆ ಹಾನಿ–ರೈತನಿಗೆ ಸಾಮಾಜಿಕ ಬಹಿಷ್ಕಾರದ ಬೆದರಿಕೆ

ಗೊಂಡಿಯಾ(ಮಹಾರಾಷ್ಟ್ರ) (ಪಿಟಿಐ): ಜಿಲ್ಲೆಯ ಆಮ್‌ಗಾಂವ್ ತಹಶೀಲ್ ವ್ಯಾಪ್ತಿಯ ಸೀತೆಪಾರ್ ಗ್ರಾಮದ ಜಮೀನಿನಲ್ಲಿ ನೆಲ ಹದ ಮಾಡುತ್ತಿದ್ದಾಗ ಸ್ಥಳೀಯ ದೇವತೆಯ ಶಿಲಾ ಮೂರ್ತಿಗೆ ಹಾನಿ ಮಾಡಿದ್ದಕ್ಕಾಗಿ ರೈತರೊಬ್ಬರಿಗೆ ಗ್ರಾಮಸ್ಥರು ₹21 ಸಾವಿರ ದಂಡ ಹಾಕಿದ್ದಲ್ಲದೇ, ದಂಡ ಪಾವತಿಸದಿದ್ದರೆ ಸಾಮಾಜಿಕ ಬಹಿಷ್ಕಾರ ಹಾಕುವುದಾಗಿ ಬೆದರಿಕೆ ಒಡ್ಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗ್ರಾಮಸ್ಥರ ಈ ಬೆದರಿಕೆಗೆ ಅಂಜದ ಆ ರೈತ, ಘಟನೆಗೆ ಸಂಬಂಧಿಸಿದಂತೆ ಗ್ರಾಮದ ಸರ್‌ಪಂಚ್ ಮತ್ತು ಇತರೆ ಎಂಟು ಮಂದಿಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವುದಾಗಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೀತೆಪಾರ್ ಗ್ರಾಮದ ನಿವಾಸಿ ಟಿಕಾರಾಮ್ ಪ್ರೀತಮ್ ಪಾರ್ಧಿ ಅವರು ಜೂ. 12ರಂದು ತಮ್ಮ ಜಮೀನಿನಲ್ಲಿ ನೆಲ ಹದ ಮಾಡುತ್ತಿದ್ದ ವೇಳೆ, ಆಕಸ್ಮಿಕವಾಗಿ ದೇವತೆಯ ಕಲ್ಲಿನ ಮೂರ್ತಿ ಹಾನಿಗೊಳಗಾಯಿತು ಎಂದು ಆಮ್‌ಗಾಂವ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ವಿಲಾಸ್ ನಲೆ ತಿಳಿಸಿದರು.

ಗ್ರಾಮಸ್ಥರು ಆ ದೇವರನ್ನು 'ಕುಲದೇವತೆ' ಎಂದು ನಂಬುತ್ತಾರೆ. ಘಟನೆ ಬಗ್ಗೆ ತಿಳಿದ ಕೂಡಲೇ ಸ್ಥಳಕ್ಕೆ ಧಾವಿಸಿದ ಗ್ರಾಮಸ್ಥರು, ಟಿಕಾರಾಮ್‌ಗೆ ಕೆಲಸ ನಿಲ್ಲಿಸುವಂತೆ ಒತ್ತಾಯಿಸಿದರು. ನಂತರ ಪಂಚಾಯತ್ ಸಭೆ ಸೇರಿಸಿದರು. ಆ ಸಭೆಯಲ್ಲಿ ಪಾರ್ಧಿ ಸ್ಥಳೀಯರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ ಎಂದು ಆರೋಪಿಸಿ ₹21 ಸಾವಿರ ದಂಡವನ್ನು ವಿಧಿಸಿದರು. 'ದಂಡ ಪಾವತಿಸಲು ವಿಫಲವಾದರೆ, ಸಾಮಾಜಿಕ ಬಹಿಷ್ಕಾರ ಎದುರಿಸಬೇಕಾಗುತ್ತದೆ ಎಂದು ಪಂಚಾಯತ್ ತೀರ್ಪು ನೀಡಿತು' ಎಂದು ಪಾರ್ಧಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿವರಿಸಿದ್ದಾರೆ.

ಪಾರ್ಧಿ ಅವರ ದೂರು ಆಧರಿಸಿ ಪೊಲೀಸರು ಗ್ರಾಮದ ಸರ್‌ಪಂಚ್ ಸಹಿತ ಹಲವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ದೂರನ್ನು ಆಧರಿಸಿ ಎಲ್ಲ ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ ಎಂದು ಇನ್‌ಸ್ಪೆಕ್ಟರ್ ನಲೆ ತಿಳಿಸಿದರು.

ಪಂಚಾಯ್ತಿ ವಿಧಿಸಿರುವ ದಂಡದ ಕುರಿತು ಮಾತನಾಡಿದ ಗ್ರಾಮದ ಸರ್‌ಪಂಚ್ ಮೆಶ್ರಾಮ್, 'ಪ್ರತಿ ವರ್ಷ ಹೊಸ ಹಂಗಾಮು ಶುರು ಮಾಡುವ ಮುನ್ನ ಗ್ರಾಮಸ್ಥರು ಪೂಜೆ ಸಲ್ಲಿಸುವ ದೇವತೆಯ ವಿಗ್ರಹಕ್ಕೆ ಹಾನಿಯಾಗಿದೆ. ಹಾನಿಗೊಳಗಾದ ವಿಗ್ರಹವನ್ನು ದುರಸ್ತಿಗೊಳಿಸಿ, ಅದಕ್ಕೊಂದು ಸಣ್ಣ ಗುಡಿ ಕಟ್ಟಿಸಲು ಪಾರ್ಧಿಗೆ ವಿಧಿಸಿರುವ ದಂಡದ ಹಣವನ್ನು ಬಳಸಲಾಗುತ್ತದೆ' ಎಂದು ಹೇಳಿದರು.

ಉತ್ತರಪ್ರದೇಶದ ಪ್ರಯಾಗರಾಜ್‌ನಲ್ಲಿ ಭಾರೀ ಮಳೆಯಾಗಿದ್ದು, ರಸ್ತೆಯಲ್ಲಿ ಹರಿಯುತ್ತಿರುವ ನೀರಿನಲ್ಲೇ ವಾಹನವೊಂದರಲ್ಲಿ ಸಾಗಿದ ಪ್ರಯಾಣಿಕರು– ಪಿಟಿಐ ಚಿತ್ರ

ಶ್ರೀಲಂಕಾ ಮೀನುಗಾರರ ಮೇಲೆ ನೌಕಾಪಡೆಯಿಂದ ಹಲ್ಲೆ ಆರೋಪ: ಭಾರತ ನಿರಾಕರಣೆ

ಕೊಲಂಬೊ (ಪಿಟಿಐ): ಶ್ರೀಲಂಕಾದ ಮೀನುಗಾರರ ಮೇಲೆ ಭಾರತೀಯ ನೌಕಾಪಡೆಯು ಹಲ್ಲೆ ನಡೆಸಿದೆ ಎಂಬ ಸ್ಥಳೀಯ ಮಾಧ್ಯಮಗಳ ವರದಿಗಳನ್ನು ಭಾರತ ನಿರಾಕರಿಸಿದೆ. ಈ ಕುರಿತು ಸ್ಪಷ್ಟನೆ ನೀಡಿರುವ ಭಾರತದ ಹೈಕಮಿಷನ್, ಅಂತಹ ಯಾವುದೇ ಘಟನೆ ನಡೆದಿಲ್ಲ ಎಂದು ಹೇಳಿದೆ.

ಜೂನ್ 4ರಂದು ಶ್ರೀಲಂಕಾದ 13 ಮೀನುಗಾರರ ಮೇಲೆ ಅಂತರರಾಷ್ಟ್ರೀಯ ಸಾಗರ ಮಟ್ಟದಲ್ಲಿ ಭಾರತೀಯ ನೌಕಪಡೆಯು ದೈಹಿಕ ಹಲ್ಲೆ ನಡೆಸಿದೆ ಎಂದು ಆರೋಪಿಸಲಾಗಿತ್ತು.

'ನಾವು ಮೀನುಗಾರರು ಎಂದು ಹೇಳಿದ ಹೊರತಾಗಿಯೂ ಅವರು ನಮ್ಮಿಂದ ಮಾದಕ ವಸ್ತುಗಳಿಗಾಗಿ ಬೇಡಿಕೆಯಿಟ್ಟರು' ಎಂದು ಶ್ರೀಲಂಕಾದ ಸ್ಥಳೀಯ 'ಹೀರು' ಟಿವಿಗೆ ನೀಡಿದ ಸಂದರ್ಶನದಲ್ಲಿ ಮೀನುಗಾರರಿಬ್ಬರು ದೂರಿದ್ದಾರೆ.

ಈ ಕುರಿತು ಸ್ಪಷ್ಟನೆ ನೀಡಿರುವ ಭಾರತದ ಹೈಕಮಿಷನ್, ಶ್ರೀಲಂಕಾದ ಮೀನುಗಾರರ ಗುಂಪಿನ ಮೇಲೆ ಭಾರತೀಯ ನೌಕಾಪಡೆಯು ದೈಹಿಕವಾಗಿ ಹಲ್ಲೆ ನಡೆಸಿದೆ ಎಂಬುದಕ್ಕೆ ಸಂಬಂಧಿಸಿದಂತೆ ಜೂನ್ 17ರಂದು ಪ್ರಸಾರವಾಗಿರುವ ಮಾಧ್ಯಮ ವರದಿಗಳು ಸುಳ್ಳಾಗಿದ್ದು, ಅಂತಹ ಯಾವುದೇ ಘಟನೆಯು ನಡೆದಿಲ್ಲ ಎಂದು ತಿಳಿಸಿದೆ.

ಶ್ರೀಲಂಕಾ: ಮೊದಲ ಬಾರಿ 'ಡೆಲ್ಟಾ' ತಳಿ ಪತ್ತೆ

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿ ಇದೇ ಮೊದಲ ಬಾರಿ ಕೋವಿಡ್–19ನ 'ಡೆಲ್ಟಾ' ರೂಪಾಂತರ ತಳಿ ಪತ್ತೆಯಾಗಿದೆ.

'ಕೊಲಂಬೊದ ಡೆಮಾಟಗೊಡೊದಲ್ಲಿ ಸಂಗ್ರಹಿಸಿದ್ದ ಮಾದರಿಗಳಲ್ಲಿ 'ಡೆಲ್ಟಾ' ತಳಿ ಪತ್ತೆಯಾಗಿದೆ. ಇಲ್ಲಿ ಎಂಟು ಮಾದರಿಗಳನ್ನು ಸಂಗ್ರಹಿಸಲಾಗಿತ್ತು. ಇವುಗಳಲ್ಲಿನ ಐದರಲ್ಲಿ 'ಡೆಲ್ಟಾ' ತಳಿ ಇರುವುದು ದೃಢಪಟ್ಟಿದೆ' ಎಂದು ಶ್ರೀ ಜಯವರ್ಧನಪುರಾ ವಿಶ್ವವಿದ್ಯಾಲಯದ ಚಂದಿಮಾ ಜೀವಂದಾರಾ ತಿಳಿಸಿದ್ದಾರೆ.

'ನಾವು ವಿವಿಧ ರೂಪಾಂತರ ತಳಿಗಳ ಬಗ್ಗೆ ಅಧ್ಯಯನ ನಡೆಸುತ್ತಿದ್ದೇವೆ. ಪಿಸಿಆರ್ ಪರೀಕ್ಷೆಗಳ ಮೂಲಕ ನಿಗಾವಹಿಸಲಾಗಿದೆ' ಎಂದು ಅವರು ವಿವರಿಸಿದ್ದಾರೆ.

ಭಾರತದಲ್ಲಿ ಮೊದಲ 'ಡೆಲ್ಟಾ' ತಳಿ ಪತ್ತೆಯಾಗಿತ್ತು. ಇದು ತೀವ್ರ ಸ್ವರೂಪದ್ದಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಗನ್'ಗೆ ಪರವಾನಗಿ ಅಗತ್ಯ ಇಲ್ಲ

ಹ್ಯೂಸ್ಟನ್ (ಪಿಟಿಐ): ಪರವಾನಗಿ ಅಥವಾ ತರಬೇತಿ ಇಲ್ಲದಿದ್ದರೂ ಹ್ಯಾಂಡ್‌ಗನ್‌ಗಳನ್ನು ಕೊಂಡೊಯ್ಯಲು ಅವಕಾಶ ನೀಡುವ ಮಸೂದೆಗೆ ಟೆಕ್ಸಾಸ್ ಗವರ್ನರ್ ಗ್ರೆಗ್ ಅಬ್ಬಾಟ್ ಸಹಿ ಹಾಕಿದ್ದಾರೆ.

'ಇದು ಸ್ವಾತಂತ್ರ ಮತ್ತು ಸ್ವಯಂ ರಕ್ಷಣೆ ಕಲ್ಪಿಸುವ ಕ್ರಮವಾಗಿದೆ. ಜನರು ಶಸ್ತ್ರಾಸ್ತ್ರ ಹೊಂದುವುದು ಅಗತ್ಯವಾಗಿದೆ' ಎಂದು ಗ್ರೆಗ್ ಸಮರ್ಥಿಸಿಕೊಂಡಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	15,691
ಇಂದಿನ ಅಂತ್ಯ	15,683
▼	8
ದಿನದ ಗರಿಷ್ಠ	15,761

ವಿನಿಮಯ ದರ	
$ ಡಾಲರ್	73.86
£ ಪೌಂಡ್	103.17
€ ಯುರೊ	88.35
¥ ಯೆನ್ (100ಕ್ಕೆ)	67.11

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1430 (1440)
ಸೋಯಾ (ರಿಫೈನ್ಡ್)	₹1295 (1305)
ಸೂರ್ಯಕಾಂತಿ (ರಿಫೈನ್ಡ್)	₹1400(1410)
ಪಾಮೋಲಿನ್	₹1135 (1137)

ಮುಂಬೈ ಧಾರಣೆ

ಶೇಂಗಾ 18-06-2021	
ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	9500-9600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1440 (1450)
ಒಂದು ವಾರದ ಡೆಲಿವರಿ	1435 (1445)
ಸೋಯಾ ಕಚ್ಚಾ	1215 (1250)
ಪಾಮ್ ವಾರದ ಡೆಲಿವರಿ	1133 (1135)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (130)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	46,900 (47,400)
ಬೆಳ್ಳಿ ಕೆ.ಜಿ	68,650 (69,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ
ಕೋಕ 10000-22500
ಹೊಸತು 23500-42000
ಹಳತು 42500-52000

ಕಾರ್ಕಳ
ಹೊಸತು 36000-40000

ಕುಂದಾಪುರ
ಹಳೆಚಾಲಿ 45000-52000
ಹೊಸಚಾಲಿ 35000-42000

ಪುತ್ತೂರು
ಕೋಕ 9500-25000
ಹೊಸತು 29000-42100

ಯಲ್ಲಾಪುರ
ಅಪಿ 47169-47169
ಬಿಳಿಗೋಟು 27312-33201
ಚಾಲಿ 33929-39910
ಕೋಕ 22126-30699
ಕೆಂಪುಗೋಟು 28299-34399

ಸಿದ್ದಾಪುರ
ಬಿಳಿಗೋಟು 26699-32399
ಚಾಲಿ 37099-39091
ಕೋಕ 18699-29689
ಕೆಂಪುಗೋಟು 29669-31899

ರಾಶಿ 41399-42149
ತಟ್ಟಿಬೆಟ್ಟೆ 30109-39089

ಪುತ್ತೂರು
ಕೋಕ 9500-25000
ಹೊಸತು 29000-42100

ಶಿರಸಿ
ಬೆಟ್ಟೆ 19296-40892
ಬಿಳಿಗೋಟು 20899-34888
ಚಾಲಿ 31119-40088
ರಾಶಿ 35899-43599

ಏಲಕ್ಕಿ ಧಾರಣೆ
ಸಕಲೇಶಪುರ
ಕೊಳೆ 700- 800
ನಡುಗೋಲು 850-900
ರಾಶಿ 950-1000

ರಾಶಿ ಉತ್ತಮ 1000-1050
ಜರಡಿ 1150 -1200
ಹೆರಕಿದ್ದು 1500-1600
ಹಸಿರು ಸಾಧಾರಣ 900-1000
ಹಸಿರು ಉತ್ತಮ 1100-1200
ಹಸಿರು ಅತಿ ಉತ್ತಮ 1400-1500

ಕಾಳು ಮೆಣಸು 390

ರೇಷ್ಮೆಗೂಡು ಮಾರುಕಟ್ಟೆ
ರಾಮನಗರ
ಮಿಶ್ರ ತಳಿ (ಸಿ.ಬಿ) 312-405
ದ್ವಿತಳಿ (ಬಿ.ವಿ) 378-498

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10,900	10,800	10,600	153.30
ಎಸಿ	4,730	4,100	4,050	
ಆರ್‌ಪಿ	5,300	5,100	5,325	ಲಂಡನ್
ಆರ್‌ಸಿ	3,125	3,100	3,060	1600

ವಿಪ್ರೊ: ವೇತನ ಹೆಚ್ಚಳ

ನವದೆಹಲಿ (ಪಿಟಿಐ): ಐ.ಟಿ. ಸೇವಾ ಕಂಪನಿ ವಿಪ್ರೊ ತನ್ನ ಕಿರಿಯ ಶ್ರೇಣಿಯ ಉದ್ಯೋಗಿಗಳಿಗೆ ಸೆಪ್ಟೆಂಬರ್ 1ರಿಂದ ಜಾರಿಗೆ ಬರುವಂತೆ ವೇತನ ಹೆಚ್ಚಿಸಲಿದೆ.

'ಸಹಾಯಕ ವ್ಯವಸ್ಥಾಪಕ ಹಾಗೂ ಅದಕ್ಕಿಂತ ಕಿರಿಯ ಹುದ್ದೆಗಳಲ್ಲಿ ಇರುವವರಿಗೆ ಮೆರಿಟ್ ಆಧಾರದಲ್ಲಿ ವೇತನ ಹೆಚ್ಚಳ ಆಗಲಿದೆ. ಈ ಶ್ರೇಣಿಯಲ್ಲಿನ ಅರ್ಹರಿಗೆ ಜನವರಿಯಲ್ಲಿ ಕೂಡ ವೇತನ ಹೆಚ್ಚಿಸಲಾಗಿತ್ತು. ಸೆಪ್ಟೆಂಬರ್ 1ರಿಂದ ಜಾರಿಗೆ ಬರಲಿರುವುದು ಈ ಕ್ಯಾಲೆಂಡರ್ ವರ್ಷದಲ್ಲಿನ ಎರಡನೆಯ ವೇತನ ಹೆಚ್ಚಳ' ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಹುಂಡೈ ಅಲ್ಕಾಜಾರ್ ಮಾರುಕಟ್ಟೆಗೆ: ಬೆಲೆ ₹ 16.3 ಲಕ್ಷದಿಂದ ಆರಂಭ

ನವದೆಹಲಿ (ಪಿಟಿಐ): ಹುಂಡೈ ಮೋಟರ್ ಇಂಡಿಯಾ ಕಂಪನಿಯು ಶುಕ್ರವಾರ ಹೊಸ ಎಸ್‌ಯುವಿ 'ಅಲ್ಕಾಜಾರ್'ಅನ್ನು ಬಿಡುಗಡೆ ಮಾಡಿದೆ. ಇದರ ಆರಂಭಿಕ ಬೆಲೆ ₹ 16.3 ಲಕ್ಷ, ಗರಿಷ್ಠ ಬೆಲೆ ₹ 19.99 ಲಕ್ಷ (ದೆಹಲಿ ಎಕ್ಸ್ ಷೋರೂಂ ಬೆಲೆ).

ಆರು ಹಾಗೂ ಏಳು ಆಸನಗಳ ಸಾಮರ್ಥ್ಯದಲ್ಲಿ ಈ ವಾಹನ ಲಭ್ಯವಿರಲಿದೆ. ಈ ವಾಹನದ ಬಿಡುಗಡೆ ನಂತರ ಎಸ್‌ಯುವಿ ಮಾರುಕಟ್ಟೆಯಲ್ಲಿ ತನ್ನ ಪಾಲನ್ನು ಹೆಚ್ಚಿಸಿಕೊಳ್ಳುವ ಉದ್ದೇಶ ಕಂಪನಿಗೆ ಇದೆ. ವೆನ್ಯು, ಕ್ರೆಟಾ, ಟಕ್ಸನ್ ಎಸ್‌ಯುವಿ ವಾಹನಗಳನ್ನು ಹುಂಡೈ ಈಗಾಗಲೇ ಮಾರುಕಟ್ಟೆಗೆ ತಂದಿದೆ.

ಹೊಸ ಎಸ್‌ಯುವಿ ಅಭಿವೃದ್ಧಿಪಡಿಸಲು ₹ 650 ಕೋಟಿ ಹೂಡಿಕೆ ಮಾಡಿರುವುದಾಗಿ ಕಂಪನಿ ಹೇಳಿದೆ. ಅಲ್ಕಾಜಾರ್ ವಾಹನವು ಮಹೀಂದ್ರ ಎಕ್ಸ್‌ಯುವಿ 500, ಟಾಟಾ ಸಫಾರಿ, ಹೆಕ್ಟರ್ ಪ್ಲಸ್ ಜೊತೆ ಸ್ಪರ್ಧೆಗೆ ಇಳಿಯಲಿದೆ ಎಂಬುದು ಕಂಪನಿಯ ಹೇಳಿಕೆ.

ಅಲ್ಕಾಜಾರ್ ಎಸ್‌ಯುವಿ ಜೊತೆ ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್‌ನ ಸಿಇಒ ಎಸ್‌.ಎಸ್‌. ಕಿಮ್

2 ಲೀಟರ್ ಪೆಟ್ರೋಲ್ ಎಂಜಿನ್, 1.5 ಲೀಟರ್ ಡೀಸೆಲ್ ಎಂಜಿನ್ ಆಯ್ಕೆಗಳಲ್ಲಿ ಇದು ಗ್ರಾಹಕರಿಗೆ ಲಭ್ಯವಾಗಲಿದೆ. ಆಟೊಮ್ಯಾಟಿಕ್ ಹಾಗೂ ಮ್ಯಾನ್ಯುವಲ್ ಟ್ರಾನ್ಸ್‌ಮಿಷನ್ ಆಯ್ಕೆಗಳು ಕೂಡ ಇರಲಿವೆ. ಪೆಟ್ರೋಲ್ ಎಂಜಿನ್ ಇರುವ ಅಲ್ಕಾಜಾರ್ ಬೆಲೆಯು ₹ 16.3 ಲಕ್ಷದರಿಂದ ₹ 19.84 ಲಕ್ಷದ ನಡುವೆ ಇರಲಿದೆ. ಡೀಸೆಲ್ ಎಂಜಿನ್ ವಾಹನದ ಬೆಲೆಯು ₹ 16.53 ಲಕ್ಷದಿಂದ ₹ 19.99 ಲಕ್ಷದವರೆಗೆ ಇರಲಿದೆ.

ಈ ವರ್ಷದ ಜನವರಿ–ಮೇ ಅವಧಿಯಲ್ಲಿ ದೇಶದ ಎಸ್‌ಯುವಿ ಮಾರುಕಟ್ಟೆಯಲ್ಲಿ ಹುಂಡೈ ಕಂಪನಿಯ ಪಾಲು ಶೇಕಡ 23.3ರಷ್ಟು ಇತ್ತು.

ಬಿಸಿಯೂಟ ಆಹಾರ ಪದಾರ್ಥಗಳಿಗೆ ಜಿಎಸ್‌ಟಿ ವಿನಾಯಿತಿ: ಆದೇಶ

ನವದೆಹಲಿ (ಪಿಟಿಐ): ಮಧ್ಯಾಹ್ನದ ಬಿಸಿಯೂಟ ಯೋಜನೆ ಅಡಿ ಅಂಗನವಾಡಿ, ಶಿಶುವಿಹಾರ ಮತ್ತು ಶಾಲೆಗಳಿಗೆ ಪೂರೈಸುವ ಆಹಾರ ಪದಾರ್ಥಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಿ ಕೇಂದ್ರೀಯ ನೇರ ತೆರಿಗೆ ಮತ್ತು ಸುಂಕ ಮಂಡಳಿ ಆದೇಶ ಹೊರಡಿಸಿದೆ.

'ಸರ್ಕಾರದ ಅನುದಾನ ಮತ್ತು ಕಾರ್ಪೊರೇಟ್ ದೇಣಿಗೆ ಬಳಸಿಕೊಂಡು ಮಧ್ಯಾಹ್ನದ ಬಿಸಿಯೂಟ ಯೋಜನೆ ಅಡಿ ಶಾಲೆಗಳಿಗೆ, ಶಿಶುವಿಹಾರ ಮತ್ತು ಅಂಗನವಾಡಿಗಳಿಗೆ ಪೂರೈಸುವ ಆಹಾರ ಪದಾರ್ಥಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಲಾಗಿದೆ. ಮಧ್ಯಾಹ್ನದ ಬಿಸಿಯೂಟ ಯೋಜನೆ ಅಡಿ ಪೂರೈಸುವ ಆಹಾರ ಪದಾರ್ಥ, ಕೇಟರಿಂಗ್ ಸೇವೆಗಳಿಗೂ ಈ ವಿನಾಯಿತಿ ಅನ್ವಯವಾಗುತ್ತದೆ' ಎಂದು ಮಂಡಳಿ ಮಾಹಿತಿ ನೀಡಿದೆ.

ಮೇ 28ರಂದು ನಡೆದಿದ್ದ ಜಿಎಸ್‌ಟಿ ಸಮಿತಿಯ 43ನೇ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅಂಗನವಾಡಿಗಳು ಅನೌಪಚಾರಿಕ ಶಿಕ್ಷಣವನ್ನು ನೀಡುತ್ತವೆ. ಹೀಗಾಗಿ ಅವುಗಳನ್ನೂ ಜಿಎಸ್‌ಟಿ ವಿನಾಯಿತಿ ಶಿಕ್ಷಣ ಸಂಸ್ಥೆ ಎಂದು ಪರಿಗಣಿಸಲಾಗಿದೆ ಎಂದು ಮಂಡಳಿ ವಿವರಿಸಿದೆ.

ಸಂಕ್ಷಿಪ್ತ ಸುದ್ದಿ

ನೈಜೀರಿಯಾ: 80 ಶಾಲಾ ವಿದ್ಯಾರ್ಥಿಗಳ ಅಪಹರಣ

ಕಡುನಾ(ನೈಜೀರಿಯಾ): ನೈಜೀರಿಯಾದ ವಾಯವ್ಯ ರಾಜ್ಯ ಕೆಬ್ಬಿಯಲ್ಲಿನ ಶಾಲೆಯೊಂದರ ಮೇಲೆ ದಾಳಿ ಮಾಡಿರುವ ಬಂದೂಕುಧಾರಿ 80 ವಿದ್ಯಾರ್ಥಿಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ ಎಂದು ಶಾಲೆಯ ಶಿಕ್ಷಕಿ ತಿಳಿಸಿದ್ದಾರೆ.

'ಆ ವ್ಯಕ್ತಿ ಗುರುವಾರ ಶಾಲೆ ಮೇಲೆ ದಾಳಿ ನಡೆಸಿ, ಒಬ್ಬ ಅಧಿಕಾರಿಯನ್ನು ಕೊಂದು, ಮಕ್ಕಳ ಜತೆಗೆ, ಐವರು ಶಿಕ್ಷಕರನ್ನೂ ಅಪರಿಹಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಜೂನ್‌ಟೀನ್ತ್'ಗೆ ರಜೆ: ಕಪ್ಪು ವರ್ಣೀಯರ ಸಂಭ್ರಮ

ವಾಷಿಂಗ್ಟನ್ (ಎಪಿ): ಅಮೆರಿಕದಲ್ಲಿ ಗುಲಾಮಗಿರಿ ಅಂತ್ಯಗೊಳಿಸಿದ ನೆನಪಿಗಾಗಿ ಆಚರಿಸುವ 'ಜೂನ್‌ಟೀನ್ತ್' (ಜೂನ್ 19) ದಿನದಂದು ಅಧ್ಯಕ್ಷ ಜೋ ಬೈಡನ್ ಅವರು ರಜೆ ಘೋಷಿಸಿದ್ದನ್ನು ಕಪ್ಪು ವರ್ಣೀಯರು ಸ್ವಾಗತಿಸಿ, ಸಂಭ್ರಮಿಸಿದ್ದಾರೆ.

'ಜೂನ್‌ಟೀನ್ತ್' ರಾಷ್ಟ್ರೀಯ ಸ್ವಾತಂತ್ರ್ಯ ದಿನ ಕಾಯ್ದೆಗೆ ಜೋ ಬೈಡನ್ ಅವರು ಇದೇ 17ರಂದು ಸಹಿ ಹಾಕಿದ್ದರು.

'ಅಮೆರಿಕದಲ್ಲಿ ಜನಾಂಗೀಯ ದ್ವೇಷದ ಪ್ರಕರಣಗಳು ಹೆಚ್ಚುತ್ತಿರುವಾಗ ಈ ದಿನವನ್ನು ಗುರುತಿಸಲು ರಜೆ ಘೋಷಿಸಿರುವುದು ಶ್ಲಾಘನೀಯ. ಆದರೆ, ಇನ್ನೂ ಹಲವಾರು ನೀತಿಗಳಲ್ಲಿ ಬದಲಾವಣೆ ಮಾಡುವುದು ಅಗತ್ಯ ಇದೆ' ಎಂದು ಹಲವು ಕಪ್ಪು ವರ್ಣೀಯರು ಅಭಿಪ್ರಾಯಪಟ್ಟಿದ್ದಾರೆ.

'ಇದು ನಿಜಕ್ಕೂ ಅತ್ಯುತ್ತಮ ನಿರ್ಧಾರ. ಹಲವು ದಿನಗಳ ಬೇಡಿಕೆಯಾಗಿತ್ತು. ಆದರೆ, ಇಷ್ಟಕ್ಕೆ ಸೀಮಿತವಾಗಬಾರದು. ಬದಲಾವಣೆ ತರುವ ನಿರ್ಧಾರಗಳನ್ನು ಕೈಗೊಳ್ಳಬೇಕಾಗಿದೆ. ನಮ್ಮ ಮತದಾನದ ಹಕ್ಕನ್ನು ರಕ್ಷಿಸಬೇಕಾಗಿದೆ' ಎಂದು ಕನ್ಸಾಸ್ ನಗರದ 'ಅರ್ಬನ್ ಲೀಗ್' ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗ್ವೆನ್ ಗ್ರ್ಯಾಂಟ್ ಹೇಳಿದ್ದಾರೆ.

ಪ್ರತಿ ವರ್ಷ ಜೂನ್ 19ರಂದು ಗುಲಾಮಗಿರಿ ಅಂತ್ಯಗೊಳಿಸಿರುವ ದಿನವನ್ನು ಅಮೆರಿಕದಲ್ಲಿ ಆಚರಿಸಲಾಗುತ್ತಿದೆ. 1865ರ ಜೂನ್ 19ರಂದು ಕಪ್ಪು ವರ್ಣೀಯರನ್ನು ಗುಲಾಮಗಿರಿಯಿಂದ ಮುಕ್ತಗೊಳಿಸುವುದನ್ನು ಟೆಕ್ಸಾಸ್‌ನ ಗಾಲ್ವೆಸ್ಟಾನ್‌ನಲ್ಲಿ ಘೋಷಿಸಲಾಗಿತ್ತು. ಟೆಕ್ಸಾಸ್‌ನಲ್ಲಿ 1980ರಿಂದಲೇ ಜೂನ್ 19ರಂದು ರಜೆ ಘೋಷಿಸಲಾಗಿದೆ. ರಜೆ ಘೋಷಿಸಿದ ಮೊದಲ ರಾಜ್ಯ ಇದಾಗಿದೆ.

'ಈ ದಿನ ಕೇವಲ ಹಳೆಯ ಘಟನೆಗಳನ್ನು ನೆನಪಿಸಿಕೊಳ್ಳಲು ಸೀಮಿತವಾಗಿಲ್ಲ. ಬದಲಾವಣೆಯ ಕ್ರಮಗಳ ಅಗತ್ಯವನ್ನು ಸಹ ಬಯಸುತ್ತದೆ' ಎಂದು ಜೋ ಬೈಡನ್ ಹೇಳಿದ್ದಾರೆ.

ನೇಪಾಳದ ಸಿಂಧುಪಾಲ್‌ಚೌಕ್‌ನಲ್ಲಿ ಪ್ರವಾಹದಲ್ಲಿ ಮುಳುಗಿರುವ ಮನೆಗಳು– ಎಎಫ್‌ಪಿ ಚಿತ್ರ

ನೇಪಾಳದಲ್ಲಿ ಪ್ರವಾಹ: 11 ಮಂದಿ ಸಾವು

ಕಠ್ಮಂಡು: ನೇಪಾಳದಲ್ಲಿ ಸತತವಾಗಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಭೂಕುಸಿತ ಮತ್ತು ದಿಢೀರ್ ಪ್ರವಾಹ ಉಂಟಾಗಿ 11 ಮಂದಿ ಸಾವಿಗೀಡಾಗಿದ್ದು, 25 ಮಂದಿ ನಾಪತ್ತೆಯಾಗಿದ್ದಾರೆ.

ಸಾವಿಗೀಡಾದವರಲ್ಲಿ ಒಬ್ಬ ಭಾರತೀಯರು ಮತ್ತು ಚೀನಾದ ಇಬ್ಬರು ಕಾರ್ಮಿಕರು ಸೇರಿದ್ದಾರೆ. ಚೀನಾದ ಕಂಪನಿ ಕೈಗೊಂಡಿದ್ದ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯಲ್ಲಿ ಈ ಕಾರ್ಮಿಕರು ದುಡಿಯುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೂವರು ಕಾರ್ಮಿಕರ ಮೃತದೇಹಗಳು ಸಿಂಧುಪಾಲ್‌ಚೌಕ್ ಜಿಲ್ಲೆಯ ಮೆಲಾಮ್ಚಿಯಲ್ಲಿ ಪತ್ತೆಯಾಗಿವೆ.

ಕಳೆದ ಮಂಗಳವಾರದಿಂದ ನೇಪಾಳದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದ ಅಪಾರ ಹಾನಿಯಾಗಿದೆ. ರಸ್ತೆಗಳು, ಸೇತುವೆಗಳು, ಮನೆಗಳು ಹಾನಿಗೊಂಡಿವೆ. ನೂರಾರು ಮಂದಿ ಸುರಕ್ಷಿತ ಸ್ಥಳಗಳಿಗೆ ತೆರಳಿದ್ದಾರೆ. ಹಲವರು ಶಾಲೆಗಳಲ್ಲಿ ಆಶ್ರಯ ಪಡೆದಿದ್ದಾರೆ.

ಪಿಎಂಸಿ ಬ್ಯಾಂಕ್ ಸ್ವಾಧೀನಕ್ಕೆ 'ಸೆಂಟ್ರಂ' ಹಾದಿ ಸುಗಮ

ಮುಂಬೈ (ಪಿಟಿಐ): ಸೆಂಟ್ರಂ ಫೈನಾನ್ಶಿಯಲ್ ಸರ್ವಿಸಸ್ ಕಂಪನಿಗೆ ಕಿರು ಹಣಕಾಸು ಬ್ಯಾಂಕ್ ಆರಂಭಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅನುಮತಿ ನೀಡಿದೆ. ಈ ಮೂಲಕ, ಹಣಕಾಸಿನ ಸಮಸ್ಯೆಯಲ್ಲಿ ಸಿಲುಕಿರುವ ಪಂಜಾಬ್ ಆ್ಯಂಡ್ ಮಹಾರಾಷ್ಟ್ರ ಸಹಕಾರ (ಪಿಎಂಸಿ) ಬ್ಯಾಂಕ್‌ಅನ್ನು ಸ್ವಾಧೀನ ಮಾಡಿಕೊಳ್ಳಲು ಸೆಂಟ್ರಂ ಕಂಪನಿಗೆ ಹಾದಿ ಸುಗಮವಾದಂತೆ ಆಗಿದೆ.

ಪಿಎಂಸಿ ಬ್ಯಾಂಕ್ ಸ್ವಾಧೀನಕ್ಕೆ ತೆಗೆದುಕೊಳ್ಳಲು ಆಸಕ್ತಿ ತೋರಿ ಅರ್ಜಿ ಸಲ್ಲಿಸಿದ್ದ ಕಂಪನಿಗಳ ಪೈಕಿ ಸೆಂಟ್ರಂ ಫೈನಾನ್ಶಿಯಲ್ ಸರ್ವಿಸಸ್ ಕೂಡ ಒಂದು. ಸೆಂಟ್ರಂ ಕಂಪನಿಗೆ ಕಿರು ಹಣಕಾಸಿನ ಬ್ಯಾಂಕ್ ಆರಂಭಿಸಲು ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂದು ಆರ್‌ಬಿಐ ಹೇಳಿದೆ. ಪಿಎಂಸಿ ಬ್ಯಾಂಕ್‌ನಲ್ಲಿ ಹಣ ಹೂಡಿಕೆ ಮಾಡಲು ನಾಲ್ಕು ಪ್ರಸ್ತಾವಗಳು ಸಲ್ಲಿಕೆಯಾಗಿದ್ದವು.

ಮಹಿಳಾ ಟೆಸ್ಟ್: ಮಿಥಾಲಿ ಬಳಗಕ್ಕೆ ಶೆಫಾಲಿ ಆಸರೆ

ಬ್ರಿಸ್ಟಲ್ (ಪಿಟಿಐ): ಮೊದಲ ಇನಿಂಗ್ಸ್‌ನಲ್ಲಿ ಕುಸಿತ ಕಂಡ ಭಾರತ ಮಹಿಳೆಯರ ತಂಡ ಇಂಗ್ಲೆಂಡ್ ಎದುರಿನ ಏಕೈಕ ಟೆಸ್ಟ್ ಪಂದ್ಯದಲ್ಲಿ ಫಾಲೊ ಆನ್‌ಗೆ ಒಳಗಾಗಿದೆ.

ಮೂರನೇ ದಿನವಾದ ಶುಕ್ರವಾರ ಮೊದಲ ಇನಿಂಗ್ಸ್‌ನಲ್ಲಿ 165 ರನ್‌ಗಳ ಹಿನ್ನಡೆ ಅನುಭವಿಸಿದ ಮಿಥಾಲಿ ರಾಜ್ ಬಳಗ ಎರಡನೇ ಇನಿಂಗ್ಸ್‌ನಲ್ಲಿ ಮಳೆಯಿಂದಾಗಿ ದಿನದಾಟ ಮುಗಿದಾಗ ಒಂದು ವಿಕೆಟ್ ಕಳೆದುಕೊಂಡು 83 ರನ್ ಗಳಿಸಿದೆ. ಇನಿಂಗ್ಸ್ ಸೋಲು ತಪ್ಪಿಸಿಕೊಳ್ಳಲು ಇನ್ನೂ 82 ರನ್ ಬೇಕಾಗಿದ್ದು ಅರ್ಧಶತಕ ಗಳಿಸಿರುವ ಶೆಫಾಲಿ ವಾರ್ಮಾ (55; 68 ಎಸೆತ, 11 ಬೌಂಡರಿ) ತಂಡಕ್ಕೆ ಆಸರೆಯಾಗಿದ್ದಾರೆ.

ನಾಲ್ಕು ದಿನಗಳ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ಒಂಬತ್ತು ವಿಕೆಟ್‌ಗಳಿಗೆ 396 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ಉತ್ತರವಾಗಿ ಭಾರತ 231 ರನ್‌ಗಳಿಗೆ ಆಲೌಟಾಯಿತು. ಗುರುವಾರ ಐದು ವಿಕೆಟ್ ಕಳೆದುಕೊಂಡಿದ್ದ ತಂಡ ಶುಕ್ರವಾರ 21.2 ಓವರ್‌ಗಳಲ್ಲಿ 44 ರನ್ ಸೇರಿಸುವಷ್ಟರಲ್ಲಿ ಉಳಿದ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು.

ಎರಡನೇ ಇನಿಂಗ್ಸ್ ಆರಂಭದಲ್ಲೇ ತುಂತುರು ಮಳೆ ಮಳೆ ಸುರಿಯಿತು. ಭೋಜನದ ನಂತರ 30 ನಿಮಿಷ ತಡವಾಗಿ ಆಟ ಮುಂದುವರಿಯಿತು.

ಶೆಫಾಲಿ ವರ್ಮಾ –ರಾಯಿಟರ್ಸ್ ಚಿತ್ರ

57 ರನ್ ಗಳಿಸಿದ್ದಾಗ ಮತ್ತೆ ಮಳೆ ಕಾಡಿತು. ಸ್ವಲ್ಪ ಹೊತ್ತಿನ ನಂತರ ಆಟ ಮುಂದುವರಿದರೂ 83 ರನ್ ಗಳಿಸಿದ್ದಾಗ ಮತ್ತೊಮ್ಮೆ ಮಳೆ ಸುರಿಯಿತು. ಆ ನಂತರ ಪಂದ್ಯ ಮುಂದುವರಿಸಲು ಆಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 9ಕ್ಕೆ 396 ಡಿಕ್ಲೇರ್; **ಭಾರತ** (ಗುರುವಾರ 60 ಓವರ್‌ಗಳಲ್ಲಿ 5ಕ್ಕೆ187): 81.2 ಓವರ್‌ಗಳಲ್ಲಿ 231 (ದೀಪ್ತಿ ಶರ್ಮಾ ಔಟಾಗದೆ 29, ಪೂಜಾ ವಸ್ತ್ರಕಾರ್ 12; ಸೋಫಿ ಎಕ್ಲೆಸ್ಟೋನ್ 88ಕ್ಕೆ4, ಹೀಥರ್ ನೈಟ್ 7ಕ್ಕೆ2); ಎರಡನೇ ಇನಿಂಗ್ಸ್: ಭಾರತ (ಫಾಲೊ ಆನ್): 24.3 ಓವರ್‌ಗಳಲ್ಲಿ 1ಕ್ಕೆ 83 (ಸ್ಮೃತಿ ಮಂದಾನ 8, ಶೆಫಾಲಿ ವರ್ಮಾ ಬ್ಯಾಟಿಂಗ್ 55, ದೀಪ್ತಿ ಶರ್ಮಾ ಬ್ಯಾಟಿಂಗ್ 18).

'ಫ್ಲೈಯಿಂಗ್ ಸಿಖ್'; ಮಿಲ್ಖಾ ಬದುಕಿಗೆ ಕೊಳ್ಳಿ ಇಟ್ಟ ಕೋವಿಡ್

ಚಂಡೀಗಡ (ಪಿಟಿಐ): ಫ್ಲೈಯಿಂಗ್ ಸಿಖ್ ಖ್ಯಾತಿಯ, ಒಲಿಂಪಿಯನ್ ಅಥ್ಲೀಟ್ ಮಿಲ್ಖಾ ಸಿಂಗ್ ಶುಕ್ರವಾರ ತಡರಾತ್ರಿ ಕೊನೆಯುಸಿರೆಳೆದರು.

ಸ್ವಾತಂತ್ರ್ಯನಂತರದ ಭಾರತದ ಕ್ರೀಡಾರಂಗದ ಬೆಳವಣಿಗೆಯ ಹರಿಕಾರರಲ್ಲಿ ಒಬ್ಬರಾಗಿದ್ದ ಒಲಿಂಪಿಯನ್ ಮಿಲ್ಖಾ, ಕೋವಿಡ್‌ನಿಂದಾಗಿ ಹೋದ ತಿಂಗಳು ಮೊಹಾಲಿಯ ಫೋರ್ಟಿಸ್ ನಲ್ಲಿ ದಾಖಲಾಗಿದ್ದರು. ಒಂದು ವಾರ ಚಿಕಿತ್ಸೆಯ ನಂತರ ಚೇತರಿಸಿಕೊಂಡಿದ್ದರು. ಮನೆಗೂ ಮರಳಿದ್ದರು. ಆದರೆ ಜೂನ್ 3ರಂದು ಅವರಿಗೆ ಉಸಿರಾಟದ ತೊಂದರೆ ಹೆಚ್ಚಾಗಿದ್ದರಿಂದ ಚಂಡೀಗಡದ ಪಿಜಿಐಎಂಇಆರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದ ಅವರನ್ನು ಮಂಗಳವಾರದಂದು ಐಸಿಯುನಿಂದ ವಿಶೇಷ ವಾರ್ಡ್‌ಗೆ ಸ್ಥಳಾಂತರಿಸಲಾಗಿತ್ತು. ಆದರೆ ಗುರುವಾರ ಅವರಿಗೆ ಜ್ವರ ಬಂದಿತ್ತು. ಉಸಿರಾಟದ ತೊಂದರೆಯೂ ಆಗಿತ್ತು. ಆದ್ದರಿಂದ ಮತ್ತೆ ಐಸಿಯುಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು.

ಮಿಲ್ಖಾ ಸಿಂಗ್

ಹೋದ ತಿಂಗಳು ಅವರ ಪತ್ನಿ ನಿರ್ಮಲ್ ಕೌರ್ ಕೂಡ ಕೋವಿಡ್ ಸೋಂಕಿಗೊಳಗಾಗಿ ಫೋರ್ಟಿಸ್ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಹೋದ ಭಾನುವಾರವಷ್ಟೇ ನಿಧನರಾಗಿದ್ದರು.

1960ರ ರೋಮ್ ಒಲಿಂಪಿಕ್ಸ್‌ನ 400 ಮೀಟರ್ಸ್ ಓಟದಲ್ಲಿ ಫೈನಲ್ ತಲುಪಿದ್ದು ಅವರು ಐತಿಹಾಸಿಕ ಸಾಧನೆ. ಆ ಕೂಟದಲ್ಲಿ ಸ್ವಲ್ಪ ಅಂತರದಲ್ಲಿ ಪದಕ ಗಳಿಕೆ ಕೈತಪ್ಪಿತ್ತು.

1956 ಮತ್ತು 1964ರ ಒಲಿಂಪಿಕ್ಸ್‌ನಲ್ಲಿಯೂ ಭಾರತವನ್ನು ಪ್ರತಿನಿಧಿಸಿದ್ದರು. 1958ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು. ಏಷ್ಯನ್ ಗೇಮ್ಸ್‌ನಲ್ಲಿ ನಾಲ್ಕು ಬಾರಿ ಚಿನ್ನ ಗೆದ್ದ ಹೆಗ್ಗಳಿಕೆ ಅವರದ್ದು.

ಭಾರತೀಯ ಸೇನೆಯಲ್ಲಿ ಕಾರ್ಯನಿರ್ವಹಿಸಿದ್ದರು. ಪಂಜಾಬ್ ಸರ್ಕಾರದಲ್ಲಿ ಕ್ರೀಡಾ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಅವರ ಜೀವನಗಾಥೆಯ 'ಭಾಗ್ ಮಿಲ್ಖಾ ಭಾಗ್' ಹಿಂದಿ ಚಲನಚಿತ್ರವು ಕೆಲವು ವರ್ಷಗಳ ಹಿಂದೆ ಭರ್ಜರಿ ಹಿಟ್ ಆಗಿತ್ತು.

ಪೇಯಗಳು ಮತ್ತು ಫುಟ್ ಬಾಲ್ ಬಗ್ಗೆ

ಒಲಿಂಪಿಕ್ಸ್: ಹಾಕಿ ತಂಡದಲ್ಲಿ ಹತ್ತು ಮಂದಿ ಹೊಸಬರು

ಬೆಂಗಳೂರು: ಒಲಿಂಪಿಕ್ಸ್‌ನಲ್ಲಿ ಆಡಲಿರುವ ಭಾರತದ ಪುರುಷರ ಹಾಕಿ ತಂಡವನ್ನು ಶುಕ್ರವಾರ ಪ್ರಕಟಿಸಿದ್ದು, 10 ಮಂದಿ ಆಟಗಾರರು ಇದೇ ಮೊದಲ ಬಾರಿ ಕಣಕ್ಕಿಳಿಯಲಿದ್ದಾರೆ. ಕರ್ನಾಟಕದ ಎಸ್.ವಿ.ಸುನಿಲ್ ಅವರನ್ನು ತಂಡಕ್ಕೆ ಪರಿಗಣಿಸಿಲ್ಲ.

ಅಮಿತ್ ರೋಹಿದಾಸ್, ಹಾರ್ದಿಕ್ ಸಿಂಗ್, ವಿವೇಕ ಸಾಗರ್ ಪ್ರಸಾದ್, ನೀಲಕಂಠ ಶರ್ಮಾ, ಸುಮಿತ್, ಶಂಶೇರ್ ಸಿಂಗ್, ದಿಲ್‌ಪ್ರೀತ್ ಸಿಂಗ್, ಗುರ್ಜಂತ್ ಸಿಂಗ್ ಮತ್ತು ಲಲಿತ್ ಕುಮಾರ್ ಉಪಾಧ್ಯಾಯ ಹೊಸಬರು.

ತಂಡಕ್ಕೆ ನಾಯಕನನ್ನು ಹೆಸರಿಸಿಲ್ಲ. ಆದರೆ ಮನ್‌ಪ್ರೀತ್ ಆಯ್ಕೆಯಾಗುವ ಸಾಧ್ಯತೆ ಹೆಚ್ಚು ಎನ್ನಲಾಗಿದೆ. ಶ್ರೀಜೇಶ್ ತಂಡದಲ್ಲಿರುವ ಏಕೈಕ ಗೋಲ್ ಕೀಪರ್. ರಿಯೊ ಒಲಿಂಪಿಕ್ಸ್‌ನಲ್ಲಿ ಆಡಿದ್ದ ಆಕಾಶದೀಪ್ ಸಿಂಗ್ ಹಾಗೂ ರಮಣದೀಪ್ ಸಿಂಗ್ ಆಯ್ಕೆಯಾಗಿಲ್ಲ.

ಭಾರತದ ಪುರುಷ ಮತ್ತು ಮಹಿಳಾ ಹಾಕಿ ತಂಡಗಳು ಸದ್ಯ ಬೆಂಗಳೂರಿನಲ್ಲಿರುವ ಸಾಯ್ ಕೇಂದ್ರದಲ್ಲಿ ತರಬೇತಿಯಲ್ಲಿ ನಿರತವಾಗಿವೆ.

ತಂಡ: ಗೋಲ್‌ಕೀಪರ್: ಪಿ.ಆರ್.ಶ್ರೀಜೇಶ್; **ಡಿಫೆಂಡರ್ಸ್:** ಹರ್ಮನ್‌ಪ್ರೀತ್ ಸಿಂಗ್, ರೂಪಿಂದರ್ ಪಾಲ್ ಸಿಂಗ್, ಸುರೇಂದರ್ ಕುಮಾರ್, ಅಮಿತ್ ರೋಹಿದಾಸ್, ಬೀರೇಂದ್ರ ಲಾಕ್ರಾ; **ಮಿಡ್‌ಫೀಲ್ಡರ್ಸ್:** ಹಾರ್ದಿಕ್ ಸಿಂಗ್, ಮನ್‌ಪ್ರೀತ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ನೀಲಂಕಂಠ ಶರ್ಮಾ, ಸುಮಿತ್; **ಫಾರ್ವರ್ಡ್ಸ್:** ಶಂಶೇರ್ ಸಿಂಗ್, ದಿಲ್‌ಪ್ರೀತ್ ಸಿಂಗ್, ಗುರ್ಜಂತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಮನದೀಪ್ ಸಿಂಗ್.

ಇನ್‌ಸ್ಟಾಗ್ರಾಂ: ರೊನಾಲ್ಡೊಗೆ 30 ಕೋಟಿ ಹಿಂಬಾಲಕರು



ಬೆಂಗಳೂರು: ಯೂರೊ ಕಪ್ ಫುಟ್ಬಾಲ್ ಟೂರ್ನಿಯ ಪಂದ್ಯದ ನಂತರ 'ಜಲಪಾನ'ದ ಮಹತ್ವದ ಕುರಿತು ಮಾತನಾಡಿ ಸುದ್ದಿಯಾಗಿರುವ ಫುಟ್‌ಬಾಲ್ ಮಾಂತ್ರಿಕ ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊಗೆ ಈಗ ಇನ್‌ಸ್ಟಾಗ್ರಾಮ್‌ನಲ್ಲಿ 30 ಕೋಟಿ ಹಿಂಬಾಲಕರು!

ಈ ಮೂಲಕ ಅವರು ಗರಿಷ್ಠ ಸಂಖ್ಯೆಯ ಹಿಂಬಾಲಕರನ್ನು ಹೊಂದಿರುವ ಸಿಲೆಬ್ರಿಟಿ ಎಂಬ ಖ್ಯಾತಿಗೆ ಒಳಗಾಗಿದ್ದಾರೆ.

ಬುಡಾಪೆಸ್ಟ್‌ನಲ್ಲಿ ಕಳೆದ ವಾರ ನಡೆದ ಯೂರೊ ಕಪ್ ಟೂರ್ನಿಯಲ್ಲಿ ಪೋರ್ಚುಗಲ್–ಹಂಗೇರಿ ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ 'ನೀರು ಕುಡಿಯಿರಿ, ಆರೋಗ್ಯವಾಗಿರಿ' ಎಂದು ಹೇಳಿ ಕೊಕಾ ಕೋಲಾ ಪಾನೀಯದ ಬಾಟಲಿಗಳನ್ನು ದೂರ ಮಾಡಿ ಅವರು ಸುದ್ದಿಯಾಗಿದ್ದರು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್: ಕಾಯ್ದಿಟ್ಟ ದಿನ ಬಳಕೆಯ ಸಾಧ್ಯತೆ

ಫೈನಲ್ ಆರಂಭಕ್ಕೆ ಮಳೆ ಅಡ್ಡಗಾಲು

ಸೌತಾಂಪ್ಟನ್ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದ ಮೊದಲ ದಿನವು ಮಳೆಗೆ ಆಹುತಿಯಾಯಿತು.

ಏಜಿಸ್ ಬೌಲ್ ಕ್ರೀಡಾಂಗಣದಲ್ಲಿ ಶುಕ್ರವಾರ ಸುರಿದ ಮಳೆಯಿಂದಾಗಿ ಟಾಸ್ ಮಾಡಲು ಕೂಡ ಅವಕಾಶವಾಗಲಿಲ್ಲ. ಸಂಜೆ ಮಳೆ ನಿಂತ ನಂತರ ಹೊರಾಂಗಣವು ಒದ್ದೆಯಾದ ಕಾರಣ ಆಟವನ್ನು ಆರಂಭಿಸಲಿಲ್ಲ. ರಾತ್ರಿ 7.30ರ (ಭಾರತೀಯ ಕಾಲಮಾನ) ಸುಮಾರಿಗೆ ಅಂಗಣ ಪರಿಶೀಲಿಸಿದ ಅಂಪೈರ್ ಮೈಕೆಲ್ ಗೌ ಮತ್ತು ರಿಚರ್ಡ್ ಇಲಿಂಗ್‌ವರ್ತ್ ಅವರು ಆಟ ಆರಂಭಿಸದಿರಲು ನಿರ್ಧರಿಸಿದರು.

ಈ ಪಂದ್ಯಕ್ಕೆ ಒಂದು ಕಾಯ್ದಿಟ್ಟ ದಿನ ಇದೆ. ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ನಿಯಮದ ಪ್ರಕಾರ ಪಂದ್ಯದ ಆರನೇ ದಿನವನ್ನು ಕಾಯ್ದಿರಿಸಲಾಗಿದೆ. ಸೌತಾಂಪ್ಟನ್‌ನಲ್ಲಿ ಮಳೆಯಾಗುವ ಬಗ್ಗೆ ಮೊದಲೇ ಹವಾಮಾನ ಮುನ್ಸೂಚನೆ ಇದ್ದ ಕಾರಣ, ಕಾಯ್ದಿಟ್ಟ ದಿನವನ್ನು ನಿಗದಿಪಡಿಸಲಾಗಿತ್ತು.

ಗುರುವಾರ ರಾತ್ರಿ ಆರಂಭವಾದ ಮಳೆ ಶುಕ್ರವಾರ ಮಧ್ಯಾಹ್ನದವರೆಗೂ ಸುರಿಯಿತು. ಮೈದಾನದಲ್ಲಿ ಉತ್ತಮ ಒಳಚರಂಡಿ ವ್ಯವಸ್ಥೆ ಇದ್ದರೂ ಹೊರಾಂಗಣವು ಸಂಜೆಯವರೆಗೂ ಒಣಗಲಿಲ್ಲ. ಫೈನಲ್ ಪಂದ್ಯಕ್ಕೆ ಸೌತಾಂಪ್ಟನ್ ಕ್ರೀಡಾಂಗಣವನ್ನು ಆಯ್ಕೆ ಮಾಡುವಾಗ ಐಸಿಸಿ ಮತ್ತು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಗಳು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಹಮತ ಪಡೆದಿದ್ದವು ಎಂಬ ಚರ್ಚೆಗಳು ಈಗ ನಡೆಯುತ್ತಿವೆ.

ಇಲ್ಲಿಯ ಏಜಿಸ್ ಬೌಲ್ ಕ್ರೀಡಾಂಗಣ ಮತ್ತು ಆಟಗಾರರ ಹೋಟೆಲ್ ಒಂದಕ್ಕೊಂದು ಹೊಂದಿಕೊಂಡಿವೆ. ಬಯೋಬಬಲ್ ವ್ಯವಸ್ಥೆಯನ್ನು ಜಾರಿಗೊಳಿಸಲು ಅತ್ಯಂತ ಸೂಕ್ತ ತಾಣ ಎಂಬ ಕಾರಣಕ್ಕೆ ಇಲ್ಲಿ ಪಂದ್ಯವನ್ನು ಆಯೋಜಿಸಲಾಗಿದೆ.

ಮಳೆಯಲ್ಲಿ ಸೆಲ್ಫಿ

'ತಂಡದಲ್ಲಿ ಬದಲಾವಣೆಗೆ ಅವಕಾಶ'

ಫೈನಲ್‌ನಲ್ಲಿ ಆಡುವ ಹನ್ನೊಂದರ ಬಳಗವನ್ನು ಭಾರತ ತಂಡವು ಗುರುವಾರ ಸಂಜೆ ಪ್ರಕಟಿಸಿದೆ. ಆದರೆ ಮಳೆಯ ಕಾರಣದಿಂದ ಶುಕ್ರವಾರ ಪಂದ್ಯದ ಮೊದಲ ದಿನದಾಟ ನಡೆಯಲಿಲ್ಲ. ಟಾಸ್ ಕೂಡ ಆಗಿಲ್ಲ. ಆದ್ದರಿಂದ ಬದಲಾದ ಹವಾಗುಣ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಕಣಕ್ಕಿಳಿಯುವ ಹನ್ನೊಂದರ ಬಳಗದಲ್ಲಿ ಬದಲಾವಣೆಯ ಬಗ್ಗೆ ತಂಡದ ವ್ಯವಸ್ಥಾಪನ ಮಂಡಳಿ ಚಿಂತನೆ ನಡೆಸಿದೆಯೇ?

ಈ ಕುರಿತು ಶುಕ್ರವಾರ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ತಂಡದ ಫೀಲ್ಡಿಂಗ್ ಕೋಚ್ ಆರ್. ಶ್ರೀಧರ್, 'ಟಾಸ್ ಅಂತಿಮ ಹನ್ನೊಂದರ ಬಳಗವನ್ನು ಪ್ರಕಟಿಸುವ ಸಮಯವಾಕಾಶ ಇರುತ್ತದೆ. ಇವತ್ತು ಟಾಸ್ ಸಾಧ್ಯವಾಗಿಲ್ಲ. ನಾಳೆ ಬಹುಶಃ ಟಾಸ್ ಆಗಬಹುದು. ಅದಕ್ಕೂ ಮುನ್ನ ಪರಿಸ್ಥಿತಿಯನ್ನು ಅವಲೋಕಿಸಿ ನಿರ್ಧಾರ ಕೈಗೊಳ್ಳಬಹುದು. ಈಗಾಗಲೇ ಆಯ್ಕೆಯಾಗಿರುವ ಹನ್ನೊಂದರ ಬಳಗವು ಎಂತಹದೇ ವಾತಾವರಣದಲ್ಲಿ ಆಡಲು ಸಮರ್ಥವಾಗಿದೆ' ಎಂದರು.

ಕಾಯ್ದಿಟ್ಟ ದಿನ?: ಹವಾಮಾನ ವೈಪರಿತ್ಯದಿಂದಾಗಿ ಐದು ದಿನಗಳ ಪಂದ್ಯಕ್ಕೆ ಅಡಚಣೆಯುಂಟಾದರೆ ಅದನ್ನು ಸರಿದೂಗಿಸಲು ಒಂದು ಹೆಚ್ಚುವರಿ ದಿನವನ್ನು ನಿಗದಿಪಡಿಸಲಾಗಿದೆ. ಸದ್ಯದ ಫೈನಲ್ ಪಂದ್ಯವನ್ನೇ ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಮೊದಲ ದಿನದ ಪೂರ್ಣ ಆಟ ಅಥವಾ 90 ಓವರ್‌ಗಳ ಆಟ ಸಾಧ್ಯವಾಗಲಿಲ್ಲ. ಈಗ ಉಳಿದಿರುವ ನಾಲ್ಕು ದಿನಗಳಲ್ಲಿ ಪಂದ್ಯದಲ್ಲಿ ಫಲಿತಾಂಶ ಬರದಿದ್ದರೆ ಕಾಯ್ದಿಟ್ಟ ದಿವಸಕ್ಕೆ ಪಂದ್ಯವನ್ನು ಮುಂದುವರಿಸಬಹುದು. ಈ ಮೀಸಲು ದಿನದಾಟವು ಗರಿಷ್ಠ 330 ನಿಮಿಷಗಳಿಗೆ ಸೀಮಿತವಾಗಿರುತ್ತದೆ ಎಂದು ಐಸಿಸಿ ನಿಯಮದಲ್ಲಿ ಉಲ್ಲೇಖಿಸಲಾಗಿದೆ.

ನೆದರ್ಲೆಂಡ್ ತಂಡಕ್ಕೆ ಜಯ

ಆ್ಯಮ್‌ಸ್ಟರ್‌ಡ್ಯಾಮ್, ನೆದರ್ಲೆಂಡ್ಸ್ (ಎಎಫ್‌ಪಿ): ಮೆಂಫಿಸ್ ಡಿಪೇ ಹಾಗೂ ಡೆಂಜೆಲ್ ಡುಂಫ್ರೈಸ್ ಅವರ ಗೋಲುಗಳ ಬಲದಿಂದ ನೆದರ್ಲೆಂಡ್ಸ್ ತಂಡ ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್ ಪ್ರವೇಶಿಸಿತು. 'ಸಿ' ಗುಂಪಿನ ಪಂದ್ಯದಲ್ಲಿ ಈ ತಂಡ 2–0ಯಿಂದ ಆಸ್ಟ್ರಿಯಾವನ್ನು ಪರಾಭವಗೊಳಿಸಿತು.

ನೆದರ್ಲೆಂಡ್ಸ್‌ಗೆ 11ನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶ ದೊರೆಯಿತು. ಡಿಪೇ ಚೆಂಡನ್ನು ಗೋಲು ಪೆಟ್ಟಿಗೆಗೆ ಸೇರಿಸಿದರು. 67ನೇ ನಿಮಿಷದಲ್ಲಿ ಯಶಸ್ವಿಯಾದ ಡೆಂಜೆಲ್ ಡುಂಫ್ರೈಸ್ 2–0 ಮುನ್ನಡೆ ಗಳಿಸಿಕೊಟ್ಟರು.

ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ಕ್ರೊವೇಷ್ಯಾ ಜೊತೆ 1–1ರ ಸಮಬಲ ಸಾಧಿಸುವಲ್ಲಿ ಜೆಕ್ ಗಣರಾಜ್ಯ ತಂಡ ಯಶಸ್ವಿಯಾಯಿತು. 37ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಲ್ಲಿ ಪ್ಯಾಟ್ರಿಕ್ ಶೀಕ್ ಗೋಲು ಗಳಿಸಿ ಜೆಕ್ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಇವಾನ್ ಪೆರಿಶಿಚ್ 47ನೇ ನಿಮಿಷದಲ್ಲಿ ಸಮಬಲದ ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಸ್ಲೊವಾಕಿಯಾವನ್ನು ಸ್ವೀಡನ್ 1–0 ಅಂತರದಲ್ಲಿ ಮಣಿಸಿತು. ಎಮಿಲ್ ಫೋರ್ಸ್‌ಬರ್ಗ್ (77ನೇ ನಿ) ಗೋಲು ಗಳಿಸಿದರು.

ಕೆವಿನ್ ಒಬ್ರಿಯೆನ್ ನಿವೃತ್ತಿ

ಡುಬ್ಲಿನ್: ಐರ್ಲೆಂಡ್‌ನ ಆಲ್‌ರೌಂಡರ್ ಕೆವಿನ್ ಒಬ್ರಿಯೆನ್ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಿಂದ ಶುಕ್ರವಾರ ನಿವೃತ್ತರಾಗಿದ್ದಾರೆ.

37 ವರ್ಷದ ಈ ವೇಗದ ಬೌಲರ್ ಏಕದಿನ ಕ್ರಿಕೆಟ್‌ನಲ್ಲಿ 153 ಪಂದ್ಯಗಳನ್ನು ಆಡಿದ್ದು ಮೂರು ಸಾವಿರಕ್ಕೂ ಅಧಿಕ ರನ್ ಗಳಿಸಿದ್ದಾರೆ. 114 ವಿಕೆಟ್ ಉರುಳಿಸಿ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆದ 2011ರ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಸ್ಫೋಟಕ ಶತಕ ಸಿಡಿಸಿ ಇಂಗ್ಲೆಂಡ್ ಎದುರಿನ ಗೆಲುವಿಗೆ ಕಾರಣರಾಗಿದ್ದರು. ಆರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ಅವರು 113 ರನ್ ಸಿಡಿಸಿದ್ದರು. ಇದರಲ್ಲಿ ಆರು ಸಿಕ್ಸರ್ ಮತ್ತು 13 ಬೌಂಡರಿಗಳಿದ್ದವು. ಈ ಮೂಲಕ 328 ರನ್‌ಗಳ ಗೆಲುವಿನ ಗುರಿ ಯಶಸ್ವಿಯಾಗಿ ಬೆನ್ನತ್ತಲು ಐರ್ಲೆಂಡ್‌ಗೆ ಸಾಧ್ಯವಾಗಿತ್ತು.

ಅವರು 50 ಎಸೆತಗಳಲ್ಲಿ ಶತಕ ಗಳಿಸಿದ್ದರು. ಇದು ವಿಶ್ವಕಪ್‌ನಲ್ಲಿ ವೇಗದ ಶತಕವಾಗಿದೆ.